ಮಂಗಳವಾರ, ಏಪ್ರಿಲ್ 15, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 104 | ಪುಟ 14

• www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ವಿಕೆಟ್ ಹಿಂದೆ ಧೋನಿ 'ದ್ವಿಶತಕ'

ಚೆನ್ನೈ ಸೂಪರ್ ಕಿಂಗ್ಸ್ ತಂಡದ ನಾಯಕ ಮಹೇಂದ್ರಸಿಂಗ್ ಧೋನಿ ಅವರು ಸೋಮವಾರ ಲಖನೌ ಸೂಪರ್ ಜೈಂಟ್ಸ್ ವಿರುದ್ಧದ ಪಂದ್ಯದಲ್ಲಿ ಆಯುಷ್ ಬಡೋನಿ ಅವರನ್ನು ಸ್ಟಂಪ್ ಮಾಡುವ ಮೂಲಕ ಐಪಿಎಲ್‌ನಲ್ಲಿ ಒಟ್ಟು 200 (154 + 46) ಕ್ಯಾಚ್ ಮತ್ತು ಸ್ಟಂಪಿಂಗ್ಸ್ ಪೂರೈಸಿದ ಮೊದಲ ವಿಕೆಟ್‌ಕೀಪರ್ ಎಂಬ ಹೆಗ್ಗಳಿಕೆಗೆ ಪಾತ್ರರಾದರು

ಆಳ-ಅಗಲ ಅನ್ನ ಚೆಲ್ಲುವ ಮುನ್ನ...

ಪ್ರಜಾ ಪ್ಲಸ್ ಹೊಸ ಅಲೆ, ಹೊಸ ತಂಡ ಮುಖ್ಯ 11

ಕಾಂಗ್ರೆಸ್ ಒಕ್ಕಲಿಗ ಶಾಸಕರ ಸಭೆ ಇಂದು 5

'ಅತಿ ಎತ್ತರದ ಅಂಬೇಡ್ಕರ್ ಪ್ರತಿಮೆ ಸ್ಥಾಪನೆ' 7

ಹಿಂದುಳಿದ ವರ್ಗಗಳ ಆಯೋಗದ 'ದತ್ತಾಂಶಗಳ ಅಧ್ಯಯನ' ವರದಿಯಲ್ಲಿ ದಾಖಲಾದ ಮಾಹಿತಿ

ಗುರುತಿಸದ 398 ಜಾತಿಗಳು ಪತ್ತೆ

5,98,14,942 ದತ್ತಾಂಶ ಸಂಗ್ರಹಕ್ಕೆ ಒಳಗಾದ ಜನರು

2,53,954 ಜಾತಿ ಬಹಿರಂಗಪಡಿಸಲು ನಿರಾಕರಿಸಿದವರು

1,34,319 ಯಾವುದೇ ಜಾತಿಗೆ ಸೇರಿದವರಲ್ಲ ಎಂದವರು

1,94,003 ಜಾತಿ ಗೊತ್ತಿಲ್ಲ ಎಂದವರು

• ರಾಜೇಶ್ ರೈ ಚಟ್ಲ

ಬೆಂಗಳೂರು: ಹಿಂದುಳಿದ ವರ್ಗಗಳ ಆಯೋಗವು ರಾಜ್ಯದಲ್ಲಿ 2015ರಲ್ಲಿ ನಡೆಸಿದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ಸಂದರ್ಭದಲ್ಲಿ ಈವರೆಗೂ ಗುರುತಿಸದ 398 ಹೊಸ ಜಾತಿಗಳು ಪತ್ತೆ ಆಗಿವೆ.

ಅಲ್ಲದೆ, ಸಮೀಕ್ಷೆಯ ಸಂದರ್ಭದಲ್ಲಿ 2,53,954 ಜನರು ತಮ್ಮ ಜಾತಿಯನ್ನು ಬಹಿರಂಗಪಡಿಸಲು ನಿರಾಕರಿಸಿದ್ದಾರೆ. 1,34,319 ಜನರು ತಾವು ಯಾವುದೇ ಜಾತಿಗೆ ಸೇರಿದವರಲ್ಲ ಎಂದು ಹೇಳಿಕೊಂಡಿದ್ದಾರೆ.

ಎಚ್. ಕಾಂತರಾಜ ಅವರು ಅಧ್ಯಕ್ಷರಾಗಿದ್ದಾಗ ಹಿಂದುಳಿದ ವರ್ಗಗಳ ಆಯೋಗ ನಡೆಸಿದ್ದ ಈ ಸಮೀಕ್ಷೆಯ ದತ್ತಾಂಶಗಳನ್ನು ಅಧ್ಯಯನ ಮಾಡಿ ಕೆ. ಜಯಪ್ರಕಾಶ್ ಹೆಗ್ಡೆ ನೇತೃತ್ವದ ಆಯೋಗವು ರಾಜ್ಯ ಸರ್ಕಾರಕ್ಕೆ ಸಲ್ಲಿಸಿದ ವರದಿಯಲ್ಲಿ ಈ ಮಾಹಿತಿಯಿದೆ. ದತ್ತಾಂಶಗಳ ಅಧ್ಯಯನ ವರದಿಯ ಪ್ರತಿಯು 'ಪ್ರಜಾವಾಣಿ'ಗೆ ಲಭ್ಯವಾಗಿದೆ.

'ದತ್ತಾಂಶಗಳ ಅಧ್ಯಯನ ವರದಿ–2024'ರ 112ರಿಂದ 163ರವರೆಗಿನ ಪುಟಗಳಲ್ಲಿ ಹಿಂದುಳಿದ ಜಾತಿ, ಸಮುದಾಯಗಳನ್ನು ಪ್ರವರ್ಗವಾರು ಮರು ವರ್ಗೀಕರಣ ಮಾಡಿದ ಪಟ್ಟಿಯನ್ನು ಆಯೋಗ ನೀಡಿದೆ. ಅತ್ಯಂತ ಹಿಂದುಳಿದ ಜಾತಿಗಳನ್ನು ಪ್ರವರ್ಗ1ಎ, 1ಬಿ, ಅತಿ ಹಿಂದುಳಿದ ಜಾತಿಗಳನ್ನು ಪ್ರವರ್ಗ 2ಎ, 2ಬಿ, ಹಿಂದುಳಿದ ಜಾತಿಗಳನ್ನು ಪ್ರವರ್ಗ 3ಎ, 3ಬಿ ಎಂದು ಮರು ವರ್ಗೀಕರಣ ಮಾಡಿ, ಪ್ರತಿ ಪ್ರವರ್ಗದ ಅಡಿಗೆ ತಂದಿರುವ ಜಾತಿಯ ಹೆಸರು ಮತ್ತು ಆ ಜಾತಿಯ ಒಟ್ಟು ಜನಸಂಖ್ಯೆಯನ್ನು ನೀಡಿದೆ.

5ನೇ ಪುಟ ನೋಡಿ

200ಕ್ಕೂ ಕಡಿಮೆ ಜನಸಂಖ್ಯೆ ಇರುವ ಜಾತಿಗಳ ಪ್ರವರ್ಗವಾರು ಪಟ್ಟಿ

ಜಾತಿ	ಜನಸಂಖ್ಯೆ
ಪ್ರವರ್ಗ 1ಎ	
ಡವೇರಿ	196
ಕೇಲ್ಕರಿ	151
ಕಂಜರ್/ಕಂಜರಿ	194
ಪ್ರವರ್ಗ 1ಬಿ	
ಟಕರಿ–ಉಚಲಿಯನ್	135
ಶಿಲ್‌ವಕ್ಕಲ್	191
ಸನ್ಯಾಸಿ	133
ನಾಥ ಹಣಗಿ	198
ನಾಥ ಶಿವಯೋಗಿ	119
ನಾಥ ಶಿವಜೋಗಿ	115
ನಾಥ ಯೋಗಿ	158
ರಾವಲ	11
ಎರಾಲು	183
ಜವರಿ	172
ಕಂಜಿರ್	107
ಕಾವಡಿ	176
ಧನಗರ ಗೌಳಿ	13
ಪಾಸಾಚಾರಿ	149
ತುಡುಗ್ ವೊಡ್ಡರ್	193
ಮರುತ್ತುವರ್	5
ಪ್ರವರ್ಗ 2ಎ	
ಸುಪ್ಲಿಗಾ/ ಸುಪಲಿಗ್	165
ಹಳೇ ಪೈಕ್/ ಹಳೇ ಪೈಕರು	194
ಪಲ್ಲಿ ರೆಡ್ಡಿಯಾರ್	190
ಬಲಾಲಾಲ್ ಗೌಂಡರ್/ಬಲ್ಲಾಳ ಗೌಂಡೇರ್/ ವೆಲ್ಲಾಲ ಗೌಂಡೇರ್	32
ಕಂಸನ್	195
ಕಂಸಾರ್	168
ಶಿಲ್ಪಿ	4
ಲೋಹರ್	89
ನಂಬೀಶನ್	6
ಚಂಬು ಕುಟ್ಟಿ	91
ತಚಾಯಿರಿ	84
ಜಂಭು ಕುಲ ಕ್ಷತ್ರಿಯ	61
ಒಸ್ತಾ	4
ಪಟ್ಟುನುಲ್ಕರ್	4
ಮಲ್ಲಾರ್	41
ಕೊಟ್ಟಿಯಾ	7
ಕೋಟೆಗಾರ್ ಮೇಟ್ರಿ	138
ಪ್ರವರ್ಗ 2ಬಿ	
ಮುಸ್ಲಿಮರು ಮತ್ತು ಉಪ ಜಾತಿಗಳು	
ಪ್ರವರ್ಗ 3ಎ	
ಜೇರಿಗೆ ಕುಂಚಿಟಗಾ	67
ಗೇರುಬೀಜ ಬಲಜ	137
ಕಸ್ಬನ್	165
ಪ್ರವರ್ಗ 3ಬಿ	
ಜಂಗಮ	47
ಕಂಸಾಳ ಲಿಂಗಾಯತ್	96
ಕಾವಾಡಿಗ ಲಿಂಗಾಯತ	125
ಲಿಂಗದಾರ್	3
ಲಿಂಗಾಯತ ಗೌಡ/ ಗೌಡ ಲಿಂಗಾಯತ	22
ವೀರಶಿವ ಜಂಗಮ	11
ವೀರಶೈವ ಮಲ್ಲಾವರ	9
ಸಾತ್ತದವಲ್/ಸಾತ್ತದವನ್	123

ಅಂಬೇಡ್ಕರ್ ಸ್ಮರಣೆ ವಿಧಾನಸೌಧದಲ್ಲಿ ಸಮಾಜ ಕಲ್ಯಾಣ ಇಲಾಖೆ ಆಯೋಜಿಸಿದ್ದ ಡಾ. ಬಿ.ಆರ್. ಅಂಬೇಡ್ಕರ್ 134ನೇ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಕಲಾತಂಡಗಳು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದವು

ಚಿತ್ರ: ಎಂ.ಎಸ್.ಮಂಜುನಾಥ್

'ಪಿಎನ್‌ಬಿ ವಂಚನೆ ಪ್ರಕರಣ'ದಲ್ಲಿ ಬೇಕಾಗಿರುವ ಆರೋಪಿ

ಬೆಲ್ಜಿಯಂನಲ್ಲಿ ಚೋಕ್ಸಿ ಬಂಧನ

ಮೆಹುಲ್ ಚೋಕ್ಸಿ

ನವದೆಹಲಿ (ಪಿಟಿಐ): ತಲೆಮರೆಸಿಕೊಂಡಿದ್ದ ವಜ್ರದ ವ್ಯಾಪಾರಿ ಮೆಹುಲ್ ಚೋಕ್ಸಿಯನ್ನು ಬೆಲ್ಜಿಯಂನಲ್ಲಿ ಬಂಧಿಸಲಾಗಿದೆ. ಪಂಜಾಬ್ ನ್ಯಾಷನಲ್ ಬ್ಯಾಂಕ್‌ಗೆ (ಪಿಎನ್‌ಬಿ) ₹13 ಸಾವಿರ ಕೋಟಿ ವಂಚಿಸಿದ ಪ್ರಕರಣದಲ್ಲಿ ಚೋಕ್ಸಿಯನ್ನು ತಮ್ಮ ವಶಕ್ಕೆ ಒಪ್ಪಿಸುವಂತೆ ಭಾರತದ ತನಿಖಾ ಸಂಸ್ಥೆಗಳು ಮಾಡಿದ್ದ ಮನವಿ ಆಧರಿಸಿ ಈ ಬಂಧನ ಆಗಿದೆ.

ಈ ಪ್ರಕರಣದಲ್ಲಿ ಚೋಕ್ಸಿ ಎರಡನೆಯ ಪ್ರಮುಖ ಆರೋಪಿ. ಈತನನ್ನು ತಮ್ಮ ವಶಕ್ಕೆ ನೀಡಬೇಕು ಎಂದು ಸಿಬಿಐ ಮತ್ತು ಇ.ಡಿ ಅಧಿಕಾರಿಗಳು ಮನವಿ ಮಾಡಿದ್ದರು. ಈತನನ್ನು ಶನಿವಾರ ಬಂಧಿಸಲಾಗಿದೆ ಎಂದು ಮೂಲಗಳು ಹೇಳಿವೆ.

ಚೋಕ್ಸಿ ಬೆಲ್ಜಿಯಂನಲ್ಲಿ ಇರುವುದು ಕಳೆದ ವರ್ಷ ಗೊತ್ತಾಗಿತ್ತು. ಅಲ್ಲಿ ಆತ ವೈದ್ಯಕೀಯ ಚಿಕಿತ್ಸೆಗಾಗಿ ಹೋಗಿದ್ದ. 2018ರಲ್ಲಿ ಭಾರತದಿಂದ ಪರಾರಿಯಾದ ನಂತರ ಆತ ಆ್ಯಂಟಿಗುವಾದಲ್ಲಿ ನೆಲಸಿದ್ದ.

10ನೇ ಪುಟ ನೋಡಿ

ರಾಜತಾಂತ್ರಿಕ ಜಯ: ಮೇಘವಾಲ್

ನವದೆಹಲಿ/ನಾಗ್ಪುರ (ಪಿಟಿಐ): ತಲೆಮರೆಸಿಕೊಂಡಿದ್ದ ವಜ್ರದ ವ್ಯಾಪಾರಿ ಮೆಹುಲ್ ಚೋಕ್ಸಿಯ ಬಂಧನವು ನರೇಂದ್ರ ಮೋದಿ ನೇತೃತ್ವದ ಸರ್ಕಾರದ ರಾಜತಾಂತ್ರಿಕ ಪ್ರಯತ್ನಗಳಿಗೆ ದೊರೆತ ಜಯ ಎಂದು ಕೇಂದ್ರದ ಕಾನೂನು ಸಚಿವ ಅರ್ಜುನ್ ರಾಮ್ ಮೇಘವಾಲ್ ಹೇಳಿದ್ದಾರೆ.

'ಇದು ಭಾರತದ ಪಾಲಿಗೆ ಹೆಮ್ಮೆ' ಎಂದು ಅವರು ಸುದ್ದಿಗಾರರ ಬಳಿ ಹೇಳಿದ್ದಾರೆ.

ಮೋದಿ ನೇತೃತ್ವದ ಸರ್ಕಾರವು ಮೆಹುಲ್ ಚೋಕ್ಸಿಯಂತಹ ದೇಶಭ್ರಷ್ಟರ ವಿಚಾರದಲ್ಲಿ, ಭ್ರಷ್ಟಾಚಾರದ ವಿಚಾರದಲ್ಲಿ ತೃಣಮಾತ್ರದ ಸಹನೆಯನ್ನೂ ತೋರುತ್ತಿಲ್ಲ ಎಂದು ಕೇಂದ್ರ ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ ಹೇಳಿದ್ದಾರೆ. ಚೋಕ್ಸಿಯನ್ನು ಭಾರತಕ್ಕೆ ಕರೆತರುವ ಕೆಲಸವನ್ನು ಕೇಂದ್ರ ಮಾಡಲಿದೆ ಎಂದಿದ್ದಾರೆ.

ನಾಳೆಯಿಂದ 2 ದಿನ ಸಿಇಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಏ.16 ಮತ್ತು 17ರಂದು ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ನಡೆಯುತ್ತಿದ್ದು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಬಿಗಿ ಕ್ರಮಗಳನ್ನು ಕೈಗೊಂಡಿದೆ.

ಏ.16ರಂದು ಭೌತ ವಿಜ್ಞಾನ (ಬೆಳಿಗ್ಗೆ 10.30ರಿಂದ 11.50) ಮತ್ತು ರಸಾಯನ ವಿಜ್ಞಾನ (ಮಧ್ಯಾಹ್ನ 12.30ರಿಂದ 3.50) ಹಾಗೂ ಏ.17ರಂದು ಗಣಿತ (ಬೆಳಿಗ್ಗೆ 10.30ರಿಂದ 11.50) ಮತ್ತು ಜೀವ ವಿಜ್ಞಾನ (ಮಧ್ಯಾಹ್ನ 12.30ರಿಂದ 3.50) ವಿಷಯಗಳ ಪರೀಕ್ಷೆಗಳು ನಡೆಯಲಿವೆ.

ಪರೀಕ್ಷಾ ಅಕ್ರಮಗಳನ್ನು ತಡೆಯಲು ನೇಮಕಾತಿ ಪರೀಕ್ಷೆಗಳ ರೀತಿ ಸಿಇಟಿಗೂ ಕ್ಯಾಮೆರಾ ಕಣ್ಗಾವಲು ಇರುತ್ತದೆ. ವೆಬ್‌ಕಾಸ್ಟಿಂಗ್ ಮೂಲಕ ಎಲ್ಲ 775 ಪರೀಕ್ಷಾ ಕೇಂದ್ರಗಳ ಮೇಲೆ ನಿಗಾ ಇಡುವ ವ್ಯವಸ್ಥೆ ಮಾಡಲಾಗಿದೆ. ಜಿಲ್ಲಾಮಟ್ಟದಲ್ಲಿ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಮೇಲುಸ್ತುವಾರಿ ನಡೆಸಲಿದ್ದಾರೆ ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಹೇಳಿದ್ದಾರೆ.

775 ಪರೀಕ್ಷಾ ಕೇಂದ್ರಗಳು

240 ಒಟ್ಟು ಅಂಕಗಳು

3.31 ಲಕ್ಷ ಸಿಇಟಿ ಬರೆಯುವ ವಿದ್ಯಾರ್ಥಿಗಳು

ದಿನಾಂಕ: ಏ 16, 17

ಸಮಯ: ಬೆಳಿಗ್ಗೆ 10.30ರಿಂದ 11.50
ಮಧ್ಯಾಹ್ನ 12.30ರಿಂದ 3.50

5ನೇ ಪುಟ ನೋಡಿ

ಆರ್‌ಟಿಪಿಎಸ್: ಬೆಂಕಿ ಅವಘಡ

ಪ್ರಜಾವಾಣಿ ವಾರ್ತೆ

ರಾಯಚೂರು: ಶಕ್ತಿನಗರದಲ್ಲಿರುವ ರಾಯಚೂರು ಶಾಖೋತ್ಪನ್ನ ವಿದ್ಯುತ್ ಸ್ಥಾವರದ (ಆರ್‌ಟಿಪಿಎಸ್) ನಾಲ್ಕನೇ ಘಟಕದಲ್ಲಿ ಭಾನುವಾರ ಬೆಂಕಿ ಅವಘಡ ಸಂಭವಿಸಿ ಅಪಾರ ಹಾನಿ ಸಂಭವಿಸಿದೆ.

ವಿದ್ಯುತ್ ಪರಿವರ್ತಕದಲ್ಲಿ ಹೊತ್ತಿಕೊಂಡ ಬೆಂಕಿ ನೋಡನೋಡು-ತ್ತಿದ್ದಂತೆಯೇ ವಿಸ್ತರಿಸಿಕೊಂಡಿತು. ಘಟಕ-ದಲ್ಲಿದ್ದ ಕಾರ್ಮಿಕರು ಬೆಂಕಿ ನಂದಿಸಲು ಪ್ರಯತ್ನಿಸಿ ಬೆಂಕಿ ನಿಯಂತ್ರಣಕ್ಕೆ ಬರಲಿಲ್ಲ ಎಂದು ಮೂಲಗಳು ತಿಳಿಸಿವೆ.

7ನೇ ಪುಟ ನೋಡಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಕರ್ನಾಟಕದ ಗುತ್ತಿಗೆ ಮೀಸಲು ಸಂವಿಧಾನ ವಿರೋಧಿ: ಮೋದಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಸರ್ಕಾರಿ ಗುತ್ತಿಗೆಗಳಲ್ಲಿ ಮುಸ್ಲಿಮರಿಗೆ ಮೀಸಲಾತಿ ನೀಡಿರುವ ಕರ್ನಾಟಕದ ಕಾಂಗ್ರೆಸ್ ಸರ್ಕಾರದ ವಿರುದ್ಧ ಸೋಮವಾರ ಟೀಕಾಪ್ರಹಾರ ನಡೆಸಿದ ಪ್ರಧಾನಿ ನರೇಂದ್ರ ಮೋದಿ, 'ಧರ್ಮದ ಆಧಾರದಲ್ಲಿ ಮೀಸಲಾತಿ ಇರಬಾರದು ಎಂದು ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಪಾದಿಸಿದ್ದರು. ಧರ್ಮಾಧಾರಿತ ಮೀಸಲಾತಿ ಸಂವಿಧಾನ ವಿರೋಧಿ' ಎಂದು ಹೇಳಿದರು.

'ಕಾಂಗ್ರೆಸ್ ಸರ್ಕಾರವು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಇತರ ಹಿಂದುಳಿದ ವರ್ಗಗಳ ಹಕ್ಕುಗಳನ್ನು ಕಿತ್ತುಕೊಂಡು ಧರ್ಮದ ಆಧಾರದಲ್ಲಿ ಸರ್ಕಾರಿ ಗುತ್ತಿಗೆಗಳಲ್ಲಿ ಮೀಸಲಾತಿ ನೀಡಿದೆ' ಎಂದು ಅವರು ಆರೋಪಿಸಿದರು.

ಹರಿಯಾಣದ ಹಿಸಾರ್‌ನ ಮಹಾರಾಜ ಅಗ್ರಸೇನ ವಿಮಾನ ನಿಲ್ದಾಣದಲ್ಲಿ ಹೊಸ ಟರ್ಮಿನಲ್ ಕಟ್ಟಡಕ್ಕೆ ಶಂಕುಸ್ಥಾಪನೆ ನೆರವೇರಿಸಿ ಅಯೋಧ್ಯೆಗೆ ವಾಣಿಜ್ಯ ವಿಮಾನ ಹಾರಾಟಕ್ಕೆ ಚಾಲನೆ ನೀಡಿದ ನಂತರ ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

'ಕಾಂಗ್ರೆಸ್ ಪಕ್ಷವು ಮುಸ್ಲಿಮರಲ್ಲಿ ಕೆಲವೇ ಮೂಲಭೂತವಾದಿಗಳನ್ನು ಸಂತೋಷಪಡಿಸುವ ತುಷ್ಟೀಕರಣ ನೀತಿ ಅನುಸರಿಸಿದೆ. ಅದರಿಂದಾಗಿ ಉಳಿದ ಸಮುದಾಯಗಳು ನಿರ್ಲಕ್ಷ್ಯಕ್ಕೆ ಒಳಗಾಗಿವೆ. ಆ ಸಮುದಾಯದವರು ಅನಕ್ಷರಸ್ಥರು ಮತ್ತು ಬಡವರಾಗಿಯೇ ಉಳಿದಿದ್ದಾರೆ' ಎಂದು ಅವರು ಹೇಳಿದರು.

ಕಾಂಗ್ರೆಸ್‌ನ ಓಲೈಕೆ ರಾಜಕಾರಣಕ್ಕೆ ದೊಡ್ಡ ಪುರಾವೆ ಎಂದರೆ 2014ರ ಸಾರ್ವತ್ರಿಕ ಚುನಾವಣೆ ಮುನ್ನ ವಕ್ಫ್ ಕಾನೂನಿಗೆ ಮಾಡಿದ ತಿದ್ದುಪಡಿ ಎಂದು ಹೇಳಿದರು.

'ಸ್ವಾತಂತ್ರ್ಯ ಸಿಕ್ಕ ದಿನದಿಂದ 2013ರ ವರೆಗೆ ವಕ್ಫ್ ಕಾನೂನು ಇತ್ತು. ಆದರೆ, ಚುನಾವಣೆ-ಗಳನ್ನು ಗೆಲ್ಲಲು ಹಾಗೂ ಮತ ಬ್ಯಾಂಕ್ ರಾಜಕಾರಣಕ್ಕಾಗಿ ಕಾಂಗ್ರೆಸ್ ಪಕ್ಷವು 2013ರ ಕೊನೆಯಲ್ಲಿ ಆತುರದಿಂದ ವಕ್ಫ್ ಕಾನೂನಿಗೆ ತಿದ್ದುಪಡಿ ಮಾಡಿತು. ಇದರಿಂದಾಗಿ, ಚುನಾವಣೆಯಲ್ಲಿ ಮತಗಳನ್ನು ಪಡೆಯಬಹುದು ಎಂಬುದು ಕಾಂಗ್ರೆಸ್ ಯೋಚನೆಯಾಗಿತ್ತು.ಇಂತಹ ಬದಲಾವಣೆಗಳನ್ನು ತರುವ ಮೂಲಕ ಕಾಂಗ್ರೆಸ್ ಪಕ್ಷವು ಬಾಬಾಸಾಹೇಬರಿಗೆ ದೊಡ್ಡ ಅವಮಾನ ಮಾಡಿತು' ಎಂದರು.

'ವಕ್ಫ್ ಭೂಮಿಯನ್ನು ಬಡವರು, ನಿರ್ಗತಿಕ ಮಹಿಳೆಯರು ಹಾಗೂ ಮಕ್ಕಳ ಪ್ರಯೋಜನಕ್ಕೆ ಬಳಸಬಹುದಿತ್ತು. ಇದನ್ನು ಪ್ರಾಮಾಣಿಕವಾಗಿ ಬಳಸಿದ್ದರೆ, ಮುಸ್ಲಿಂ ಯುವಕರು ಟೈರ್ ಪಂಕ್ಚರ್ ತಿದ್ದುವುದರಲ್ಲಿ ತಮ್ಮ ಜೀವನವನ್ನು ಕಳೆಯಬೇಕಾಗಿರಲಿಲ್ಲ' ಎಂದು ಅವರು ಹೇಳಿದರು.

'ಮುಸ್ಲಿಮರಿಗೆ ಶೇ 50 ಟಿಕೆಟ್ ನೀಡಲಿ'

'ಕಾಂಗ್ರೆಸ್ ಪಕ್ಷಕ್ಕೆ ನಿಜವಾಗಿಯೂ ಮುಸ್ಲಿಮರ ಬಗ್ಗೆ ಸಹಾನುಭೂತಿ ಇದ್ದರೆ ಪಕ್ಷಕ್ಕೆ ಮುಸ್ಲಿಂ ಸಮುದಾಯದವರನ್ನು ಅಧ್ಯಕ್ಷರನ್ನಾಗಿ ನೇಮಿಸಬೇಕು. ಚುನಾವಣೆಯಲ್ಲಿ ಆ ಸಮುದಾಯದ ಜನರಿಗೆ ಶೇಕಡ 50ರಷ್ಟು ಟಿಕೆಟ್‌ಗಳನ್ನು ನೀಡಬೇಕು' ಎಂದು ನರೇಂದ್ರ ಮೋದಿ ಸವಾಲು ಎಸೆದರು.

'ಆದರೆ, ಕಾಂಗ್ರೆಸ್‌ನವರು ಆ ಕೆಲಸವನ್ನು ಮಾಡುವುದಿಲ್ಲ. ಅವರು ನಾಗರಿಕರ ಹಕ್ಕುಗಳನ್ನು ಕಸಿದುಕೊಳ್ಳುತ್ತಾರೆ ಅಷ್ಟೆ. ಯಾರಿಗೂ ಒಳ್ಳೆಯದನ್ನು ಮಾಡುವ ಉದ್ದೇಶ ಕಾಂಗ್ರೆಸ್‌ಗೆ ಇಲ್ಲ' ಎಂದು ಅವರು ವ್ಯಂಗ್ಯವಾಡಿದರು.

ಕಾಂಗ್ರೆಸ್ ಶಾಸಕ ಬಸವಂತಪ್ಪ ದೂರು– ಕ್ರಮ ಕೈಗೊಳ್ಳುವಂತೆ ಸಿ.ಎಂ.ಗೆ ಆಗ್ರಹ

ಪೌರಕಾರ್ಮಿಕರ 'ಸೇವೆ ಕಾಯಂ'ಗೆ ಲಂಚ

ಪ್ರಜಾವಾಣಿ ವಾರ್ತೆ

ದಾವಣಗೆರೆ: 'ನಗರ ಸ್ಥಳೀಯ ಸಂಸ್ಥೆಗಳಲ್ಲಿ ದಿನಗೂಲಿ ಆಧಾರದ ಮೇರೆಗೆ ಕೆಲಸ ಮಾಡುತ್ತಿರುವ ಪೌರ ಕಾರ್ಮಿಕರ ಸೇವೆ ಕಾಯಂ ಮಾಡಲು ಸರ್ಕಾರ ಮುಂದಾಗುತ್ತಿದ್ದಂತೆಯೇ ಲಂಚಾವತಾರ ಕಾಣಿಸಿಕೊಂಡಿದೆ. ಪ್ರತಿ ಫಲಾನುಭವಿ ಕಾರ್ಮಿಕರಿಂದ ₹3 ಲಕ್ಷದಿಂದ ₹ 5 ಲಕ್ಷ ಲಂಚಕ್ಕೆ ಬೇಡಿಕೆ ಇಡಲಾಗುತ್ತಿದೆ' ಎಂದು ಮಾಯಕೊಂಡ ಕ್ಷೇತ್ರದ ಕಾಂಗ್ರೆಸ್ ಶಾಸಕ ಕೆ.ಎಸ್. ಬಸವಂತಪ್ಪ ಅಸಮಾಧಾನ ವ್ಯಕ್ತಪಡಿ-ಸಿದರು.

ಇಲ್ಲಿನ ಮಹಾನಗರ ಪಾಲಿಕೆಯ ಆವರಣದಲ್ಲಿ ಜಿಲ್ಲಾಡಳಿತದ ವತಿಯಿಂದ ಸೋಮವಾರ ಏರ್ಪಡಿಸಿದ್ದ ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಅವರು ಈ ವಿಚಾರ ಪ್ರಸ್ತಾಪಿಸಿದರು.

ಶಾಸಕರ ಮಾತು...

- ₹ 3 ಲಕ್ಷದಿಂದ ₹ 5 ಲಕ್ಷ ಲಂಚಕ್ಕೆ ಬೇಡಿಕೆ
- ಬಡ್ಡಿಗೆ ಸಾಲ ಪಡೆಯುತ್ತಿರುವ ಕಾರ್ಮಿಕರು
- ತಾಳಿ ಮಾರುತ್ತಿರುವ ಮಹಿಳಾ ಕಾರ್ಮಿಕರು

'ಪೌರ ಕಾರ್ಮಿಕರ ಸೇವೆಯನ್ನು ಕಾಯಂಗೊಳಿಸಿ ಮೇ 1ಕ್ಕೆ ಆದೇಶ ನೀಡುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿದ್ದಾರೆ. ಇದರಿಂದ ಖುಷಿಪಡಬೇಕೊ, ದುಃಖಪಡಬೇಕೊ ಗೊತ್ತಾಗುತ್ತಿಲ್ಲ. ಲಂಚ ನೀಡುವಂತೆ ಪೌರ ಕಾರ್ಮಿಕರನ್ನು ಪೀಡಿಸಲಾಗುತ್ತಿದೆ. ಇದು ಅಧಿಕಾರಿಗಳ ಕೃತ್ಯವೊ ಅಥವಾ ಬೇರೆ ಯಾವುದಾದರೂ ಒತ್ತಡ ಇದೆಯೋ

ಪೌರಕಾರ್ಮಿಕರಿಂದ ಲಂಚ ಪಡೆಯುವ ವ್ಯವಸ್ಥೆ ದಾವಣಗೆರೆಗೆ ಸೀಮಿತವಾಗಿಲ್ಲ. ಇದು ರಾಜ್ಯದ ಎಲ್ಲೆಡೆ ಇರುವುದನ್ನು ಗಮನಿಸಿದ್ದೇನೆ. ಪೌರಕಾರ್ಮಿಕರ ಅಳಲು ಕೇಳಿದರೆ ಕಣ್ಣೀರು ಬರುತ್ತದೆ

ಕೆ.ಎಸ್.ಬಸವಂತಪ್ಪ, ಶಾಸಕ

ಎಂಬುದರ ಬಗ್ಗೆ ಲೋಕಾಯುಕ್ತ ತನಿಖೆ ನಡೆಸುವ ಅಗತ್ಯವಿದೆ' ಎಂದು ಹೇಳಿದರು.

'ದಿನಗೂಲಿ ಆಧಾರದ ನೇಮಕಾತಿ ಸಂದರ್ಭದಲ್ಲಿಯೂ ಪೌರ ಕಾರ್ಮಿಕರಿಂದ ಲಕ್ಷಾಂತರ ರೂಪಾಯಿ ಲಂಚ ವಸೂಲಿ ಮಾಡಲಾಗಿದೆ. ಸೇವೆ ಕಾಯಂ ಮಾಡುವ ಪ್ರಕ್ರಿಯೆ ಆರಂಭ-ವಾಗುತ್ತಿದ್ದಂತೆಯೇ ಪೌರ ಕಾರ್ಮಿಕರು ಶೇ 10ರ ಬಡ್ಡಿದರದಲ್ಲಿ ಸಾಲ ಪಡೆ-ಯುತ್ತಿದ್ದಾರೆ. ಮಹಿಳಾ ಪೌರಕಾರ್ಮಿಕರ ಕೊರಳಲ್ಲಿ ತಾಳಿ, ಮುಖದಲ್ಲಿ ಮೂಗುಬೊಟ್ಟು ಕಾಣುತ್ತಿಲ್ಲ. ಒಮ್ಮೆ ಇವರನ್ನು ನೋಡಿ' ಎಂದು ಪಾಲಿಕೆ ಆಯುಕ್ತೆ ರೇಣುಕಾ ಅವರತ್ತ ಹೊರಳಿ ಮಹಿಳಾ ಕಾರ್ಮಿಕರನ್ನು ತೋರಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಈ ಬಗ್ಗೆ ಗಮನಹರಿಸಿ, ಲಂಚಕ್ಕೆ ಬೇಡಿಕೆ ಇರಿಸಿರುವ ಅಧಿಕಾರಿಗಳು ಮತ್ತು ಸಂಘಟನೆಗಳ ಮುಖಂಡರನ್ನು ನಿಯಂತ್ರಿಸುವ ಮೂಲಕ ಪೌರ ಕಾರ್ಮಿಕರ ಸೇವೆಯನ್ನು ಕಾಯಂ ಮಾಡಲು ಕ್ರಮ ಕೈಗೊಳ್ಳಬೇಕು ಎಂದು ಅವರು ಆಗ್ರಹಿಸಿದರು. ಈ ಕುರಿತು ಪ್ರತಿಕ್ರಿಯೆ ನೀಡಲು ಪೌರಕಾರ್ಮಿಕರ ಸಂಘದ ಸದಸ್ಯರು ಇಚ್ಛೆಪಡಲಿಲ್ಲ.

ಬಿಸಿಲಿನಿಂದ ಬಸವಳಿದಿದ್ದ ಉದ್ಯಾನನಗರಿಯಲ್ಲಿ ತಂಪನೆಯ ವಾತಾವರಣ

ನಗರದ ವಿವಿಧೆಡೆ ಧಾರಾಕಾರ ಮಳೆ

ಸಂದೀಪ್ ಉನ್ನಿಕೃಷ್ಣನ್ ರಸ್ತೆಯಲ್ಲಿ ಹರಿಯುತ್ತಿದ್ದ ಮಳೆ ನೀರಿನಲ್ಲೇ ವಾಹನಗಳು ಸಾಗಿದವು

ಸುಮನಹಳ್ಳಿ ಮೇಲ್ಸೇತುವೆ ಕೆಳಗೆ ನೀರು ನಿಂತಿತ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಿವಿಧ ಪ್ರದೇಶಗಳಲ್ಲಿ ಸೋಮವಾರ ಸಂಜೆ ಕೆಲಕಾಲ ಧಾರಾಕಾರ ಮಳೆ ಸುರಿಯಿತು. ಪರಿಣಾಮವಾಗಿ ಬಿಸಿ ತಾಪಮಾನದಿಂದ ಬಸವಳಿದಿದ್ದ ಉದ್ಯಾನ ನಗರದಲ್ಲಿ ತಂಪನೆಯ ವಾತಾವರಣ ನಿರ್ಮಾಣವಾಯಿತು.

ಮಧ್ಯಾಹ್ನ ನಗರದಾದ್ಯಂತ ಮೋಡ ಕವಿದ ವಾತಾವರಣವಿತ್ತು. ಸಂಜೆ 5ರ ಸುಮಾರಿಗೆ ದಿಢೀರನೆ ಮಳೆ ಆರಂಭವಾಯಿತು. ವಿಧಾನಸೌಧ, ಕೆ.ಆರ್. ಸರ್ಕಲ್, ಕಾರ್ಪೊರೇಷನ್, ಶಾಂತಿನಗರ ಮೆಜೆಸ್ಟಿಕ್, ಮೈಸೂರು ಬ್ಯಾಂಕ್ ವೃತ್ತದ ಸುತ್ತಮುತ್ತ ಹದಿನೈದು ನಿಮಿಷಕ್ಕೂ ಹೆಚ್ಚು ಕಾಲ ಧಾರಾಕಾರ ಮಳೆ ಸುರಿಯಿತು.

ಹೆಬ್ಬಾಳ, ಯಲಹಂಕ, ಕೊಡಿಗೆಹಳ್ಳಿಯಲ್ಲಿ ಜೋರು ಮಳೆಯಾಗಿದೆ. ಕೊಡಿಗೆಹಳ್ಳಿ ಸಮೀಪದ ಸಂದೀಪ್ ಉನ್ನಿಕೃಷ್ಣನ್ ರಸ್ತೆ ಬಳಿ ನೀರು ನಿಂತಿದ್ದು, ದೊಡ್ಡಬಳ್ಳಾಪುರ ರಸ್ತೆ, ಡೇರಿ ವೃತ್ತದ ಕಡೆಗೆ ನಿಧಾನಗತಿಯಲ್ಲಿ ವಾಹನಗಳು ಚಲಿಸಿದವು. ರೆಸಿಡೆನ್ಸಿ ರಸ್ತೆಯ ಒಪೆರಾ ಹೌಸ್‌ಬಳಿ ರಸ್ತೆಯಲ್ಲಿ ನೀರು ನಿಂತು ವಾಹನ ಸಂಚಾರ ನಿಧಾನವಾಯಿತು.

ಭಾರಿ ಮಳೆಯಿಂದಾಗಿ ಮಾಗಡಿ ರಸ್ತೆಯ ಸುಮನಹಳ್ಳಿ ಸೇತುವೆ ಕೆಳಗಡೆ ನೀರು ನಿಂತಿತ್ತು. ಸಂಪಂಗಿರಾಮ ನಗರ, ಆರ್.ಆರ್.ನಗರದಲ್ಲೂ ಉತ್ತಮ ಮಳೆಯಾಗಿದೆ. ಮಲ್ಲೇಶ್ವರ, ಯಶವಂತಪುರ ಭಾಗದಲ್ಲಿ ಜೋರಾಗಿ ಮಳೆಯಾಗಿದ್ದು, ಸವಾರರು ವಾಹನ ಓಡಿಸಲು ಪರದಾಡಿದರು. ವಿಜಯನಗರ, ರಾಜಾಜಿನಗರ, ಕೆ.ಆರ್ ಮಾರುಕಟ್ಟೆ, ಗಾಂಧಿ ಬಜಾರ್, ಮೆಜೆಸ್ಟಿಕ್ ಸುತ್ತಮುತ್ತ ಮಳೆ ಜೋರಾಗಿ ಸುರಿಯಿತು. ಸಂಜೆ ಕಚೇರಿ ಮುಗಿಸಿ ಮನೆಗೆ ತೆರಳುತ್ತಿದ್ದವರು ಮಳೆಯಲ್ಲಿ ಸಿಲುಕಿದರು. ದಿಢೀರನೆ ಮಳೆ ಸುರಿದಿದ್ದರಿಂದ ವಾಹನ ಸವಾರರು ಅಂಡರ್‌ಪಾಸ್, ಫ್ಲೈಓವರ್ ಕೆಳಗೆ ನಿಂತು ಮಳೆಯಿಂದ ರಕ್ಷಣೆ ಪಡೆದರು.

ಕಬ್ಬನ್ ರಸ್ತೆಯಲ್ಲಿ ಜನರು ಮಳೆಯಲ್ಲೇ ಸಾಗಿದರು – ಪ್ರಜಾವಾಣಿ ಚಿತ್ರ

ಮಳೆ ಗಾಳಿಯಿಂದಾಗಿ ಬಸವೇಶ್ವರ ನಗರದ ಶಂಕರಮಠ ವಾರ್ಡ್‌ನ ಗೃಹಲಕ್ಷ್ಮಿ ಲೇಔಟ್, 1ನೇ ಹಂತದಲ್ಲಿ ತೆಂಗಿನ ಮರವೊಂದು ಧರೆಗೆ ಉರುಳಿತು

ಗರಿಷ್ಠ 24 ಮಿ.ಮೀ. ಮಳೆ

ಕೊಡಿಗೆಹಳ್ಳಿಯಲ್ಲಿ 24 ಮಿ.ಮೀ ಮಳೆಯಾಗಿದೆ. ಆರ್.ಆರ್. ನಗರ ವ್ಯಾಪ್ತಿಯ ಕೊಟ್ಟಿಗೆಪಾಳ್ಯ ವಾರ್ಡ್ ವ್ಯಾಪ್ತಿಯ ಬಸವೇಶ್ವರನಗರದಲ್ಲಿ 16 ಮಿ.ಮೀ, ಹೇರೋಹಳ್ಳಿಯಲ್ಲಿ 12.50 ಮಿ.ಮೀ ಮಳೆಯಾಗಿದೆ. ಸಂಪಂಗಿರಾಮ ನಗರದಲ್ಲಿ 11 ಮಿ.ಮೀ ಮತ್ತು ಯಲಹಂಕದ ಚೌಡೇಶ್ವರಿ ನಗರದಲ್ಲಿ 15.50 ಮಿ.ಮೀ ಮಳೆಯಾದ ವರದಿಯಾಗಿದೆ.

ಹವಾಮಾನ ಇಲಾಖೆ ಭಾನುವಾರ ನಗರಕ್ಕೆ 'ಯಲ್ಲೋ ಅಲರ್ಟ್' ಘೋಷಿಸಿತ್ತು. ಮೂರು ದಿನ ಗುಡುಗು ಸಹಿತ ಮಳೆಯಾಗುವ ಸಾಧ್ಯತೆ ಕುರಿತು ಮುನ್ಸೂಚನೆ ನೀಡಿತ್ತು.

ಸುದ್ದಿ 2 ನಿಮಿಷ

ಬಿಬಿಎಂಪಿ: ₹6,000 ಕೋಟಿ ಆಸ್ತಿ ತೆರಿಗೆ ಸಂಗ್ರಹ ಸಾಧ್ಯತೆ

ಬೆಂಗಳೂರು: ಪ್ರಸಕ್ತ ಹಣಕಾಸು ವರ್ಷದಲ್ಲಿ (2025-26) ಪಾಲಿಕೆಯ ಆಸ್ತಿ ತೆರಿಗೆ ಸಂಗ್ರಹವು ₹6,000 ಕೋಟಿಯನ್ನು ಮೀರಲಿದೆ. ಆಸ್ತಿ ತೆರಿಗೆಯನ್ನು ಹೆಚ್ಚಿಸದಿರುವ ಕಾರಣ ಇದು ಸಾಧ್ಯವಾಗಲಿದೆ ಎಂದು ಬಿಬಿಎಂಪಿ ವಿಶೇಷ ಆಯುಕ್ತ (ಕಂದಾಯ) ಮುನೀಶ್ ಮೌದ್ಗಿಲ್ ತಿಳಿಸಿದ್ದಾರೆ.

2023-24ನೇ ಸಾಲಿಗಿಂತ 2024-25ನೇ ಸಾಲಿನಲ್ಲಿ ₹1,000 ಕೋಟಿಗಳಿಗಿಂತ ಹೆಚ್ಚಿನ ಮೊತ್ತದ ಆಸ್ತಿ ತೆರಿಗೆ ಸಂಗ್ರಹಣೆಯಾಗಿದೆ. 2023-24 ನೇ ಸಾಲಿನಲ್ಲಿ ₹3,918 ಕೋಟಿ ಆಸ್ತಿ ತೆರಿಗೆ ಸಂಗ್ರಹಣೆಯಾಗಿತ್ತು.

'ಒಂದು ಬಾರಿ ಪರಿಹಾರ ಯೋಜನೆ, ಬಾಕಿ ಮತ್ತು ಪ್ರಸ್ತುತ ತೆರಿಗೆ ಬಾಕಿಗಳ ಮೇಲೆ ವ್ಯವಸ್ಥಿತ ಕೆಲಸ ನಿರ್ವಹಣೆ ಮತ್ತುತಂತ್ರಜ್ಞಾನ ಆಧಾರಿತ ಅನುಸರಣೆ, ಬಾಕಿ ಆಸ್ತಿ ತೆರಿಗೆಗಳ ವಸೂಲಾತಿಗೆ ಪರಿಣಾಮಕಾರಿ ಪ್ರಮಾಣಿತ ಕಾರ್ಯಾಚರಣೆ ವಿಧಾನಗಳು ಮತ್ತು ನಿಯಮಗಳನ್ನು ಜಾರಿಗೊಳಿಸಲಾಗಿತ್ತು.

ಬಾಕಿ ಹಾಗೂ ಆಸ್ತಿ ತೆರಿಗೆ ವಸೂಲಾತಿಗೆ ಮನೆ- ಮನೆಗಳಿಗೆ ನಿರಂತರವಾಗಿ ಭೇಟಿ. ಈ ಎಲ್ಲಾ ಅಂಶಗಳಿಂದ ಆಸ್ತಿ ತೆರಿಗೆ ಸಂಗ್ರಹ ಹೆಚ್ಚಳವಾಗಿದೆ' ಎಂದು ಮೌದ್ಗಿಲ್ ತಿಳಿಸಿದ್ದಾರೆ.

ಬಾನು ಮುಷ್ತಾಕ್, ದೀಪಾ ಜತೆ ಇದೇ 20ಕ್ಕೆ ಸಂವಾದ

ಬೆಂಗಳೂರು: ದೊಮ್ಮಲೂರಿನಲ್ಲಿರುವ ಬೆಂಗಳೂರು ಅಂತರ ರಾಷ್ಟ್ರೀಯ ಕೇಂದ್ರದಲ್ಲಿ(ಬಿಐಸಿ) ಏಪ್ರಿಲ್ 20ರ ಸಂಜೆ 6 ಗಂಟೆಗೆ ಶೈನಿ ಆಂಟನಿ ಅವರು ಸಾಹಿತಿ ಬಾನು ಮುಷ್ತಾಕ್ ಮತ್ತು ದೀಪಾ ಭಸ್ತಿ ಅವರ ಜತೆ ಸಂವಾದ ನಡೆಸಲಿದ್ದಾರೆ.

ಬಾನು ಮುಷ್ತಾಕ್ ಅವರ ಸಣ್ಣ ಕತೆಗಳ ಅನುವಾದಿತ ಸಂಕಲನ 'ಹಾರ್ಟ್ ಲ್ಯಾಂಪ್' 2025ರ ಅಂತರರಾಷ್ಟ್ರೀಯ ಬೂಕರ್ ಪ್ರಶಸ್ತಿಯ ಅಂತಿಮ ಆಯ್ಕೆ ಪಟ್ಟಿಯಲ್ಲಿ ಸ್ಥಾನ ಪಡೆದಿದೆ. ದೀಪಾ ಭಸ್ತಿ ಅವರು ಬಾನು ಅವರ ಕತೆಗಳನ್ನು ಇಂಗ್ಲಿಷ್‌ಗೆ ಅನುವಾದಿಸಿದ್ದಾರೆ.

ರಾಜ್ಯಮಟ್ಟದ ವಚನ ಕಂಠಪಾಠ ಸ್ಪರ್ಧೆ

ನೆಲಮಂಗಲ: ಪಟ್ಟಣದ ಬಸವಣ್ಣ ದೇವರ ಮಠದ ವತಿಯಿಂದ ಬಸವ ಜಯಂತಿ ಪ್ರಯುಕ್ತ ಒಂದು ಸಾವಿರ ವಚನಗಳ ಕಂಠಪಾಠ ಸ್ಪರ್ಧೆಯನ್ನು ಹಮ್ಮಿಕೊಳ್ಳಲಾಗಿದೆ.

ಪ್ರಥಮ ಬಹುಮಾನ ₹1 ಲಕ್ಷ ನಗದು, ದ್ವಿತೀಯ ಬಹುಮಾನ ₹75 ಸಾವಿರ ಮತ್ತು ತೃತೀಯ ಬಹುಮಾನವಾಗಿ ₹50 ಸಾವಿರ ನಗದು ಜೊತೆಗೆ, ಬಹುಮಾನಿತರಿಗೆ ಸ್ಮರಣಿಕೆ ನೀಡಿ ಗೌರವಿಸಲಾಗುತ್ತದೆ.

ಏಪ್ರಿಲ್ 29 ರಂದು ಸ್ಪರ್ಧೆ ನಡೆಯಲಿದೆ. ಯಾವುದೇ ಜಾತಿ ಮತಗಳ ಭೇದವಿಲ್ಲದೆ ಭಾಗವಹಿಸಬಹುದು. ದೂರದ ಊರುಗಳಿಂದ ಬರುವ ಸ್ಪರ್ಧಿಗಳಿಗೆ ಮಠದಲ್ಲಿ ಉಳಿದುಕೊಳ್ಳುವ ವ್ಯವಸ್ಥೆ ಮಾಡಲಾಗಿದೆ ಎಂದು ಮಠದ ಸಿದ್ದಲಿಂಗ ಸ್ವಾಮೀಜಿ ತಿಳಿಸಿದ್ದಾರೆ.

ಸ್ಪರ್ಧೆಯಲ್ಲಿ ಭಾಗವಹಿಸುವ ಆಸಕ್ತರು ಮಠದಲ್ಲಿ ಹೆಸರು ನೋಂದಾಯಿಸಿಕೊಳ್ಳಬಹುದು. ಹೆಚ್ಚಿನ ಮಾಹಿತಿಗೆ ಅಭಿಷೇಕ್. ಎಂ.ಆರ್(8147395591), ಟಿ.ಜ್ಞಾನೇಶ್(9845454536), ಷಣ್ಮುಖಪ್ಪ (9980496763) ಅವರನ್ನು ಸಂಪರ್ಕಿಸಲು ಕೋರಲಾಗಿದೆ.

ನಿಧನ ವಾರ್ತೆ

ಛಾಯಾ ಶ್ರೀವತ್ಸ

ಬೆಂಗಳೂರು: ಹವ್ಯಾಸಿ ಪತ್ರಕರ್ತೆ ಮತ್ತು ಬರಹಗಾರ್ತಿ ಛಾಯಾ ಶ್ರೀವತ್ಸ (78) ಅವರು ನಗರದಲ್ಲಿ ಸೋಮವಾರ ನಿಧನರಾದರು.

ಅವರಿಗೆ ಮಕ್ಕಳಾದ ಡಾ. ಅರ್ಜುನ್ ಶ್ರೀವತ್ಸ (ನರರೋಗ ತಜ್ಞ) ಮತ್ತು ಅಂಗಾಂಗ ದಾನದ ಕುರಿತು ಅಂತರ ರಾಷ್ಟ್ರೀಯ ಮಟ್ಟದ ಅಭಿಯಾನ ನಡೆಸುತ್ತಿರುವ ಅನಿಲ್ ಶ್ರೀವತ್ಸ ಇದ್ದಾರೆ. ಮೂಲತಃ ಮೈಸೂರಿನವರಾದ ಛಾಯಾ ಅವರು ಬಾಲಕಿಯಾಗಿದ್ದಾಗ ಮೈಸೂರು ಅರಮನೆಯಲ್ಲಿ ರಾಜಕುಮಾರಿ ಗಾಯತ್ರಿದೇವಿ ಅವರ ಸಖಿಯಾಗಿದ್ದರು. ವಿವಾಹದ ಬಳಿಕ ಮುಂಬೈನಲ್ಲಿ ನೆಲಸಿದ್ದ ಅವರು, ಮುಂಬೈ ಆಕಾಶವಾಣಿ, ಕೆಲವು ನಿಯತಕಾಲಿಕೆಗಳಿಗೆ ಸಿನಿಮಾ ತಾರೆಯರ ಸಂದರ್ಶನ ನಡೆಸುತ್ತಿದ್ದರು. ಮುಂಬೈನ ಕಿಶನ್ ಚಂದ್ ಚೆಲ್ಲಾರಾಂ ಕಾಲೇಜಿನಲ್ಲಿ ಪತ್ರಿಕೋದ್ಯಮ ವಿಭಾಗದಲ್ಲಿ ಪ್ರಾಧ್ಯಾಪಕಿ ಆಗಿಯೂ ಕಾರ್ಯನಿರ್ವಹಿಸಿದ್ದರು.

'ಡೆಕ್ಕನ್ ಹೆರಾಲ್ಡ್' ಪತ್ರಿಕೆಯಲ್ಲಿ 'ನೋಟ್ಸ್ ಫ್ರಂ ನ್ಯೂಯಾರ್ಕ್' ಎಂಬ ಅಂಕಣ ಬರೆಯುತ್ತಿದ್ದರು. ಹಿಂದುಸ್ತಾನ್ ಮಷೀನ್ ಟೂಲ್ಸ್ ಕಂಪನಿಯ ಸಾರ್ವಜನಿಕ ಸಂಪರ್ಕ ವಿಭಾಗದಲ್ಲೂ ಕಾರ್ಯನಿರ್ವಹಿಸಿದ್ದರು. 'ಕಾರ್ಪೊರೇಟ್ ದ್ರೌಪದಿ' ಸೇರಿದಂತೆ ಕೆಲವು ಕೃತಿಗಳನ್ನೂ ರಚಿಸಿದ್ದರು. 9 ರಾಷ್ಟ್ರಗಳ ಮಹಿಳೆಯರನ್ನು ಒಳಗೊಂಡ 'ದ ಗಿಲ್ಡ್ ಆಫ್ ವುಮೆನ್ ಅಚೀವರ್ಸ್' ಎಂಬ ಸರ್ಕಾರೇತರ ಸಂಸ್ಥೆಯನ್ನೂ ಸ್ಥಾಪಿಸಿದ್ದರು.

ಪ್ರಸನ್ನ ನಂಜಾಪುರ, ಲತಾಗುತ್ತಿಗೆ ಪ್ರಶಸ್ತಿ

ಬೆಂಗಳೂರು: ಬಿಎಂಶ್ರೀ ಪ್ರತಿಷ್ಠಾನದ 2024ನೇ ಸಾಲಿನ 'ಸೂ.ವೆಂ.ಆರಗ ವಿಮರ್ಶಾ ಪ್ರಶಸ್ತಿ'ಗೆ ಪ್ರಸನ್ನ ನಂಜಾಪುರ ಮತ್ತು 'ಡಾ.ವಿಜಯಾ ಸುಬ್ಬರಾಜ್ ಗಣ್ಯ ಲೇಖಕಿ ಪ್ರಶಸ್ತಿ'ಗೆ ಲತಾ ಗುತ್ತಿ ಅವರು ಆಯ್ಕೆಯಾಗಿದ್ದಾರೆ.

ಎರಡೂ ಪ್ರಶಸ್ತಿ ತಲಾ ₹10 ಸಾವಿರ ನಗದು ಹೊಂದಿದೆ. 19ರಂದು ಸಾಹಿತ್ಯ-ಸಂಸ್ಕೃತಿ ಪೋಷಕ ಕೆ.ಮೋಹನ್‌ದೇವ್ ಆಳ್ವ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಪ್ರಸನ್ನ ನಂಜಾಪುರ

ಲತಾ ಗುತ್ತಿ

'ಅಂಬೇಡ್ಕರ್ ಪ್ರಶಸ್ತಿ' ಪ್ರದಾನ ಇಂದು

ಬೆಂಗಳೂರು: ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಅಂಬೇಡ್ಕರ್ ಜಯಂತಿ ಆಚರಿಸುತ್ತಿದ್ದು, ಬಿ.ಆರ್. ಅಂಬೇಡ್ಕರ್ ಸಮಾಜಸೇವಾ ರತ್ನ, ಬಿ.ಆರ್. ಅಂಬೇಡ್ಕರ್ ರತ್ನ ಮತ್ತು ಬಿ.ಆರ್. ಅಂಬೇಡ್ಕರ್ ಭೂಷಣ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಗುತ್ತದೆ.

ನಗರದ ಪುರಭವನದಲ್ಲಿ ಏಪ್ರಿಲ್ 15ರಂದು ನಡೆಯುವ ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ, ಸಾಧಕ, ಸಾಧಕಿಯರು, ಮತ್ತು ಬಿಬಿಎಂಪಿ ಅಧಿಕಾರಿ, ನೌಕರರಿಗೆ ಅಂಬೇಡ್ಕರ್ ಹೆಸರಿನಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದು ಸಂಘದ ಅಧ್ಯಕ್ಷ ಎ. ಅಮೃತ್‌ರಾಜ್ ಮಾಹಿತಿ ನೀಡಿದರು.

ಹೈಕೋರ್ಟ್ ನ್ಯಾಯಮೂರ್ತಿಗಳಾದ ಕೃಷ್ಣ ಎಸ್.ದಿಕ್ಷೀತ್, ಆರ್. ದೇವದಾಸ್ ಮತ್ತು ಶಿಕ್ಷಣ ತಜ್ಞ ವೂಡೇ ಪಿ.ಕೃಷ್ಣ ಭಾಗವಹಿಸಲಿದ್ದಾರೆ.

ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರ್ಯವೈಶ್ಯ ಸಮಾಜದ ಏಳ್ಗೆಗೆ ಸರ್ಕಾರದಿಂದ ಸಂಪೂರ್ಣ ಸಹಕಾರ ಇರಲಿದೆ ಎಂದು ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಎಸ್.ಇ. ಸುಧೀಂದ್ರ ಭರವಸೆ ನೀಡಿದರು.

ಕರ್ನಾಟಕ ಆರ್ಯವೈಶ್ಯ ಮಹಾಸಭಾ ವತಿಯಿಂದ ಸೋಮವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್, ಅಂಗವಿಕಲರಿಗೆ ಮಾಸಾಶನ, ವಿಧವೆಯವರಿಗೆ ಪಿಂಚಣಿ, ವಿದ್ಯಾರ್ಥಿಗಳಿಗೆ ಬಡ್ಡಿ ರಹಿತ ಸಾಲ ವಿತರಿಸಿ ಮಾತನಾಡಿದರು.

ಆರ್ಯವೈಶ್ಯ ಸಮಾಜದ ಅಗತ್ಯಗಳಿಗೆ ರಾಜ್ಯ ಸರ್ಕಾರ ಸಕಾರಾತ್ಮಕವಾಗಿ ಸ್ಪಂದಿಸಲಿದೆ. ಸರ್ಕಾರದ ಭಾಗವಾಗಿ ಆರ್ಯವೈಶ್ಯ ಅಭಿವೃದ್ಧಿ ಮಂಡಳಿ ಕಾರ್ಯ ನಿರ್ವಹಿಸುತ್ತಿದೆ. ಆದರೆ, ಮಂಡಳಿ ಅಧ್ಯಕ್ಷ ಸ್ಥಾನ ಖಾಲಿ ಇದ್ದು, ಮುಂದಿನ ದಿನಗಳಲ್ಲಿ ನಾಯಕರು ಈ ಸ್ಥಾನ ತುಂಬುವ ಕೆಲಸ ಮಾಡಲಿದ್ದಾರೆ. ಈ ಮಧ್ಯೆ, ಆರ್ಯವೈಶ್ಯ ಮಹಾಸಭಾ ಖಾಸಗಿಯಾಗಿಯೇ ಸಮಾಜದ ಸೇವೆ ಮಾಡುತ್ತಿದೆ ಎಂದರು.

ಆರ್ಯವೈಶ್ಯ ಮಹಾಸಭಾದ ಅಧ್ಯಕ್ಷ ಆರ್.ಪಿ. ರವಿಶಂಕರ್ ಮಾತನಾಡಿದರು.

ಪದವಿ ಹಾಗೂ ಸ್ನಾತಕೋತ್ತರ ಪದವಿ ವ್ಯಾಸಂಗ ಮಾಡುತ್ತಿರುವ 180 ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಣೆ, 53 ವಿದ್ಯಾರ್ಥಿಗಳಿಗೆ ಬಡ್ಡಿ ರಹಿತ ಸಾಲ, ಸಂಧ್ಯಾಶ್ರೀ ಯೋಜನೆಯಡಿ 309 ಮಹಿಳೆಯರಿಗೆ ವಿಧವಾ ಮಾಸಾಶನ, 260 ಅಂಗವಿಕಲರಿಗೆ ಮಾಸಾಶನ ಹಾಗೂ ಅಮರಜ್ಯೋತಿ ವಿಮೆ ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಆರ್.ವಿ. ಇನ್‌ಸ್ಟಿಟ್ಯೂಟ್ ಜಂಟಿ ಕಾರ್ಯದರ್ಶಿ ಡಿ.ಪಿ. ನಾಗರಾಜ್, ಇಂಡಿಯನ್ ರೈಲ್ವೆ ಆಪರೇಷನ್ ಮ್ಯಾನೇಜರ್ (ಮೈಸೂರು ವಿಭಾಗ) ಎಸ್. ಹರಿತಾ ಉಪಸ್ಥಿತರಿದ್ದರು.

ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಎಸ್.ಇ. ಸುಧೀಂದ್ರ ಅವರು ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಿಸಿದರು. ಹರಿತಾ, ಆರ್.ಪಿ. ರವಿಶಂಕರ್ ಇದ್ದಾರೆ

ಮೂರು ದಿನಗಳಲ್ಲಿ ಅಂದಾಜು ₹18 ಲಕ್ಷ ವಹಿವಾಟು

ರೈತ ಸಂತೆ ಸಂಪನ್ನ: ಉತ್ತಮ ಸ್ಪಂದನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು/ರಾಜರಾಜೇಶ್ವರಿ ನಗರ: 'ನೇರ ಮಾರಾಟದ ಮೂಲಕ ನಮ್ಮ ಹೋರಾಟ' – 'ನಮ್ಮ ಬೆಳೆಗೆ ನಮ್ಮದೇ ಬೆಲೆ' ಶೀರ್ಷಿಕೆಯಡಿ ರಾಜರಾಜೇಶ್ವರಿ ನಗರದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ ಸಾಮೂಹಿಕ ನಾಯಕತ್ವದಲ್ಲಿ ಆಯೋಜಿಸಿದ್ದ ಮೂರು ದಿನಗಳ 'ರೈತ ಸಂತೆ' ಸೋಮವಾರ ಸಂಪನ್ನಗೊಂಡಿತು.

ಐಡಿಯಲ್ ಹೋಮ್ಸ್ ಲೇಔಟ್‌ನ ಮುನಿವೆಂಕಟಪ್ಪ ಬಯಲು ರಂಗ ಮಂದಿರದಲ್ಲಿ ಶನಿವಾರದಿಂದ ಆರಂಭವಾಗಿದ್ದ ಈ ಸಂತೆಗೆ ಚಿಕ್ಕಬಳ್ಳಾಪುರ, ಮೈಸೂರು, ಚಾಮರಾಜನಗರ, ಹಾಸನ, ಬಾಗಲಕೋಟೆ, ಹಾವೇರಿ ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆಗಳಿಂದ ಸುಮಾರು 70 ರೈತರು ಬಂದಿದ್ದರು. ಮೂರು ದಿನಗಳಲ್ಲಿ ಅಂದಾಜು ₹18 ಲಕ್ಷದಷ್ಟು ವಹಿವಾಟು ನಡೆಯಿತು ಎಂದು ಆಯೋಜಕರು ಮಾಹಿತಿ ನೀಡಿದರು.

ಕುಂಬಳಕಾಯಿ, ಸೋರೆಕಾಯಿ ಸೇರಿದಂತೆ ವಿವಿಧ ತರಕಾರಿಗಳು, ಕಲ್ಲಂಗಡಿ, ಪಪ್ಪಾಯದಂತಹ ಹಣ್ಣುಗಳು, ಬೇಳೆ ಕಾಳು, ಕೊಬ್ಬರಿ, ಅಡುಗೆ ಎಣ್ಣೆ ಸೇರಿದಂತೆ ವಿವಿಧ ಉತ್ಪನ್ನಗಳನ್ನು ಸಂತೆಯಲ್ಲಿ ಮಾರಾಟ ಮಾಡಿದ್ದಾರೆ.

'ನಿರೀಕ್ಷೆಗೂ ಮೀರಿ ಗ್ರಾಹಕರು ಬಂದು ಉತ್ಪನ್ನಗಳನ್ನು ಖರೀದಿಸಿದರು. ಎರಡನೇ ದಿನಕ್ಕೆ ಬಹುತೇಕ ಉತ್ಪನ್ನಗಳೆಲ್ಲ ಖಾಲಿಯಾದವು. ಇನ್ನೂ ಉತ್ಪನ್ನಗಳಿದ್ದರೂ ಮಾರಾಟವಾಗುತ್ತಿತ್ತು' ಎಂದು ರೈತ ಕಿರಣ್ ಹೇಳಿದರು.

'ಆರ್.ಆರ್. ನಗರದ ಸುತ್ತ ಮುತ್ತಲಿನ ಗ್ರಾಹಕರನ್ನು ಕೇಂದ್ರವಾಗಿಸಿಕೊಂಡು ಸಂತೆಯನ್ನು ಆಯೋಜಿಸಲಾಗಿತ್ತು. ಆದರೆ, ಜಯನಗರ, ಇಂದಿರಾ ನಗರ, ನಾಗರಬಾವಿ ಸೇರಿದಂತೆ ದೂರದ ಬಡಾವಣೆಗಳಿಂದಲೂ ಜನರು ಸಂತೆಗೆ ಭೇಟಿ ನೀಡಿದ್ದರು. ಉತ್ತಮ ಪ್ರತಿಕ್ರಿಯೆ ನೀಡಿದರು' ಎಂದು ಆಯೋಜಕರು ತಿಳಿಸಿದರು

'ಮೂರೂವರೆ ಟನ್‌ನಷ್ಟು ಪಪ್ಪಾಯ ತಂದಿದ್ದೆ. ಕೆ.ಜಿಗೆ ₹20ರಂತೆ ಮಾರಾಟ ಮಾಡಿದೆ. ಬಹುತೇಕ ಎಲ್ಲ ಖರ್ಚಾಯಿತು. ಮೊದಲ ದಿನ ಹಣ್ಣು ತಗೊಂಡವರು, ಎರಡನೇ ದಿನ ಹೆಚ್ಚು ಹಣ್ಣು ಖರೀದಿಸಿದರು. ಸಂತೆಯಿಂದ ಗ್ರಾಹಕರ ಸಂಪರ್ಕ ಬೆಳೆದಿದೆ' ಎಂದು ಗೌರಿಬಿದನೂರು ತಾಲ್ಲೂಕಿನ ಅಮ್ಮಸಂದ್ರದ ಪುಟ್ಟಣ್ಣ ವಿವರಿಸಿದರು.

'ಹೊಲದ ಬಳಿಯ ಮಾರಾಟದಲ್ಲಿ ದಲ್ಲಾಳಿಗಳು ಹೇಳಿದ್ದೇ ಬೆಲೆ. ಈಗ ಇಲ್ಲಿ ನಾನೇ ನಿಗದಿಪಡಿಸಿದ ಬೆಲೆಗೆ ಮಾರಾಟ ಮಾಡಿದ್ದೇನೆ. ಗ್ರಾಹಕರ ಸ್ಪಂದನೆ ಉತ್ತಮವಾಗಿದೆ' ಎಂದರು.

'ಗ್ರಾಹಕರಿಗೆ ನೈಸರ್ಗಿಕ ಮತ್ತು ರಾಸಾಯನಿಕ ಹಾಕಿ ಬೆಳೆದ ಉತ್ಪನ್ನಗಳ ನಡುವಿನ ವ್ಯತ್ಯಾಸದ ಬಗ್ಗೆ ಅರಿವು ಮೂಡಿಸಬೇಕೆಂದು ಈ ಸಂತೆಯಿಂದ ಅರಿವಾಯಿತು. ನಾನು ತಂದಿದ್ದ ಬದನೆ, ಕೊಬ್ಬರಿ ಖರ್ಚಾಯಿತು. ನಮ್ಮ ಹೋರಾಟದ ಮೊದಲ ಪ್ರಯತ್ನಕ್ಕೆ ಗೆಲುವು ಸಿಕ್ಕಿದೆ' ಎಂದು ತಿಪಟೂರಿನ ರೈತ ಜಯಚಂದ್ರ ಶರ್ಮಾ ಅಭಿಪ್ರಾಯ ಹಂಚಿಕೊಂಡರು.

ರೈತರಿಂದ ಪಪ್ಪಾಯ ಖರೀದಿಸಿದ ಗ್ರಾಹಕರು –ಪ್ರಜಾವಾಣಿ ಚಿತ್ರ

> ರೈತರು ತಮ್ಮ ಉತ್ಪನ್ನಗಳನ್ನು ನೇರವಾಗಿ ಗ್ರಾಹಕರಿಗೆ ಮಾರಾಟ ಮಾಡುವಂತಹ ಇಂಥ 'ರೈತ ಸಂತೆ'ಯನ್ನು ಸರ್ಕಾರಗಳು ಎಲ್ಲೆಡೆ ಆಯೋಜಿಸಲಿ
> **ಗಾಯತ್ರಿ, ಸವಿತಾ, ಅರ್ಪಿತಾ.ಎ.ಎಂ** ಗ್ರಾಹಕರು

'ರೈತ ಸಂತೆ'ಗೆ ಬೇಡಿಕೆ

'ಆರ್‌ಆರ್ ನಗರದ ರೈತ ಸಂತೆ ರೀತಿ, ನಮ್ಮ ಅಪಾರ್ಟ್‌ಮೆಂಟ್‌ನಲ್ಲೂ ರೈತ ಸಂತೆ ಮಾಡಿ, ನಾವು ಬೇಕಾದ ವ್ಯವಸ್ಥೆ ಮಾಡುತ್ತೇವೆ' ಎಂದು ಸಂತೆಗೆ ಬಂದ ಕೆಲವು ಗ್ರಾಹಕರು ಆಯೋಜಕರನ್ನು ಕೇಳಿ, ತಮ್ಮ ಸಂಪರ್ಕ ಸಂಖ್ಯೆ ಕೊಟ್ಟು ಹೋಗಿದ್ದಾರೆ. ಆ ಮಟ್ಟಿಗೆ 'ನೇರ ಮಾರಾಟದ ಮೂಲಕ ರೈತರ ಹೋರಾಟ'ಕ್ಕೆ ಯಶಸ್ಸು ಸಿಕ್ಕಿದೆ' ಎಂದು ರೈತರು ಹೇಳಿದರು.

AMRITA
VISHWA VIDYAPEETHAM
DEEMED TO BE UNIVERSITY UNDER SECTION 3 OF UGC ACT, 1956

Come. Become.

WE MAKE YOU BE WHO YOU WANT TO BE

2025 APPLICATIONS OPEN FOR B.TECH., M.TECH. & MBA

B.TECH. PROGRAMS

APPLY WITH SCORES FROM

AEEE Amrita Entrance Examination - Engineering

Slot booking for AEEE phase 2 starts on April 23rd

JEE MAINS 2025

Upto 75% fee waiver* for toppers in AEEE & JEE Mains

92% Placements in 2024

₹56.95 Lakh P.A. Highest CTC

amrita.edu/btech
aeee@amrita.edu
080691 50838

Last Date for Applying for AEEE 1st May 2025

AEEE Exam Dates 7th May to 11th May

APPLY NOW

M.TECH. PROGRAMS

Eligibility*

- Apply with your UG Scores
- Direct admission for GATE-qualifiers

- Study in a Research Intensive University
- Choose from 30+ Specializations
- Work on Funded Research Projects*
- Dual-degree & 180+ Intl. Collaborations
- Avail Stipend & Internship*
- Programs for Working Professionals

SPECIALIZATION DOMAINS

I AEROSPACE I ARTIFICIAL INTELLIGENCE
I CHEMICAL I CIVIL I COMPUTER SCIENCE
I CYBER SECURITY I ELECTRICAL & ELECTRONICS
I ELECTRONICS & COMMUNICATION I MECHANICAL
I NANOSCIENCE & MOLECULAR MEDICINE

APPLY NOW

DOWNLOAD HAND BOOK

amrita.edu/mtech I 0476-2805555
mtechadmissions@amrita.edu

*T & C apply

MBA PROGRAMS

Upto 100% Scholarship* for ACAT Rank Holders

93.62% Placement in 2024

₹21.90 L.P.A. Highest CTC

Apply with

ACAT | CAT | XAT | MAT
CMAT | GMAT | GRE

Last Date for Applying 30th April 2025

APPLY NOW

amrita.edu/mba 044 481 33344

AMARAVATI I AMRITAPURI I BENGALURU I CHENNAI I COIMBATORE I FARIDABAD I KOCHI I MYSURU

nirf GOVT. OF INDIA | 7TH RANKED UNIVERSITY IN INDIA 2024 | NAAC A++ ACCREDITED | CATEGORY 1 GRADED AUTONOMY UGC, GOVT. OF INDIA | No.1 IN INDIA THE IMPACT RANKINGS 2024 | NBA NATIONAL BOARD of ACCREDITATION | AACSB ACCREDITED ASB COIMBATORE CAMPUS | University at Buffalo MBA-MS Dual Degree An ASB Bengaluru collaboration



ಮಾಣೆಕ್ ಶಾ ಮೈದಾನ ಗ್ಯಾಲರಿಗೆ ಹೊಸತನ

• ಬಾಲಕೃಷ್ಣ ಪಿ.ಎಚ್.

35 ವರ್ಷ
ನವೀಕರಣಗೊಳ್ಳದೇ ಆಗಿರುವ ಸಮಯ

₹75 ಲಕ್ಷ
ನವೀಕರಣಕ್ಕೆ ನಿಗದಿಪಡಿಸಲಾದ ಅನುದಾನ

ಮೇ **31**
ನವೀಕರಣ ಕಾಮಗಾರಿ ಪೂರ್ಣಗೊಳಿಸಬೇಕಾದ ದಿನಾಂಕ

ಮಾಣೆಕ್ ಶಾ ಮೈದಾನದಲ್ಲಿ ನವೀಕರಣಗೊಳ್ಳುತ್ತಿರುವ ಗ್ಯಾಲರಿ ಚಿತ್ರಗಳು: ರಂಜು ಪಿ

ಬೆಂಗಳೂರು: ನಗರದ ಪ್ರಮುಖ ಮೈದಾನ, ಸ್ವಾತಂತ್ರ್ಯೋತ್ಸವ ಮತ್ತು ಗಣರಾಜ್ಯೋತ್ಸವ ಸಮಯದಲ್ಲಿ ಆಕರ್ಷಣೆಯ ಕೇಂದ್ರವಾಗಿರುವ ಮಾಣೆಕ್ ಶಾ ಪರೇಡ್ ಮೈದಾನ ನವೀಕರಣಗೊಳ್ಳುತ್ತಿದೆ. ಮೈದಾನದ ಗ್ಯಾಲರಿ ಮೆಟ್ಟಿಲುಗಳು ಹೊಸರೂಪ ಪಡೆಯುತ್ತಿವೆ.

ಕೇಂದ್ರ ರಕ್ಷಣಾ ಇಲಾಖೆ ಅಡಿಯಲ್ಲಿರುವ ಈ ಮೈದಾನದಲ್ಲಿ ಮಿಲಿಟರಿಗೆ ಸಂಬಂಧಿಸಿದ ಕಾರ್ಯಕ್ರಮಗಳು ನಿಯಮಿತವಾಗಿ ನಡೆಯುತ್ತಿರುತ್ತವೆ. ಜನವರಿ 26ರಂದು ಗಣರಾಜ್ಯೋತ್ಸವ ಮತ್ತು ಆಗಸ್ಟ್ 15ರಂದು ಸ್ವಾತಂತ್ರ್ಯೋತ್ಸವವನ್ನು ರಾಜ್ಯ ಸರ್ಕಾರ ಇದೇ ಮೈದಾನದಲ್ಲಿ ಆಚರಿಸುತ್ತಾ ಬಂದಿದೆ.

ಈ ಎರಡೂ ರಾಷ್ಟ್ರೀಯ ಹಬ್ಬಗಳಲ್ಲಿ ರಾಜ್ಯಪಾಲರು, ಮುಖ್ಯಮಂತ್ರಿ, ಜನಪ್ರತಿನಿಧಿಗಳು, ಪ್ರಮುಖ ಅಧಿಕಾರಿಗಳು, ಗಣ್ಯರು, ಆಹ್ವಾನಿತರು, ವಿದ್ಯಾರ್ಥಿಗಳು ಪಾಲ್ಗೊಳ್ಳುತ್ತಾರೆ. ಅವರು ಆಸೀನರಾಗಲು ಗ್ಯಾಲರಿಯನ್ನು ನಿರ್ಮಿಸಲಾಗಿದ್ದು, 35 ವರ್ಷಗಳಿಂದ ಗ್ಯಾಲರಿ ನವೀಕರಣಗೊಂಡಿರಲಿಲ್ಲ. ನಿರಂತರ ಮಳೆ, ಗಾಳಿ, ಬಿಸಿಲು ಎದುರಿಸಿ ದುರ್ಬಲವಾಗಿತ್ತು. ಸಿಮೆಂಟ್ ಎದ್ದುಹೋಗಿ ಕಬ್ಬಿಣ ಕಾಣುತ್ತಿತ್ತು.

ಮೈದಾನ ಮಿಲಿಟರಿ ಅಡಿಯಲ್ಲಿದ್ದರೂ ರಾಷ್ಟ್ರೀಯ ಹಬ್ಬಗಳನ್ನು ಇಲ್ಲೇ ಆಚರಿಸುತ್ತಿರುವುದರಿಂದ ಗ್ಯಾಲರಿಯ ಸಾಮರ್ಥ್ಯವನ್ನು ಲೋಕೋಪಯೋಗಿ ಇಲಾಖೆ (ಪಿಡಬ್ಲ್ಯುಡಿ) ಪರೀಕ್ಷಿಸಬೇಕಿತ್ತು. ವರ್ಷದಿಂದ ವರ್ಷಕ್ಕೆ ದುರ್ಬಲಗೊಳ್ಳುತ್ತಿರುವುದನ್ನು ಕಂಡು ನವೀಕರಿಸಲು ಪಿಡಬ್ಲ್ಯುಡಿ ಮುಂದಾಗಿತ್ತು.

'ಸರ್ಕಾರದ ಅನುಮತಿ ಪಡೆದ ಬಳಿಕ ₹ 75 ಲಕ್ಷ ವೆಚ್ಚದಲ್ಲಿ ನವೀಕರಿಸಲು ಯೋಜನೆ ರೂಪಿಸಲಾಗಿತ್ತು. ಫೆಬ್ರುವರಿಯಲ್ಲಿ ಕಾಮಗಾರಿ ನಡೆಸಲು ಆದೇಶವನ್ನೂ ಪಡೆಯಲಾಗಿತ್ತು. ನವೀಕರಣಕ್ಕೆ ರಕ್ಷಣಾ ಇಲಾಖೆಯಿಂದ ಮಾರ್ಚ್ 1ಕ್ಕೆ ಒಪ್ಪಿಗೆ ಸಿಕ್ಕಿದೆ' ಎಂದು ಲೋಕೋಪಯೋಗಿ ಇಲಾಖೆಯ ಕಿರಿಯ ಎಂಜಿನಿಯರ್ ವಿನೋದ್ ಕುಮಾರ್ 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

'ಕಾರ್ಯಪಾಲಕ ಎಂಜಿನಿಯರ್ ಪ್ರಕಾಶ್ ಮತ್ತು ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಶಂಭು ಕುಮಾರ್ ಅವರ ಮಾರ್ಗದರ್ಶದಲ್ಲಿ ನವೀಕರಣ ಕಾಮಗಾರಿ ಆರಂಭವಾಗಿದೆ. ಹಿಂದಿನ ಗ್ಯಾಲರಿಯನ್ನು ತೆರವುಗೊಳಿಸಲಾಗಿದೆ. ಮೊದಲ ಹಂತದಲ್ಲಿ ಕಲ್ಲು ಹಾಸಿ ಕಬ್ಬಿಣ ಅಳವಡಿಸುವ ಕಾಮಗಾರಿ ನಡೆಯುತ್ತಿದೆ' ಎಂದು ಅವರು ವಿವರಿಸಿದರು.

ಮೂಲಸೌಕರ್ಯ ಅಭಿವೃದ್ಧಿ: ಮೈದಾನದ ಇನ್ನೊಂದು ಭಾಗದಲ್ಲಿ ಇರುವ ಸಾರ್ವಜನಿಕ ಶೌಚಾಲಯದ ಪುನರ್‌ನಿರ್ಮಾಣ ಕೂಡ ನಡೆಯುತ್ತಿದೆ. ಎಲ್ಲ ಕಾಮಗಾರಿಗಳನ್ನು ಪೂರ್ಣಗೊಳಿಸಲು 90 ದಿನಗಳನ್ನು ನಿಗದಿಪಡಿಸಲಾಗಿದೆ. ಈ ವರ್ಷದ ಸ್ವಾತಂತ್ರ್ಯೋತ್ಸವ ಆಚರಣೆಗಿಂತ ಎರಡು ತಿಂಗಳು ಮೊದಲು ಕಾಮಗಾರಿ ಪೂರ್ಣಗೊಳಿಸುವ ಗುರಿಯನ್ನು ಲೋಕೋಪಯೋಗಿ ಇಲಾಖೆ ಇಟ್ಟುಕೊಂಡಿದೆ.

ಮಾಣೆಕ್ ಶಾ ಗೌರವಾರ್ಥ ಹೆಸರು

ಬ್ರಿಟಿಷರ ಕಾಲದಲ್ಲಿ ಕಬ್ಬನ್ ಪಾರ್ಕ್ ವಿಸ್ತರಿತ ಪ್ರದೇಶವಾದ ಇಲ್ಲಿ ಮೈದಾನ ರಚನೆಯಾಗಿತ್ತು. 'ಕ್ರೀಡಾ ಮೈದಾನ' ಎಂದು ಆಗ ಕರೆಯಲಾಗುತ್ತಿತ್ತು. ಬಳಿಕ 'ಗ್ಯಾರಿಸನ್ ಪರೇಡ್ ಮೈದಾನ' ಎಂದು ಬ್ರಿಟಿಷರು ಹೆಸರು ಇಟ್ಟಿದ್ದರು. ರಾಷ್ಟ್ರೀಯ ಕಾರ್ಯಕ್ರಮಗಳು ಮತ್ತು ಮೆರವಣಿಗೆಗಳನ್ನು ಇಲ್ಲೇ ನಡೆಸಲಾಗುತ್ತಿತ್ತು.

ನಗರ ಅಭಿವೃದ್ಧಿಯಾಗುತ್ತಾ ಹೋದಂತೆ ಈ ಮೈದಾನದ ವ್ಯಾಪ್ತಿಯು ಕುಗ್ಗುತ್ತಾ ಬಂದಿತ್ತು. ಆನಂತರ ಮೈದಾನಕ್ಕೆ ಆವರಣಗೋಡೆ ನಿರ್ಮಿಸಿ ಇನ್ನಷ್ಟು ಕಡಿಮೆಯಾಗುವುದನ್ನು ತಡೆಯಲಾಗಿತ್ತು.

ಸ್ವಾತಂತ್ರ್ಯ ಪೂರ್ವದಲ್ಲಿ ಸೈನ್ಯಕ್ಕೆ ಸೇರಿ ಎರಡನೇ ಮಹಾಯುದ್ಧದಲ್ಲಿ ಪಾಲ್ಗೊಂಡಿದ್ದ ಫೀಲ್ಡ್ ಮಾರ್ಷಲ್ ಸ್ಯಾಮ್ ಮಾಣೆಕ್ ಶಾ ಅವರು ಸ್ವಾತಂತ್ರ್ಯಾನಂತರ ನಾಲ್ಕು ಪ್ರಮುಖ ಯುದ್ಧಗಳಲ್ಲಿ ಭಾಗವಹಿಸಿದ್ದರು. 1971ರಲ್ಲಿ ಇಂದಿರಾಗಾಂಧಿ ಅವರು ಪ್ರಧಾನಿಯಾಗಿದ್ದ ಸಮಯದಲ್ಲಿ ಬಾಂಗ್ಲಾದೇಶದ ವಿಮೋಚನೆಗಾಗಿ ಪಾಕಿಸ್ತಾನದೊಂದಿಗೆ ನಡೆದ ಯುದ್ಧದ ನೇತೃತ್ವವನ್ನು ವಹಿಸಿದ್ದರು. ಈ ಮೈದಾನಕ್ಕೆ 'ಮಾಣೆಕ್ ಶಾ ಪರೇಡ್ ಮೈದಾನ' ಎಂದು ಹೆಸರಿಡುವ ಮೂಲಕ ಅವರಿಗೆ ಗೌರವ ಸಲ್ಲಿಸಲಾಗಿದೆ.

ಆನಂತರ ದ್ವಾರದ ಮಧ್ಯ ಭಾಗದಲ್ಲಿ ಫೀಲ್ಡ್ ಮಾರ್ಷಲ್ ಮಾಣೆಕ್ ಶಾ ಅವರ 7 ಅಡಿ ಎತ್ತರದ ಕಬ್ಬಿಣದ ಚೌಕಟ್ಟಿನ ಪ್ರತಿಮೆ ನಿರ್ಮಿಸಲಾಗಿದೆ.

ರಾಜ್ಯ ಸರ್ಕಾರ ಆಚರಿಸುವ ಎರಡು ಆಚರಣೆಗಳಲ್ಲದೇ ಭಾರತೀಯ ಸೇನೆ ಮತ್ತು ಮೈದಾನದ ಐತಿಹಾಸಿಕ ಸಂದರ್ಭದ ತಿಳಿವಳಿಕೆಯನ್ನು ಹೆಚ್ಚಿಸಲು ಮಿಲಿಟರಿ ಪ್ರದರ್ಶನಗಳು, ಶೈಕ್ಷಣಿಕ ಕಾರ್ಯಕ್ರಮಗಳು, ಪ್ರವಾಸಿ ಕಾರ್ಯಕ್ರಮ, ಸಂವಾದ–ಪ್ರದರ್ಶನಗಳನ್ನು ಇಲ್ಲಿ ನಡೆಸಲಾಗುತ್ತಿದೆ.

'ಅಂಬೇಡ್ಕರ್‌ಗೆ ಭಾರತ ರತ್ನ ನೀಡದ ಕಾಂಗ್ರೆಸ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಾತಂತ್ರ್ಯದ ನಂತರ 50–55 ವರ್ಷಗಳ ಕಾಲ ಸುದೀರ್ಘ ಆಡಳಿತ ಮಾಡಿದ ಕಾಂಗ್ರೆಸ್ ನೆಹರೂ–ಗಾಂಧಿ ಕುಟುಂಬದ ಮೂವರಿಗೆ 'ಭಾರತ ರತ್ನ' ನೀಡಿತು. ಆದರೆ, ಡಾ.ಬಿ.ಆರ್.ಅಂಬೇಡ್ಕರ್ ಅವರಿಗೆ ಭಾರತರತ್ನ ನೀಡಲಿಲ್ಲ. ಬಿಜೆಪಿ ಬೆಂಬಲಿತ ವಿ.ಪಿ.ಸಿಂಗ್ ಸರ್ಕಾರ ಅವರಿಗೆ ಭಾರತ ರತ್ನ ನೀಡಿತು ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ಪಕ್ಷದ ಕಚೇರಿಯಲ್ಲಿ ಸೋಮವಾರ ನಡೆದ ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, 'ಅಂಬೇಡ್ಕರ್ ಅವರು ಬದುಕಿದ್ದಾಗ ಕಾಂಗ್ರೆಸ್ಸಿಗರು ಗೌರವ ಕೊಡಲಿಲ್ಲ. ಈಗ ಜನ ತಿರಸ್ಕರಿಸಿದ ಕಾರಣ ಅವರಿಗೆ ಅಂಬೇಡ್ಕರ್ ಅವರ ನೆನಪು ಬಂದಿದೆ' ಎಂದರು.

ಅಂಬೇಡ್ಕರ್ ಅವರ ಕನಸು ನನಸು ಮಾಡುತ್ತಿರುವುದಾಗಿ ಮುಖ್ಯಮಂತ್ರಿಯವರು ಸಂದರ್ಶನವೊಂದರಲ್ಲಿ ಹೇಳಿದ್ದಾರೆ. ಹಲವು ದಶಕಗಳ ಕಾಲ ಆಡಳಿತ ನಡೆಸಿದ್ದ ಕಾಂಗ್ರೆಸ್‌ನವರಿಗೆ ಅವಧಿ ಸಾಕಾಗಲಿಲ್ಲವೇ ಎಂದು ಪ್ರಶ್ನಿಸಿದರು.

ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಮಾತನಾಡಿ, 'ಡಾ. ಅಂಬೇಡ್ಕರ್ ಅವರು ತನ್ನ ಜೀವಿತಾವಧಿಯಲ್ಲಿ ಇದ್ದುದಕ್ಕಿಂತ ಈಗ ಹೆಚ್ಚು ಪ್ರಸ್ತುತರಾಗಿದ್ದಾರೆ. ಕಾಂಗ್ರೆಸ್‌ನವರು ಹಲವು ಸತ್ಯಗಳನ್ನು ಬಚ್ಚಿಟ್ಟು, ಸಮಾಜವನ್ನು ಕತ್ತಲಿನಲ್ಲಿ ಇಟ್ಟಿದ್ದರು. ಕಾಂಗ್ರೆಸ್‌ನ ಕತ್ತಲ ಕೋಣೆಯ ಸತ್ಯಗಳ ಬಗ್ಗೆ ನನಗೂ ಅರಿವಿದೆ' ಎಂದರು.

ಕಾರ್ಯಕ್ರಮದಲ್ಲಿ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ, ವಿಧಾನ ಪರಿಷತ್ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್. ರವಿಕುಮಾರ್, ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಪ್ರೀತಂ ಗೌಡ ಇದ್ದರು.

ವಿವಿಧೆಡೆ ಸಂವಿಧಾನ ಶಿಲ್ಪಿಯ ಜನ್ಮದಿನದ ಸಂಭ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಾದ್ಯಂತ ಸೋಮವಾರ ಸಂವಿಧಾನಶಿಲ್ಪಿ ಬಾಬಾಸಾಹೇಬ್ ಡಾ.ಬಿ.ಆರ್. ಅಂಬೇಡ್ಕರ್ ಅವರ 134ನೇ ಜನ್ಮದಿನವನ್ನು ಸಂಭ್ರಮ ಸಡಗರದಿಂದ ಆಚರಿಸಲಾಯಿತು.

ಬೆಂಗಳೂರು ವಿ.ವಿ (ಜ್ಞಾನಭಾರತಿ): 'ಅವಮಾನ, ಜಾತಿ ತಾರತಮ್ಯ, ಮಾನಸಿಕವಾಗಿ ಕುಗ್ಗಿಸುವಂತಹ ಪರಿಸ್ಥಿತಿಗಳೇ ಬಾಬಾಸಾಹೇಬ್ ಅಂಬೇಡ್ಕರ್ ಅವರನ್ನು ಮಹಾಚೇತನವಾಗಿ ರೂಪಿಸಿತು' ಎಂದು ಲೇಖಕಿ ಬಿ.ಟಿ.ಲಲಿತಾನಾಯಕ್ ತಿಳಿಸಿದರು.

ಬೆಂಗಳೂರು ವಿಶ್ವವಿದ್ಯಾಲಯ ಜ್ಞಾನಭಾರತಿ ಆಡಳಿತ ಕಚೇರಿ ಮುಂಭಾಗದಲ್ಲಿ ಆಯೋಜಿಸಿದ್ದ ಡಾ.ಬಿ.ಆರ್.ಅಂಬೇಡ್ಕರ್‌ರವರ ಜನ್ಮದಿನಾಚರಣೆಯಲ್ಲಿ ಅವರು ಮಾತನಾಡಿದರು.

'ಸುತ್ತಲಿನ ಕಠಿಣ ಪರಿಸರವನ್ನೇ ಮೆಟ್ಟಿಲಾಗಿಸಿಕೊಂಡು ಅಂಬೇಡ್ಕರ್ ಜಗದಗಲ ಬೆಳೆದು ನಿಂತಿದ್ದಾರೆ. ಈ ಕಾರಣಕ್ಕೆ ಬಾಬಾಸಾಹೇಬರು ಅಸಂಖ್ಯಾತ ಜನರಿಗೆ ಸ್ಫೂರ್ತಿಯ ಧ್ಯೋತಕವಾಗಿದ್ದಾರೆ' ಎಂದು ತಿಳಿಸಿದರು. 'ಮಹಿಳಾ ಸಬಲೀಕರಣ, ಸ್ವಾತಂತ್ರ್ಯಕ್ಕಾಗಿ ಕಾನೂನು, ಸ್ತ್ರೀಯರಿಗೆ ಮತದಾನ, ಆಸ್ತಿಯ ಹಕ್ಕು, ಶಿಕ್ಷಣ, ಸಮಾನತೆ ಹಕ್ಕನ್ನು ಒದಗಿಸಿದರು' ಎಂದು ಶ್ಲಾಘಿಸಿದರು.

ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಜಯಕರ ಎಸ್.ಎಂ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿಶೇಷಾಧಿಕಾರಿ ಪ್ರೊ.ಜಿ.ಕೃಷ್ಣಮೂರ್ತಿ ಮತ್ತಿತರರು ಹಾಜರಿದ್ದರು.

ಬೆಂಗಳೂರು ನಗರ ವಿ.ವಿ: 'ಅಸ್ಪೃಶ್ಯತೆ ಹಾಗೂ ಲಿಂಗ ತಾರತಮ್ಯ ನಿವಾರಣೆಯ ಮೂಲಕ ಸರ್ವರಿಗೂ ಸಮಾನ ಘನತೆಯ ಬದುಕನ್ನು ಒದಗಿಸುವ ನಿಟ್ಟಿನಲ್ಲಿ ಸಂವಿಧಾನ ಶಿಲ್ಪಿ ಡಾ. ಬಿ.ಆರ್.ಅಂಬೇಡ್ಕರ್ ಅವರ ಕೊಡುಗೆ ಅವಿಸ್ಮರಣೀಯ' ಎಂದು ಪ್ರಗತಿಪರ ಚಿಂತಕ ಪ್ರೊ.ಬಿ.ಎಂ.ಪುಟ್ಟಯ್ಯ ತಿಳಿಸಿದರು.

ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲಿ (ಬಿಸಿಯು) ಆಯೋಜಿಸಿದ್ದ ಅಂಬೇಡ್ಕರ್ ಜನ್ಮ ದಿನಾಚರಣೆಯಲ್ಲಿ ಅವರು ಮಾತನಾಡಿದರು.

ಕುಲಸಚಿವರಾದ ಟಿ.ಜವರೇಗೌಡ, ಪ್ರಭಾರ ಕುಲಪತಿ ಪ್ರೊ.ಕೆ.ಆರ್. ಜಲಜಾ, ಬಿಸಿಯು ಸಿಂಡಿಕೇಟ್ ಸದಸ್ಯರಾದ ಎಚ್.ಕೃಷ್ಣರಾಮ, ಫ್ರಾನ್ಸಿಸ್ ಅಲ್ಮೆಂಡಾ, ಬಿ.ಆರ್. ಸುಪ್ರೀತ್, ಪ್ರೊ.ಪಿ.ಆರ್. ಚೇತನಾ ಉಪಸ್ಥಿತರಿದ್ದರು.

ಬೆಸ್ಕಾಂ ಕೇಂದ್ರ ಕಚೇರಿ: ಬೆಸ್ಕಾಂ ಕಚೇರಿಯಲ್ಲಿ ನಡೆದ ಬಾಬಾಸಾಹೇಬ್ ಅಂಬೇಡ್ಕರ್ ಅವರ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು. ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಶಿವಶಂಕರ್ ಕಾರ್ಯಕ್ರಮ ಉದ್ಘಾಟಿಸಿದರು. ಅಂಬೇಡ್ಕರ್ ಕುರಿತು ವಿಶೇಷ ಉಪನ್ಯಾಸ ನೀಡಿದ ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿ ಅಧ್ಯಕ್ಷ ಎ.ಆರ್. ಗೋವಿಂದಸ್ವಾಮಿ, 'ಬಾಬಾ ಸಾಹೇಬರ ಬಾಲ್ಯದ ನೋವೇ ಉತ್ತಮ ಸಂವಿಧಾನ ರಚನೆಗೆ ಆಕರವಾಯಿತು' ಎಂದರು.

ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿ ಅಂಬೇಡ್ಕರ್ ಜಯಂತಿ ಆಚರಿಸಲಾಯಿತು. ಕುಲಪತಿ ಎಂ.ಎಸ್. ಜಯಕರ್ ಮತ್ತಿತರರು ಪಾಲ್ಗೊಂಡಿದ್ದರು

ಬಿಬಿಎಂಪಿಯಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಜಯಂತಿಯನ್ನು ಆಚರಿಸಲಾಯಿತು. ಆಡಳಿತಗಾರ ಎಸ್.ಆರ್ ಉಮಾಶಂಕರ್, ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಬಿ.ಆರ್.ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಪುಷ್ಪನಮನ ಸಲ್ಲಿಸಿದರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

AUTOMOTIVE
Automobile Services
Automobile Contractors
FOR USED truck attachment contracts upto 36 months with Finance arrangement(Terms&Conditions apply)call PVinfra 9632656944 Bangalore

PERSONAL
Change of Name
CHANGE OF NAME
I, KAVITHA S.G. W/o. Late Manjunath M. R/a Pete Beedhi, Solur Grama, Solur Hobli, Magadi Taluk, Ramanagara District. Declare that my minor Daughter's Name recorded as CHETHANA M in her birth certificate and Aadhar Card, but in her school documents her name recorded as GAGANA M. further declared that both name refer to one and the same person, i.e. herself only. Henceforth, she will be known as CHETHANA. M only, for all her future purpose. Vide affidavit dated 5.7.2022 before Notary Rajaiah, Ramanagara Dist.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

CONNECT ಕ್ಲಾಸಿಫೈಡ್ಸ್

ನ್ಯಾಷನಲ್ ಸಿಲ್ಕ್ ಎಕ್ಸ್ ಪೋ
ನೈಸರ್ಗಿಕ ನಾರು ರೇಷ್ಮೆಯ ಪ್ರದರ್ಶನ ಮತ್ತು ಮಾರಾಟ
ಸಿಲ್ಕ್, ಕಾಟನ್ ಸೀರೆ | ಡಿಸೈನ್ & ಸಾಂಪ್ರದಾಯಿಕ ಉಡುಗೆ | ಕುರ್ತಿ | ಫ್ಯಾಬ್ರಿಕ್ | ಇನ್ನೂ ಹಲವು
ಕೊನೆಯ 2 ದಿನಗಳು Time: 11am to 9pm
ಹೊಸ ಹಾಗೂ ಇತ್ತೀಚಿನ ವೈವಿಧ್ಯಮಯ ವಿನ್ಯಾಸಗಳೊಂದಿಗೆ ಮದುವೆಯ ವಿಶೇಷ ಸಂಗ್ರಹ
ಭಾರತದಾದ್ಯಂತದ 150+ ಅಧಿಕೃತ ನೇಯ್ಗೆ ತಜ್ಞರಿಂದ ತಯಾರಿಸಿದ ಶುದ್ಧ ರೇಷ್ಮೆ ಮತ್ತು ಹತ್ತಿ ಸೀರೆಗಳು
ಬನಾರಸ್ ಸಿಲ್ಕ್, ಜಾಮದನಿ, ಲಕ್ನೋ ಚಿಕಾನ್, ಕಾಂಚಿಪುರಂ, ಬಿಹಾರ್ ಟಸ್ಸಾರ್ ಮತ್ತು ಮಟ್ಕಾ ಸಿಲ್ಕ್, ಛತ್ತೀಸ್‌ಗಢ್ ಕೋಸಾ ಸಿಲ್ಕ್, ಗುಜರಾತ್ ಪಟೋಲಾ ಮತ್ತು ಬಾಂಧಿನಿ, ಪಶ್ಚಿಮ ಬಂಗಾಳದ ಬಯಾಲು, ಬಲೂಚರಿ, ಢಕಾಯಿ ಜಾಮದನಿ, ಬಲುಚರಿ, ಕಾಂತಾ ಮತ್ತು ಹ್ಯಾಂಡ್ ಪ್ರಿಂಟೆಡ್ ಸಿಲ್ಕ್, ಧರ್ಮಾವರಂ, ಪೈಥಾನಿ, ಚಾಂದೇರಿ, ಎರಿ (ಅಹಿಂಸಾ) ಸೀರೆ, ಶಿಬೋರಿ & ಅಜ್ರಾಕ್ ಪ್ರಿಂಟ್, ಹ್ಯಾಂಡ್ ಕಲಂಕರಿ, ರಾಜಸ್ಥಾನಿ ಬಾಂಧಿನಿ, ಬ್ಲಾಕ್ ಪ್ರಿಂಟ್, ಡ್ರೆಸ್ ಮಟೇರಿಯಲ್ & ದೇಶಾದ್ಯಂತದ ಇನ್ನೂ ಅನೇಕ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ
ಸಿಂಧೂರ್ ಕನ್ವೆನ್ಷನ್ ಸೆಂಟರ್
15ನೇ ಕ್ರಾಸ್, ಸಾರಕ್ಕಿ 1ನೇ ಹಂತ, ಜೆ.ಪಿ.ನಗರ, ರಿಂಗ್ ರಸ್ತೆ, ಬೆಂಗಳೂರು
M: 9412258826 | ENTRY FREE | ALL UPI ONLINE / DEBIT & CREDIT CARDS ACCEPTED

DH DECCAN HERALD Classifieds More value, more impact
ಪ್ರಜಾವಾಣಿ
EDUCATION
Book your Educational Related Ads in DH All Karnataka + Prajavani Bengaluru City
www.dhclassifieds.com
BOOK NOW
*Conditions apply
For more details contact:
+91 9731810277 | +91 9845114560 | +91 9900428036

ಭರತನಾಟ್ಯ ರಂಗ ಪ್ರವೇಶ
ವಿದೂಷಿ ಶ್ರೀಮತಿ ನಿವೇದಿತಾ ಶರ್ಮ ನಾಡಿಗೆ ಅವರ ಶಿಷ್ಯೆ, ಮನೋಜ್ ಕುಮಾರ್ ಮತ್ತು ವಿ. ಧನು ರೇಣುಕ, ಜಂಟಿ ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ. ಅವರ ಪುತ್ರಿ
ಕುಮಾರಿ ಜಿ.ಎಮ್. ಧನ್ಯತ ರವರು
ದಿನಾಂಕ: 13.4.2025 ರಂದು ಭಾನುವಾರ ರವೀಂದ್ರ ಕಲಾಕ್ಷೇತ್ರ, ಬೆಂಗಳೂರು ಇಲ್ಲಿ ಭರತನಾಟ್ಯ ರಂಗಪ್ರವೇಶಿಸಿದರು.
ಸಂಪರ್ಕಿಸಿ: 9449805029

ಕುಮಾರಿ ಜಿ.ಎಮ್. ಧನ್ಯತ

ಹೈಕೋರ್ಟ್ ನ್ಯಾ. ಪ್ರದೀಪ್ ಸಿಂಗ್ ಕಳವಳ
'ಈಡೇರದ ಸಂವಿಧಾನದ ಆಶಯ'

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿ ನಗರ: 'ಪ್ರಪಂಚದಲ್ಲೇ ಅತ್ಯುತ್ತಮ ಸಂವಿಧಾನ ನಮ್ಮದಾಗಿದ್ದರೂ, ದೇಶದಲ್ಲಿ ಇನ್ನೂ ಅಸ್ಪೃಶ್ಯತೆಯಂತಹ ಪದ್ಧತಿಗಳು ಆಚರಣೆಯಲ್ಲಿ ಇರುವುದು ವಿಷಾದದ ಸಂಗತಿ' ಎಂದು ಹೈಕೋರ್ಟ್ ನ್ಯಾಯಮೂರ್ತಿ ಪ್ರದೀಪ್ ಸಿಂಗ್ ಯರೂರ್ ಕಳವಳ ವ್ಯಕ್ತಪಡಿಸಿದರು.

ಮಲ್ಲತ್ತಹಳ್ಳಿಯ ಅಂಬೇಡ್ಕರ್ ತಾಂತ್ರಿಕ ಮಹಾ ವಿದ್ಯಾಲಯ ಆವರಣದಲ್ಲಿ ಆಯೋಜಿಸಿದ್ದ ಡಾ.ಬಿ. ಆರ್.ಅಂಬೇಡ್ಕರ್ ಅವರ 134ನೇ ಜಯಂತ್ಯುತ್ಸವದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಸಮಾಜದಲ್ಲಿ ಬೇರೂರಿದ್ದ ಅಸ್ಪೃಶ್ಯತೆ, ಅಸಮಾನತೆ ವಿರುದ್ಧ ಸಿಡಿದೆದ್ದ ಅಂಬೇಡ್ಕರ್ ಅವರು ವಿವಿಧ ರಾಷ್ಟ್ರಗಳ ಸಂವಿಧಾನವನ್ನು ಅಧ್ಯಯನ ಮಾಡಿ, ನಮ್ಮ ದೇಶಕ್ಕೆ ಹೊಂದುವಂತಹ ಸಂವಿಧಾನವನ್ನು ರಚಿಸಿದರು. ಆ ಮೂಲಕ ಪ್ರತಿಯೊಂದು ಸಮುದಾಯಕ್ಕೂ ನ್ಯಾಯ ಒದಗಿಸಿದ್ದಾರೆ' ಎಂದರು.

'ಉತ್ತಮ ಸಮಾಜ ನಿರ್ಮಾಣಕ್ಕೆ ಡಾ.ಬಿ.ಆರ್ ಅಂಬೇಡ್ಕರ್ ಅವರ ವಿಚಾರಧಾರೆ, ತತ್ವ ಸಿದ್ಧಾಂತ ಇಂದಿಗೂ ಪ್ರಸ್ತುತವಾಗಿದೆ' ಎಂದರು.

ಪಾಂಚಜನ್ಯ ವಿದ್ಯಾಪೀಠ ವೆಲ್ಫೇರ್ (ಪಿವಿವಿ) ಟ್ರಸ್ಟ್ ಟ್ರಸ್ಟಿ ಎಸ್. ಶಿವಮಲ್ಲು ಮಾತನಾಡಿ, 'ಅಪಾರ ಜ್ಞಾನ, ಪಾಂಡಿತ್ಯವನ್ನು ಹೊಂದಿದ್ದ ಅಂಬೇಡ್ಕರ್ ಅವರಿಗೆ ಬದುಕಿದ್ದಾಗ ಸಿಗಬೇಕಾದ ಗೌರವ ಮನ್ನಣೆ ಸಿಗಲಿಲ್ಲ' ಎಂದು ವಿಷಾದಿಸಿದರು. 'ಅವರ ಅಗಲಿಕೆಯ ನಂತರವೂ ವಿಶ್ವದಾದ್ಯಂತ ಅವರ ಪ್ರತಿಮೆ ಅನಾವರಣ ಗೊಳಿಸಿ ಗೌರವಿಸುತ್ತಿರುವುದು, ಅವರ ಜ್ಞಾನಕ್ಕೆ ಸಂದ ಗೌರವವಾಗಿದೆ' ಎಂದರು.

ಅಂಬೇಡ್ಕರ್ ಜನ್ಮದಿನದ ಅಂಗವಾಗಿ 9ನೇ ವರ್ಷದ ರಾಷ್ಟ್ರೀಯ ತಾಂತ್ರಿಕ ವಸ್ತು ಪ್ರದರ್ಶನವನ್ನು ಆಯೋಜಿಸಲಾಗಿತ್ತು. ಪ್ರದರ್ಶನದಲ್ಲಿ ದೇಶದ ವಿವಿಧ ಭಾಗಗಳಿಂದ 70ಕ್ಕೂ ಹೆಚ್ಚು ಕಾಲೇಜುಗಳ ವಿದ್ಯಾರ್ಥಿಗಳು ವಸ್ತು ಪ್ರದರ್ಶನದಲ್ಲಿ ಪಾಲ್ಗೊಂಡಿದ್ದರು. ಉತ್ತಮ ಪ್ರದರ್ಶನ ತೋರಿದ 12 ಕಾಲೇಜು ತಂಡಗಳಿಗೆ ಬಹುಮಾನ ನೀಡಲಾಯಿತು.

ಕೇಕ್ ಕತ್ತರಿಸಿ ಜಯಂತಿ ಆಚರಣೆ

ಯಲಹಂಕ: ಪ್ರಜಾ ವಿಮೋಚನಾ ಚಳವಳಿ (ಸ್ವಾಭಿಮಾನ) ಮತ್ತು ಅಖಿಲ ಕರ್ನಾಟಕ ದಲಿತ ಅಭಿವೃದ್ಧಿಸಮಿತಿ ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ಯುವಕರ ಸಂಘದ ಕಾರ್ಯಕರ್ತರು, ಬ್ಯಾಟರಾಯನ ಪುರ ಕ್ಷೇತ್ರದ ಕಟ್ಟಿಗೇನಹಳ್ಳಿಯ ರೇವಾ ವೃತ್ತದಲ್ಲಿ ಭಾನುವಾರ ಮಧ್ಯರಾತ್ರಿ ಅಂಬೇಡ್ಕರ್‌ರವರ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಿದರು.

ಅಂಬೇಡ್ಕರ್ ದಂಪತಿಯ ಭಾವಚಿತ್ರಕ್ಕೆ ಹೂಮಾಲೆ ಹಾಕಿ ಪೂಜೆ ನೆರವೇರಿಸಿದ ಕಾರ್ಯಕರ್ತರು ಹಾಗೂ ಅಭಿಮಾನಿಗಳು, ಕೇಕ್ ಕತ್ತರಿಸಿ, ಪಟಾಕಿ ಸಿಡಿಸಿ, ಎಲ್ಲರಿಗೂ ಸಿಹಿಹಂಚುವ ಮೂಲಕ ಸಂಭ್ರಮಿಸಿದರು.

ಪ್ರಜಾವಿಮೋಚನಾ ಚಳವಳಿ ರಾಜ್ಯ ಘಟಕದ ಅಧ್ಯಕ್ಷ ಮುನಿ ಆಂಜಿನಪ್ಪ ಮಾತನಾಡಿದರು. ಅಖಿಲ ಕರ್ನಾಟಕ ದಲಿತ ಅಭಿವೃದ್ಧಿ ಸಮಿತಿಯ ರಾಜ್ಯಘಟಕದ ಅಧ್ಯಕ್ಷ ಪಿ.ಕೆ.ಸುಬ್ರಮಣಿ, ಯುವಘಟಕದ ರಾಜ್ಯಾಧ್ಯಕ್ಷ ಅಜಯ್.ಜಿ.ಮೌರ್ಯ, ಪ್ರಜಾವಿಮೋಚನಾ ಚಳವಳಿಯ ಮುಖಂಡರಾದ ಎಂ.ಅಭಿಲಾಷ್‌ಕುಮಾರ್, ಕಾಂತರಾಜು, ಸತೀಶ್ ಹೊಸಹಳ್ಳಿ, ಥಣಿಸಂದ್ರ ಸಿ.ಚಂದ್ರು, ಶಿವು ಶಿವಪುರ, ಲಘುಮಯ್ಯ, ಹನುಮೇಶ್ ಉಪಸ್ಥಿತರಿದ್ದರು.

ಅಂಬೇಡ್ಕರ್ ಜಯಂತಿ: ಭೀಮ ರತ್ನ ಪ್ರಶಸ್ತಿ ಪ್ರದಾನ

ರಕ್ತದಾನ, ಆಂಬುಲೆನ್ಸ್ ಕೊಡುಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಮತಾ ಸೈನಿಕ ದಳದ ವತಿಯಿಂದ ಅಂಬೇಡ್ಕರ್ ಜಯಂತಿ ಅಂಗವಾಗಿ ನಾಗಸೇನಾ ವಿದ್ಯಾಲಯದಿಂದ ವಿಧಾನಸೌಧದ ಅಂಬೇಡ್ಕರ್ ಪ್ರತಿಮೆವರೆಗೆ ಬಿಕ್ಕು ಸಂಘದವರು ಅಂಬೇಡ್ಕರ್ ಭಾವಚಿತ್ರದ ಮೆರವಣಿಗೆ ಮಾಡಿದರು.

ಸಮತಾ ಸೈನಿಕ ದಳದ ರಾಷ್ಟ್ರೀಯ ಅಧ್ಯಕ್ಷ ಎಂ.ವೆಂಕಟಸ್ವಾಮಿ ಹಾಗೂ ಕಾರ್ಯಕರ್ತರು ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು. ಬಳಿಕ ಸ್ವಾತಂತ್ರ್ಯ ಉದ್ಯಾನದಲ್ಲಿ ಸಮಾವೇಶ ನಡೆಯಿತು.

ಇದೇ ವೇಳೆ ವೆಂಕಟಸ್ವಾಮಿ ಅವರು ರಕ್ತ ಸಂಗ್ರಹಕ್ಕೆ ಅನುಕೂಲವಾಗಲೆಂದು ಯೂನಿವರ್ಸಲ್ ಬ್ಲಡ್ ಡೊನೇಷನ್ ಸೆಂಟರ್‌ಗೆ ಆಂಬುಲೆನ್ಸ್ ಅನ್ನು ಕೊಡುಗೆಯಾಗಿ ನೀಡಿದರು. ಮಂಜುನಾಥ ಸೇರಿ ಹದಿನೈದಕ್ಕೂ ಹೆಚ್ಚು ಕಾರ್ಯಕರ್ತರು ರಕ್ತದಾನ ಮಾಡಿದರು.

ನಗರದ ನೇತ್ರ ತಜ್ಞ ಎಚ್.ಆರ್.ಸುರೇಂದ್ರ ಪರವಾಗಿ ಅವರ ಪತ್ನಿ ಅನಸೂಯಾ ಅವರು 'ಭೀಮ ರತ್ನ' ಪ್ರಶಸ್ತಿ ಸ್ವೀಕರಿಸಿದರು. ₹25 ಸಾವಿರ ನಗದು, ಸ್ಮರಣಿಕೆ ನೀಡಲಾಯಿತು.

ಸಾಹಿತಿ ಬಿ.ಟಿ.ಲಲಿತಾ ನಾಯಕ್ ಮಾತನಾಡಿ, 'ಸಂವಿಧಾನ ಶಿಲ್ಪಿ ಅಂಬೇಡ್ಕರ್‌ಗಿಂತ ವಿಶ್ವಗುರು ಮತ್ತೊಬ್ಬರಿಲ್ಲ. ಬುದ್ಧನ ನಂತರ ಅವರ ಸಂದೇಶವನ್ನು ಜಗತ್ತಿಗೆ ಸಾರುತ್ತಿರುವ ಮಹಾನ್ ವ್ಯಕ್ತಿ. ವರ್ಷಪೂರ್ತಿ ಅಂಬೇಡ್ಕರ್ ಅವರನ್ನು ಸ್ಮರಿಸಿಕೊಳ್ಳುವ ಮೂಲಕ ಗೌರವ ಸಲ್ಲಿಸುವಂತಾಗಬೇಕು ಎಂದು ತಿಳಿಸಿದರು.

ಎಂ.ವೆಂಕಟಸ್ವಾಮಿ ಮಾತನಾಡಿ, '25 ವಿಧಾನಸಭಾ ಕ್ಷೇತ್ರಗಳಲ್ಲಿ ಸಮತಾ ಸೈನಿಕ ದಳದ ಶತಮಾನೋತ್ಸವ ಮತ್ತು ಅಂಬೇಡ್ಕರ್ ಅವರ 134ನೇ ಜಯಂತಿಯನ್ನು ಒಟ್ಟಿಗೆ ತಿಂಗಳ ಪೂರ್ತಿ ವಿವಿಧ ಕಾರ್ಯಕ್ರಮಗಳೊಂದಿಗೆ ನಡೆಸಲಾಗುವುದು. ವಿದೇಶಿ ಮಾಧ್ಯಮಗಳು ಅಂಬೇಡ್ಕರ್ ಅವರನ್ನು ಮಹಾನಾಯಕ ಎಂದು ಬಣ್ಣಿಸಿದರು. ಅವರ ಸಂದೇಶಗಳು ಈಗಲೂ ಪ್ರಸ್ತುತ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ರೈತಸಂಘದ ಬಾಬು, ಸಮತಾ ಸೈನಿಕ ದಳದ ನಾಗರತ್ನ, ಮಂಜುಳಾ, ಪ್ರಶಾಂತ್, ಆಂಧ್ರಪ್ರದೇಶದ ಫಣೇಂದ್ರ, ಬೌದ್ಧ ಗುರು ಬೆಂತಮ್ಮ ಪಾಲ್ಗೊಂಡಿದ್ದರು.

ನೇತ್ರ ತಜ್ಞ ಎಚ್.ಆರ್.ಸುರೇಂದ್ರ ಪರವಾಗಿ ಅವರ ಪತ್ನಿ ಅನುಸೂಯಾ 'ಭೀಮ ರತ್ನ' ಪ್ರಶಸ್ತಿ ಸ್ವೀಕರಿಸಿದರು. ಮಹಿಳಾ ಘಟಕದ ರಾಜ್ಯ ಪ್ರಧಾನ ಕಾರ್ಯದರ್ಶಿ ನಾಗರತ್ನ, ರಾಷ್ಟ್ರೀಯ ಅಧ್ಯಕ್ಷ ಎಂ.ವೆಂಕಟಸ್ವಾಮಿ, ಬಾಬು ಉಪಸ್ಥಿತರಿದ್ದರು

ಯುವತಿಗೆ ಲೈಂಗಿಕ ದೌರ್ಜನ್ಯ: ಆರು ದಿನ ಪೊಲೀಸ್ ಕಸ್ಟಡಿಗೆ ಆರೋಪಿ

ನಾಪತ್ತೆಗೆ ಪ್ರೇಯಸಿ ನೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುದ್ದಗುಂಟೆಪಾಳ್ಯದ ಭಾರತಿ ಲೇಔಟ್‌ನ ಒಂದನೇ ಕ್ರಾಸ್‌ನ ಅಡ್ಡರಸ್ತೆಯಲ್ಲಿ ನಡೆದು ಹೋಗುತ್ತಿದ್ದ ಯುವತಿಗೆ ಲೈಂಗಿಕ ಕಿರುಕುಳ ನೀಡಿ ಪರಾರಿ ಆಗಿದ್ದ ಆರೋಪಿ, ತಿಲಕ್ ನಗರದ ನಿವಾಸಿ ಸಂತೋಷ್ ಡೇನಿಯಲ್(26) ಎಂಬಾತನನ್ನು ಆರು ದಿನ ಕಸ್ಟಡಿಗೆ ಪಡೆದುಕೊಂಡಿರುವ ಪೊಲೀಸರು, ವಿಚಾರಣೆ ತೀವ್ರಗೊಳಿಸಿದ್ದಾರೆ.

ಸಂತೋಷ್ ಡೇನಿಯಲ್

ಕೇರಳದಲ್ಲಿ ಇರುವ ಸ್ನೇಹಿತನ ಮನೆಯಲ್ಲಿ ಬಚ್ಚಿಟ್ಟುಕೊಂಡಿದ್ದ ಸಂತೋಷ್‌ನನ್ನು ಬಂಧಿಸಿ, ಸೋಮವಾರ ಮುಂಜಾನೆ ನಗರಕ್ಕೆ ಕರೆತಂದು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದರು. ನಂತರ, ಕೋರಮಂಗಲದ ನ್ಯಾಯಾಧೀಶರ ಮನೆಗೆ ಆರೋಪಿಯನ್ನು ಹಾಜರುಪಡಿಸಿದರು. ಘಟನೆ ಕುರಿತು ಆರೋಪಿಯಿಂದ ಹೆಚ್ಚಿನ ಮಾಹಿತಿ ಕಲೆಹಾಕಬೇಕಿದ್ದು, ವಿಚಾರಣೆಗಾಗಿ ತಮ್ಮ ಕಸ್ಟಡಿಗೆ ನೀಡಬೇಕು ಎಂದು ಪೊಲೀಸರು ಕೋರಿದರು. ಆರೋಪಿಯನ್ನು ಪೊಲೀಸ್ ಕಸ್ಟಡಿಗೆ ನೀಡಿ ನ್ಯಾಯಾಧೀಶರು ಆದೇಶಿಸಿದರು.

> **ಆರೋಪಿಯ ಪತ್ತೆಗಾಗಿ ಕೆಲ ಪ್ರದೇಶದ ಸಿ.ಸಿ.ಟಿ.ವಿ ಕ್ಯಾಮೆರಾಗಳಲ್ಲಿ ಸೆರೆಯಾಗಿದ್ದ ದೃಶ್ಯಾವಳಿ ಪರಿಶೀಲಿಸಲಾಗಿತ್ತು**
> **ಸಾರಾ ಫಾತಿಮಾ**
> ಡಿಸಿಪಿ, ಆಗ್ನೇಯ ವಿಭಾಗ

ಆರೋಪಿ ಪತ್ತೆಯೇ ರೋಚಕ: 'ಏಪ್ರಿಲ್ 3ರಂದು ರಸ್ತೆಯಲ್ಲಿ ನಡೆದು ಹೋಗುತ್ತಿದ್ದ ಯುವತಿಯನ್ನು ಹಿಂಬಾಲಿಸಿ ಆಕೆಗೆ ಲೈಂಗಿಕ ಕಿರುಕುಳ ನೀಡಿ ಪರಾರಿ ಆಗಿದ್ದ. ಘಟನೆಯ ಮಾಹಿತಿ ಗೊತ್ತಾದ ಬಳಿಕ ಸುದ್ದಗುಂಟೆಪಾಳ್ಯ ಠಾಣೆಯ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಆರೋಪಿಗಾಗಿ ಹುಡುಕಾಟ ನಡೆಸಿದ್ದರು. ಕೃತ್ಯ ನಡೆದು ಎರಡು ದಿನ ಕಳೆದರೂ ಆರೋಪಿಯ ಸುಳಿವು ದೊರೆಯದ ಕಾರಣ ಆಗ್ನೇಯ ವಿಭಾಗದ ಪೊಲೀಸರ ನೇತೃತ್ವದಲ್ಲಿ ನಾಲ್ಕು ತಂಡಗಳನ್ನು ರಚಿಸಲಾಗಿತ್ತು. ತನಿಖಾ ತಂಡಗಳು, ಸಂಚಾರ ವಿಭಾಗದ ಪೊಲೀಸರ ನೆರವು ಪಡೆದುಕೊಂಡಾಗ ಆರೋಪಿ ಬಳಸುತ್ತಿದ್ದ ಬೈಕ್ ನಂಬರ್ ಕೆಎ 05 ಕೆಕ್ಯೂ 1251 ಎಂದು ಗೊತ್ತಾಗಿತ್ತು. ಆ ನಂಬರ್ ಆಧರಿಸಿ, ಆರೋಪಿಯ ಮನೆ ವಿಳಾಸವನ್ನು ಪತ್ತೆ ಹಚ್ಚಲಾಯಿತು' ಎಂದು ಮೂಲಗಳು ತಿಳಿಸಿವೆ.

'ಮದ್ಯದ ಅಮಲಿನಲ್ಲಿ ಕೃತ್ಯ'

'ಅಂದು ರಾತ್ರಿ (ಏಪ್ರಿಲ್ 3ರಂದು) ವಿಪರೀತ ಮದ್ಯ ಸೇವಿಸಿದ್ದೆ. ಮದ್ಯದ ಅಮಲಿನಲ್ಲಿ ಕೃತ್ಯ ಎಸಗಿದ್ದೇನೆ ಎಂದು ಆರೋಪಿ ತಪ್ಪೊಪ್ಪಿಕೊಂಡಿದ್ದಾನೆ. ಆರೋಪಿಯನ್ನು ಕೃತ್ಯ ನಡೆದ ಸ್ಥಳಕ್ಕೆ ಕರೆದೊಯ್ದು ಸ್ಥಳ ಮಹಜರು ನಡೆಸಲಾಗುವುದು. ಆರೋಪಿ ತಪ್ಪಿಸಿಕೊಳ್ಳಲು ನೆರವು ನೀಡಿದ್ದ ಪ್ರೇಯಸಿಗೂ ನೋಟಿಸ್ ನೀಡಿ ವಿಚಾರಣೆಗೆ ಕರೆಸಲಾಗುವುದು' ಎಂದು ಮೂಲಗಳು ತಿಳಿಸಿವೆ.

ಅಧಿಕಾರಿಗಳ ಜತೆಗೆ ಚರ್ಚೆ

ಹೊರ ರಾಜ್ಯದಿಂದ ನಗರಕ್ಕೆ ಬಂದವರಿಂದಲೇ ಹೆಚ್ಚು ಅಪರಾಧ ಪ್ರಕರಣಗಳು ವರದಿ ಆಗುತ್ತಿವೆ. ಹಲವೆಡೆ ಕಟ್ಟಡ ನಿರ್ಮಾಣ ಕಾರ್ಮಿಕರಿಂದ ಅಪರಾಧ ಕೃತ್ಯಗಳು ನಡೆದಿವೆ. ಶೀಘ್ರದಲ್ಲೇ ಕಾರ್ಮಿಕ ಇಲಾಖೆಯ ಅಧಿಕಾರಿಗಳ ಜತೆಗೆ ಸಭೆ ನಡೆಸಲಾಗುವುದು ಎಂದು ಗೃಹ ಸಚಿವ ಜಿ.ಪರಮೇಶ್ವರ ಅವರು ಹೇಳಿದರು.

ನಿರ್ಜನ ಪದೇಶದಲ್ಲಿ ಬೈಕ್ ನಿಲುಗಡೆ: 'ಕೃತ್ಯ ಎಸಗಿದ ಬಳಿಕ ಆರೋಪಿ ಎರಡು ದಿನ ನಗರದಲ್ಲೇ ಇದ್ದ. ಪೊಲೀಸರು ಹುಡುಕಾಟ ನಡೆಸುತ್ತಿರುವ ಮಾಹಿತಿ ತಿಳಿದು ಹೊಸೂರು ರಸ್ತೆಯ ನಿರ್ಜನ ಪ್ರದೇಶದಲ್ಲಿ ಬೈಕ್ ನಿಲುಗಡೆ ಮಾಡಿ ತಮಿಳುನಾಡಿಗೆ ಪರಾರಿ ಆಗಿದ್ದ. ಅಲ್ಲಿಗೂ ಪೊಲೀಸರು ಬಂದಿರುವ ಮಾಹಿತಿ ತಿಳಿದು, ಕೇರಳಕ್ಕೆ ತೆರಳಿ ತಲೆಮರೆಸಿಕೊಂಡಿದ್ದ' ಎಂದು ಪೊಲೀಸರು ಹೇಳಿದರು.

ಪ್ರೇಯಸಿ ನೆರವು: 'ಆರೋಪಿಯ ಸ್ವಂತ ಊರು ತಮಿಳುನಾಡು. ತಿಲಕ್‌ನಗರದಲ್ಲಿ ನೆಲಸಿದ್ದ. ಬ್ರೂಕ್‌ಫೀಲ್ಡ್‌ನ ಕಾರು ಶೋರೂಂನಲ್ಲಿ ಪರೀಕ್ಷಾ ಚಾಲಕನಾಗಿ ಕೆಲಸ ಮಾಡುತ್ತಿದ್ದ. ಬೇರೊಂದು ಸಂಸ್ಥೆಯಲ್ಲಿ ಭದ್ರತಾ ಸಿಬ್ಬಂದಿಯಾಗಿ ಕೆಲಸ ಮಾಡುತ್ತಿದ್ದ ಯುವತಿಯನ್ನು ಸಂತೋಷ್ ಪ್ರೀತಿಸುತ್ತಿದ್ದ. ಆರೋಪಿ ತಲೆ ಮರೆಸಿಕೊಳ್ಳಲು ಆಕೆ ನೆರವು ನೀಡಿದ್ದಳು ಎಂಬುದು ಗೊತ್ತಾಗಿದೆ. ಆರೋಪಿ ಜತೆಗೆ ಪ್ರೇಯಸಿಯೂ ಕೇರಳಕ್ಕೆ ತೆರಳಿದ್ದಳು' ಎಂದು ಮೂಲಗಳು ತಿಳಿಸಿವೆ.

'ಆರೋಪಿ ಮೊಬೈಲ್ ಬಳಸುತ್ತಿರಲಿಲ್ಲ. ಕೇರಳದ ಕೋಯಿಕ್ಕೋಡ್‌ನ ಸ್ನೇಹಿತನ ಮನೆಯಲ್ಲಿ ಇರುವುದನ್ನು ಪತ್ತೆಮಾಡಿ ಅಲ್ಲಿ ವಶಕ್ಕೆ ಪಡೆದುಕೊಳ್ಳಲಾಯಿತು' ಎಂದು ಮೂಲಗಳು ತಿಳಿಸಿವೆ.

ಉದ್ಯಮಿಯಿಂದ ದೂರು: ವಿಧಾನಸೌಧ ಠಾಣೆಯಲ್ಲಿ ಪ್ರಕರಣ ದಾಖಲು

ಹೂಡಿಕೆ ಹೆಸರಲ್ಲಿ ₹4.50 ಲಕ್ಷ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೂಡಿಕೆ ಹೆಸರಿನಲ್ಲಿ ಉದ್ಯಮಿ ಹಾಗೂ ಅವರ ಸ್ನೇಹಿತನಿಗೆ ₹4.50 ಲಕ್ಷ ವಂಚನೆ ಮಾಡಲಾಗಿದ್ದು, ಈ ಸಂಬಂಧ ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸುಲ್ತಾನ್ ನಿಯಾಜ್ ಹಾಗೂ ಅಜ್ಮಲ್ ಅಲಿಯಾಸ್ ಫೈಜಲ್ ವಿರುದ್ಧ ಉದ್ಯಮಿ ವಿ.ಮಂಜುನಾಥ್ ಎಂಬುವರು ನೀಡಿರುವ ದೂರು ಆಧರಿಸಿ, ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

'ಹದಿನೈದು ದಿನಗಳ ಹಿಂದೆ ಫೇಸ್‌ಬುಕ್‌ನಲ್ಲಿ ದುಬೈನ ಸುಲ್ತಾನ್ ನಿಯಾಜ್ ಎಂಬಾತ ದೂರುದಾರರಿಗೆ ಪರಿಚಯವಾಗಿದ್ದ. ನಂಬಿಕಸ್ಥನಂತೆ ಬಿಂಬಿಸಿಕೊಂಡು ಮಾತನಾಡುತ್ತಿದ್ದ. ನಿರಂತರ ಸಂಪರ್ಕದಲ್ಲಿದ್ದ. ಕ್ರಿಪ್ಟೊ(ಯುಎಸ್‌ಡಿಟಿ) ಕರೆನ್ಸಿಯಲ್ಲಿ ಹೂಡಿಕೆ ಮಾಡುವಂತೆ ದೂರುದಾರ ಹಾಗೂ ಅವರ ಸ್ನೇಹಿತನ ಮನವೊಲಿಸಿದ್ದ. ಆರೋಪಿಗಳ ಮಾತು ನಂಬಿದ್ದ ಇಬ್ಬರೂ ಹೂಡಿಕೆಗೆ ನಿರ್ಧಾರ ಮಾಡಿದ್ದರು' ಎಂದು ಮೂಲಗಳು ತಿಳಿಸಿವೆ.

'ಕೆಲವು ದಿನಗಳ ಬಳಿಕ ಹೂಡಿಕೆ ಮಾಡುವುದಾಗಿ ಸುಲ್ತಾನ್ ನಿಯಾಜ್‌ಗೆ ಇಬ್ಬರೂ ಮಾಹಿತಿ ನೀಡಿದ್ದರು. ಬೆಂಗಳೂರಿನಲ್ಲಿ ನೆಲಸಿರುವ ತನ್ನ ಸ್ನೇಹಿತ ಅಜ್ಮಲ್‌ಗೆ ಹಣ ನೀಡುವಂತೆ ಆತ ತಿಳಿಸಿದ್ದ. ದೂರುದಾರರು ತನ್ನ ಸ್ನೇಹಿತರಾದ ಸುನಿಲ್ ಹಾಗೂ ಸತೀಶ್ ಅವರ ಜತೆಗೆ ತೆರಳಿ ಕಾಫಿ ಡೇ ಮಳಿಗೆಯೊಂದರ ವಾಹನ ನಿಲುಗಡೆ ಪ್ರದೇಶದಲ್ಲಿ ₹4.50 ಲಕ್ಷ ನೀಡಿದ್ದರು' ಎಂದು ಪೊಲೀಸರು ಹೇಳಿದರು.

'ಕ್ರಿಪ್ಟೊ ಕರೆನ್ಸಿಯಲ್ಲಿ ಹೂಡಿಕೆ ಮಾಡಿದರೆ ಹೆಚ್ಚಿನ ಲಾಭ ಬರಲಿದೆ ಎಂಬ ಆಸೆಯಿಂದ ಮಂಜುನಾಥ್ ಅವರು ₹2.50 ಲಕ್ಷ ಹಾಗೂ ಸುನಿಲ್ ₹ 2 ಲಕ್ಷ ನೀಡಿದ್ದಾರೆ ಎಂಬುದು ಗೊತ್ತಾಗಿದೆ. ಆರೋಪಿಗಳಿಬ್ಬರು ಹಣ ಪಡೆದು ವಾಪಸ್ ನೀಡಿದೇ ಮೋಸ ಮಾಡಿದ್ದಾರೆ' ಎಂದು ಪೊಲೀಸರು ಹೇಳಿದರು.

ವಿದ್ಯುತ್ ಅವಘಡ: ಲಾರಿ ಚಾಲಕ ಸಾವು

ಕೆಂಗೇರಿ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಭಾನುವಾರ ರಾತ್ರಿ ಸಂಭವಿಸಿದ ವಿದ್ಯುತ್ ಅವಘಡದಲ್ಲಿ ಲಾರಿ ಚಾಲಕ ಚೋಟ್ಕಾ(45) ಅವರು ಮೃತಪಟ್ಟಿದ್ದಾರೆ. ಮೃತಪಟ್ಟ ಚಾಲಕ ಉತ್ತರ ಭಾರತದವರು ಎಂದು ಗೊತ್ತಾಗಿದೆ.

ಕೆಂಗೇರಿ ಉಪನಗರದ ಶಿರ್ಕೆ ವೃತ್ತದ ಬಳಿ ಅಪಾರ್ಟ್‌ಮೆಂಟ್ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ. ಲಾರಿಯಿಂದ ಜಲ್ಲಿಯನ್ನು ಅನ್‌ಲೋಡ್ ಮಾಡಲಾಗುತ್ತಿತ್ತು. ಚಾಲಕ ಲಾರಿಯನ್ನು ಹಿಂದಕ್ಕೆ ತೆಗೆದುಕೊಳ್ಳುವ ಸಂದರ್ಭದಲ್ಲಿ ವಿದ್ಯುತ್ ತಂತಿಗೆ ತಗುಲಿತ್ತು. ಆಗ ವಿದ್ಯುತ್ ಪ್ರವಹಿಸಿ ಸ್ಥಳದಲ್ಲೇ ಚಾಲಕ ಮೃತಪಟ್ಟಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಕೆಂಗೇರಿ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಾಫ್ಟ್‌ವೇರ್ ಎಂಜಿನಿಯರ್ ಸುಲಿಗೆ

ವಿಡಿಯೊ ಕರೆ ಸ್ವೀಕರಿಸಿದ್ದ ವ್ಯಕ್ತಿ: ವೈಟ್‌ಫೀಲ್ಡ್ ಸೈಬರ್ ಅಪರಾಧ ಠಾಣೆಗೆ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಡಿಯೊ ಕರೆ ಸ್ವೀಕರಿಸಿದ್ದ ಸಾಫ್ಟ್‌ವೇರ್ ಎಂಜಿನಿಯರ್ ಒಬ್ಬರು ₹6.69ಲಕ್ಷ ಕಳೆದುಕೊಂಡಿದ್ದಾರೆ. ವೈಟ್‌ಫೀಲ್ಡ್ ಸೈಬರ್ ಅಪರಾಧ ಠಾಣೆಗೆ ದೂರು ನೀಡಿದ್ದು, ಅದನ್ನು ಆಧರಿಸಿ ಐಶ್ವರ್ಯಾ ಎಂಬುವರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿರುವ ದೂರುದಾರರಿಗೆ ಮಾರ್ಚ್ 3ರಂದು ಫೇಸ್‌ಬುಕ್‌ನಲ್ಲಿ ಐಶ್ವರ್ಯಾ ಹೆಸರಿನಿಂದ ಬಂದ ಕೋರಿಕೆಯನ್ನು (ಫ್ರೆಂಡ್ ರಿಕ್ವೆಸ್ಟ್) ಸ್ವೀಕರಿಸಿದ್ದರು. ಇಬ್ಬರೂ ಫೇಸ್‌ಬುಕ್‌ನಲ್ಲಿ ಚರ್ಚಿಸುತ್ತಿದ್ದರು. ಕೆಲವು ದಿನಗಳ ನಂತರ ಯುವತಿ, ದೂರುದಾರರ ವಾಟ್ಸ್‌ಆ್ಯಪ್ ಸಂಖ್ಯೆಯನ್ನೂ ಪಡೆದುಕೊಂಡಿದ್ದರು ಎಂದು ಮೂಲಗಳು ತಿಳಿಸಿವೆ.

'ಏಪ್ರಿಲ್ 2ರಂದು ಸಾಫ್ಟ್‌ವೇರ್ ಎಂಜಿನಿಯರ್‌ಗೆ ವಾಟ್ಸ್‌ಆ್ಯಪ್‌ನಲ್ಲಿ ವಿಡಿಯೊ ಕರೆ ಮಾಡಿದ್ದ ಐಶ್ವರ್ಯಾ, ನಗ್ನವಾಗಿ ಕಾಣಿಸಿಕೊಂಡಿದ್ದಳು. ಅದನ್ನು ನೋಡಿದ ದೂರುದಾರರು ಕರೆ ಸ್ಥಗಿತಗೊಳಿಸಿದ್ದರು. ಅದಾದ ಕೆಲವೇ ಹೊತ್ತಿನಲ್ಲಿ ಫೋಟೊ ಹಾಗೂ ವಿಡಿಯೊವೊಂದನ್ನು ಯುವತಿ ಕಳುಹಿಸಿಕೊಟ್ಟಿದ್ದಳು' ಎಂದು ಸೈಬರ್ ಪೊಲೀಸರು ಹೇಳಿದರು.

'ಹಣ ನೀಡದಿದ್ದರೆ ಸಾಮಾಜಿಕ ಜಾಲತಾಣಗಳಲ್ಲಿ ಅಶ್ಲೀಲ ವಿಡಿಯೊ ಹಾಗೂ ಫೋಟೊ ಹಾಕುತ್ತೇನೆ. ನಿಮ್ಮ ಸ್ನೇಹಿತರಿಗೂ ಕಳುಹಿಸುತ್ತೇನೆ ಎಂಬುದಾಗಿ ಬೆದರಿಕೆ ಹಾಕಿ ಹಣಕ್ಕೆ ಬೇಡಿಕೆ ಇಟ್ಟಿದ್ದಳು. ಯುವತಿಯ ಮಾತಿನಿಂದ ಹೆದರಿದ್ದ ಎಂಜಿನಿಯರ್, ಆಕೆ ನೀಡಿದ್ದ ಎರಡು ಖಾತೆಗಳಿಗೆ ₹6.69 ಲಕ್ಷ ವರ್ಗಾಯಿಸಿದ್ದರು. ಇನ್ನೂ ಹೆಚ್ಚಿನ ಹಣ ನೀಡುವಂತೆ ಯುವತಿ ಬೇಡಿಕೆ ಇಟ್ಟಿದ್ದಳು' ಎಂದು ಪೊಲೀಸರು ತಿಳಿಸಿದರು.

'ದೂರುದಾರರ ಮುಖವನ್ನು ಮಾರ್ಫಿಂಗ್ ಮಾಡಿ ಬೆದರಿಕೆ ಹಾಕಿ ಹಣ ಸುಲಿಗೆ ಮಾಡಿರುವ ಸಾಧ್ಯತೆಯಿದೆ. ಪ್ರಕರಣದ ತನಿಖೆ ನಡೆಸಲಾಗುತ್ತಿದೆ. ಫೇಸ್‌ಬುಕ್ ಸೇರಿದಂತೆ ಇತರೆ ಸಾಮಾಜಿಕ ಮಾಧ್ಯಮಗಳಲ್ಲಿ ಅಪರಿಚಿತರ ಕೋರಿಕೆ ಸ್ವೀಕರಿಸಬಾರದು. ಜತೆಗೆ, ಮೊಬೈಲ್ ನಂಬರ್‌ಗಳನ್ನೂ ನೀಡಿ ವಿಡಿಯೊ ಕರೆಗಳಲ್ಲಿ ತೊಡಗಬಾರದು' ಎಂದು ಪೊಲೀಸರು ಮನವಿ ಮಾಡಿದ್ದಾರೆ.

ಟ್ಯಾಂಕರ್ ಪಲ್ಟಿ: ಚಾಲಕನಿಗೆ ಗಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಾಲಕನ ನಿಯಂತ್ರಣ ತಪ್ಪಿ ನೀರಿನ ಟ್ಯಾಂಕರ್ ರಸ್ತೆಯ ಮಧ್ಯದಲ್ಲಿ ಪಲ್ಟಿಯಾದ ಘಟನೆ ವೈಟ್‌ಫೀಲ್ಡ್ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ದೊಮ್ಮಸಂದ್ರದ ರಸ್ತೆಯಲ್ಲಿ ಸೋಮವಾರ ಮಧ್ಯಾಹ್ನ ನಡೆದಿದೆ.

ಘಟನೆಯಲ್ಲಿ ಮಾರತ್‌ಹಳ್ಳಿಯ ನಿವಾಸಿ ಮಲ್ಲಿನಾಥ್ ಗಾಯಗೊಂಡಿದ್ದಾರೆ. ಯಾದಗಿರಿಯ ಮಲ್ಲಿನಾಥ್ ಅವರು ಟ್ಯಾಂಕರ್ ಚಾಲಕರಾಗಿ ಕೆಲಸ ಮಾಡುತ್ತಿದ್ದರು.

ಟ್ಯಾಂಕರ್ ಪಲ್ಟಿಯಾದ ದೃಶ್ಯ

ದೊಮ್ಮಸಂದ್ರದಿಂದ ಗುಂಜೂರು ಕಡೆಗೆ ಬರುತ್ತಿದ್ದ ಟ್ಯಾಂಕರ್ ಚಾಲಕನ ನಿಯಂತ್ರಣ ತಪ್ಪಿ ಮೂರು ಪಲ್ಟಿ ಹೊಡೆದಿದೆ. ಈ ದೃಶ್ಯವು ಮುಂದೆ ಚಲಿಸುತ್ತಿದ್ದ ಕಾರೊಂದರ ಡ್ಯಾಶ್ ಬೋರ್ಡ್ ಕ್ಯಾಮೆರಾದಲ್ಲಿ ಸೆರೆಯಾಗಿದೆ.

ವಿದ್ಯಾರ್ಥಿನಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಬ್ಬಾಳ ಪೊಲೀಸ್ ಠಾಣಾ ವ್ಯಾಪ್ತಿಯ ಅಪಾರ್ಟ್‌ಮೆಂಟ್ ಮಹಡಿಯಿಂದ ಜಿಗಿದು ದಂತ ವೈದ್ಯಕೀಯ ಕಾಲೇಜಿನ ವಿದ್ಯಾರ್ಥಿನಿಯೊಬ್ಬರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಸೌಮ್ಯಾ

ಯಶವಂತಪುರದ ಕೆ.ಎಲ್.ಇ ದಂತ ವೈದ್ಯಕೀಯ ಕಾಲೇಜಿನ ವಿದ್ಯಾರ್ಥಿನಿ ಸೌಮ್ಯಾ (20) ಆತ್ಮಹತ್ಯೆ ಮಾಡಿಕೊಂಡವರು.

ಹೆಬ್ಬಾಳದ ಸುಮಂಗಲಿ ಸೇವಾಶ್ರಮದ ರಸ್ತೆಯ ವಿಕ್ಟರಿ ಹಾರ್ಮೊನಿ ಅಪಾರ್ಟ್‌ಮೆಂಟ್‌ನಲ್ಲಿ ಪೋಷಕರ ಜತೆಗೆ ವಿದ್ಯಾರ್ಥಿನಿ ವಾಸಿಸುತ್ತಿದ್ದರು. ನಾಲ್ಕನೇ ಮಹಡಿಯಿಂದ ಜಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅಸಹಜ ಸಾವು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ವೃದ್ಧ ದಂಪತಿ ಆತ್ಮಹತ್ಯೆ ಪ್ರಕರಣ: ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಖಾನಾಪುರ ತಾಲ್ಲೂಕಿನ ಬೀಡಿ ಗ್ರಾಮದಲ್ಲಿ ವೃದ್ಧ ದಂಪತಿಯನ್ನು 'ಡಿಜಿಟಲ್ ಅರೆಸ್ಟ್' ಮಾಡಿ, ಅವರ ಆತ್ಮಹತ್ಯೆಗೆ ಕಾರಣವಾದ ಪ್ರಮುಖ ಆರೋಪಿಯನ್ನು ಪೊಲೀಸರು ಸೋಮವಾರ ಬಂಧಿಸಿದ್ದಾರೆ.

ಗುಜರಾತ್‌ನ ಸೂರತ್ ನಿವಾಸಿ ಚಿರಾಗ್ ಜೀವರಾಜಬಾಯ್ ಲಕ್ಕಡ್ ಬಂಧಿತ. ಖಾನಾಪುರ ತಾಲ್ಲೂಕಿನ ನಂದಗಡ ಪೊಲೀಸ್ ಠಾಣೆಯಲ್ಲಿ ಆರೋಪಿ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಬೀಡಿ ಗ್ರಾಮದ ಡಿಯಾಗೋ ನಜರತ್ (83) ಮತ್ತು ಅವರ ಪತ್ನಿ ಪ್ಲೇವಿಯಾ (78) ಮಾರ್ಚ್ 27ರಂದು ಆತ್ಮಹತ್ಯೆ ಮಾಡಿಕೊಂಡಿದ್ದರು.

'ದೆಹಲಿಯಲ್ಲಿ ಉನ್ನತ ಹುದ್ದೆಯಲ್ಲಿ ಇರುವುದಾಗಿ ಹೇಳಿಕೊಂಡ ವ್ಯಕ್ತಿಯೊಬ್ಬರು ನಮಗೆ ಪದೇಪದೇ ಬೆದರಿಕೆ ಹಾಕಿದ್ದಾರೆ. ನನ್ನ ಸಿಮ್‌ಕಾರ್ಡ್ ದುರ್ಬಳಕೆ ಮಾಡಿಕೊಂಡಿದ್ದಾರೆ. ಅನಿಲ್ ಯಾದವ್ ಎಂಬ ವ್ಯಕ್ತಿ ಕರೆ ಮಾಡಿ, 'ನಿಮ್ಮ ನಂಬರಿನಿಂದ ನನಗೆ ಬೆತ್ತಲೆ ಚಿತ್ರಗಳು, ಅಶ್ಲೀಲ ಸಂದೇಶಗಳು ರವಾನೆಯಾಗಿವೆ. ಇದರ ಬಗ್ಗೆ ಸೈಬರ್ ಸೆಲ್‌ಗೆ ದೂರು ನೀಡಿದ್ದಾಗಿ ಎಂದು ಬೆದರಿಸುತ್ತಿದ್ದಾರೆ' ಎಂದು ಡಿಯಾಗೋ ಡೆತ್‌ನೋಟ್ ಬರೆದಿಟ್ಟಿದ್ದರು.

ಗೂಗಲ್ ಇಂಡಿಯಾ: ₹5 ಕೋಟಿ ದಂಡದ ಆದೇಶ ತಡೆ ತೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೇಂದ್ರದ ಪರವಾನಗಿ ಪಡೆಯದೆ ಗೂಗಲ್ ಐರ್ಲೆಂಡ್ ಮತ್ತು ಗೂಗಲ್ ಯುಎಸ್ ಜೊತೆಗೆ ಕೋಟ್ಯಂತರ ರೂಪಾಯಿಗಳ ವಹಿವಾಟು ನಡೆಸಲಾಗಿದೆ' ಎಂಬ ಆರೋಪಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಬೆಂಗಳೂರಿನ ಜಾರಿ ನಿರ್ದೇಶನಾಲಯ (ಇ.ಡಿ) ಗೂಗಲ್ ಇಂಡಿಯಾಗೆ ₹ 5.25 ಕೋಟಿ ದಂಡ ವಿಧಿಸಿತ್ತು. ಈ ಆದೇಶಕ್ಕೆ ದೆಹಲಿಯ ಮೇಲ್ಮನವಿ ಪ್ರಾಧಿಕಾರ ತಡೆ ನೀಡಿತ್ತು. ಈ ತಡೆ ಆದೇಶದ ತೀರ್ಪನ್ನು ಕರ್ನಾಟಕ ಹೈಕೋರ್ಟ್ ರದ್ದುಪಡಿಸಿದೆ.

'ಮೇಲ್ಮನವಿ ಪ್ರಾಧಿಕಾರದ ಆದೇಶ ರದ್ದುಪಡಿಸಬೇಕು' ಎಂದು ಕೋರಿ ಬೆಂಗಳೂರು ವಲಯದ ಇ.ಡಿ ಉಪ ನಿರ್ದೇಶಕರು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ವಿ.ಕಾಮೇಶ್ವರ್ ರಾವ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಗೂಗಲ್ ಇಂಡಿಯಾದ ಪ್ರತಿನಿಧಿಗಳು ದಂಡದ ಮೊತ್ತದಲ್ಲಿ ಶೇ 50ರಷ್ಟು ಮೊತ್ತಕ್ಕೆ ಮುಂದಿನ ಎರಡು ವಾರಗಳಲ್ಲಿ ಬ್ಯಾಂಕ್ ಗ್ಯಾರಂಟಿ ಒದಗಿಸಬೇಕು. ಈ ಗ್ಯಾರಂಟಿಯನ್ನು ಅರ್ಜಿ ಇತ್ಯರ್ಥವಾಗುವವರೆಗೂ ಉಳಿಸಿಕೊಳ್ಳಬೇಕು. ಅಂತೆಯೇ, ಗೂಗಲ್ ನೀಡುವ ಗ್ಯಾರಂಟಿ ಅರ್ಜಿ ಕುರಿತಂತೆ ಹೈಕೋರ್ಟ್ ಹೊರಡಿಸುವ ಅಂತಿಮ ಆದೇಶಕ್ಕೆ ಒಳಪಟ್ಟಿರುತ್ತದೆ' ಎಂದು ನ್ಯಾಯಪೀಠ ತಿಳಿಸಿದೆ.

'ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆ (ಫೆಮಾ) ನಿಯಮಗಳ ಪ್ರಕಾರ ಭಾರತದ ಕಂಪನಿಗಳು ವಿದೇಶಿ ಕಂಪನಿಗಳ ಜೊತೆ ಹಣದ ವ್ಯವಹಾರ ನಡೆಸುವ ಸಂದರ್ಭದಲ್ಲಿ ಆರ್‌ಬಿಐ ಅಥವಾ ಕೇಂದ್ರ ಸರ್ಕಾರದ ಅನುಮತಿ ಪಡೆಯುವುದು ಕಡ್ಡಾಯ. ಆದರೆ, ಗೂಗಲ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಕಂಪನಿಯು, ಆರ್‌ಬಿಐ ಮತ್ತು ಕೇಂದ್ರ ಸರ್ಕಾರದಿಂದ ಪರವಾನಗಿ ಪಡೆಯದೇ ತನ್ನ ಮಾತೃ ಸಂಸ್ಥೆಗಳಾದ ಗೂಗಲ್ ಐರ್ಲೆಂಡ್ ಮತ್ತು ಗೂಗಲ್ ಯುಎಸ್‌ಗಳ ಜಾಹೀರಾತುಗಳನ್ನು ಅಕ್ರಮವಾಗಿ ಪ್ರಕಟಿಸಿದೆ. ಹಾಗೂ ಸ್ವತ್ತುಗಳನ್ನು ಖರೀದಿಸಿದೆ. ಈ ಮೂಲಕ ₹ 365.59 ಕೋಟಿ ವ್ಯವಹಾರ ನಡೆಸಿದೆ' ಎಂದು ಆರೋಪಿಸಿ ಗೂಗಲ್ ಇಂಡಿಯಾ ಸಂಸ್ಥೆಗೆ ಬೆಂಗಳೂರು ವಲಯದ ಇ.ಡಿ ಉಪ ನಿರ್ದೇಶಕರು ₹5.25 ಕೋಟಿ ದಂಡ ವಿಧಿಸಿ ಆದೇಶಿಸಿದ್ದರು.

ನಗರದ ಮಹಾಲಕ್ಷ್ಮಿ ಬಡಾವಣೆಯ ಬಿಜಿಎಸ್ ಕ್ಯಾಂಪಸ್‌ನಲ್ಲಿ ನಿರ್ಮಿಸಿರುವ ದೇವಾಲಯದಲ್ಲಿ ಪ್ರತಿಷ್ಠಾಪನೆಗೊಳ್ಳಲಿರುವ ಅಭಯಾಂಜನೇಯಸ್ವಾಮಿ ವಿಗ್ರಹವನ್ನು ವಿಜಯನಗರದ ಆದಿಚುಂಚನಗಿರಿ ಶಾಖಾ ಮಠದಿಂದ ಸೋಮವಾರ ಮೆರವಣಿಗೆಯಲ್ಲಿ ತರಲಾಯಿತು. ಆದಿಚುಂಚನಗಿರಿ ಮಠದ ಪೀಠಾಧಿಪತಿ ನಿರ್ಮಲಾನಂದನಾಥ ಸ್ವಾಮೀಜಿ ಮೆರವಣಿಗೆಗೆ ಚಾಲನೆ ನೀಡಿದರು. ಶಾಸಕ ಕೆ. ಗೋಪಾಲಯ್ಯ, ಸಂಸದ ತೇಜಸ್ವಿ ಸೂರ್ಯ, ಕೇಂದ್ರ ಸಚಿವರಾದ ಶೋಭಾ ಕರಂದ್ಲಾಜೆ, ವಿಜಯನಗರ ಶಾಸಕ ಎಂ. ಕೃಷ್ಣಪ್ಪ ಉಪಸ್ಥಿತರಿದ್ದರು (ಎಡ ಚಿತ್ರ). ಹಲಸೂರಿನ ಸೋಮೇಶ್ವರ ದೇವಸ್ಥಾನದಲ್ಲಿ ವಸಂತೋತ್ಸವದ ಅಂಗವಾಗಿ ಶಿವ ಮತ್ತು ಪಾರ್ವತಿಯರ ವಿಗ್ರಹಗಳಿಗೆ ಅರ್ಚಕರು ಸೋಮವಾರ ಜಲಾಭಿಷೇಕ ಮಾಡಿದರು ಪ್ರಜಾವಾಣಿ ಚಿತ್ರಗಳು

ಸಂಸದರ ಟೀಕೆ ಬಳಿಕ ಎಚ್ಚೆತ್ತುಕೊಂಡ ಬಿಎಂಆರ್‌ಸಿಎಲ್

10 ನಿಮಿಷಕ್ಕೊಂದು ಮೆಟ್ರೊ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಜಾದಿನ ಎಂದು ಪರಿಗಣಿಸಿ ಸೋಮವಾರ ಬೆಳಿಗ್ಗೆ ದಟ್ಟಣೆ ಅವಧಿಯಲ್ಲಿ 10 ನಿಮಿಷಕ್ಕೊಂದು ರೈಲು ಓಡಿಸಿದ್ದರಿಂದ ಮೆಜೆಸ್ಟಿಕ್ ಮೆಟ್ರೊ ನಿಲ್ದಾಣದಲ್ಲಿ ಭಾರಿ ಜನಸಂದಣಿ ಉಂಟಾಯಿತು. ಅದರ ವಿಡಿಯೊವನ್ನು 'ಎಕ್ಸ್'ನಲ್ಲಿ ಹಂಚಿಕೊಂಡಿರುವ ಸಂಸದ ಪಿ.ಸಿ. ಮೋಹನ್ ಅವರು ಬಿಎಂಆರ್‌ಸಿಎಲ್‌ನ ಕ್ರಮವನ್ನು ಟೀಕಿಸಿದ್ದಾರೆ.

ಬಳಿಕ ಎಚ್ಚೆತ್ತುಕೊಂಡ ಬಿಎಂಆರ್‌ಸಿಎಲ್ ಹೆಚ್ಚುವರಿ ಟ್ರಿಪ್‌ಗಳನ್ನು ನಡೆಸಿತು.



'ಮೆಜೆಸ್ಟಿಕ್ ಮೆಟ್ರೊ ನಿಲ್ದಾಣದಲ್ಲಿ ಅಸಮರ್ಪಕ ನಿರ್ವಹಣೆಯನ್ನು ಒಪ್ಪಲಾಗದು. ಸೌರಮಾನ ಯುಗಾದಿಗೆ ಎಲ್ಲರಿಗೂ ರಜೆ ಇದೆ ಎಂದು ಭಾವಿಸಿ ರೈಲು ಟ್ರಿಪ್‌ಗಳ ನಡುವಿನ ಅವಧಿಯನ್ನು 10 ನಿಮಿಷಕ್ಕೆ ಏರಿಸಿದ್ದು, ಅವ್ಯವಸ್ಥೆ ಸೃಷ್ಟಿಸಿದೆ' ಎಂದು ಸಂಸದರು ಅಸಮಾಧಾನ ವ್ಯಕ್ತಪಡಿಸಿದ್ದರು.

'ಬಿಎಂಆರ್‌ಸಿಎಲ್, ಇಂತಹ ಸಂದರ್ಭಗಳಲ್ಲಿ ಉತ್ತಮ ಯೋಜನೆಗಳನ್ನು ಮಾಡಿಕೊಳ್ಳಬೇಕು' ಎಂದು ಸಲಹೆ ನೀಡಿದ್ದರು.

ಪ್ರತಿದಿನ ಬೆಳಿಗ್ಗೆ ಮತ್ತು ಸಂಜೆ ದಟ್ಟಣೆಯ ಅವಧಿಯಲ್ಲಿ ಮೆಜೆಸ್ಟಿಕ್‌ನಿಂದ ಐದು ನಿಮಿಷಕ್ಕೊಂದು ರೈಲು ಇರುತ್ತಿತ್ತು.

ಬಿಎಂಆರ್‌ಸಿಎಲ್ ಸ್ಪಷ್ಟನೆ: ಸಾರ್ವತ್ರಿಕ ರಜೆ ಇದ್ದರೂ ಮೆಜೆಸ್ಟಿಕ್‌ನ ನಾಡಪ್ರಭು ಕೆಂಪೇಗೌಡ ನಿಲ್ದಾಣದಲ್ಲಿ ಜನಸಂದಣಿ ಹೆಚ್ಚಾದ ಕಾರಣ ಬೈಯಪ್ಪನಹಳ್ಳಿ-ಮೆಜೆಸ್ಟಿಕ್ ನಡುವೆ ನಾಲ್ಕು ಹೆಚ್ಚುವರಿ ರೈಲು ಓಡಿಸಿದೆ. ಕೆಲವು ರೈಲನ್ನು ಐಟಿಪಿಎಲ್‌ಗೆ ಹಿಂತಿರುಗಿಸಲಾಗಿದೆ. ಮೆಜೆಸ್ಟಿಕ್, ಗರುಡಾಚಾರ್‌ಪಾಳ್ಯ ಮತ್ತು ವೈಟ್‌ಫೀಲ್ಡ್‌ನಿಂದ ಒಟ್ಟು 7 ಹೊಸ ಟ್ರಿಪ್ ನಡೆಸಲಾಗಿದೆ. ಅಲ್ಲದೆ, ಸಂಜೆ ಐಟಿಪಿಎಲ್‌ನಿಂದ ರೈಲುಗಳು ಎಂದಿನಂತೆ 5 ನಿಮಿಷದ ಅಂತರದಲ್ಲಿ ಸಂಚರಿಸಿವೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಶಿಕ್ಷಕರ ಬಡ್ತಿ: ಪೂರ್ವಾನ್ವಯಕ್ಕೆ ಕಾನೂನು ಇಲಾಖೆ ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೃಂದ ಮತ್ತು ನೇಮಕಾತಿಗೆ 2017ರಲ್ಲಿ ತಂದ ತಿದ್ದುಪಡಿಯ ನಿಯಮಗಳನ್ನು ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ 2016ಕ್ಕೂ ಮೊದಲು ನೇಮಕವಾದ ಶಿಕ್ಷಕರಿಗೆ ಪೂರ್ವಾನ್ವಯ ಮಾಡಬಾರದು ಎಂದು ಕಾನೂನು ಇಲಾಖೆ ಅಭಿಪ್ರಾಯ ನೀಡಿದೆ.

2017ಕ್ಕಿಂತ ಮೊದಲು ಪ್ರಾಥಮಿಕ ಶಾಲೆಗಳಿಗೆ ನೇಮಕವಾದ ಶಿಕ್ಷಕರ ಬಡ್ತಿ ಸಮಸ್ಯೆ ಹಾಗೂ ಇತರೆ ಬೇಡಿಕೆಗಳನ್ನು ಸಮಗ್ರವಾಗಿ ಪರಿಶೀಲಿಸಿ, ಶಾಶ್ವತ ಪರಿಹಾರ ದೊರಕಿಸಲು ಕಾನೂನು ಇಲಾಖೆ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ, ಶಾಲಾ ಶಿಕ್ಷಣ ಇಲಾಖೆಯ ಅಧಿಕಾರಿಗಳನ್ನು ಒಳಗೊಂಡ ಸಮಿತಿ ರಚಿಸಿದ್ದ ಸರ್ಕಾರ, ಪ್ರಾಥಮಿಕ ಶಾಲಾ ಶಿಕ್ಷಕರನ್ನು 1ರಿಂದ 5ನೇ ತರಗತಿಗೆ ಸೀಮಿತಗೊಳಿಸಿದ ನಂತರದ ಕಾನೂನು ತೊಡಕುಗಳ ಕುರಿತು ಅಭಿಪ್ರಾಯ ಕೇಳಿ ಕಾನೂನು ಇಲಾಖೆಗೆ ಪತ್ರ ಬರೆದಿತ್ತು.

> **ವೃಂದ ಮತ್ತು ನೇಮಕಾತಿಗೆ 2017ರಲ್ಲಿ ತಂದ ನಿಯಮಗಳನ್ನು ಪೂರ್ವಾನ್ವಯ ಮಾಡಿದ್ದರಿಂದ ಪ್ರೌಢಶಾಲೆ, ಮುಖ್ಯಶಿಕ್ಷಕರ ಬಡ್ತಿಗೆ ತೊಡಕಾಗಿದೆ**
> **ಚಂದ್ರಶೇಖರ ನುಗ್ಗಲಿ**
> ರಾಜ್ಯ ಪ್ರಧಾನ ಕಾರ್ಯದರ್ಶಿ, ಶಿಕ್ಷಕರ ಸಂಘ

2016ಕ್ಕಿಂತ ಮೊದಲು ನೇಮಕವಾದ ಶಿಕ್ಷಕರಿಗೆ 2017ರ ನಿಯಮ ಅನ್ವಯಿಸಬಾರದು. 1ರಿಂದ 8ನೇ ತರಗತಿಯ ಪ್ರಾಥಮಿಕ ಶಾಲೆಗಳಿಗೆ ನೇಮಕವಾದ ಶಿಕ್ಷಕರನ್ನು 1ರಿಂದ 5ನೇ ತರಗತಿಗೆ ಸೀಮಿತಗೊಳಿಸಿರುವ ಆದೇಶವನ್ನು ಹಿಂಪಡೆಯಬೇಕು. ಪದವಿ ವಿದ್ಯಾರ್ಹತೆ ಹೊಂದಿರುವ ಶಿಕ್ಷಕರನ್ನು ಪದವೀಧರ ಪ್ರಾಥಮಿಕ ಶಿಕ್ಷಕರು (ಜಿಪಿಟಿ) ಎಂದೇ ಪರಿಗಣಿಸಬೇಕು. ಅದಕ್ಕಾಗಿ ಬಡ್ತಿ, ವರ್ಗಾವಣೆಗೆ ಅಡ್ಡಿಯಾಗಿರುವ ವೃಂದ ಮತ್ತು ನೇಮಕಾತಿ ನಿಯಮ–2017ಕ್ಕೆ ತಿದ್ದುಪಡಿ ತಂದು ನ್ಯಾಯ ದೊರಕಿಸಿಕೊಡಬೇಕು ಎಂಬ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ನಿರಂತರ ಹೋರಾಟ ನಡೆಸಿತ್ತು.

ನಿಧನ ವಾರ್ತೆ

ಶ್ಯಾಮಸುಂದರ್

ಬೆಂಗಳೂರು: ಪತ್ರಕರ್ತ ಎಸ್.ಕೆ. ಶ್ಯಾಮಸುಂದರ್ (71) ಅವರು ಅಲ್ಪಕಾಲದ ಅನಾರೋಗ್ಯದಿಂದಾಗಿ ಸೋಮವಾರ ನಿಧನರಾಗಿದ್ದಾರೆ.

ಶ್ಯಾಮಸುಂದರ್

ಮೃತರು ಅವಿವಾಹಿತರಾಗಿದ್ದರು.

ಚಿತ್ರದುರ್ಗ ಜಿಲ್ಲೆ ಜಾನಕೊಂಡದ ಶ್ಯಾಮಸುಂದರ್ ಅವರು ಮೂರು ದಶಕಗಳಿಗೂ ಹೆಚ್ಚು ಕಾಲ ಮುದ್ರಣ, ಡಿಜಿಟಲ್ ಹಾಗೂ ದೃಶ್ಯ ಮಾಧ್ಯಮದಲ್ಲಿ ಪತ್ರಕರ್ತರಾಗಿ ಕಾರ್ಯನಿರ್ವಹಿಸಿದ್ದರು.

ಕನ್ನಡಪ್ರಭದಲ್ಲಿ ಪುರವಣಿ ಮುಖ್ಯಸ್ಥರಾಗಿ, ಒನ್‌ಇಂಡಿಯಾ ಡಾಟ್ ಕಾಮ್ ಸಂಪಾದಕರಾಗಿ ಕಾರ್ಯ ನಿರ್ವಹಿಸಿದ್ದರು. ಸುವರ್ಣ ಡಿಜಿಟಲ್ ವೆಬ್‌ಸೈಟ್‌ನ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸಿದ್ದರು.

ಶೇಷಾದ್ರಿಪುರಂ ಕಾಲೇಜಿನಲ್ಲಿ ವಿನೂತನ ಕಾರ್ಯಕ್ರಮ

ವಿವಿಧತೆಯಲ್ಲಿ ಏಕತೆ ಸಾರುವ ಹಬ್ಬಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಶೇಷಾದ್ರಿಪುರಂ ಕಾಲೇಜಿನಲ್ಲಿ ತರಂಗ ಸಾಂಸ್ಕೃತಿಕ ಸಮಿತಿಯು 'ಕೋಮು ಸಾಮರಸ್ಯಕ್ಕಾಗಿ ಭಾರತೀಯ ಹಬ್ಬಗಳು– ವಿವಿಧತೆಯಲ್ಲಿ ಏಕತೆ' ಎಂಬ ವಿಶಿಷ್ಟ ಕಾರ್ಯಕ್ರಮವನ್ನು ಇತ್ತೀಚೆಗೆ ಆಯೋಜಿಸಿತ್ತು.

ಶೇಷಾದ್ರಿಪುರಂ ಶಿಕ್ಷಣ ಟ್ರಸ್ಟ್‌ನ ಗೌರವ ಪ್ರಧಾನ ಕಾರ್ಯದರ್ಶಿ ವೂಡೇ ಪಿ. ಕೃಷ್ಣ ಕಾರ್ಯಕ್ರಮ ಉದ್ಘಾಟಿಸಿದರು. ಈ ಕಾರ್ಯಕ್ರಮವು ಭಾರತದ ಸಾಂಸ್ಕೃತಿಕ ವೈವಿಧ್ಯವನ್ನು ಅನಾವರಣಗೊಳಿಸಿತು. ಮಾತ್ರವಲ್ಲ, ಸಾಂಸ್ಕೃತಿಕ ಆಚರಣೆಗಳ ಮೂಲಕ ವಿವಿಧ ಸಮುದಾಯಗಳ ನಡುವಿನ ಒಳಗೊಳ್ಳುವಿಕೆ, ಪರಸ್ಪರ ಗೌರವಿಸುವುದನ್ನು ಒತ್ತಿ ಹೇಳಿತು.

ಪದವಿ ಮತ್ತು ಸ್ನಾತಕೋತ್ತರ ವಿಭಾಗದ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಉತ್ಸಾಹದಿಂದ ಪಾಲ್ಗೊಂಡರು. ವಿದ್ಯಾರ್ಥಿಗಳು ತಮ್ಮ ತಮ್ಮ ತರಗತಿಗಳಲ್ಲಿ ವಿಜಯ ದಶಮಿ, ಕೃಷ್ಣ ಜನ್ಮಾಷ್ಟಮಿ, ಹನುಮ ಜಯಂತಿ, ದುರ್ಗಾ ಪೂಜೆ, ಓಣಂ, ಸರಸ್ವತಿ ಪೂಜೆ, ಮಹಾ ಶಿವರಾತ್ರಿ, ರಾಮ ನವಮಿ, ವಿಷು, ತುಳಸಿ ಪೂಜೆ, ಯುಗಾದಿ, ದೀಪಾವಳಿ, ಕ್ರಿಸ್‌ಮಸ್, ವೈಕುಂಠ ಏಕಾದಶಿ, ಮಕರ ಸಂಕ್ರಾಂತಿ, ಗಣೇಶ, ಗೋವರ್ಧನ ಪೂಜೆ, ಗುರುನಾನಕ್ ಜಯಂತಿ ಸೇರಿದಂತೆ 52ಕ್ಕೂ ಹೆಚ್ಚು ವಿವಿಧ ಹಬ್ಬಗಳನ್ನು ಆಚರಿಸಿ, ಸಂಭ್ರಮಿಸಿದರು.

'ಕೋಮು ಸಾಮರಸ್ಯಕ್ಕಾಗಿ ಭಾರತೀಯ ಹಬ್ಬಗಳು– ವಿವಿಧತೆಯಲ್ಲಿ ಏಕತೆ' ಕಾರ್ಯಕ್ರಮದಲ್ಲಿ ಶೇಷಾದ್ರಿಪುರಂ ಶಿಕ್ಷಣ ಟ್ರಸ್ಟ್‌ನ ಗೌರವ ಪ್ರಧಾನ ಕಾರ್ಯದರ್ಶಿ ವೂಡೇ ಪಿ. ಕೃಷ್ಣ, ಕಾಲೇಜಿನ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು

ವಿದ್ಯಾರ್ಥಿಗಳು ಎಲ್ಲ ಹಬ್ಬಗಳಲ್ಲೂ ಭಾಗವಹಿಸುವ ಮೂಲಕ, ಕೋಮು ಸಾಮರಸ್ಯ ಮತ್ತು ವಿವಿಧತೆಯಲ್ಲಿ ಏಕತೆಯ ಮಹತ್ವವನ್ನು ಸಾರಿದರು. ಭಾರತೀಯ ಹಬ್ಬಗಳು ವಿದ್ಯಾರ್ಥಿಗಳನ್ನು ನಂಬಿಕೆಗಳು ಮತ್ತು ಹಿನ್ನೆಲೆಗಳನ್ನು ಮೀರಿ ಒಟ್ಟುಗೂಡಿಸಿದವು. ವಿದ್ಯಾರ್ಥಿಗಳು ವಿವಿಧ ಹಬ್ಬಗಳನ್ನು ಆಚರಿಸುವ ಮೂಲಕ ಏಕತೆ, ಒಳಗೊಳ್ಳುವಿಕೆ ಮತ್ತು ವಿವಿಧ ಸಮುದಾಯಗಳನ್ನು ಗೌರವಿಸುವುದನ್ನು ಕಲಿತರು. ಅಲ್ಲದೇ, ವಿವಿಧ ಸಮುದಾಯಗಳ ಸಂಸ್ಕೃತಿಗಳನ್ನು ಅರ್ಥ ಮಾಡಿಕೊಳ್ಳಲು ಈ ಕಾರ್ಯಕ್ರಮ ಅವಕಾಶ ಕಲ್ಪಿಸಿತು.

ಕಾರ್ಯಕ್ರಮದಲ್ಲಿ ಟ್ರಸ್ಟಿ ಕೆ.ಕೃಷ್ಣಸ್ವಾಮಿ, ಶೇಷಾದ್ರಿಪುರಂ ಕಾಲೇಜಿನ ಪ್ರಾಚಾರ್ಯ ಐ. ಆನಂದಪ್ಪ, ನಿರ್ದೇಶಕರು, ಡೀನ್, ವಿವಿಧ ವಿಭಾಗಗಳ ಮುಖ್ಯಸ್ಥರು, ಅಧ್ಯಾಪಕರು, ಅಧ್ಯಾಪಕೇತರ ಸಿಬ್ಬಂದಿ ಭಾಗವಹಿಸಿದ್ದರು.

ಸಂಕ್ಷಿಪ್ತ ಸುದ್ದಿ

ಪದಾಧಿಕಾರಿಗಳ ಆಯ್ಕೆ

ಬೆಂಗಳೂರು: ಅಲೈಯನ್ಸ್ ಫ್ರಾನ್ಸೆಸ್ ಡಿ ಬೆಂಗಳೂರು ಸಂಸ್ಥೆಯ ಅಧ್ಯಕ್ಷರಾಗಿ ಚಿನ್ಮಯ ಪಿ.ಚಿಗಟೇರಿ ಆಯ್ಕೆಯಾಗಿದ್ದಾರೆ.

ಏಪ್ರಿಲ್ 6ರಂದು ಅಧ್ಯಕ್ಷರು ಮತ್ತು ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗಿದೆ. ಅನುಷ್ ಸೋಲೋಮಾನ್ ಜಾಯ್ , ರಮ್ಯಾ ಕೆ.ಬಿ. ಭಾರದ್ವಾಜ್ (ಉಪಾಧ್ಯಕ್ಷರು), ಅಭಿಷೇಕ್ ಎಸ್.ಐಯ್ಯಂಗಾರ್ (ಕೋಶಾಧ್ಯಕ್ಷ), ಆದಿತ್ಯ ಸುರಾನ (ಜಂಟಿ ಕಾರ್ಯದರ್ಶಿ), ಚಂದರ್ ಪಿ ಮನಾರ್, ಪುಣ್ಯ ಗೋಪಾಲ್, ಬಿ.ಜಿ.ಆನಂದ (ಸದಸ್ಯರು).

ಅಂಗನವಾಡಿ ಉದ್ಘಾಟನೆ ಇಂದು

ಬೆಂಗಳೂರು: ಸಾಮೂಹಿಕ ಶಕ್ತಿ ಸ್ಪರ್ಶ ಟ್ರಸ್ಟ್ ವತಿಯಿಂದ ಅಂಗನವಾಡಿ ಕೇಂದ್ರದ ಶೈಕ್ಷಣಿಕ ಮೂಲಸೌಕರ್ಯ ಉದ್ಘಾಟನೆ ಮತ್ತು ಹಸ್ತಾಂತರ ಸಮಾರಂಭ ಏಪ್ರಿಲ್ 15ರಂದು ನಡೆಯಲಿದೆ.

ಬನಶಂಕರಿ ಕ್ಲಸ್ಟರ್‌ನ ಉಲ್ಲಾಳ ಅಂಗನವಾಡಿ ಕೇಂದ್ರದಲ್ಲಿ ಬೆಳಿಗ್ಗೆ 11.30ಕ್ಕೆ ಸಮಾರಂಭ ನಡೆಯಲಿದೆ. ಇದೇ ವೇಳೆ 9 ಅಂಗನವಾಡಿ ಕೇಂದ್ರಗಳನ್ನು ವರ್ಚುವಲ್ ಮೂಲಕ ಉದ್ಘಾಟಿಸಲಾಗುತ್ತದೆ.

ಗ್ರಾಮೀಣ ಮಕ್ಕಳಿಗೆ ಬೇಸಿಗೆ ಶಿಬಿರ

ಬೆಂಗಳೂರು: ಗ್ರಾಮ ಪಂಚಾಯಿತಿ ಅರಿವು ಕೇಂದ್ರದ ಮೂಲಕ ಗ್ರಾಮೀಣ ಮಕ್ಕಳಿಗೆ ಬೇಸಿಗೆ ಶಿಬಿರ ಹಮ್ಮಿಕೊಳ್ಳಲಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

ಇದಕ್ಕಾಗಿ ಗ್ರಾಮಪಂಚಾಯಿತಿಗಳನ್ನು ಸಜ್ಜುಗೊಳಿಸಲಾಗಿದೆ. ರಾಜ್ಯದಲ್ಲಿ ಶಾಲೆಗಳಿಗೆ ಬೇಸಿಗೆ ರಜೆ ಆರಂಭವಾಗಿದೆ. ಆದ್ದರಿಂದ ಬೇಸಿಗೆ ರಜೆ ಕೊನೆಗೊಳ್ಳುವವರೆಗೆ ಅಂದರೆ ಮೇ ವರೆಗೆ ಶಿಬಿರಗಳನ್ನು ನಡೆಸಲಾಗುವುದು ಎಂದು ಅವರು ಪ್ರಕಟಣೆಯಲ್ಲಿ ಹೇಳಿದ್ದಾರೆ.

ನಗರದಲ್ಲಿ ಇಂದು

ವಿಶ್ವ ಕಲಾ ದಿನಾಚರಣೆ: ಉದ್ಘಾಟನೆ: ಚಂದ್ರನಾಥ್ ಆಚಾರ್ಯ, ಶೀಲಾ ಗೌಡ, ಸಿ.ಎಸ್. ಕೃಷ್ಣಶೆಟ್ಟಿ, ಆಯೋಜನೆ: ದಕಹವಿಸ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 10

ಶ್ರೀಮಾತಾ ಲಲಿತ ಸಹಸ್ರನಾಮ ಪಾರಾಯಣ ಮತ್ತು ಸತ್ಸಂಗ, ಧಾರ್ಮಿಕ ಸಭೆ: ಉಪಸ್ಥಿತರು: ನಿರ್ಮಲಾನಂದನಾಥ ಸ್ವಾಮೀಜಿ, ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ, ಶಿವಲಿಂಗಾನಂದ ಸ್ವಾಮೀಜಿ, ಡಿ.ಕೆ. ಶಿವಕುಮಾರ್, ಸದಾನಂದ ಗೌಡ, ಜಿ.ಸಿ. ಚಂದ್ರಶೇಖರ್, ಪ್ರಿಯಕೃಷ್ಣ, ಎಸ್.ಟಿ. ಸೋಮಶೇಖರ್, ಎಚ್.ಸಿ. ಬಾಲಕೃಷ್ಣ, ಟಿ. ವೆಂಕಟೇಶ್, ಹೇಮಲತಾ ಗೋಪಾಲಯ್ಯ, ಸೌಮ್ಯಾರೆಡ್ಡಿ, ಕುಸುಮಾ ಹನುಮಂತರಾಯಪ್ಪ ಸ್ಥಳ: ಆದಿಚುಂಚನಗಿರಿ ಮಹಾಸಂಸ್ಥಾನ ಶಾಖಾ ಮಠ, ವಿಜಯನಗರ, ಬೆಳಿಗ್ಗೆ 10.30

87ನೇ ರಾಮೋತ್ಸವ ಸಮಾರಂಭ: ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ, ಪ್ರವಚನ, ಕರ್ನಾಟಕ ಶಾಸ್ತ್ರೀಯ ಸಂಗೀತ, ಆಯೋಜನೆ: ಎನ್.ಆರ್. ಕಾಲೊನಿ ಶ್ರೀರಾಮಮಂದಿರಂ ಟ್ರಸ್ಟ್, ಸ್ಥಳ: ಶ್ರೀರಾಮಮಂದಿರ, ಎನ್.ಆರ್. ಕಾಲೊನಿ, ಬಸವನಗುಡಿ, ಸಂಜೆ 4.15ರಿಂದ

ಬೆಳಕಬಳ್ಳಿ ಅ.ನ. ರಮೇಶ್ ನೆನಪು– ರಂಗಗೀತೆ, ರಂಗದೃಶ್ಯಾವಳಿ, ರಂಗಪ್ರಯೋಗ, ರಂಗಗೌರವ: ಅಧ್ಯಕ್ಷತೆ: ಕೆ.ವಿ. ನಾಗರಾಜಮೂರ್ತಿ, ಅತಿಥಿಗಳು: ಶ್ರೀನಿವಾಸ ಜಿ. ಕಪ್ಪಣ್ಣ, ಸೆಂಟರ್ ಸ್ಟೇಜ್ ಗಂಗಾಧರ್, ಶಶಿಧರ ಅಡಪ, ಎನ್.ಎಸ್. ಚಿತ್ರಶೇಖರ್, ಚಂದ್ರಶೇಖರ್, ರಾಧಾಕೃಷ್ಣ ಹೆಗಡೆ, ರಂಗಗೌರವ: ಜೆ. ಲೋಕೇಶ್, ನಾಗರತ್ನಮ್ಮ ಮರಿಯಮ್ಮನಹಳ್ಳಿ, ಜಿ.ಎನ್. ಮೋಹನ್, ಟಿ.ಎಸ್. ವಿವೇಕಾನಂದ, ಜಯಶ್ರೀ ಕಂಬಾರ, ಗೌರವ ಸನ್ಮಾನ: ಟಿ.ಎಂ. ನಾಗರಾಜ್, ಮಂಜುನಾರಾಯಣ, ಆಯೋಜನೆ: ರಂಗಚಂದಿರ, ರಂಗನಾಯಕ ಟ್ರಸ್ಟ್, ಸ್ಥಳ: ನಯನ ಸಭಾಂಗಣ, ಜೆ.ಸಿ. ರಸ್ತೆ, ಸಂಜೆ 5



ಶ್ರೀನಿವಾಸ ಜಿ.ಕಪ್ಪಣ್ಣ

87ನೇ ಶ್ರೀರಾಮನವಮಿ ಸಂಗೀತೋತ್ಸವ: ಎಂ. ವಿಜಯಕುಮಾರ್ ಮತ್ತು ಸಂಗಡಿಗರಿಂದ ಹರಿಕಥೆ, ದುಶ್ಯಂತ್ ಶ್ರೀಧರ್ ಅವರಿಂದ 'ಸಕಲ ಗ್ರಹಬಲ ನೀನೇ' ಕಾರ್ಯಕ್ರಮ: ಆಯೋಜನೆ: ಶ್ರೀರಾಮಸೇವಾ ಮಂಡಳಿ ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲೆ ಆವರಣ, ಚಾಮರಾಜಪೇಟೆ, ಸಂಜೆ 5.30

25ನೇ ವರ್ಷದ ಪ್ರವಚನ ವಾಹಿನಿ: 'ಅಲ್ಲಮ ಪ್ರಭು–ಸಿದ್ಧರಾಮ' ಉಪನ್ಯಾಸ: ಸಿ.ಯು. ಮಂಜುನಾಥ, ಆಯೋಜನೆ ಹಾಗೂ ಸ್ಥಳ: ಸಾಂಸ್ಕೃತಿಕ ಮಂದಿರ, ರಾಗಿಗುಡ್ಡದ ಶ್ರೀ ಪ್ರಸನ್ನ ಆಂಜನೇಯಸ್ವಾಮಿ ಭಕ್ತ ಮಂಡಳಿ ಟ್ರಸ್ಟ್, ಜಯನಗರ 9ನೇ ಬಡಾವಣೆ, ಸಂಜೆ 6.30

ಸಾಹಿತ್ಯ, ಸಾಂಸ್ಕೃತಿಕ, ಶೈಕ್ಷಣಿಕ ಸೇರಿ ವಿವಿಧ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ಜಾತಿ ಗಣತಿ: ಹಿಂದುಳಿದ ವರ್ಗಗಳ ಆಯೋಗ ಸಲ್ಲಿಸಿರುವ ವರದಿ ಕುರಿತು ಚರ್ಚೆ

ಕಾಂಗ್ರೆಸ್ ಒಕ್ಕಲಿಗ ಶಾಸಕರ ಸಭೆ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರಕ್ಕೆ ಹಿಂದುಳಿದ ವರ್ಗಗಳ ಆಯೋಗ ಸಲ್ಲಿಸಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ (ಜಾತಿ ಜನಗಣತಿ) ವರದಿ ವಿಚಾರದ ಕುರಿತು ಚರ್ಚಿಸಲು ಕುಮಾರ ಪಾರ್ಕ್ ಗಾಂಧಿ ಭವನ ರಸ್ತೆಯಲ್ಲಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಸರ್ಕಾರಿ ನಿವಾಸದಲ್ಲಿ ಮಂಗಳವಾರ ಸಂಜೆ 6 ಗಂಟೆಗೆ ಕಾಂಗ್ರೆಸ್ ಪಕ್ಷದ ಒಕ್ಕಲಿಗ ಶಾಸಕರ ಸಭೆ ನಡೆಯಲಿದೆ.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಶಿವಕುಮಾರ್, 'ನಾನು ಈ ವರದಿಯನ್ನು ಸಂಪೂರ್ಣವಾಗಿ ನೋಡಿಲ್ಲ. ವರದಿಯ ಅಧ್ಯಯನ ಮಾಡಲಾಗುತ್ತಿದೆ. ಈ ಕುರಿತು ಚರ್ಚಿಸಲು ಪಕ್ಷದ ನಮ್ಮ ಸಮುದಾಯದ ಶಾಸಕರ ಸಭೆ ಕರೆದಿದ್ದೇನೆ. ಅವರಿಂದ ಅಭಿಪ್ರಾಯ ಸಂಗ್ರಹಿಸಲಾಗುವುದು. ಯಾರ ಮನಸ್ಸನ್ನೂ ನೋಯಿಸದೆ ಎಲ್ಲರ ಗೌರವ ಕಾಪಾಡಲು ಸಲಹೆ ನೀಡುತ್ತೇನೆ' ಎಂದರು.

ಎಲ್ಲರಿಗೂ ನ್ಯಾಯ: 'ಧರ್ಮದ ಆಧಾರದಲ್ಲಿ ಟೆಂಡರ್ ನೀಡಿ ಪರಿಶಿಷ್ಟ ಜಾತಿ ಹಾಗೂ ಪಂಗಡಗಳ ಹಕ್ಕುಗಳನ್ನು ಕಾಂಗ್ರೆಸ್ ಸರ್ಕಾರ ಕಸಿಯುತ್ತಿದೆ' ಎನ್ನುವ ಆರೋಪದ ಬಗ್ಗೆ ಕೇಳಿದಾಗ, 'ಪರಿಶಿಷ್ಟ ಜಾತಿ ಹಾಗೂ ಪಂಗಡದವರಿಗೂ ಮೀಸಲಾತಿ ನೀಡಲಾಗಿದೆ. ಸಮಾಜದಲ್ಲಿ ಯಾರು ಆರ್ಥಿಕವಾಗಿ ಹಿಂದುಳಿದಿದ್ದಾರೊ ಅವರನ್ನು ಸಮಾಜದ ಮುಖ್ಯವಾಹಿನಿಗೆ ತರುವುದು ನಮ್ಮ ಆದ್ಯತೆ. ಕಾಂಗ್ರೆಸ್ ಪಕ್ಷ ಸಮಾಜದ ಎಲ್ಲ ವರ್ಗಗಳಿಗೂ ನ್ಯಾಯ ಒದಗಿಸುವ ಪಕ್ಷ' ಎಂದರು.

'ಒಬಿಸಿಗಳ ಮೀಸಲಾತಿಯನ್ನು ಕಾಂಗ್ರೆಸ್ ಕಿತ್ತುಕೊಂಡಿದೆ' ಎನ್ನುವ ಪ್ರಧಾನಿ ಮೋದಿ ಅವರ ಹೇಳಿಕೆ ಬಗ್ಗೆ ಕೇಳಿದಾಗ, 'ನಾವು ಯಾರ ಮೀಸಲಾತಿಯನ್ನೂ ಕಿತ್ತುಕೊಂಡಿಲ್ಲ. ಬೆಂಗಳೂರಿನ ಸಂಸದರೊಬ್ಬರು ಒಂದು ಸಮುದಾಯವನ್ನು ಗುರಿಯಾಗಿಸಿಕೊಂಡು ಎದೆ ಸೀಳಿದರೆ ಅಕ್ಷರವಿಲ್ಲ, ಪಂಕ್ಚರ್ ಹಾಕಲು ಮಾತ್ರ ಸೀಮಿತ ಎಂದು ದ್ವೇಷ ಕಾರಿದ್ದರು. ಆದರೆ, ನಾವು ಆ ಸಮುದಾಯ ಇತರೇ ಕೆಲಸಗಳನ್ನು ಮಾಡಲು ಸಾಮರ್ಥ್ಯ ಹೊಂದಿದೆ ಎಂದು ತೋರಿಸಬೇಕಾಗಿದೆ' ಎಂದರು.

'ಚರ್ಚೆ ನಂತರ ತೀರ್ಮಾನ'

ಜಿ.ಪರಮೇಶ್ವರ

ಬೆಂಗಳೂರು: 'ಜಾತಿ ಜನಗಣತಿ ವರದಿ ಕುರಿತು ಚರ್ಚೆ ಮಾಡಿದ ನಂತರ ಅನುಮೋದನೆ ನೀಡುವ ಬಗ್ಗೆ ತೀರ್ಮಾನ ಆಗಲಿದೆ' ಎಂದು ಗೃಹ ಸಚಿವ ಜಿ. ಪರಮೇಶ್ವರ ತಿಳಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ವರದಿಯ ನಾಲ್ಕೈದು ಪುಟ ಓದಿದ್ದೇನೆ. ವಸ್ತುಸ್ಥಿತಿ ಏನಿದೆ ಎಂದು ಗೊತ್ತಾಗಿದೆ. ಮುಂದೆ ಅದರ ಪರಿಣಾಮ, ಯೋಜನೆಗಳು, ಕಾರ್ಯಕ್ರಮಗಳನ್ನು ಈಗಲೇ ಹೇಳಲು ಆಗುವುದಿಲ್ಲ' ಎಂದರು.

ನಿವೃತ್ತ ನ್ಯಾಯಮೂರ್ತಿ ನೇತೃತ್ವದ ಸಮಿತಿ?

ಬೆಂಗಳೂರು: ಹಿಂದುಳಿದ ವರ್ಗಗಳ ಆಯೋಗ ಸಲ್ಲಿಸಿದ ವರದಿಯ ಕುರಿತು ಅಧ್ಯಯನ ನಡೆಸಲು ನಿವೃತ್ತ ನ್ಯಾಯಮೂರ್ತಿ ಮತ್ತು ನಿವೃತ್ತ ಅಧಿಕಾರಿಗಳ ನೇತೃತ್ವದಲ್ಲಿ ಐದು ಮಂದಿಯ ಸಮಿತಿ ರಚಿಸಲು ವೀರಶೈವ ಮಹಾಸಭಾ ನಿರ್ಧರಿಸಿದೆ.

ಸಮೀಕ್ಷೆಯ ವರದಿಯ ಕುರಿತು ಚರ್ಚಿಸಲು ಇದೇ 17ರಂದು ವಿಶೇಷ ಸಚಿವ ಸಂಪುಟ ಸಭೆ ನಡೆಯಲಿದೆ. ಆ ಸಭೆಗೂ ಮೊದಲೇ ಸಮಿತಿಯು ವರದಿ ನೀಡಲಿದ್ದು, ಅದನ್ನು ಸಮುದಾಯದ ಸಚಿವರು, ಶಾಸಕರಿಗೆ ನೀಡಲಾಗುವುದು ಎಂದು ಮಹಾಸಭಾದ ಮೂಲಗಳು ತಿಳಿಸಿವೆ.

ಅಂದಿನ ಸಭೆಯಲ್ಲಿ ತೆಗೆದುಕೊಳ್ಳುವ ನಿರ್ಣಯವನ್ನು ಆಧರಿಸಿ, ಮುಂದಿನ ಸಾಧಕ-ಬಾಧಕಗಳ ಕುರಿತು ಸಮಿತಿಯು ಚರ್ಚೆ ನಡೆಸಲಿದೆ ಎಂದೂ ಗೊತ್ತಾಗಿದೆ.

ವರದಿಯಲ್ಲಿ ಎಲ್ಲರೂ ಒಳಗೊಂಡಿದ್ದಾರೆ: ಜಯಪ್ರಕಾಶ್ ಹೆಗ್ಡೆ

ಉಡುಪಿ: 'ರಾಜ್ಯದಲ್ಲಿ ಎಷ್ಟು ಜಾತಿಗಳಿವೆಯೋ ಎಲ್ಲವನ್ನೂ ಜಾತಿ ಗಣತಿ ವರದಿಯಲ್ಲಿ ಉಲ್ಲೇಖಿಸಲಾಗಿದೆ. ಸಂಖ್ಯೆ ಎಷ್ಟು ಎಂದು ಈಗ ನಾನು ಹೇಳಲಾರೆ' ಎಂದು ಹಿಂದುಳಿದ ವರ್ಗಗಳ ಶಾಶ್ವತ ಆಯೋಗದ ಮಾಜಿ ಅಧ್ಯಕ್ಷ ಜಯಪ್ರಕಾಶ್ ಹೆಗ್ಡೆ ಸೋಮವಾರ ಇಲ್ಲಿ ತಿಳಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ವರದಿ ಕುರಿತು ಸಂಪುಟದಲ್ಲಿ ಚರ್ಚೆ ಆದ ನಂತರ ಹೇಳಿಕೆ ಕೊಡೋಣ ಎಂದಿದ್ದೆ. ಆದರೆ ಒಬ್ಬೊಬ್ಬರು ಒಂದೊಂದು ರೀತಿಯ ಹೇಳಿಕೆ ನೀಡುತ್ತಿದ್ದಾರೆ. ಈ ಬಗ್ಗೆ ಗೊಂದಲ ಉಂಟಾಗಿರುವುದರಿಂದ ಸ್ಪಷ್ಟನೆ ನೀಡಬೇಕಾಗಿದೆ' ಎಂದರು.

'ಇದು ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ. ಜಾತಿ ಗಣತಿ ಅಲ್ಲವೇ ಅಲ್ಲ. ಮಾಡಿರುವ ಸಮೀಕ್ಷೆಯಲ್ಲಿ ಜಾತಿ ಒಂದು ಅಂಶ ಅಷ್ಟೇ. ಜನರು ಹೇಳಿರುವ ಜಾತಿಯನ್ನು ಬರೆದುಕೊಳ್ಳಲಾಗಿದೆ. ಜನರ ಜಾತಿಯನ್ನು ನಾವು ನಿರ್ಧರಿಸಲು ಸಾಧ್ಯವಿಲ್ಲ. ಮನೆಯವರು ಕೊಟ್ಟ ಜಾತಿಯನ್ನು ನಮೂದಿಸಲಾಗಿದೆ' ಎಂದರು.

ವರದಿ ಸಾರ್ವಜನಿಕಗೊಂಡ ನಂತರ ಚರ್ಚೆ ಮಾಡಬಹುದು. ವರದಿಯಲ್ಲಿ ತಪ್ಪಿದ್ದರೆ ಸರಿಪಡಿಸಿಕೊಳ್ಳಲು ಅವಕಾಶ ಇದೆ. ತಪ್ಪಾಗಿದ್ದರೆ ಸರಿ ಮಾಡುತ್ತೇವೆ ಎಂದು ಸರ್ಕಾರ ಹೇಳಿದೆ. ಶೇ 95 ರಷ್ಟು ಸರಿ ಇದೆ ಎಂದು ಮುಖ್ಯಮಂತ್ರಿಯೇ ಹೇಳಿದ್ದಾರೆ. ಏನನ್ನೂ ನೋಡದೆ ಇದು ವೈಜ್ಞಾನಿಕ ವರದಿ ಅಲ್ಲ ಎನ್ನಬಾರದು ಎಂದರು.

ವರದಿ ಜಾರಿ ಆಗಬೇಕು ಎಂದು ನಾನು ಹಾರೈಸುತ್ತೇನೆ. ಸಾಕಷ್ಟು ಪ್ರಯತ್ನದ ನಂತರ ವರದಿ ತಯಾರಿಸಲಾಗಿದೆ. ಜನರ ಮನಸ್ಸಿನಲ್ಲಿರುವ ಅನುಮಾನ ದೂರವಾಗಲು ವರದಿ ಬಹಿರಂಗವಾಗಬೇಕು ಎಂದರು.

'ಜಾತಿ ಗಣತಿ ಒಪ್ಪುವುದಿಲ್ಲ'

ಪ್ರಜಾವಾಣಿ ವಾರ್ತೆ

ಬಸವರಾಜು ವಿ.ಶಿವಗಂಗಾ

ದಾವಣಗೆರೆ: 'ದಶಕದ ಹಿಂದೆ ನಡೆಸಿದ ಸಾಮಾಜಿಕ, ಶೈಕ್ಷಣಿಕ ಸಮೀಕ್ಷಾ ವರದಿ (ಜಾತಿ ಜನಗಣತಿ) ಸಾಕಷ್ಟು ಗೊಂದಲದಿಂದ ಕೂಡಿದೆ. ಇದನ್ನು ಯಾವುದೇ ಕಾರಣಕ್ಕೂ ನಾನು ಒಪ್ಪುವುದಿಲ್ಲ' ಎಂದು ಚನ್ನಗಿರಿ ಶಾಸಕ ಬಸವರಾಜು ವಿ.ಶಿವಗಂಗಾ ತಿಳಿಸಿದರು.

'ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಅಧ್ಯಕ್ಷರೂ ಆಗಿರುವ ಶಾಸಕ ಶಾಮನೂರು ಶಿವಶಂಕರಪ್ಪ ಜಾತಿ ಜನಗಣತಿಯನ್ನು ಒಪ್ಪಿಲ್ಲ. ಅವರು ತಳೆದಿರುವ ನಿಲುವಿಗೆ ನಾನೂ ಬದ್ಧನಾಗಿದ್ದೇನೆ. ಸರ್ಕಾರ ವರದಿ ಹೊರತರುವುದಕ್ಕೂ ಮುನ್ನ ಚರ್ಚಿಸ ಬೇಕಿತ್ತು. ವರದಿ ಬಿಡುಗಡೆಗೊಳಿಸಿ ತಿದ್ದುಪಡಿಗೆ ಮುಂದಾದರೆ ಸರ್ಕಾರಕ್ಕೆ ಮುಜುಗರ ಎದುರಾಗಲಿದೆ' ಎಂದು ಸೋಮವಾರ ಅಭಿಪ್ರಾಯಪಟ್ಟರು.

'ರಾಜ್ಯದಲ್ಲಿ ಲಿಂಗಾಯತ ಸಾದರ ಸಮುದಾಯದ ಜನಸಂಖ್ಯೆ ಕೇವಲ 67,000 ಇದೆ ಎಂಬುದಾಗಿ ಜಾತಿ ಸಮೀಕ್ಷೆ ಹೇಳುತ್ತಿದೆ. ನಾನು ಪ್ರತಿನಿಧಿಸುವ ಚನ್ನಗಿರಿ ವಿಧಾನಸಭಾ ಕ್ಷೇತ್ರವೊಂದರಲ್ಲೇ ಸಾದರ ಸಮುದಾಯದ ಅಂದಾಜು 60,000 ಜನಸಂಖ್ಯೆ ಇದೆ. ಯಾವರೀತಿ ಗಣತಿ ಮಾಡಲಾಗಿದೆ ಎಂಬುದು ಅರ್ಥ ಆಗುತ್ತಿಲ್ಲ.' ಎಂದು ಅವರು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಜಾತಿಗಣತಿ ವರದಿ ಬಗ್ಗೆ ಯಾರಾದರೂ ಆಕ್ಷೇಪ ವ್ಯಕ್ತಪಡಿಸಿದರೆ ಆ ಅಂಶಗಳನ್ನು ಪರಿಶೀಲಿಸಲಾಗುವುದು. ಮರುಪರಿಶೀಲನೆಯ ಅಗತ್ಯವಿದ್ದರೆ, ಆ ಬಗ್ಗೆಯೂ ಚಿಂತನೆ ನಡೆಸಬಹುದು

ಕೆ.ಎನ್. ರಾಜಣ್ಣ, ಸಹಕಾರ ಸಚಿವ

ಹತ್ತು ವರ್ಷಗಳ ಹಿಂದೆ ನಡೆಸಿದ ಸಾಮಾಜಿಕ, ಶೈಕ್ಷಣಿಕ ಸಮೀಕ್ಷಾ ವರದಿಯನ್ನು ರಾಜ್ಯ ಸರ್ಕಾರ ಈಗ ಬಿಡುಗಡೆ ಮಾಡಲು ಹೊರಟಿದೆ. ಆ ಗಣತಿಯೇ ಅವೈಜ್ಞಾನಿಕ

ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸಂಸದ

ಜಾತಿ ಗಣತಿ ಕಸದ ಬುಟ್ಟಿಗೆ ಹಾಕಿ: ವಿಜಯೇಂದ್ರ

ಪ್ರಜಾವಾಣಿ ವಾರ್ತೆ

ವಿಜಯೇಂದ್ರ

ಬೆಂಗಳೂರು: ದಶಕದಷ್ಟು ಹಳೆಯದಾದ ಅವೈಜ್ಞಾನಿಕ ಜಾತಿಗಣತಿಯನ್ನು ಕಸದ ಬುಟ್ಟಿಗೆ ಹಾಕಿ, ಹೊಸದಾಗಿ ಗಣತಿ ನಡೆಸಬೇಕು ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಾತಿಗಣತಿಗೆ ಆದೇಶ ಮಾಡಿದ್ದ ಸಿದ್ದರಾಮಯ್ಯ ಅವರೇ ಇಂದು ಮುಖ್ಯಮಂತ್ರಿ ಸ್ಥಾನದಲ್ಲಿದ್ದಾರೆ. ಅವೈಜ್ಞಾನಿಕವಾದ ವರದಿ ತಿರಸ್ಕರಿಸಿ, ಹೊಸದಾಗಿ ಸಮೀಕ್ಷೆ ನಡೆಸಲು ಆದೇಶ ನೀಡಬೇಕು. ಮರುಸಮೀಕ್ಷೆಯ ನಂತರ ಸರ್ವಪಕ್ಷಗಳ ಸಭೆ ಕರೆದು ಚರ್ಚಿಸಬೇಕು ಎಂದರು.

ಸಿದ್ದರಾಮಯ್ಯ ಹಾಗೂ ಅವರ ಸಂಪುಟದ ಸದಸ್ಯರಲ್ಲೇ ಒಮ್ಮತವಿಲ್ಲ. ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಸೇರಿದಂತೆ ಒಬ್ಬೊಬ್ಬರು ಒಂದೊಂದು ಹೇಳಿಕೆ ನೀಡುತ್ತಿದ್ದಾರೆ. ವರದಿಯ ಒಳಿತು-ಕೆಡುಕುಗಳ ಕುರಿತು ಸಂಪುಟ ಸಭೆಯಲ್ಲಿ ಸುದೀರ್ಘ ಚರ್ಚೆ ನಡೆಸಲಿ ಎಂದು ಆಗ್ರಹಿಸಿದರು.

ವೈಫಲ್ಯ ಮುಚ್ಚಿಕೊಳ್ಳಲು ಕೇಂದ್ರದ ವಿರುದ್ಧ ಆರೋಪ: ರಾಜ್ಯ ಸರ್ಕಾರ ತನ್ನ ವೈಫಲ್ಯ ಮುಚ್ಚಿಕೊಳ್ಳಲು ಕೇಂದ್ರ ಸರ್ಕಾರದ ಮೇಲೆ ಆರೋಪ ಮಾಡುತ್ತಿದೆ. ಅಪಪ್ರಚಾರ ನಡೆಸುತ್ತಿದೆ. ಹಿಂದೆ ಯುಪಿಎ ಸರ್ಕಾರದ ಅವಧಿಯಲ್ಲಿ ದೊಡ್ಡ ಹಗರಣಗಳೇ ನಡೆದಿದ್ದವು. ಬೆಲೆ ಏರಿಕೆಗೆ ನಾಂದಿ ಹಾಡಿದ್ದೇ ಯುಪಿಎ. ಯಾವುದೇ ಜನಪರ ಯೋಜನೆಗಳನ್ನು ನೀಡುವಲ್ಲೂ ವಿಫಲವಾಗಿತ್ತು ಎಂದರು.

'ಕಾಂಗ್ರೆಸ್‌ನಿಂದ ಬುದ್ಧಿ ಕಲಿಯಬೇಕಿಲ್ಲ'

ರಾಜ್ಯ ಸರ್ಕಾರದ ಬೆಲೆ ಏರಿಕೆ ನೀತಿ ವಿರುದ್ಧ ಬಿಜೆಪಿ ಹೋರಾಟ ಕುರಿತು ಕಾಂಗ್ರೆಸ್ ನಾಯಕರು ನೀಡುತ್ತಿರುವ ಪ್ರತಿಕ್ರಿಯೆ ಹೋರಾಟದ ಯಶಸ್ಸಿಗೆ ಸಾಕ್ಷಿ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಹೇಳಿದರು.

ಆರ್. ಅಶೋಕ

ಸುದ್ದಿಗಾರರ ಜತೆ ಮಾತನಾಡಿದ ಅವರು, ರಾಜ್ಯದ ಆಡಳಿತ ತುಘಲಕ್ ದರ್ಬಾರ್ ಆಗಿದೆ. ಯಾರೂ ಕೇಳುವವರಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಖಾಲಿ ಕುರ್ಚಿಯಲ್ಲಿದ್ದಾರೆ. ಷರಿಯಾ ಕಾನೂನು ಜಾರಿ ಮಾಡುತ್ತಿದ್ದಾರೆ. ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಬೊಟ್ಟು ಇಟ್ಟುಕೊಂಡು ದೇವಸ್ಥಾನಗಳಲ್ಲಿ ಹೋಮ ಮಾಡಿಸುತ್ತಿದ್ದಾರೆ. ಎಲ್ಲವನ್ನೂ ಮುಸ್ಲಿಮರಿಗೆ ಧಾರೆ ಎರೆಯುತ್ತಿದ್ದಾರೆ ಎಂದು ಟೀಕಿಸಿದರು.

ಹಿಂದೆ ಮನಮೋಹನ್ ಸಿಂಗ್ ಅವಧಿಯಲ್ಲಿ ತಂದ ಕಾನೂನಿನಿಂದಾಗಿ ವಕ್ಫ್ ಭೂಮಿ ಕಬಳಿಕೆಯಾಗಿದೆ. ಕಾಂಗ್ರೆಸ್‌ನವರು 50 ಸಲ ಸಂವಿಧಾನ ಬದಲಿಸಿದ್ದಾರೆ. ಅವರಿಂದ ಬಿಜೆಪಿ ಬುದ್ಧಿ ಕಲಿಯಬೇಕಿಲ್ಲ ಎಂದರು.

'ಜನಜಾಗೃತಿ ಮೂಡಿಸಿದ ಯಾತ್ರೆ'

ರಾಜ್ಯ ಸರ್ಕಾರದ ವಿರುದ್ಧ ಹಮ್ಮಿಕೊಂಡಿದ್ದ ಮೊದಲ ಹಂತದ ಜನಾಕ್ರೋಶ ಯಾತ್ರೆ ಒಂಬತ್ತು ಜಿಲ್ಲೆ ತಲುಪಿದೆ. 1,115 ಕಿ.ಮೀ ಪ್ರವಾಸ ಮುಗಿದಿದೆ. 50 ಸಾವಿರಕ್ಕೂ ಹೆಚ್ಚು ಕಾರ್ಯಕರ್ತರು ಭಾಗವಹಿಸಿದ್ದರು. ಸಾಮಾಜಿಕ ಜಾಲತಾಣದಲ್ಲಿ ಈ ಯಾತ್ರೆಯನ್ನು 3.50 ಕೋಟಿ ಜನರು ವೀಕ್ಷಿಸಿದ್ದಾರೆ. ಕಾಂಗ್ರೆಸ್ ಸರ್ಕಾರದ ಜನವಿರೋಧಿ ನೀತಿಗಳ ವಿರುದ್ಧ ಜಾಗೃತಿ ಮೂಡಿಸುವಲ್ಲಿ ಯಾತ್ರೆ ಯಶಸ್ವಿಯಾಗಿದೆ ಎಂದು ವಿಜಯೇಂದ್ರ ಹೇಳಿದರು.

ನಿಪ್ಪಾಣಿಯಿಂದ 2 ನೇ ಹಂತದ ಹೋರಾಟ: ಎರಡನೇ ಹಂತದ ಜನಾಕ್ರೋಶ ಯಾತ್ರೆ ಬೆಳಗಾವಿ ಜಿಲ್ಲೆ ನಿಪ್ಪಾಣಿಯಿಂದ ಮಂಗಳವಾರ ಆರಂಭವಾಗಲಿದೆ ಎಂದು ವಿಧಾನಪರಿಷತ್ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್.ರವಿಕುಮಾರ್ ತಿಳಿಸಿದರು.

ಅಂಬೇಡ್ಕರ್ ಅವರು ನಿಪ್ಪಾಣಿಗೆ ಆಗಮಿಸಿ 100 ವರ್ಷ ಆಗುತ್ತಿದೆ. ಇದನ್ನು ವಿಜೃಂಭಣೆ ಯಿಂದ ಆಚರಿಸಲಾಗುವುದು. ಇದೇ 16 ರಂದು ಬೆಳಗಾವಿ ನಗರದಲ್ಲಿ ಜನಾಕ್ರೋಶ ಕಾರ್ಯಕ್ರಮ ಇದೆ ಎಂದರು.

ರಥೋತ್ಸವ ಚಿತ್ರದುರ್ಗ ಜಿಲ್ಲೆ, ಹಿರಿಯೂರು ತಾಲ್ಲೂಕಿನ ವದ್ದಿಕೆರೆ ಗ್ರಾಮದಲ್ಲಿ ಸೋಮವಾರ ಸಂಜೆ ನಡೆದ ಕಾಲಭೈರವೇಶ್ವರಸ್ವಾಮಿ ರಥೋತ್ಸವದಲ್ಲಿ ಅಪಾರ ಸಂಖ್ಯೆಯ ಭಕ್ತರು ಪಾಲ್ಗೊಂಡಿದ್ದರು

ಚಿತ್ರ: ಚಂದ್ರಪ್ಪ ವಿ.

ಸರ್ವಜ್ಞ ಪೀಠಕ್ಕೆ ಸುವರ್ಣ ಕವಚ

ಪ್ರಜಾವಾಣಿ ವಾರ್ತೆ

ಶ್ರೀಕೃಷ್ಣಮಠದ ಸರ್ವಜ್ಞ ಪೀಠಕ್ಕೆ ಸುವರ್ಣ ಕವಚ ತೊಡಿಸಿ ಪೂಜಿಸಲಾಯಿತು

ಉಡುಪಿ: ಶ್ರೀಕೃಷ್ಣಮಠದ ಸರ್ವಜ್ಞ ಪೀಠಕ್ಕೆ ಸೌರ ಯುಗಾದಿ ಪರ್ವದಿನವಾದ ಸೋಮವಾರ ಸುವರ್ಣ ಕವಚ ತೊಡಿಸಲಾಯಿತು.

ಅದಮಾರು ಮಠದ ಹಿರಿಯ ಯತಿ ವಿಶ್ವಪ್ರಿಯತೀರ್ಥ ಶ್ರೀಪಾದರು ಶ್ರೀಕೃಷ್ಣ- ಮುಖ್ಯಪ್ರಾಣ ದೇವರ ಉತ್ಸವ ಮೂರ್ತಿಯನ್ನು ಸರ್ವಜ್ಞ ಪೀಠದಲ್ಲಿಟ್ಟು ಪೂಜಿಸಿದರು.

ಪರ್ಯಾಯ ಮಠಾಧೀಶ ಸುಗುಣೇಂದ್ರತೀರ್ಥ ಶ್ರೀಪಾದರು, ಶ್ರೀಮದಾನಂದತೀರ್ಥ ಶ್ರೀಪಾದರು ಕುಳಿತಿರುವ ಸರ್ವಜ್ಞ ಪೀಠಕ್ಕೆ ಸುವರ್ಣ ಕವಚ ತೊಡಿಸಿ ಶ್ರೀಕೃಷ್ಣನಿಗೆ ಸಮರ್ಪಿಸುವ ಮೂಲಕ ತಮ್ಮ ಸನ್ಯಾಸಾಶ್ರಮದ ಸುವರ್ಣ ಮಹೋತ್ಸವ ಆಚರಿಸಿದರು.

ಪುತ್ತಿಗೆ ಕಿರಿಯ ಸುಶ್ರೀಂದ್ರತೀರ್ಥ ಶ್ರೀಪಾದರು, ಭಂಡಾರಕೇರಿ ಮಠಾಧೀಶ ವಿದ್ಯೇಶತೀರ್ಥ ಶ್ರೀಪಾದರು ಸಾನ್ನಿಧ್ಯ ವಹಿಸಿದ್ದರು. ಶ್ರೀಮಠದ ದಿವಾನ ನಾಗರಾಜ ಆಚಾರ್ಯ, ಕಾರ್ಯದರ್ಶಿ ಪ್ರಸನ್ನಾಚಾರ್ಯ ಉಪಸ್ಥಿತರಿದ್ದರು.

ನಾಳೆಯಿಂದ ಎರಡು ದಿನ ಸಿಇಟಿ

ಒಂದನೇ ಪುಟದಿಂದ...

ಮುಖಚಹರೆ ಪರಿಶೀಲನೆ: ಅಭ್ಯರ್ಥಿಯ ಮುಖಚಹರೆ ಮತ್ತು ಪ್ರವೇಶ ಪತ್ರದಲ್ಲಿನ ಕ್ಯೂಆರ್ ಕೋಡ್ ಮೂಲಕ ಅಭ್ಯರ್ಥಿಯ ನೈಜತೆ ಪರಿಶೀಲನೆ ಮಾಡಲಾಗುತ್ತದೆ. ಸೀಟು ಹಂಚಿಕೆಯಾಗಿ ಕಾಲೇಜುಗಳಿಗೆ ಪ್ರವೇಶ ಪಡೆಯುವಾಗಲೂ ಅಭ್ಯರ್ಥಿಯ ಭಾವಚಿತ್ರವನ್ನು ಹೋಲಿಕೆ ಮಾಡಲಾಗುತ್ತದೆ. ನಕಲಿ ಅಭ್ಯರ್ಥಿಗಳಿಗೆ ಕಡಿವಾಣ ಹಾಕಲಾಗಿದೆ ಎಂದು ಪ್ರಸನ್ನ ಹೇಳಿದ್ದಾರೆ.

ಒಂದೂವರೆ ಗಂಟೆ ಮೊದಲು ಹಾಜರ್: ಅಭ್ಯರ್ಥಿಗಳನ್ನು ಪೊಲೀಸರು ತಪಾಸಣೆ ನಡೆಸಿದ ನಂತರವೇ ಪರೀಕ್ಷಾ ಕೇಂದ್ರದ ಒಳಗೆ ಬಿಡಲಾಗುತ್ತದೆ. ಹಾಗಾಗಿ, ಕನಿಷ್ಠ ಒಂದೂವರೆ ಗಂಟೆ ಮುಂಚಿತವಾಗಿ ಪರೀಕ್ಷಾ ಕೇಂದ್ರಕ್ಕೆ ಅಭ್ಯರ್ಥಿಗಳು ಬರಬೇಕು ಎಂದು ಸಲಹೆ ನೀಡಿದ್ದಾರೆ.

ಇಂದು ಕನ್ನಡ ಪರೀಕ್ಷೆ

ಹೊರನಾಡು ಮತ್ತು ಗಡಿನಾಡು ಕನ್ನಡಿಗರಿಗೆ ಏ.15ರಂದು ಕನ್ನಡ ಭಾಷಾ ಪರೀಕ್ಷೆ ನಡೆಯಲಿದೆ.

2,537 ವಿದ್ಯಾರ್ಥಿಗಳು ಹೆಸರು ನೋಂದಾಯಿಸಿಕೊಂಡಿದ್ದು, ಬೆಂಗಳೂರು, ಮಂಗಳೂರು, ವಿಜಯಪುರ ಮತ್ತು ಬೆಳಗಾವಿ ನಗರಗಳ ಐದು ಕೇಂದ್ರಗಳಲ್ಲಿ ನಡೆಯಲಿದೆ.

ಯಾವುದು ನಿಷೇಧ?

- ತುಂಬು ತೋಳಿನ ಬಟ್ಟೆ
- ಹೆಚ್ಚು ಜೇಬುಗಳಿರುವ ಪ್ಯಾಂಟ್
- ಕುರ್ತಾ, ಪೈಜಾಮ, ಜೀನ್ಸ್ ಪ್ಯಾಂಟ್
- ಶೂ
- ಮೊಬೈಲ್, ಪೆನ್ ಡ್ರೈವ್, ಇಯರ್ ಫೋನ್,
- ಮೈಕ್ರೋ ಫೋನ್ ಇತ್ಯಾದಿ ಎಲೆಕ್ಟ್ರಾನಿಕ್ ಉಪಕರಣ

ಇವು ಕಡ್ಡಾಯ

- ಪ್ರವೇಶ ಪತ್ರ
- ಭಾವಚಿತ್ರ ಸಹಿತ ಗುರುತಿನ ಪತ್ರ
- ನೀಲಿ/ಕಪ್ಪು ಬಾಲ್ ಪೆನ್

ಲಾರಿ ಮುಷ್ಕರ ಕೈಬಿಡಲು ಸಾರಿಗೆ ಸಚಿವ ಮನವಿ

ಪ್ರಜಾವಾಣಿ ವಾರ್ತೆ

ರಾಮಲಿಂಗಾರೆಡ್ಡಿ

ಬೆಂಗಳೂರು: ಲಾರಿ ಮಾಲೀಕರ ಸಂಘದ ಪದಾಧಿಕಾರಿಗಳು, ಮುಖಂಡರೊಂದಿಗೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಮಾತುಕತೆ ನಡೆಸಿದ್ದು, ಮುಷ್ಕರ ಕೈಬಿಡುವಂತೆ ಮನವಿ ಮಾಡಿದ್ದಾರೆ.

ಮುಷ್ಕರಕ್ಕೆ ಕರೆ ನೀಡಿರುವ ರಾಜ್ಯ ಲಾರಿ ಮಾಲೀಕರ ಹಾಗೂ ಏಜೆಂಟರ ಸಂಘದ ಪದಾಧಿಕಾರಿಗಳು ಮತ್ತು ಮುಖಂಡರೊಂದಿಗೆ ಕರೆ ಮಾಡಿ ಅವರು ಮಾತುಕತೆ ನಡೆಸಿದರು.

ಕೇಂದ್ರ ಸರ್ಕಾರ ಪೆಟ್ರೋಲ್, ಡೀಸೆಲ್ ಬೆಲೆಯನ್ನು ಕಳೆದ ಹತ್ತು ವರ್ಷಗಳಲ್ಲಿ ಹಲವು ಬಾರಿ ಹೆಚ್ಚಳ ಮಾಡಿದೆ. ಕಚ್ಚಾತೈಲದ ಬೆಲೆ ಕಡಿಮೆಯಾಗಿದ್ದರೂ ದರ ಹೆಚ್ಚಿಸಿದ ಕೇಂದ್ರ ಸರ್ಕಾರದ ವಿರುದ್ಧ ಒಮ್ಮೆಯೂ ಮುಷ್ಕರ ಮಾಡಿಲ್ಲ. ಈಗ ರಾಜ್ಯ ಸರ್ಕಾರ ₹2 ಹೆಚ್ಚಿಸಿದೆ ಎಂದು ಕರೆ ನೀಡಿರುವುದರ ಉದ್ದೇಶ ಏನು ಎಂದು ಪದಾಧಿಕಾರಿಗಳನ್ನು ಸಚಿವರು ಪ್ರಶ್ನಿಸಿದರು.

ಲಾರಿ ಮುಷ್ಕರ ಆರಂಭ: ರಾಜ್ಯ ಸರ್ಕಾರ ಹೆಚ್ಚಳ ಮಾಡಿರುವ ಡೀಸೆಲ್ ದರವನ್ನು ಇಳಿಸುವಂತೆ ಆಗ್ರಹಿಸಿ ರಾಜ್ಯ ಲಾರಿ ಮಾಲೀಕರ ಹಾಗೂ ಏಜೆಂಟರ ಸಂಘದ ನೇತೃತ್ವದಲ್ಲಿ ಸೋಮವಾರ ರಾತ್ರಿ ಅನಿರ್ದಿಷ್ಟಾವಧಿ ಮುಷ್ಕರ ಆರಂಭಗೊಂಡಿದೆ.

ನೆರೆ ರಾಜ್ಯಗಳಿಂದ ಯಾವುದೇ ಸರಕು, ಸಾಗಣೆ ಲಾರಿಗಳು ಬರುತ್ತಿಲ್ಲ. ರಾಜ್ಯದಲ್ಲಿ ಜಲ್ಲಿ, ಮರಳು, ಕಲ್ಲು, ಸಿಮೆಂಟ್ ಸಾಗಾಟವನ್ನು ರಾತ್ರಿಯೇ ಸ್ಥಗಿತಗೊಳಿಸಲಾಗಿದೆ. ಗ್ಯಾಸ್ ಟ್ಯಾಂಕ್ ಮಾಲೀಕರ ಸಂಘ ಸಹಿತ 69 ಸಂಘಟನೆಗಳು ಮುಷ್ಕರಕ್ಕೆ ಬೆಂಬಲ ನೀಡಿವೆ. ಲಾರಿಗಳನ್ನು ಅಲ್ಲಲ್ಲಿ ಪಾರ್ಕಿಂಗ್ ಮಾಡಲಾಗಿದೆ ಎಂದು ಸಂಘದ ಅಧ್ಯಕ್ಷ ಜಿ.ಆರ್. ಷಣ್ಮುಖಪ್ಪ ತಿಳಿಸಿದ್ದಾರೆ.

ಗುರುತಿಸದ 398 ಜಾತಿಗಳು ಪತ್ತೆ

ಒಂದನೇ ಪುಟದಿಂದ...

ಆ ಪಟ್ಟಿಯ ಪ್ರಕಾರ, ಪ್ರವರ್ಗ 1ಎಯಲ್ಲಿ 147, ಪ್ರವರ್ಗ 1ಬಿಯಲ್ಲಿ 386, ಪ್ರವರ್ಗ 2ಎಯಲ್ಲಿ 363, ಪ್ರವರ್ಗ 2ಬಿಯಲ್ಲಿ ಮುಸ್ಲಿಂ ಮತ್ತು ಉಪಜಾತಿಗಳು, ಪ್ರವರ್ಗ 3ಎಯಲ್ಲಿ 85, 3ಬಿಯಲ್ಲಿ 109 ಜಾತಿಗಳಿವೆ. ಈ ಎಲ್ಲ ಪ್ರವರ್ಗಗಳಲ್ಲಿ 200ಕ್ಕಿಂತ ಕಡಿಮೆ ಜನಸಂಖ್ಯೆ ಇರುವ ಒಟ್ಟು ಜಾತಿಗಳ ಸಂಖ್ಯೆ 47.

ಪ್ರವರ್ಗ 1ಎಯಲ್ಲಿ 200ಕ್ಕಿಂತ ಕಡಿಮೆ ಜನಸಂಖ್ಯೆ ಇರುವ ಮೂರು ಜಾತಿಗಳಿದ್ದರೆ, ಪ್ರವರ್ಗ 1ಬಿಯಲ್ಲಿ ಕೇವಲ ಐದು ಜನರನ್ನು ಹೊಂದಿರುವ 'ಮರುತ್ತುವರ್', 11 ಜನರಿರುವ 'ರಾವಲ' ಎಂಬ ಜಾತಿಯೂ ಸೇರಿದಂತೆ 200ಕ್ಕಿಂತ ಕಡಿಮೆ ಜನಸಂಖ್ಯೆ ಇರುವ 16 ಜಾತಿಗಳಿವೆ. ಪ್ರವರ್ಗ 2ಎಯಲ್ಲಿ ತಲಾ ನಾಲ್ಕು ಜನರಿರುವ 'ಶಿಲ್ಪಿ', 'ಒಸ್ತಾ' ಮತ್ತು 'ಪಟ್ಟು ನಾಲ್ಕರ್', ಆರು ಜನರಿರುವ 'ನಂಬೀಶನ್', ಏಳು ಜನರಿರುವ 'ಕೊಟ್ಟಿಯಾ' ಸೇರಿ 200ಕ್ಕೂ ಕಡಿಮೆ ಜನರಿರುವ 17 ಜಾತಿಗಳಿವೆ. ಪ್ರವರ್ಗ 3 ಎಯಲ್ಲಿ 200ಕ್ಕೂ ಕಡಿಮೆ ಜನಸಂಖ್ಯೆ ಇರುವ ಮೂರು ಜಾತಿಗಳಿದ್ದರೆ, ಪ್ರವರ್ಗ 3ಬಿಯಲ್ಲಿ ಲಿಂಗಾಯತ ಉಪ ಗುಂಪುಗಳ ಅಡಿಯಲ್ಲಿ ಬರುವ ಕೇವಲ ಮೂರು ಜನರಿರುವ 'ಲಿಂಗದಾರ್', ಒಂಬತ್ತು ಜನರಿರುವ 'ವೀರಶೈವ ಮಲ್ಲಾವರ', 11 ಜನರಿರುವ 'ವೀರಶಿವ ಜಂಗಮ' ಜಾತಿ ಸೇರಿ 200ಕ್ಕೂ ಕಡಿಮೆ ಜನಸಂಖ್ಯೆ ಇರುವ ಎಂಟು ಜಾತಿಗಳಿವೆ ಎಂದು ಆಯೋಗ ತನ್ನ ವರದಿಯಲ್ಲಿ ತಿಳಿಸಿದೆ.

ರಾಜ್ಯದಾದ್ಯಂತ 1,35,35,773 ಮನೆಗಳಲ್ಲಿ ಸಮೀಕ್ಷೆ ನಡೆಸಲಾಗಿತ್ತು. ಈ ವೇಳೆ 180 ಪರಿಶಿಷ್ಟ ಜಾತಿಗಳು ಮತ್ತು 105 ಪರಿಶಿಷ್ಟ ಪಂಗಡಗಳು ಸೇರಿದಂತೆ 1,351 ಜಾತಿಗಳು, ಸಮುದಾಯಗಳು ಹಾಗೂ ಈವರೆಗೂ ಗುರುತಿಸದೇ ಇರುವ ಜಾತಿಗಳು, ತಮ್ಮ ಜಾತಿ ಯಾವುದೆಂದು ಗೊತ್ತಿಲ್ಲದವರು, ಯಾವುದೇ ಜಾತಿಗೆ ಸೇರಿದವರಲ್ಲ ಎಂದವರು ಮತ್ತು ತಮ್ಮ ಜಾತಿ ಬಹಿರಂಗಪಡಿಸಲು ನಿರಾಕರಿಸಿದವರು ಸೇರಿ ಒಟ್ಟು 5,98,14,942 ಜನರಿಂದ ದತ್ತಾಂಶಗಳನ್ನು ಸಂಗ್ರಹಿಸಲಾಗಿದೆ ಎಂದು ಆಯೋಗ ಹೇಳಿದೆ.

ಮನೆ ಮನೆ ಸಮೀಕ್ಷೆಯ ಸಂದರ್ಭದಲ್ಲಿ ಪ್ರತಿಯೊಬ್ಬ ನಾಗರಿಕರ ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಗಳ ಮಾಹಿತಿಯನ್ನು ಸಂಗ್ರಹಿಸಲು ವಿವಿಧ 54 ಮಾನದಂಡಗಳು, ಪ್ರಶ್ನಾವಳಿಗಳನ್ನು ಒಳಗೊಂಡಂತೆ ಜನಸಂಖ್ಯೆ, ಶೈಕ್ಷಣಿಕ, ಆರ್ಥಿಕ, ಉದ್ಯೋಗ, ಸಾಂಪ್ರದಾಯಿಕ ಉದ್ಯೋಗ, ಆದಾಯ, ಸಾಮಾಜಿಕ ಸ್ಥಾನಮಾನ ಮತ್ತು ಸ್ವತ್ತು/ಆಸ್ತಿ ಮಾಲೀಕತ್ವ ಮುಂತಾದ ಮಾಹಿತಿಗಳನ್ನು ಸಂಗ್ರಹಿಸಲಾಗಿದೆ. ಪ್ರತಿಯೊಂದು ಜಾತಿಯ ಹೆಸರು, ಆ ಜಾತಿಯಲ್ಲಿ ಗ್ರಾಮೀಣ ಮತ್ತು ನಗರ ಭಾಗದಲ್ಲಿರುವ ಕುಟುಂಬಗಳು, ಗ್ರಾಮೀಣ ಮತ್ತು ನಗರ ಭಾಗದಲ್ಲಿರುವ ಜನಸಂಖ್ಯೆ, ಪುರುಷ ಮತ್ತು ಮಹಿಳೆಯರು, ಆ ಜಾತಿಯಲ್ಲಿರುವ ಲಿಂಗತ್ವ ಅಲ್ಪಸಂಖ್ಯಾತರು ಹೀಗೆ ಪ್ರತ್ಯೇಕವಾಗಿ ಮಾಹಿತಿ ಸಂಗ್ರಹಿಸಿ ಪಟ್ಟಿ ಮಾಡಲಾಗಿದೆ ಎಂದೂ ಅಧ್ಯಯನ ವರದಿಯಲ್ಲಿ ಆಯೋಗ ವಿವರಿಸಿದೆ.

ನನ್ನನ್ನು ಮುಗಿಸಲು ಯಾರಿಗೂ ಆಗಲ್ಲ: ಯತ್ನಾಳ

ಪ್ರಜಾವಾಣಿ ವಾರ್ತೆ

ವಿಜಯಪುರ: 'ನನ್ನನ್ನು ಮುಗಿಸಲು ಯಾರಿಗೂ ಆಗಲ್ಲ. ಕರ್ನಾಟಕದ ಹಿಂದೂಗಳು ನನ್ನೊಂದಿಗೆ ಇದ್ದಾರೆ. ನನ್ನಲ್ಲಿ ಕಿತ್ತೂರು ರಾಣಿ ಚನ್ನಮ್ಮ, ಸಂಗೊಳ್ಳಿ ರಾಯಣ್ಣ, ಅಂಬೇಡ್ಕರ್ ರಕ್ತ ಹರಿಯುತ್ತಿದೆ. ನನ್ನನ್ನು ಮುಗಿಸಲು ಯತ್ನಿಸಿದರೆ, ಕರ್ನಾಟಕದಲ್ಲಿ ಬೆಂಕಿ ಹೊತ್ತಿಕೊಳ್ಳುತ್ತದೆ' ಎಂದು ಬಿಜೆಪಿ ಉಚ್ಚಾಟಿತ ಶಾಸಕ ಬಸನಗೌಡ ಪಾಟೀಲ ಯತ್ನಾಳ ಎಚ್ಚರಿಕೆ ನೀಡಿದರು.

'ಏಪ್ರಿಲ್ 15 ಯತ್ನಾಳಗೆ ಅಂತಿಮ ದಿನ' ಎಂಬ ಕಿಡಿಗೇಡಿಗಳ ಆಡಿಯೊ ಕುರಿತು ಸೋಮವಾರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, 'ಆಡಿಯೊ ಬಗ್ಗೆ ಪೊಲೀಸರು ತನಿಖೆ ನಡೆಸಿದ್ದು, ಇದರ ಹಿಂದೆ ಯಾರಿದ್ದಾರೆ ಎಂಬುದು ಶೀಘ್ರ ಬಯಲಾಗಲಿದೆ. ರಾಜ್ಯ ಸರ್ಕಾರಕ್ಕೆ ನಿಷ್ಪಕ್ಷಪಾತವಾಗಿ ತನಿಖೆ ಮಾಡಲು ಆಗದಿದ್ದರೆ, ಎನ್‌ಐಎಗೆ ಕೊಡಲಿ' ಎಂದರು.

ಮಾತಿನ ವೇಗದಲ್ಲಿ ಆಗಿದೆ: 'ಹುಬ್ಬಳ್ಳಿಯಲ್ಲಿ ನಡೆದ ರಾಮನವಮಿ ಕಾರ್ಯಕ್ರಮದಲ್ಲಿ ಪ್ರವಾದಿ ಮಹಮ್ಮದ್ ಪೈಗಂಬರ್ ಹೆಸರನ್ನು ನಾನು ಎಲ್ಲೂ ತೆಗೆದುಕೊಂಡಿಲ್ಲ. ಮಹಮ್ಮದ್ ಅಲಿ ಜಿನ್ನಾ ಎನ್ನಲು ಪ್ರಯತ್ನಿಸಿ, ಮಾತಿನ ವೇಗದಲ್ಲಿ ಮಹಮ್ಮದ್ ಪೈಗಂಬರ್ ಎಂದು ಹೇಳಿದೆ. ಇಸ್ಲಾಂ ಧರ್ಮ ಸಂಸ್ಥಾಪಕರ ಹೆಸರನ್ನು ತೆಗೆದುಕೊಂಡಿಲ್ಲ' ಎಂದು ಅವರು ಸ್ಪಷ್ಟಪಡಿಸಿದರು.

'ಕಾಂಗ್ರೆಸ್‌ನವರನ್ನು ಬಿಟ್ಟರೇ ಬೇರೆಯವರು ಈ ಬಗ್ಗೆ ಮಾತನಾಡಿಲ್ಲ, ವಿಜಯಪುರದಲ್ಲಿ ಗೂಂಡಾಗಿರಿ, ಹಫ್ತಾ ವಸೂಲಿ ಮಾಡಲು ಆಗದೇ ಹತಾಶರಾಗಿರುವ ಕಾಂಗ್ರೆಸ್‌ನವರು ಪೈಗಂಬರ್ ನೆಪ ಮಾಡಿಕೊಂಡು, ನನ್ನ ವಿರುದ್ಧ ಮಾತನಾಡುತ್ತಾರೆ' ಎಂದು ಆರೋಪಿಸಿದರು.

'ನಮ್ಮ ಧರ್ಮದಲ್ಲಿ ಮತ್ತೊಂದು ಧರ್ಮ ಹೀಯಾಳಿಸುವ ಸಂಸ್ಕೃತಿ ಇಲ್ಲ. ನಮ್ಮ ಹಿಂದೂ ದೇವರಾದ ರಾಮ, ಕೃಷ್ಣ, ಸರಸ್ವತಿಯನ್ನು ಅವಮಾನಿಸುತ್ತಿರುವವರು ಯಾರು? ಅವರ ವಿರುದ್ಧ ಏಕೆ ಕ್ರಮ ಆಗುತ್ತಿಲ್ಲ?' ಎಂದರು.

ನಟ ಬ್ಯಾಂಕ್ ಜನಾರ್ದನ್ ನಿಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಿಡ್ನಿ ವೈಫಲ್ಯದಿಂದ ನಟ ಬ್ಯಾಂಕ್ ಜನಾರ್ದನ್ (76) ಸೋಮವಾರ ಬೆಳಗಿನ ಜಾವ ನಗರದ ಮಣಿಪಾಲ್ ವಿಕ್ರಮ್ ಆಸ್ಪತ್ರೆಯಲ್ಲಿ ನಿಧನರಾದರು. ಪೀಣ್ಯ ಚಿತಾಗಾರದಲ್ಲಿ ಅಂತ್ಯಕ್ರಿಯೆ ನಡೆಯಿತು. ಮೃತರಿಗೆ ನಾಲ್ವರು ಮಕ್ಕಳು ಇದ್ದಾರೆ.

ಆಸ್ಪತ್ರೆಯಿಂದ ಪಾರ್ಥಿವ ಶರೀರವನ್ನು ಮನೆಗೆ ತಂದು ಅಂತಿಮ ದರ್ಶನಕ್ಕೆ ಇಡಲಾಗಿತ್ತು. ಚಿತ್ರರಂಗದ ಗಣ್ಯರು ಪಾರ್ಥಿವ ಶರೀರಕ್ಕೆ ಅಂತಿಮ ನಮನ ಸಲ್ಲಿಸಿದರು. ರವೀಂದ್ರ ಕಲಾಕ್ಷೇತ್ರದಲ್ಲೂ ಕೆಲಕಾಲ ಸಾರ್ವಜನಿಕರ ದರ್ಶನಕ್ಕೆ ಪಾರ್ಥಿವ ಶರೀರವನ್ನು ಇಡಲಾಗಿತ್ತು. ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆಯ ಅವರು ಜಯಲಕ್ಷ್ಮಿ ಬ್ಯಾಂಕ್‌ನಲ್ಲಿ ತಮ್ಮ ವೃತ್ತಿಜೀವನ ಆರಂಭಿಸಿದ್ದರು. ವೃತ್ತಿಯ ಜೊತೆ ಪ್ರವೃತ್ತಿಯಾಗಿ ರಂಗಭೂಮಿಯ ನಂಟೂ ಹೊಂದಿದ್ದರು.



ವಿಷ್ಣುವರ್ಧನ್ ನಟನೆಯ, ಜೋ ಸೈಮನ್ ನಿರ್ದೇಶನದ 'ಊರಿಗೆ ಉಪಕಾರಿ' ಸಿನಿಮಾ ಮೂಲಕ ಚಿತ್ರರಂಗದ ಜೊತೆ ನಂಟು ಬೆಳೆಸಿಕೊಂಡರು. ಕಾಶಿನಾಥ್ ಅವರ 'ಅಜಗಜಾಂತರ' ಸಿನಿಮಾ ಅವರಿಗೆ ದೊಡ್ಡ ತಿರುವು ನೀಡಿತು. 'ತರ್ಲೆನನ್ಮಗ' ಸಿನಿಮಾ ಬಳಿಕ ನಟ ಜಗ್ಗೇಶ್ ಹಾಗೂ ಜನಾರ್ದನ್ ಕಾಂಬಿನೇಷನ್‌ನಲ್ಲಿ ಹಲವು ಸಿನಿಮಾಗಳು ಸಾಲು ಸಾಲು ತೆರೆಕಂಡವು. ಉಪೇಂದ್ರ ನಿರ್ದೇಶನದ 'ಶ್' ಸಿನಿಮಾದಲ್ಲಿ ಅವರು ನಿರ್ವಹಿಸಿದ ಸಬ್ ಇನ್‌ಸ್ಪೆಕ್ಟರ್ ಪಾತ್ರ ಜನರ ಮನಸ್ಸಿನಲ್ಲಿ ಇನ್ನೂ ಅಚ್ಚೊತ್ತಿದೆ. 'ಕೌರವ', 'ತಾಯವ್ವ', 'ಬೊಂಬಾಟ್ ಹುಡ್ಗ', 'ಸೂಪರ್ ನನ್ ಮಗ', 'ಆಟ ಬೊಂಬಾಟ', 'ಗೆಲುವಿನ ಸರದಾರ', 'ಅಂಗೈಯಲ್ಲಿ ಅಪ್ಸರೆ' ಮುಂತಾದ ಕನ್ನಡ ಸಿನಿಮಾಗಳು ಸೇರಿಂತೆ ತೆಲುಗು, ತಮಿಳು ಹಾಗೂ ತುಳು ಚಿತ್ರಗಳಲ್ಲೂ ಬಣ್ಣಹಚ್ಚಿದ್ದಾರೆ.

ಅವರು ನಟಿಸಿರುವ ಸಿನಿಮಾಗಳ ಸಂಖ್ಯೆ 800ಕ್ಕೂ ಅಧಿಕ. ರಾಜ್‌ಕುಮಾರ್, ವಿಷ್ಣುವರ್ಧನ್, ಅನಂತನಾಗ್, ದೇವರಾಜ್ ಸೇರಿದಂತೆ ಪ್ರಮುಖ ನಟರ ಜೊತೆ ತೆರೆ ಹಂಚಿಕೊಂಡಿದ್ದಾರೆ.

ಅದ್ಭುತವಾದ ಕಲಾವಿದ, ಸರಳ ಜೀವಿ. ನನ್ನ ಜೀವನದ ಮೊದಲ ಹೆಜ್ಜೆಯಲ್ಲಿ ಜೊತೆಗಿದ್ದರು. ಅವರಿದ್ದರೆ ಚಿತ್ರೀಕರಣದ ವಾತಾವರಣವೇ ಭಿನ್ನವಾಗಿರುತ್ತಿತ್ತು. 'ತರ್ಲೆ ನನ್ಮಗ', 'ಶ್' ಚಿತ್ರಗಳಲ್ಲಿ ತಮ್ಮ ಅದ್ಭುತ ಅಭಿನಯದಿಂದ ನನ್ನ ಸಿನಿ ಪಯಣದಲ್ಲಿ ಯಶಸ್ವಿ ಹೆಜ್ಜೆ ಇಡಲು ಕಾರಣಕರ್ತರಾದವರು

ಉಪೇಂದ್ರ, ನಟ

ರಾಷ್ಟ್ರೀಯ ಖನಿಜ ನೀತಿಯನ್ನೇ ಬಳಸಿಕೊಳ್ಳುವ ಪ್ರಯತ್ನ

ಸಂಡೂರು ಅರಣ್ಯ ರಕ್ಷಣೆಗೆ 'ನೋ ಗೋ ಝೋನ್'

• ಹರಿಶಂಕರ್ ಆರ್.

ಬಳ್ಳಾರಿ: ಪಶ್ಚಿಮ ಘಟ್ಟದಂಥ ಪರಿಸರವನ್ನೇ ಹೋಲುವ ಬಳ್ಳಾರಿ ಜಿಲ್ಲೆಯ ಸಂಡೂರು ತಾಲ್ಲೂಕಿನ ಅರಣ್ಯವನ್ನು ಗಣಿಗಾರಿಕೆಯಿಂದ ರಕ್ಷಿಸಲು 'ರಾಷ್ಟ್ರೀಯ ಖನಿಜ ನೀತಿ-19' ಅನ್ನು ಅಸ್ತ್ರವಾಗಿ ಬಳಸಿಕೊಳ್ಳಲು ಅರಣ್ಯ ಇಲಾಖೆ ಮತ್ತು ಸಂಘ ಸಂಸ್ಥೆಗಳು ಚಿಂತನೆ ನಡೆಸಿವೆ.

ಇದರ ಪ್ರಕಾರ, ಈಗಾಗಲೇ ಗಣಿಗಾರಿಕೆ ನಡೆದಿರುವ, ನಡೆಯುತ್ತಿರುವ ಪ್ರದೇಶ ಹೊರತುಪಡಿಸಿ, ಉಳಿದಿರುವ ಅರಣ್ಯವನ್ನು 'ನೋ ಗೋ ಝೋನ್ (ನಿರ್ಬಂಧಿತ ಪ್ರದೇಶ)' ಎಂದು ಘೋಷಿಸಲು ಪ್ರಯತ್ನ ಆರಂಭವಾಗಿವೆ.

ಜಾರ್ಖಂಡ್‌ನ ಕಲ್ಲಿದ್ದಲಿನ ಗಣಿಗಾರಿಕೆಯಿಂದ ಅರಣ್ಯ ಪ್ರದೇಶವನ್ನು ರಕ್ಷಿಕೊಳ್ಳಲು ಈಗಾಗಲೇ ಇಂಥ 'ನೋ ಗೋ ಝೋನ್'ಗಳನ್ನು ಗುರುತಿಸಲಾಗಿದೆ. ಅದೇ ಮಾದರಿಯನ್ನು ಇಲ್ಲಿಯೂ ಬಳಸಿಕೊಳ್ಳುವುದು ಪರಿಸರ ಪ್ರೇಮಿಗಳು, ಹೋರಾಟಗಾರರು ಮತ್ತು ಅರಣ್ಯ ಇಲಾಖೆಯ ಉದ್ದೇಶವಾಗಿದೆ.

ಸಂಡೂರಿನ ಅರಣ್ಯ ಒಟ್ಟಾರೆ 30 ಸಾವಿರ ಹೆಕ್ಟೇರ್ (74,131 ಎಕರೆ) ಪ್ರದೇಶವನ್ನು ವ್ಯಾಪಿಸಿದೆ. ಇಲ್ಲಿಯೇ ದೇಶದ ಅತ್ಯಂತ ಉತ್ಕೃಷ್ಟ ಕಬ್ಬಿಣ ಮತ್ತು ಮ್ಯಾಂಗನೀಸ್ ಅದಿರು ನಿಕ್ಷೇಪಗೊಂಡಿದೆ. ಇಲ್ಲಿ ಈಗಾಗಲೇ 4,200 ಹೆಕ್ಟೇರ್ (10,378 ಎಕರೆ) ಪ್ರದೇಶದಲ್ಲಿ ಸಕ್ರಿಯ ಗಣಿಗಳಿವೆ. 2,000 ಹೆಕ್ಟೇರ್ (4,942 ಎಕರೆ) ಅರಣ್ಯ ಪ್ರದೇಶ ಈಗಾಗಲೇ ಗಣಿಗಾರಿಕೆ ನಡೆದು 'ಬ್ರೋಕನ್ ಲ್ಯಾಂಡ್' ಆಗಿ ಪರಿವರ್ತನೆಗೊಂಡಿದೆ. ಅಂದರೆ ಒಟ್ಟಾರೆ ಅರಣ್ಯದ ಶೇ 20ರಷ್ಟು ಈಗಾಗಲೇ ಗಣಿಗಾರಿಕೆಯಿಂದ ನಾಶವಾಗಿದೆ.

ಇತ್ತೀಚೆಗೆ, ಸಂಡೂರಿನ ಅರಣ್ಯ ಪ್ರದೇಶದ ದಕ್ಷಿಣ ವಲಯದಲ್ಲಿರುವ ದಟ್ಟಾರಣ್ಯದ ಒಟ್ಟು 88 ಹೆಕ್ಟೇರ್ (217.45 ಎಕರೆ) ವ್ಯಾಪ್ತಿಯ 'ಕುಮಾರಸ್ವಾಮಿ ಐರನ್ ಓರ್' ಹೆಸರಿನ ಅದಿರು ಬ್ಲಾಕ್ ಅನ್ನು ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಹರಾಜು ಹಾಕಿತ್ತು. ಈ ಬೆಳವಣಿಗೆ ಬಳಿಕ 'ನೋ ಗೋ ಝೋನ್' ಚರ್ಚೆ ತೀವ್ರತೆ ಪಡೆದುಕೊಂಡಿದೆ.

ಇಲಾಖೆ ಸಮ್ಮತಿ ಸಾಕು: ಸಂಡೂರಿನ ಅರಣ್ಯವನ್ನು ಅಭಯಾರಣ್ಯವೆಂದು ಘೋಷಿಸುವ ಚಿಂತನೆ ಮೊದಲಿಗೆ ಇತ್ತು. ಆದರೆ, ಇದು ಸರ್ಕಾರದ ಹಂತದ ತೀರ್ಮಾನವಾದ ಕಾರಣ ಎಲ್ಲರನ್ನೂ ಒಮ್ಮತಕ್ಕೆ ತರುವುದು ಕಷ್ಟ. ಆದರೆ, 'ನೋ ಗೋ ಝೋನ್' ಘೋಷಣೆಯು ಇಲಾಖಾ ಹಂತದ ತೀರ್ಮಾನವಾಗಿದ್ದು, ಸಚಿವರ ನಿರ್ಧಾರವೇ ಅಂತಿಮವಾಗಲಿದೆ ಎಂದು ಮೂಲಗಳು ಹೇಳಿವೆ.

ಏನಿದೆ ಖನಿಜ ನೀತಿಯಲ್ಲಿ?

ಕೇಂದ್ರ ಸರ್ಕಾರ 2019ರಲ್ಲಿ ರೂಪಿಸಿರುವ ರಾಷ್ಟ್ರೀಯ ಖನಿಜ ನೀತಿಯ 6.10ನೇ ಅಧ್ಯಾಯವು ಸುಸ್ಥಿರ ಗಣಿಗಾರಿಕೆ ಮತ್ತು ಅದಕ್ಕಾಗಿ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಸ್ಪಷ್ಟವಾಗಿ ಹೇಳಿದೆ.

ಪರಿಸರ ಸೂಕ್ಷ್ಮ ಎಂದು ಗುರುತಿಸಲಾದ, ಜೈವಿಕವಾಗಿ ಶ್ರೀಮಂತವಾಗಿರುವ ಪ್ರದೇಶದಲ್ಲಿ ಗಣಿಗಾರಿಕೆ ಕೈಗೊಳ್ಳಬಾರದು. ಸರ್ಕಾರವು ಅಂಥ ಪ್ರದೇಶಗಳನ್ನು ಗುರುತಿಸಬೇಕು. ಗಣಿಗಾರಿಕೆಗೆ 'ನಿಷೇಧಿತ ಪ್ರದೇಶ' ಅಥವಾ 'ನೋ ಗೋ ಝೋನ್ (ನಿರ್ಬಂಧಿತ ಪ್ರದೇಶ) ಎಂದು ಘೋಷಿಸಬೇಕು. ಅಭಿವೃದ್ಧಿ ಮತ್ತು ಪರಿಸರದ ನಡುವೆ ಸಮತೋಲನ ಸಾಧಿಸಲು, ಯಾವುದೇ ರೀತಿಯ ಸಂಘರ್ಷ ತಪ್ಪಿಸಲು ವಿಶೇಷ ಗಣಿಗಾರಿಕೆ ವಲಯ (ಇಎಂಝಡ್)ಗಳನ್ನು ಪ್ರತ್ಯೇಕವಾಗಿ ರಚಿಸಬೇಕು.

ಮಾಲಿನ್ಯ, ಇಂಗಾಲ ಮತ್ತು ಕಾರ್ಯಾಚರಣೆ ವೆಚ್ಚ ಕಡಿಮೆ ಮಾಡಲು ಗಣಿಗಾರಿಕೆ ಸ್ಥಳಗಳಲ್ಲಿ ನವೀಕರಿಸಬಹುದಾದ ಇಂಧನ ಮೂಲಗಳ ಬಳಕೆ ಪ್ರೋತ್ಸಾಹಿಸಬೇಕು. ಗಣಿಗಾರಿಕೆ ಕಾರ್ಯಾಚರಣೆಗಳಲ್ಲಿ ತೊಡಗಿರುವ ಎಲ್ಲಾ ಕಾರ್ಮಿಕರಿಗೆ ಪರಿಸರ ಸಮಸ್ಯೆಗಳ ಸೂಕ್ತ ತರಬೇತಿ ನೀಡಬೇಕು ಎಂದು ಅದರಲ್ಲಿ ಹೇಳಲಾಗಿದೆ.

ಖನಿಜ ನೀತಿ ಜಾರಿಗೆ ಸರ್ಕಾರ, ಸಚಿವರು, ಅಧಿಕಾರಿಗಳಿಗೆ ಮುಖ್ಯವಾಗಿ ಜನರಿಗೆ ಇಚ್ಛಾಶಕ್ತಿ ಇರಬೇಕು. ಸಂಡೂರಿನ ಅರಣ್ಯ ಉಳಿಸಲು ಈ ನೀತಿಯ ಅಡಿಯಲ್ಲೇ ಆಂದೋಲನ ನಡೆಯಬೇಕು

ಎಸ್. ಆರ್. ಹಿರೇಮಠ, ಮುಖ್ಯಸ್ಥ, ಸಮಾಜ ಪರಿವರ್ತನಾ ಸಮುದಾಯ

ಕ್ಷೇಮ ಕುಶಲ



ಎಷ್ಟು ಕಾಲವಾದರೂ ಕ್ಷಯವಾಗದ ಕ್ಷಯ

ಡಾ. ಕುಶ್ವಂತ್ ಕೋಳಿಬೈಲು

ಮನುಕುಲದ ಅಳಿವು ಮತ್ತು ಉಳಿವನ್ನು ಪ್ಲೇಗ್, ಸಿಡುಬು, ಕಾಲರಾ ಮುಂತಾದ ರೋಗಗಳು ಒಂದು ಕಾಲದಲ್ಲಿ ಪ್ರಶ್ನಿಸಿದ್ದವು. ಇತ್ತೀಚಿನ ವರ್ಷಗಳಲ್ಲಿ ಬಂದ ಕೋವಿಡ್ ಕೂಡ ದೊಡ್ಡ ಮಟ್ಟದ ಭಯವನ್ನು ಹುಟ್ಟಿಸಿತ್ತು. ಆದರೆ ವೈದ್ಯಕೀಯ ವಿಜ್ಞಾನ ಮುಂದುವರಿದಂತೆ ಲಸಿಕೆ ಮತ್ತು ಆಧುನಿಕ ಆವಿಷ್ಕಾರದ ಕಾರಣಗಳಿಂದ ನಾವು ಇಂಥ ಹಲವು ಮಾರಕರೋಗಗಳನ್ನು ಮೆಟ್ಟಿ ನಿಂತಿದ್ದೇವೆ. ಕಳೆದ ಶತಮಾನದಲ್ಲಿ ಬೆಳಕಿಗೆ ಬಂದ ಏಡ್ಸ್ ಕಾಯಿಲೆಯನ್ನೂ ಹತೋಟಿಯಲ್ಲಿಡಲು ಔಷಧಗಳಿವೆ. ಆದರೆ ಸಹಸ್ರಾರು ವರ್ಷಗಳಿಂದ ಮನುಕುಲಕ್ಕೆ ಮಾರಕವಾಗಿರುವ ಕ್ಷಯರೋಗವನ್ನು ನಿರ್ಮೂಲನೆ ಮಾಡುವಲ್ಲಿ ಹೆಚ್ಚಿನ ದೇಶಗಳು ಸೋತಿವೆ. ಈಜಿಪ್ಟಿನ ಮಮ್ಮಿಗಳ ದೇಹದಿಂದಲೂ ಕ್ಷಯರೋಗವನ್ನು ಉಂಟುಮಾಡುವ ಮೈಕೊಬ್ಯಾಕ್ಟೀರಿಯಮ್ ಟುಬರ್ಕುಲೋಸಿಸ್ ಕಂಡುಬರುವ ಕಾರಣ ಈ ಕ್ಷಯರೋಗವು ಮನುಕುಲವನ್ನು ಹಲವು ಶತಮಾನಗಳಿಂದ ಕಾಡುತ್ತಲಿದೆ. ವೈಜ್ಞಾನಿಕ ತಂತ್ರಜ್ಞಾನ ಮುಂದುವರಿದರೂ ಕ್ಷಯರೋಗವನ್ನು ಮಾತ್ರ ನಿರ್ಮೂಲನೆ ಮಾಡುವಲ್ಲಿ ಭಾರತ ಸಹಿತ ಹಲವು ದೇಶಗಳು ಸಫಲವಾಗಿಲ್ಲ. 2025ನೇ ಇಸವಿಗೆ ಭಾರತವನ್ನು ಕ್ಷಯಮುಕ್ತ ಮಾಡುತ್ತೇವೆಂಬ ಪಣವನ್ನು ತೊಟ್ಟಿದ್ದರೂ ಭಾರತದಲ್ಲಿ ಪ್ರತಿ ವರ್ಷ ಸುಮಾರು ಐದು ಲಕ್ಷ ರೋಗಿಗಳು ಕ್ಷಯರೋಗದಿಂದ ಮರಣಹೊಂದುತ್ತಿದ್ದಾರೆ. ಪ್ರಪಂಚದಲ್ಲಿರುವ ಇಪ್ಪತ್ತೈದು ಪ್ರತಿಶತ ಕ್ಷಯರೋಗಿಗಳು ನಮ್ಮ ದೇಶದಲ್ಲಿದ್ದಾರೆ. ಪ್ರತಿ ವರ್ಷ ಸುಮಾರು ಮೂವತ್ತು ಲಕ್ಷ ಹೊಸ ಕ್ಷಯರೋಗಿಗಳನ್ನು ಭಾರತದಲ್ಲಿ ಪತ್ತೆ ಹಚ್ಚಲಾಗುತ್ತದೆ.

'ಮೈಕೊಬ್ಯಾಕ್ಟೀರಿಯಾ ಟುಬರ್ಕುಲೋಸಿಸ್' ಬಹಳ ನಿಧಾನವಾಗಿ ಬೆಳೆಯುವ ಬ್ಯಾಕ್ಟೀರಿಯಾವಾಗಿದೆ. ರೋಗನಿರೋಧಕ ಶಕ್ತಿ ಚೆನ್ನಾಗಿರುವವರಲ್ಲಿ ಇದು ಕ್ಷಯರೋಗವನ್ನು ಉಂಟುಮಾಡಲಾರದು. ಅಪೌಷ್ಟಿಕತೆಯಿಂದ ಬಳಲುವವರಲ್ಲಿ ಮತ್ತು ರೋಗನಿರೋಧಕ ಶಕ್ತಿ ಕಡಿಮೆಯಿರುವ ಏಡ್ಸ್ ರೋಗಿಗಳಲ್ಲಿ, ಕ್ಯಾನ್ಸರ್ ಚಿಕಿತ್ಸೆ ಪಡೆಯುವವರಲ್ಲಿ ಈ ಬ್ಯಾಕ್ಟೀರಿಯಾ ಕ್ಷಯರೋಗವನ್ನು ಉಂಟುಮಾಡುತ್ತದೆ. ಹೆಚ್ಚಿನವರು ಕ್ಷಯರೋಗವು ಶ್ವಾಸಕೋಶವನ್ನು ಮಾತ್ರ ಆವರಿಸುತ್ತದೆಯೆಂಬ ತಪ್ಪು ಕಲ್ಪನೆಯಲ್ಲಿದ್ದಾರೆ. ಮನುಷ್ಯನ ಮಿದುಳು, ಕರುಳು, ಎಲುಬು – ಹೀಗೆ ಕ್ಷಯದ ಸೋಂಕಿಗೆ ಬಲಿಯಾಗದ ಯಾವುದೇ ಅಂಗಾಂಗಗಳಿಲ್ಲ.

ಕ್ಷಯರೋಗವು ಉಳಿದ ಮಾರಕ ಸೋಂಕುಗಳಂತೆ ರೋಗಿಯನ್ನು ಕೆಲವೇ ದಿನಗಳಲ್ಲಿ ಬಲಿ ಪಡೆಯುವುದಿಲ್ಲ; ಬದಲಿಗೆ ನಿಧಾನವಾಗಿ ದೇಹದ ಪ್ರತಿಯೊಂದು ಅಂಗಾಂಗಗಳನ್ನು ಆವರಿಸಿಕೊಳ್ಳುತ್ತದೆ. ಶ್ವಾಸಕೋಶದ ಕ್ಷಯರೋಗ ಬಂದಿರುವವರು ಉಸಿರಾಡುವಾಗ ಅವರ ಉಸಿರಿನಲ್ಲಿದ್ದ ಕ್ಷಯದ ಕೀಟಾಣುಗಳು ಸುತ್ತ ಮುತ್ತ ಹರಡುತ್ತವೆ. ಅವರು ಕ್ಷಯರೋಗದ ಪಸರಣದಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಾರೆ.

ಸಂಜೆಯ ಸಮಯದಲ್ಲಿ ಕಾಣಿಸಿಕೊಳ್ಳುವ ಜ್ವರ, ನಿತ್ರಾಣ, ಒಣಕೆಮ್ಮು, ತೂಕ ಕಡಿಮೆಯಾಗುವುದು ಕ್ಷಯರೋಗದ ಲಕ್ಷಣಗಳಾಗಿವೆ. ಎರಡು ವಾರಗಳಿಗಿಂತ ಹೆಚ್ಚು ಕಾಲ ಕೆಮ್ಮು ಬರುತ್ತಿದ್ದರೆ ಶ್ವಾಸಕೋಶದ ಕ್ಷಯರೋಗದ ಬಗ್ಗೆ ತಪಾಸಣೆ ಮಾಡಿಸಿಕೊಳ್ಳಬೇಕು. ಕರುಳಿನ ಕ್ಷಯರೋಗವಿದ್ದಲ್ಲಿ ತೂಕ ಕಳೆದುಕೊಳ್ಳುವುದರ ಜೊತೆಗೆ ಅಪೌಷ್ಟಿಕತೆಯೂ ಕಾಡಬಹುದು. ಮಿದುಳಿನ ಕ್ಷಯರೋಗವು ಮೂರ್ಛೆರೋಗದ ಮೂಲಕ ವ್ಯಕ್ತವಾಗಬಹುದು. ಕ್ಷಯರೋಗವು ತ್ವಚೆಯ ಮೇಲೆ ಕಜ್ಜಿಯಾಗಿಯೂ ಕಾಣಿಸಿಕೊಳ್ಳಬಹುದು.

ಕಫದ ಪರೀಕ್ಷೆ ಮತ್ತು ಶ್ವಾಸಕೋಶದ ಎಕ್ಸರೇ ಮಾಡುವ ಮೂಲಕ ಕ್ಷಯರೋಗವನ್ನು ಹಿಂದಿನ ದಶಕಗಳಲ್ಲಿ ಪತ್ತೆ ಹಚ್ಚುತ್ತಿದ್ದರು. ಭಾರತದ ಗ್ರಾಮೀಣ ಭಾಗಗಳಲ್ಲಿ ಈಗಲೂ ಇದೇ ಪದ್ಧತಿಯನ್ನು ಅನುಸರಿಸುತ್ತಾರೆ. ಇದರಿಂದಾಗಿ ಕ್ಷಯರೋಗವನ್ನು ಪತ್ತೆ ಹಚ್ಚುವಲ್ಲಿ ತಡವಾಗುತ್ತದೆ ಮತ್ತು ನಿಖರವಾಗಿ ಎಲ್ಲ ರೋಗಿಗಳನ್ನು ಪತ್ತೆ ಹಚ್ಚಲಾಗುವುದಿಲ್ಲ. ಪತ್ತೆಹಚ್ಚಲಾಗದ ರೋಗಿಗಳು ರೋಗವನ್ನು ಹೆಚ್ಚು ಜನರಿಗೆ ಹರಡುತ್ತಾರೆ.

ಕ್ಷಯರೋಗಕ್ಕೆ ತಿಂಗಳುಗಟ್ಟಲೆ ಚಿಕಿತ್ಸೆ ಪಡೆಯುವ ಅಗತ್ಯವಿರುತ್ತದೆ. ಕ್ಷಯರೋಗಕ್ಕೆ ಚಿಕಿತ್ಸೆ ನೀಡಲು ಹತ್ತಾರು ಔಷಧಗಳನ್ನು ಸೇವಿಸಬೇಕಾಗುತ್ತದೆ. ಅಜ್ಞಾನ ಮತ್ತು ಮೂಢನಂಬಿಕೆಗಳ ಕಾರಣದಿಂದಾಗಿ ಗ್ರಾಮೀಣ ಭಾಗಗಳಲ್ಲಿ ಚಿಕಿತ್ಸೆಯನ್ನು ಅರ್ಧಕ್ಕೆ ನಿಲ್ಲಿಸುತ್ತಾರೆ. ಮುಂದಿನ ಬಾರಿ ಕ್ಷಯದ ಚಿಕಿತ್ಸೆ ಪ್ರಾರಂಭಿಸಿದಾಗ ಹಿಂದಿನ ಔಷಧಗಳಿಗೆ ರೋಗಿ ಸ್ಪಂದಿಸದ ಕಾರಣ ಹೊಸ ಔಷಧಗಳನ್ನು ನೀಡಬೇಕಾಗುತ್ತದೆ. ಇದರಿಂದಾಗಿ ಮೈಕೊಬ್ಯಾಕ್ಟೀರಿಯಾ ಕೀಟಾಣು ಕ್ಷಯರೋಗಕ್ಕೆ ನೀಡಲಾಗುವ ಔಷಧಗಳ ವಿರುದ್ಧ ತನ್ನ ಪ್ರತಿರೋಧವನ್ನು ಹೆಚ್ಚಿಸಿಕೊಳ್ಳುತ್ತದೆ.

'ಸಿಬಿನ್ಯಾಟ್' ಎಂಬ ಪರೀಕ್ಷೆಯಿಂದ ರೋಗಿಯ ದೇಹದೊಳಗಿರುವ ಮೈಕೋಬ್ಯಾಕ್ಟಿರೀಯಾ ರೋಗಾಣು ಯಾವ ಕ್ಷಯರೋಗದ ಔಷಧಗಳಿಗೆ ಹೆಚ್ಚು ಉತ್ತಮವಾಗಿ ಸ್ಪಂದಿಸುತ್ತದೆ ಎಂಬ ಮಾಹಿತಿ ಮೊದಲೇ ಲಭ್ಯವಾಗುತ್ತದೆ. ಸ್ಪಂದಿಸದಿರುವ ಔಷಧಗಳನ್ನು ರೋಗಿಯ ಚಿಕಿತ್ಸೆಯಲ್ಲಿ ಬಳಸದಿರುವ ಸೌಲಭ್ಯವೂ ಈಗ ವೈದ್ಯರ ಕೈಯಲ್ಲಿದೆ. ಈ ಮೇಲಿನ ಕಾರಣಗಳಿಂದ ಕ್ಷಯರೋಗದ ಚಿಕಿತ್ಸೆಯು ಹೆಚ್ಚು ವೈಜ್ಞಾನಿಕವಾಗಿ ರೂಪುಗೊಂಡಿದೆ. ಕ್ಷಯರೋಗವು ನಮ್ಮ ದೇಶವನ್ನು ತೀವ್ರವಾಗಿ ಬಾಧಿಸುವ ಕಾಯಿಲೆಯಾಗಿರುವುದರಿಂದ ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತ ಚಿಕಿತ್ಸೆ ಲಭ್ಯವಿದೆ. ಕ್ಷಯರೋಗವನ್ನು ಒಂದು ವಿಷಯವಾಗಿ ಓದಿ ಅದರಲ್ಲಿ ಸ್ನಾತಕೋತ್ತರ ಪದವಿ ಪಡೆದ ವೈದ್ಯರೂ ಇದ್ದಾರೆ.

ಕ್ಷಯರೋಗಿಗಳನ್ನು ಇಂದಿಗೂ ನಮ್ಮ ಸಮಾಜ ವಕ್ರದೃಷ್ಟಿಯಿಂದ ನೋಡುವುದರಿಂದ ಕ್ಷಯದ ಕುರಿತು ಜಾಗೃತಿ ಮೂಡಿಸುವ ಕೆಲಸವನ್ನು ಸರ್ಕಾರ ಮಾಡುತ್ತಿದೆ. ಶುಚಿತ್ವ ಮತ್ತು ಉತ್ತಮವಾದ ಪೌಷ್ಟಿಕ ಆಹಾರವು ಕ್ಷಯರೋಗದ ನಿರ್ಮೂಲನೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ. ಜನರ ಜೀವನಮಟ್ಟವನ್ನು ಸುಧಾರಿಸುವುದರಿಂದ ಕ್ಷಯನಿರ್ಮೂಲನೆ ಮಾಡಬಹುದೆಂಬುದನ್ನು ಪಾಶ್ಚಾತ್ಯ ದೇಶಗಳು ತೋರಿಸಿಕೊಟ್ಟಿವೆ. ❖

ಅಪಸ್ಥಾನೀಯ ಗರ್ಭಧಾರಣೆ ಬೇಡ ಆತಂಕ

ಡಾ. ಗಣೇಶ್ ಗಂಗೊಳ್ಳಿ

ಆಸ್ಪತ್ರೆಯಲ್ಲಿ ರಾತ್ರಿ ಪಾಳಿಯ ಕೆಲಸ ಎಂದರೆ ವೈದ್ಯರ ಪರಮಶತ್ರು ಎಂದರೂ ತಪ್ಪಾಗಲಾರದು. ಏಕೆಂದರೆ ಒಬ್ಬಂಟಿಯಾಗಿ ನಿದ್ದೆಗೆಟ್ಟು ಹೋರಾಡಬೇಕಾಗುವ ಸನ್ನಿವೇಶಗಳು ಬರುತ್ತವೆ. ಮತ್ತು ಕೆಲವೊಮ್ಮೆ ಗುಂಪುಘರ್ಷಣೆಗಳನ್ನು ಎದುರಿಸಬೇಕು. ಅವತ್ತು ನಾನು ಕರ್ತವ್ಯದಲ್ಲಿ ಇದ್ದಾಗ, ಅಂಥ ಒಂದು ಸನ್ನಿವೇಶವನ್ನು ಎದುರಿಸಬೇಕಾಯಿತು.

ಗರ್ಭಧಾರಣೆಯ ಸಮಯದಲ್ಲಿ ಅಂಡಾಶಯದಿಂದ ಬಿಡುಗಡೆಗೊಂಡ ಅಂಡಾಣುಗಳು ಡಿಂಬನಾಳಗಳಲ್ಲಿ ವೀರ್ಯದೊಂದಿಗೆ ಬೆರೆತು ಭ್ರೂಣ ಸೃಷ್ಟಿಯಾಗುತ್ತದೆ ಹಾಗೂ ಅದು ಗರ್ಭಕೋಶದಲ್ಲಿ ಬೆಳವಣಿಗೆ ಹೊಂದುತ್ತವೆ. ಇದರ ಬದಲಾಗಿ ಡಿಂಬನಾಳ (fallopian tube) ಅಥವಾ ಹೊಟ್ಟೆಯ ಯಾವುದೇ ಭಾಗದಲ್ಲಿ ಈ ಭ್ರೂಣವು ಅಂಟಿಕೊಂಡರೆ ಅದನ್ನು 'ಅಪಸ್ಥಾನೀಯ ಗರ್ಭಧಾರಣೆ' ಎನ್ನುತ್ತಾರೆ. ಸಾಮಾನ್ಯವಾಗಿ ಇಂಥ ಗರ್ಭಧಾರಣೆಯು ಫಲಪ್ರದವಾಗುವುದಿಲ್ಲ. ಭ್ರೂಣವು ಅಂಟಿರುವ ಸ್ಥಳಕ್ಕೆ ಅನುಗುಣವಾಗಿ 'ಟ್ಯೂಬಲ್', 'ಒವೆರಿಯನ್', 'ಅಬ್ಡಾಮಿನಲ್' 'ಸೆರ್ವಿಕಲ್ ಪ್ರೆಗ್ನೆನ್ಸಿ' ಎಂಬ ಅನೇಕ ವಿಧಗಳಿವೆ.

> ಡಿಂಬನಾಳ ಅಥವಾ ಹೊಟ್ಟೆಯ ಯಾವುದೇ ಭಾಗದಲ್ಲಿ ಭ್ರೂಣವು ಅಂಟಿಕೊಂಡರೆ ಅದನ್ನು 'ಅಪಸ್ಥಾನೀಯ ಗರ್ಭಧಾರಣೆ' ಎನ್ನುತ್ತಾರೆ. ಸಾಮಾನ್ಯವಾಗಿ ಇಂಥ ಗರ್ಭಧಾರಣೆಯು ಫಲಪ್ರದವಾಗುವುದಿಲ್ಲ.

ಇಂದು ನಾನು ಇಂತಹ ಅಪರೂಪದ 'ಟ್ಯೂಬಲ್ ಪ್ರೆಗ್ನೆನ್ಸಿ', ಅದರಲ್ಲೂ 'ಕಾರ್ನ್ಯುಯಲ್ ಎಕ್ಟೋಪಿಕ್' ಪ್ರಕರಣವನ್ನು ಚಿಕಿತ್ಸೆ ಮಾಡಬೇಕಾಗಿ ಬಂತು. ಎರಡು ತಿಂಗಳು ಮುಟ್ಟಾಗದೆ ಹೊಟ್ಟೆನೋವು ಮತ್ತು ಯೋನಿರಕ್ತಸ್ರಾವದಿಂದ ಬಂದಿರುವ ಈ ಮಹಿಳೆ ಎರಡು ಮಕ್ಕಳ ತಾಯಿ. ಈ ಮೂರು ರೋಗಲಕ್ಷಣಗಳನ್ನು (ಅಂದರೆ ಹೊಟ್ಟೆನೋವು, ರಕ್ತಸ್ರಾವ, ಮುಟ್ಟು ನಿಲ್ಲುವುದು) ಒಟ್ಟಾಗಿ 'ಎಕ್ಟೋಪಿಕ್ ಟ್ರಯಾಡ್' ಎಂದು ಕರೆಯಲಾಗುತ್ತದೆ. ಇದನ್ನು ಹೊರತುಪಡಿಸಿದರೆ ನೋವಿನಿಂದಾಗಿ ಅತಿವಾಂತಿ ಮತ್ತು ರಕ್ತಹೀನತೆಯಿಂದ ತಲೆಸುತ್ತು ಬರಬಹುದು. ರಕ್ತದೊತ್ತಡ ಕಡಿಮೆ ಆಗಬಹುದು.

ಸಂಕ್ಷಿಪ್ತ ರೋಗವರದಿ ಮತ್ತು 'ಶ್ರೋಣಿ ಪರೀಕ್ಷೆ' (pelvic examination) ಆಲಿಸಿದ ನಾನು ಕೂಡಲೇ ರೋಗನಿರ್ಣಾಯಕ ಪರೀಕ್ಷೆಗಳಾದ 'ಪ್ರೆಗ್ನೆನ್ಸಿ ಕಾರ್ಡ್ ಟೆಸ್ಟ್', 'ಬೀಟಾ ಎಚ್‌ಸಿಜಿ' ಪರೀಕ್ಷೆಯೊಂದಿಗೆ ಹೊಟ್ಟೆಯ ಸ್ಕ್ಯಾನ್ ಮಾಡಲು ರೆಸಿಡೆಂಟ್ ಡಾಕ್ಟರಿಗೆ ಹೇಳಿದೆ. ಆದರೆ ಯಾವ ಕಾರಣದಿಂದ ಈಕೆಯಲ್ಲಿ 'ಎಕ್ಟೋಪಿಕ್ ಪ್ರೆಗ್ನೆನ್ಸಿ' ಎನ್ನುವುದು ನನಗೆ ಗೊಂದಲಕ್ಕೀಡುಮಾಡಿತು. ಈ ಕಾಯಿಲೆಗೆ ಪೂರ್ವ ಇತಿಹಾಸ (ಪ್ರೀವಿಯಸ್ ಎಕ್ಟೋಪಿಕ್), 'ಪೆಲ್ವಿಕ್ ಇನ್‌ಫ್ಲೇಮೆಟರಿ ಡಿಸೀಸ್', ಲೈಂಗಿಕ ಗುಪ್ತರೋಗ, 'ಫೇಲ್ಡ್ ಟ್ಯೂಬೆಕ್ಟಮಿ', ಟ್ಯೂಬೋಪ್ಲಾಸ್ಟಿ ಚಿಕಿತ್ಸೆ ನಂತರದ ಗರ್ಭಧಾರಣೆ, ಐವಿಎಫ್ ಪ್ರೆಗ್ನೆನ್ಸಿ ಮುಂತಾದ ಕಾರಣಗಳು ಯಾವುವೂ ಇರಲಿಲ್ಲ. ಯೋಚನಾ ಪ್ರಹರಗಳು ಒಂದು ಹಂತಕ್ಕೆ ನಿಲ್ಲುವ ವೇಳೆಗೆ ಸ್ಕ್ಯಾನಿಂಗ್ ವರದಿ ಬಂದಿತ್ತು.

ಅದರಲ್ಲಿ 'ಎಕ್ಟೋಪಿಕ್ ಪ್ರೆಗ್ನೆನ್ಸಿ' ಎಂಬುದಾಗಿ ಇತ್ತೇ ಹೊರತು ಅದು ಛಿದ್ರಗೊಂಡಿತ್ತೋ (ರಪ್ಚರ್ಡ್) ಇಲ್ಲವೋ ಎಂಬುದರ ಸ್ಪಷ್ಟ ಚಿತ್ರಣ ಇರಲಿಲ್ಲ. ಇಂಥ ಸಂದಿಗ್ಧತೆ ಒದಗಿದಾಗ ರೋಗಿ ಹಾಗೂ ಅವರ ಆಪ್ತರೊಂದಿಗೆ ಸಮಾಲೋಚನೆ ಮುಖ್ಯವಾಗಿರುತ್ತದೆ. ಏಕೆಂದರೆ ಈ ಕಾಯಿಲೆಗೆ ಔಷಧ ಮತ್ತು ಶಸ್ತ್ರಚಿಕಿತ್ಸೆ ಎಂಬ ಎರಡು ವಿಧಾನಗಳಿವೆ. ಇದನ್ನು ಸರಿಯಾಗಿ ಮನದಟ್ಟು ಮಾಡಿಸಿ ಸೂಕ್ತ ಚಿಕಿತ್ಸೆಯ ಆಯ್ಕೆ ಮಾಡುವಲ್ಲಿ ಮಾರ್ಗದರ್ಶಿಯಾಗಿ ನಿಲ್ಲುವುದು ಒಬ್ಬ ವೈದ್ಯನ ಕರ್ತವ್ಯವಾಗಿರುತ್ತದೆ. ಶಸ್ತ್ರಚಿಕಿತ್ಸೆಯನ್ನು ನಿರ್ಧರಿಸುವಾಗ ನಾವು ಜೀವಧಾರಕ ಚಿಹ್ನೆಗಳಾದ (ವೈಟಲ್ ಸೈನ್ಸ್) ನಾಡಿಮಿಡಿತ, ರಕ್ತದೊತ್ತಡ, ಉಷ್ಣತೆ, ಉಸಿರಾಟದ ಆಧಾರದ ಮೇಲೆ ಅವಲಂಬಿತವಾಗಿರುತ್ತದೆ. ಆದರೆ ಈ ಮಹಿಳೆಯಲ್ಲಿ ಇದರ ಯಾವುದೇ ವ್ಯತ್ಯಾಸ ಇಲ್ಲದಿರುವುದು ಸಂಕಷ್ಟಕ್ಕೀಡುಮಾಡಿತು. ಇದನ್ನು ನನ್ನ ಹಿರಿಯ ವೈದ್ಯರೊಂದಿಗೆ ವಿಮರ್ಶಿಸಿ ಆರು ತಾಸುಗಳ ನಂತರ ಮರಳಿ ಹಿಮೊಗ್ಲೋಬಿನ್ ಪರೀಕ್ಷೆ ಮಾಡಿ ಚಿಕಿತ್ಸಾ ವಿಧಾನ ನಿರ್ಧರಿಸುವುದಾಗಿ ತಾಕೀತು ಮಾಡಲಾಯಿತು. ಹಾಗೆಯೇ ಆ ರಾತ್ರಿ ನಾನು ಬೇರೆಲ್ಲಾ ರೋಗಿಗಳ ಚಿಕಿತ್ಸೆಯಲ್ಲಿ ನಿರತನಾದರೂ ಈ ಪ್ರಕರಣದ ವಿಚಾರವಾಗಿ ಮನದ ಮೂಲೆಯಲ್ಲಿ ಆಲೋಚನಾ ಲಹರಿ ಜಾಗೃತವಾಗಿತ್ತು.

ಮರುದಿನ ಬೆಳಿಗ್ಗೆ ರಕ್ತದ ಮರುಪರೀಕ್ಷೆಯಲ್ಲಿ ಹಿಮೊಗ್ಲೋಬಿನ್ ಕ್ಷೀಣಿಸಿರುವುದರಿಂದ ಆಂತರಿಕಸ್ರಾವವನ್ನು ಶಂಕಿಸಿ, ಶಸ್ತ್ರಚಿಕಿತ್ಸೆ ನಿರ್ಧರಿಸಿ ಮುಂದುವರಿದೆ. ಡಿಂಬನಾಳ ಮತ್ತು ಗರ್ಭಕೋಶಗಳು ಸಂಧಿಸುವ ಜಾಗದಲ್ಲಿ (ಕಾರ್ನ್ಯುಯಲ್ ಎಕ್ಟೋಪಿಕ್) ಭ್ರೂಣವು ಅಂಟಿಕೊಂಡಿರುವುದರಿಂದ ಅದು ಛಿದ್ರವಾಗಿ ಒಂದು ರಂಧ್ರದಂತಾಗಿ ರಕ್ತಸ್ರಾವವಾಗಿ ಉದರದಲ್ಲೆಲ್ಲ ರಕ್ತ ಮಡುಗಟ್ಟಿತ್ತು. ಹಾಗಾಗಿ ಆ ರಂಧ್ರವನ್ನು ಹುಡುಕುವುದು ಕ್ಲಿಷ್ಟಕರವಾಗಿತ್ತು. ರಕ್ತಸ್ರಾವ ನಿಲ್ಲದ ಕಾರಣ ಡಿಂಬನಾಳಗಳನ್ನು ಛೇದಿಸಬೇಕಾಯಿತು. ಆದರೂ ಇದು ಮರುಕಳಿಸುವ ಸಾಂದ್ರತೆ ಶೇ 10ರಷ್ಟು ಇರುವುದರಿಂದ, ಇನ್ನೊಂದು 'ಫಲೋಪಿಯನ್ ಟ್ಯೂಬ್' ಅನ್ನು 'ಟ್ಯುಬೆಕ್ಟೊಮಿ' ಮಾಡಿದೆ. ಚಿಕಿತ್ಸೆ ಫಲಕಾರಿಯಾಯಿತು. ರೋಗಿಯು ಸಂತೋಷವಾಗಿ ಮನೆಗೆ ಮರಳುವಾಗ ಮುಖದಲ್ಲಿ ಮೂಡಿದ ಮಂದಹಾಸವು ನನ್ನ ಮೂರು ದಿನದ ಹಿಂದಿನ ಯಾತನೆಯನ್ನು ಮರೆಮಾಚಿತು. ❖

ಸಿಇಟಿ-ನೀಟ್ ಪರೀಕ್ಷೆ ದಿಕ್ಸೂಚಿ

PUC-CET: CHEMISTRY

MULTIPLE CHOICE QUESTIONS

62) The number of -bonds and -bonds present in naphthalene are respectively

a) 5, 19 b) 6, 19
c) 5, 20 d) 5, 11

Ans: (a)

Expln:-We can find out by drawing the structure of Naphthalene.



The number of -bonds and -bonds are 5, 19 respectively.

63) On e mole of ammonia was completely absorbed in one litre solution each of (1) 1 M HCI, (2) 1 M CH_3COOH and (3) 1 M H_2SO_4 at 298 K.

The decreasing order for the pH of the resulting solutions is (Given: Kb(NH3) = 4.74)

a) 2 > 3 > 1 b) 1 > 2 > 3
c) 2 > 1 > 3 d) 3 > 2 > 1

Ans: C

$$\xrightarrow[\text{}]{\text{Decreasing order of pH}}$$
$$CH_3COOH > HCl > H_2SO_4$$
$$(2) \quad (1) \quad (3)$$
$$\xrightarrow[\text{Increasing acidic strength}]{}$$

64) 5.5 mg of nitrogen gas dissolves in 180 g of water at 273 K and one atm pressure due to nitrogen gas. The mole fraction of nitrogen in 180 g of water at 5 atm nitrogen pressure is approximately

(a) 1×10^{-6} (b) 1×10^{-5}
(c) 1×10^{-3} (d) 1×10^{-4}

Soln: (c) Solubility of a gas ∝ mole fraction

$$^{n}N_2 = \frac{5.5 \times 10^{-3}}{28} = 1.96 \times 10^{-4} \text{ at 1 atm}$$

Now, p ∝ mole fraction

Then at 5atm the mole fraction will increase 5 times.

Hence, $5 \times 1.96 \times 10^{-4} = 9.8 \times 10^{-4}$

$\approx 10 \times 10^{-4} = 1.0 \times 10^{-3}$

65) Plot of Maxwell's distribution of velocities is given below:



Which of the following is correct about this plot?

(A) $f_1 > f_2$ (B) $V_1 < V_2$
(C) $T_1 < T_2$ (D) $T_1 > T_2$

Ans: (D) $T_1 > T_2$

Molecular velocity increases with temperature as $V_1 > V_2$.

Therefore T_1 must be greater than T_2.

66) The lattice site in a pure crystal *cannot* be occupied by

a) molecule b) ion
c) electron d) atom

Ans:-C

67) Aqueous solution of a salt (A) forms a dense white precipitate with $BaCl_2$ solution. The precipitate dissolves in dilute HCl to produce a gas (B) which decolourises acidified $KMnO_4$ solution. A and B respectively are:

a) $BaSO_3$, H_2S b) $BaSO_4$, SO_2
c) $BaSO_3$, SO_2 d) $BaSO_4$, H_2S

Ans: (c)

Expln:- $BaCl_2 + Na_2SO_3 \rightarrow BaSO_3 + 2NaCl$

$BaSO_3 + 2HCl \rightarrow BaCl_2 + SO_2 + H_2O$

Salt A is Na_2SO_3 and the dense white precipitate is $BaSO_3$ (Barium sulfite).

Gas B is SO_2. It decolourises acidified $KMnO_4$ solution because of its reducing nature.

The corresponding reaction is:

$2KMnO_4 + 5SO_2 + 2H_2O \rightarrow K_2SO_4 + 2MnSO_4 + 2H_2SO_4$

68) : The orbital nearest to the nucleus is

a) 4f b) 5d
c) 4s d) 7p

Ans: (c) **(KCET=2018)**

Expln:- Penetration power of the electron describes how much it is closer to the nucleus. Penetration power of an electron follows:

1S > 2S > 2P > 3S > 3P > 4S > 3d > 4P > 5S > 4d > 5P > 6S

Sub shell penetration power follows:

S > P > D > F

So, 4S orbital is closer to the nucleus among the other 4f, 5d, 7p orbital.

69) Schottky defect is observed in crystals when ....

a) some cations move from their lattice site to interstitial sites.
b) equal number of cations and anions are missing from the lattice.
c) some lattice sites are occupied by electrons.
d) some impurity is present in the lattice.

Ans:-b

70) Which of the following is true about the charge acquired by *p*-type semiconductors?

a) positive b) neutral
c) negative
d) depends on concentration of *p* impurity

Ans:- b

ದಿಕ್ಸೂಚಿ ನಿಮಗೆ ಇಷ್ಟ ಆಗಿದೆಯೇ? ನಿಮ್ಮ ಅನಿಸಿಕೆಯನ್ನು ಇಲ್ಲಿ ದಾಖಲಿಸಿ

NEET: BIOLOGY

68) The sequence of nitrogenous bases in one strand of DNA are 3' TAC GCG ACG 5'. The complementary DNA strand should have

a) 5' AUG CGC TGC 3'
b) 3' ATG CGC TGC 5'
c) 5' UAC GCG ACG 3'
d) 5' ATG CGC TGC 3'

Ans:- d;

Expln- The two strands of DNA have opposite polarity and the DNA dependent RNA polymerase also catalyse the polymerisation in only one direction, that is 5' Ĵ 3', the strand that has the polarity 3' Ĵ 5' acts as a template

69) In a condensed schematic representation of dark reaction of photosynthesis given below, steps are indicated by alphabets. Select the option, where the alphabets are correctly identified.



a) A – CO_2 fixation, B – Phosphorylation, C – Regeneration, D - Reduction
b) A – CO_2 fixation, B – Reduction, C – Phosphorylation, D – Regeneration
c) A–Regeneration, B- CO_2 fixation, C – Reduction, D – Phosphorylation
d) A–CO_2 fixation, B–Phosphorylation, C – Reduction, D–Regeneration

Ans:- d;

70) Mosses and ferns are ....

a) Thallophytes of plant kingdom
b) Angiosperms of plant kingdom
c) Gymnosperms of plant kingdom
d) Amphibians of plant kingdom

Ans:- d;

Expln- Mosses and ferns predominantly grow in humid environment. Both ferns and mosses depend on water for fertilisation. Therefore, they are called "amphibians of plant kingdom". However, mosses show lack of vascular tissues thus they show greater dependence on amphibious environment.

71) Statement (A) for a particular character in an individual, each gamete gets only one allele.

Statement (B) Chromatids of a chromosome spilt (separate) and move towards opposite pole during anaphase of mitosis.

(a) Both the statements are correct and 'B' is the reason for 'A'
(b) Both the statements are correct and 'B' is not the reason for 'A'
(c) Statement 'A' is correct and statement 'B; is wrong
(d) Statement 'B' is correct and statement 'B' is wrong

Ans:b

Expln:- Alleles are alternative forms of particular gene having the same position on a pair of homologous chromosomes affecting the same trait. During fertilization each gamete receives only one allele for a particular character. In anaphase the chromatids of a chromosome of future daughter nuclei start migrating towards the opposite poles along the path of their chromosome fibers. Thus, both statements given are correct but, one is not the correct reason for the other.

72) Plasmodesmata is usually observed between

a) Sieve tubes and bast fibres
b) Trachea and phloem fibres
c) Xylem parenchyma and xylem fibres
d) Sieve tubes and companion cells

Ans:- d;

Expln- Plasmodesmata are gap junctions present in cell walls. Plants cells can communicate through these specialised openings in their cell walls, where the cytoplasm of adjoining cells are connected.

Ans:- a;

73) Which taxonomic term may be suggested for any rank in the classification?

a) Class b) order
c) Species d) Taxon

Ans:- d;

Expln- Each category of classification is a part of overall taxonomic arrangement, it is called taxonomic category. Each taxonomic category referred to as a unit of classification and represent a rank and commonly termed as taxon (pl).

74) The embryo sac of an angiosperm is made up of...................................

a) 8 cells b) 7 cells and 8 nuclei
c) 8 nuclei d) 8 cells and 7 nuclei

Ans:- b

Expln - A typical angiospermic embryo sac, at maturity contains 8-nuclei and 7 cells. There is a characteristic distribution of these cells inside the embryo sac.

75) Cork cambium of dicot stem originates from..........................

a) Dedifferentiated parenchyma cells of cortex
b) Dedifferentiated collenchyma cells of cortex
c) Parenchyma cells of medullary ray
d) Parenchyma cells of pericycle

Ans:- b;

Expln - Sometimes, the living differentiated cells that have lost the capacity to divide can regain the capacity of division under certain condition. This phenomenon is known as dedifferentiation. For example : interfascicular cambium and cork cambium.

ಬೆಂಗಳೂರಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೋಮವಾರ ಸಾಧಕರಿಗೆ ಡಾ. ಬಿ.ಆರ್.ಅಂಬೇಡ್ಕರ್ ಪ್ರಶಸ್ತಿ ಪ್ರದಾನ ಮಾಡಿದರು. ಪಿ.ಎಂ.ನರೇಂದ್ರಸ್ವಾಮಿ, ಬಸವರಾಜ ಹೊರಟ್ಟಿ, ಎಚ್‌.ಸಿ. ಮಹದೇವಪ್ಪ, ಸಲೀಂ ಅಹಮದ್, ಕೆ. ಗೋವಿಂದರಾಜು ಇದ್ದರು. 2025ನೇ ಸಾಲಿನ ಪುರಸ್ಕೃತರು (ಕುಳಿತವರು) –ಎಫ್‌.ಎಚ್‌. ಜಕ್ಕಪ್ಪನವರ್, ದತ್ತಾತ್ರೇಯ ಎಸ್‌ ಇಕ್ಕಳಕಿ, ಹೊನ್ನೂರು ಗೌರಮ್ಮ, ಮಾವಳ್ಳಿ ಶಂಕರ್ ಮತ್ತು ಕೆ. ಈರಪ್ಪ. 2023ನೇ ಸಾಲಿನ ಪುರಸ್ಕೃತರು (ಬಲಗಡೆ ಮೊದಲ ಸಾಲು) – ಹರಿಹರ ಆನಂದ ಸ್ವಾಮಿ, ಇಂದೂಧರ ಹೊನ್ನಾಪುರ, ಕೆ.ಪುಂಡಲೀಕ ರಾವ್ ಶೆಟ್ಟಿಬಾ, ಸೀತವ್ವ ಜೋಡಟ್ಟಿ ಮತ್ತು ರುದ್ರಪ್ಪ ಹನಗವಾಡಿ. 2024ನೇ ಸಾಲಿನ ಪುರಸ್ಕತರು (ಬಲಗಡೆ ಎರಡನೇ ಸಾಲು)– ಶ್ರೀಧರ ಕಲಿವೀರ, ಮಲ್ಲಾಜಮ್ಮ, ಯಲ್ಲಪ್ಪ ಬಿ. ಹಿಮ್ಮಡಿ, ರಾಮದೇವ ರಾಕೆ ಮತ್ತು ಲಕ್ಷ್ಮೀಪತಿ ಕೋಲಾರ – ಪ್ರಜಾವಾಣಿ ಚಿತ್ರ

ಮೈಸೂರು ವಿಶ್ವವಿದ್ಯಾಲಯದಲ್ಲಿ 'ಸಂವಿಧಾನ ಪೀಠ': ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಣೆ

'ಅತಿ ಎತ್ತರದ ಅಂಬೇಡ್ಕರ್ ಪ್ರತಿಮೆ ಸ್ಥಾಪನೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮೈಸೂರು ವಿಶ್ವ ವಿದ್ಯಾಲಯದಲ್ಲಿ ಸಂವಿಧಾನ ಪೀಠ ಮತ್ತು ಬೆಂಗಳೂರಿನಲ್ಲಿ ಇಡೀ ದೇಶದಲ್ಲೇ ಅತ್ಯಂತ ಎತ್ತರದ ಅಂಬೇಡ್ಕರ್ ಪ್ರತಿಮೆಯನ್ನು ಸ್ಥಾಪಿಸಲಾಗುವುದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿದರು.

ವಿಧಾನಸೌಧದ ಮೆಟ್ಟಿಲುಗಳ ಮೇಲೆ ಸಮಾಜ ಕಲ್ಯಾಣ ಇಲಾಖೆ ಆಯೋಜಿಸಿದ್ದ ಡಾ.ಬಿ. ಆರ್. ಅಂಬೇಡ್ಕರ್ ಅವರ 134ನೇ ಜನ್ಮದಿನೋತ್ಸವವನ್ನು ಉದ್ಘಾಟಿಸಿ ಮಾತನಾಡಿದ ಅವರು, 'ಅಂಬೇಡ್ಕರ್ ಅವರ ಆಶಯಗಳ ಜಾರಿಗಾಗಿ ನಾವು ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದು ಜನರ ಕೊಳ್ಳುವ ಶಕ್ತಿ ಹೆಚ್ಚಿಸಿದ್ದೇವೆ' ಎಂದರು.

'ಸಂವಿಧಾನ ಮತ್ತು ಅದರ ಜಾರಿಯನ್ನು ವಿರೋಧಿಸಿದ್ದ ಮನುವಾದಿಗಳು ಇದ್ದಕ್ಕಿದ್ದಂತೆ ಅಂಬೇಡ್ಕರ್ ಮೇಲೆ ಪ್ರೀತಿ ಬಂದಂತೆ ಆಡುತ್ತಿದ್ದಾರೆ. ಚುನಾವಣೆಯಲ್ಲಿ 'ನನ್ನ ಸೋಲಿಗೆ ಸಾವರ್ಕರ್ ಕಾರಣ' ಎಂದು ಸ್ವತಃ ಅಂಬೇಡ್ಕರ್ ಅವರೇ ಪತ್ರ ಬರೆದಿದ್ದರು. ಆದರೆ, ಅಂಬೇಡ್ಕರ್ ಸೋಲಿಗೆ ಕಾಂಗ್ರೆಸ್ ಕಾರಣ ಎಂದು ಮನುವಾದಿಗಳು ಅಪಪ್ರಚಾರ ಮಾಡುತ್ತಿದ್ದಾರೆ' ಎಂದರು.

'ಎಸ್‌ಸಿಎಸ್‌ಪಿ, ಟಿಎಸ್‌ಪಿ ₹ 8,300 ಕೋಟಿ ದುರುಪಯೋಗ ಮಾಡಿದ್ದ ಬಿಜೆಪಿಯವರು ನಾಚಿಕೆ ಇಲ್ಲದೆ ನಮ್ಮ ಮೇಲೆ ಆರೋಪ ಮಾಡುತ್ತಿದ್ದಾರೆ' ಎಂದರು.

'ಮುಸಲ್ಮಾನರು ಶಿಕ್ಷಣದಿಂದ, ಅವಕಾಶಗಳಿಂದ ವಂಚಿತರಾಗ ಬಾರದು. ಹೀಗಾಗಿ ಸಂವಿಧಾನ ಹೇಳಿದಂತೆ ನಾವು ಎಲ್ಲ ಜಾತಿ, ಧರ್ಮದ ಬಡವರಿಗೆ ಅವಕಾಶ ಕಲ್ಪಿಸುತ್ತಿದ್ದೇವೆ. ಇಷ್ಟಕ್ಕೇ ಕಾಂಗ್ರೆಸ್ ಮುಸಲ್ಮಾನರನ್ನು ಮಾತ್ರ ಓಲೈಸುತ್ತಿದೆ ಎಂದು ಅಪಪ್ರಚಾರ ಮಾಡಲಾಗುತ್ತಿದೆ' ಎಂದರು.

ಡಿಸಿಆರ್‌ಇ ಠಾಣೆ ಉದ್ಘಾಟನೆ: ರಾಜ್ಯದಲ್ಲಿ 33 ಡಿಸಿಆರ್‌ಇ ಪೊಲೀಸ್ ಠಾಣೆಗಳು ಮಂಗಳವಾರದಿಂದ ಕಾರ್ಯಾರಂಭ ಮಾಡಲಿವೆ. ಒಂದು ಕೇಂದ್ರ ಡಿಸಿಆರ್‌ಇ ಠಾಣೆಯನ್ನು ಮುಖ್ಯಮಂತ್ರಿ ಸಾಂಕೇತಿಕವಾಗಿ ಉದ್ಘಾಟಿಸಿದರು.

ಮುಖ್ಯಮಂತ್ರಿ ವಿವಿಧ ಕ್ಷೇತ್ರಗಳ 15 ಸಾಧಕರಿಗೆ ಅಂಬೇಡ್ಕರ್ ಪ್ರಶಸ್ತಿ ಪ್ರದಾನ ಮಾಡಿದರು. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಮಾಜ ಕಲ್ಯಾಣ ಸಚಿವ ಎಚ್‌.ಸಿ. ಮಹದೇವಪ್ಪ, ಆಹಾರ ಸಚಿವ ಕೆ.ಎಚ್. ಮುನಿಯಪ್ಪ, ಶಾಸಕ ರಿಜ್ವಾನ್ ಅರ್ಷದ್ ಇದ್ದರು.

ಅದಕ್ಕೂ ಮೊದಲು ವಿಧಾನಸೌಧದ ಮುಂಭಾಗದಲ್ಲಿರುವ ಅಂಬೇಡ್ಕರ್ ಪ್ರತಿಮೆಗೆ ಮುಖ್ಯಮಂತ್ರಿ ಮಾಲಾರ್ಪಣೆ ಮಾಡಿ, ಪುಷ್ಪನಮನ ಸಲ್ಲಿಸಿದರು.

'ಸತ್ಯ ಹೇಳುವ ಎದೆಗಾರಿಕೆ ಬೆಳೆಸಿಕೊಳ್ಳಬೇಕು'

'ಆರೆಸ್ಸೆಸ್ ಮತ್ತು ಬಿಜೆಪಿ ಹೇಳುವ ಸುಳ್ಳುಗಳನ್ನು ಮೆಟ್ಟಿ, ಸತ್ಯ ಹೇಳುವ ಎದೆಗಾರಿಕೆಯನ್ನು ಬೆಳೆಸಿಕೊಳ್ಳಬೇಕು' ಎಂದು ಕಾಂಗ್ರೆಸ್ ಕಾರ್ಯಕರ್ತರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕರೆ ನೀಡಿದರು.

ಕೆಪಿಸಿಸಿಯ ಭಾರತ್ ಜೋಡೊ ಭವನದಲ್ಲಿ ನಡೆದ ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಕಾಂಗ್ರೆಸ್ ಕಾರ್ಯಕರ್ತರಿಗೆ ಸೈದ್ಧಾಂತಿಕ ಸ್ಪಷ್ಟತೆ ಇರಬೇಕು. ಸೈದ್ಧಾಂತಿಕ ಹೋರಾಟವನ್ನು ಮುನ್ನಡೆಸಬೇಕು' ಎಂದರು.

ಬೆಂಗಳೂರಿನಲ್ಲಿ ಅಂಬೇಡ್ಕರ್ ಮ್ಯೂಸಿಯಂ ಮಾಡಲಾಗುವುದು ಎಂದೂ ಮುಖ್ಯಮಂತ್ರಿ ಘೋಷಿಸಿದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮಾತನಾಡಿ, 'ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅಂಬೇಡ್ಕರ್ ಅವರು ನಮಗೆ ಹೋರಾಟ ಮಾಡುವ ಶಕ್ತಿ ಕೊಟ್ಟಿದ್ದಾರೆ. ಆ ಹೋರಾಟದ ಮೂಲಕವೇ ನಾವು ಜಯಿಸಬೇಕು. ನಮ್ಮದು ಕಾಂಗ್ರೆಸ್ ಜಾತಿ. ನಮ್ಮ ಕೊನೆ ರಕ್ತ ಇರುವವರೆಗೂ ಸಂವಿಧಾನ ರಕ್ಷಣೆಗೆ ಹೋರಾಟ ಮಾಡೋಣ' ಎಂದರು.

ಜಾತಿ ವ್ಯವಸ್ಥೆ ಇನ್ನೂ ಜೀವಂತವಾಗಿದೆ. ಕೆಲವರು ನನ್ನನ್ನು ಮನೆಗಳಿಗೆ ಕರೆಯುತ್ತಾರೆ. ಆದರೆ ಒಳಗೆ ಸೇರಿಸಲು ಹಿಂದೇಟು ಹಾಕುತ್ತಾರೆ

ಅನಿಲ್ ಚಿಕ್ಕಮಾದು, ಶಾಸಕ **(ಎಚ್.ಡಿ.ಕೋಟೆಯಲ್ಲಿ ಹೇಳಿಕೆ)**

ಮಂದಿರದ ಕೆಳಗೆ ಬುದ್ಧ ವಿಹಾರಕ್ಕೆ ಶೋಧ: ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಸಿಂದಗಿ (ವಿಜಯಪುರ ಜಿಲ್ಲೆ): 'ಅವರು ಮಸೀದಿ ಕೆಳಗೆ ಮಂದಿರ ಹುಡುಕಿದರೆ, ನಾವು ಮಂದಿರದ ಕೆಳಗೆ ಬುದ್ಧವಿಹಾರ ಹುಡುಕುತ್ತೇವೆ' ಎಂದು ಬಿ.ಆರ್. ಅಂಬೇಡ್ಕರ್ ಅವರ ಮರಿ ಮೊಮ್ಮಗ, ಭಾರತೀಯ ಬೌದ್ಧ ಮಹಾಸಭಾ ರಾಷ್ಟ್ರೀಯ ಘಟಕದ ಅಧ್ಯಕ್ಷ ರಾಜರತ್ನ ಅಂಬೇಡ್ಕರ್ ಎಚ್ಚರಿಕೆ ನೀಡಿದರು.

ಸಂವಿಧಾನಶಿಲ್ಪಿ ಅಂಬೇಡ್ಕರ್ ಜಯಂತ್ಯುತ್ಸವದ ಪ್ರಯುಕ್ತ ಭಾನುವಾರ ರಾತ್ರಿ ದಲಿತ ಮತ್ತು ಪ್ರಗತಿಪರ ಸಂಘಟನೆಗಳ ಸಹಯೋಗದಲ್ಲಿ ನಡೆದ ಬಹಿರಂಗ ಸಮಾವೇಶದಲ್ಲಿ ಮಾತನಾಡಿದ ಅವರು, 'ಸಂವಿಧಾನಕ್ಕೆ ಆಪತ್ತು ಎದುರಾದರೆ, ಅದರ ಉಳಿವಿಗಾಗಿ ನಮ್ಮೊಂದಿಗೆ ಮುಸ್ಲಿಮರು ಬೆಂಬಲವಾಗಿ ನಿಲ್ಲುವರು' ಎಂದರು.

'ಮನುಸ್ಮೃತಿ ಉಳಿಸಲು ಯಾವುದೇ ತ್ಯಾಗಕ್ಕೂ ಆರ್‌ಎಸ್‌ಎಸ್ ಸಿದ್ಧವಾಗಿದೆ. ಸಂವಿಧಾನ ಉಳಿಸಲು ಅಂಬೇಡ್ಕರ್‌ವಾದಿಗಳು ತ್ಯಾಗಕ್ಕೆ ಸಿದ್ಧರಾಗಬೇಕು. ಯಾವುದೇ ರಾಜಕೀಯ ಪಕ್ಷವು ಸಂವಿಧಾನಕ್ಕೆ ಧಕ್ಕೆ ಉಂಟು ಮಾಡಲು ಮುಂದಾದರೆ, ಅದನ್ನು ತಡೆಯಲು ಅಂಬೇಡ್ಕರ್ ಅನುಯಾಯಿಗಳು ಒಂದಾಗಬೇಕು' ಎಂದರು.

ದೇಶದಲ್ಲಿ ಅಂಬೇಡ್ಕರ್ ಹೆಸರಲ್ಲಿ 10 ಲಕ್ಷ ಸಂಘಟನೆಗಳಿವೆ. ಆದರೆ, ಆರ್‌ಎಸ್‌ಎಸ್ ಒಂದೇ ಸಂಘಟನೆ. ದಲಿತ ಸಂಘಟನೆಗಳಲ್ಲಿ ವೈಯಕ್ತಿಕ ಸ್ವಾರ್ಥಕ್ಕಾಗಿ ಒಡಕು ಸಲ್ಲದು

ರಾಜರತ್ನ ಅಂಬೇಡ್ಕರ್, ಅಧ್ಯಕ್ಷ, ಭಾರತೀಯ ಬೌದ್ಧ ಮಹಾಸಭಾ

'ಒಕ್ಕಲೆಬ್ಬಿಸೆವು; ಆತಂಕ ಬೇಡ'

ಪ್ರಜಾವಾಣಿ ವಾರ್ತೆ

ಪ್ರಮೋದಾದೇವಿ ಒಡೆಯರ್

ಮೈಸೂರು: 'ಚಾಮರಾಜನಗರ ಜಿಲ್ಲೆಯಲ್ಲಿ ರಾಜಮನೆತನದ ಹೆಸರಿನಲ್ಲಿರುವ ಖಾಸಗಿ ಸ್ವತ್ತನ್ನು ಖಾತೆ ಮಾಡಿಕೊಡಲು 1950ರ ದಾಖಲೆ ಆಧರಿಸಿ ಅಲ್ಲಿನ ಜಿಲ್ಲಾಧಿಕಾರಿಗೆ ಪತ್ರ ಬರೆಯಲಾಗಿದೆಯಷ್ಟೇ. ರೈತರು ಆತಂಕಪಡುವ ಅಗತ್ಯವಿಲ್ಲ' ಎಂದು ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಹೇಳಿದರು.

ಇಲ್ಲಿನ ಅರಮನೆಯಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ಜಯಚಾಮರಾಜೇಂದ್ರ ಒಡೆಯರ್ ಅವರು ನೀಡಿರುವ ದಾನದ ಬಗ್ಗೆ ಗೊತ್ತಿಲ್ಲ. ದಾನಪತ್ರ ಹಾಗೂ ದಾಖಲೆಗಳಿದ್ದರೆ ರೈತರು ಅರಮನೆಗೆ ತಂದುಕೊಡಲಿ. ಮಹಾರಾಜರು ಜಮೀನು ನೀಡಿದ್ದರೆ, ಅದನ್ನು ಕಿತ್ತುಕೊಳ್ಳುವುದಿಲ್ಲ' ಎಂದು ಸ್ಪಷ್ಟಪಡಿಸಿದರು.

'ಖಾಸಗಿ ಸ್ವತ್ತಿನ ಜಮೀನುಗಳಿರುವ ಗ್ರಾಮಗಳನ್ನು ಕಂದಾಯ ಗ್ರಾಮಗಳನ್ನಾಗಿಸುವುದಾಗಿ ಜಿಲ್ಲಾಡಳಿತ ಹೇಳಿದ್ದರಿಂದ, ಮಾರ್ಚ್ 29ರಂದು ಪತ್ರ ಬರೆಯಲಾಗಿದೆ. ಜಿಲ್ಲಾಧಿಕಾರಿಯಿಂದ ಪ್ರತಿಕ್ರಿಯೆ ಬಂದಿಲ್ಲ. ಹಲವು ಬಾರಿ ಕರೆ ಮಾಡಿರುವೆ, ಸಂದೇಶವನ್ನೂ ಕಳುಹಿಸಿದ್ದೇನೆ' ಎಂದರು.

'2014ರಲ್ಲಿಯೇ ಜಿಲ್ಲೆಯಲ್ಲಿರುವ ರಾಜಮನೆತನದ ಆಸ್ತಿ ಕುರಿತು ಸರ್ಕಾರದ ಮುಖ್ಯ ಕಾರ್ಯದರ್ಶಿ, ಕಂದಾಯ ಇಲಾಖೆ ಕಾರ್ಯದರ್ಶಿ, ಜಿಲ್ಲಾಧಿಕಾರಿ, ತಹಶೀಲ್ದಾರ್ ಸೇರಿದಂತೆ ಎಲ್ಲ ಇಲಾಖೆಗಳಿಗೂ ಮಾಹಿತಿ ನೀಡಿ, ಸ್ವೀಕೃತಿ ಪತ್ರವನ್ನೂ ಪಡೆಯಲಾಗಿದೆ. ಆಗಿನ ಮುಖ್ಯ ಕಾರ್ಯದರ್ಶಿ ಶ್ರೀನಿವಾಸನ್ ಅವರ ಸಹಿಯೂ ಇದೆ' ಎಂದು ದಾಖಲೆಯನ್ನು ತೋರಿದರು.

'2020ರಲ್ಲಿ ಸರ್ವೆ ಸಂಖ್ಯೆಯೊಂದರ ಆಸ್ತಿ ಮೇಲೆ ನ್ಯಾಯಾಲಯದಲ್ಲಿ ದಾಖಲಾಗಿದ್ದ ಪ್ರಕರಣದಲ್ಲಿ ನಮ್ಮ ಪರವಾಗಿಯೇ ತೀರ್ಪು ಬಂದಿದೆ. ಎಲ್ಲ ದಾಖಲೆಗಳನ್ನು ಆಧರಿಸಿಯೇ ಜಿಲ್ಲಾಡಳಿತಕ್ಕೆ ಮನವಿ ಮಾಡಲಾಗಿದೆ. ಈಚೆಗೂ ದಾಖಲೆಗಳ ಸಹಿತ ಪತ್ರ ಬರೆಯಲಾಗಿದೆ. ಆದರೂ ಜಿಲ್ಲಾಧಿಕಾರಿಯು ಮಾಹಿತಿ ಇಲ್ಲವೆಂದೇ ಹೇಳುತ್ತಿದ್ದಾರೆ' ಎಂದು ದೂರಿದರು.

'ಗ್ರಾಮಸ್ಥರು ಯಾವುದೇ ವಿಚಾರ, ಸಮಸ್ಯೆಗಳಿದ್ದರೂ ನಮ್ಮ ಕಚೇರಿಯನ್ನು ನೇರವಾಗಿ ಸಂಪರ್ಕಿಸಬಹುದು. ದಾನ ಕೊಟ್ಟ ಮೇಲೆ ಕಿತ್ತುಕೊಳ್ಳುವ ಅವಶ್ಯಕತೆ ಇದೆಯಾ? ' ಎಂದರು.

'ಜಮೀನು ನಮ್ಮ ಹೆಸರಿಗೆ ಬಂದರೂ, ದಾನ ಪತ್ರದ ದಾಖಲೆಯನ್ನು ಗ್ರಾಮಸ್ಥರು ತೋರಿದರೆ, ಸರ್ಕಾರದ ಮಧ್ಯಸ್ಥಿಕೆ ಇಲ್ಲದೆಯೇ ಅವರಿಗೆ ಹೇಗೆ ಜಮೀನು ಕೊಡಬೇಕೆಂಬುದು ಗೊತ್ತಿದೆ. ಅವರಿಗೆ ತೊಂದರೆಯಾಗದು' ಎಂದರು.

ವಿವಿಧೆಡೆ ಧಾರಾಕಾರ ಮಳೆ

ಪ್ರಜಾವಾಣಿ ವಾರ್ತೆ

ಮೈಸೂರು/ಮಂಗಳೂರು: ಬೆಂಗಳೂರು ನಗರ, ಮೈಸೂರು ಜಿಲ್ಲೆ, ಹಾಸನ, ಕೊಡಗು ಜಿಲ್ಲೆ, ಚಿಕ್ಕಮಗಳೂರು ಹಾಗೂ ಉಡುಪಿ ಜಿಲ್ಲೆಯ ಹಲವೆಡೆ ಸೇರಿದಂತೆ ರಾಜ್ಯದ ಹಲವು ಭಾಗಗಳಲ್ಲಿ ಸೋಮವಾರ ಸಂಜೆ ಮಳೆಯಾಗಿದೆ.

ಮೈಸೂರು ಜಿಲ್ಲೆಯ ಸಾಲಿಗ್ರಾಮ, ತಿ.ನರಸೀಪುರ ಸೇರಿ ಕೆಲವೆಡೆ, ಹಾಸನ ನಗರ, ಹೊಳೆನರಸೀಪುರ, ಅರಕಲಗೂಡು ಭಾಗದಲ್ಲಿ ಮಳೆಯಾಯಿತು. ಕೊಡಗು ಜಿಲ್ಲೆ ನಾಪೋಕ್ಲು ಹೋಬಳಿ ವ್ಯಾಪ್ತಿಯ ಹಲವೆಡೆ ಬಿರುಸಾಗಿತ್ತು. ಸುಂಟಿಕೊಪ್ಪದಲ್ಲಿ ಗುಡುಗು, ಸಿಡಿಲು ಸಹಿತ ಜೋರು ಮಳೆಯಾಯಿತು. ಕುಶಾಲನಗರ, ಮಡಿಕೇರಿ, ಗೋಣಿಕೊಪ್ಪಲು, ಪೊನ್ನಂಪೇಟೆ ಸುತ್ತಮುತ್ತ ಸಾಧಾರಣ ಮಳೆ ಸುರಿಯಿತು.

ಚಿಕ್ಕಮಗಳೂರಿನಲ್ಲಿ ಮಧ್ಯಾಹ್ನ 1 ಗಂಟೆ ಸುಮಾರಿಗೆ ಗುಡುಗು– ಸಿಡಿಲಿನ ಅಬ್ಬರ ಆರಂಭವಾಯಿತು. ಸಂಜೆ 4 ಗಂಟೆ ವೇಳೆಗೆ ಬಿರುಗಾಳಿ ಸಹಿತ ಮಳೆ ಆರ್ಭಟಿಸಿತು. ಚಿಕ್ಕಮಗಳೂರು ನಗರ, ಬಾಳೆಹೊನ್ನೂರು, ಕಳಸ, ಕೊಪ್ಪ, ಆಲ್ದೂರು ಸುತ್ತಮುತ್ತ ಮಳೆ ಸುರಿಯಿತು.

ಉಡುಪಿ ಜಿಲ್ಲೆಯ ವಿವಿಧೆಡೆ ಸಂಜೆ ಭಾರಿ ಗಾಳಿ ಬೀಸಿದ್ದು, ಸಾಧಾರಣ ಮಳೆಯಾಗಿದೆ. ಗಾಳಿಗೆ ಹಲವೆಡೆ ಮರಗಳು ನೆಲಕ್ಕುರುಳಿವೆ. ಉಡುಪಿಯ ಕಡಿಯಾಳಿ ಕಟ್ಟೆ ಆಚಾರ್ಯ ಮಾರ್ಗದ ಮನೆಯೊಂದರ ಮೇಲೆ ಮರ ಬಿದ್ದಿದೆ. ಮನೆಯೊಳಗಿದ್ದ ರಾಘವೇಂದ್ರ ಭಟ್ ಹಾಗೂ ಪತ್ನಿ ನೀರಜಾ ಭಟ್ ಅವರಿಗೆ ಗಾಯವಾಗಿದ್ದು, ಆಸ್ಪತ್ರೆಗೆ ಸೇರಿಸಲಾಗಿದೆ.

ಮೂಡಬೆಟ್ಟು ವಾರ್ಡಿನಲ್ಲಿ ಮಳೆ ಹಾಗೂ ಗಾಳಿಯಿಂದಾಗಿ ಭಾರೀ ಗಾತ್ರದ ಮರ ಮೂರು ಮನೆಗಳ ಮೇಲೆ ಬಿದ್ದು ಹಾನಿ ಉಂಟಾಗಿದೆ. ಹಿರಿಯಡ್ಕ ಸಮೀಪದ ಹಾಳು ಉಗ್ಗೆಲ್ ಎಂಬಲ್ಲಿನ ಇಂದಿರಾ ಸೇರಿಗಾರ್ತಿ ಎಂಬುವವರ ಮನೆಯ ಸಿಮೆಂಟ್ ಶೀಟ್‌ಗಳು ಹಾರಿಹೋಗಿವೆ. ಕಾರ್ಕಳ ತಾಲ್ಲೂಕಿನ ವಿವಿಧೆಡೆ ಅರ್ಧ ತಾಸಿಗೂ ಹೆಚ್ಚು ಕಾಲ ಗುಡುಗು, ಗಾಳಿ ಸಹಿತ ಮಳೆ ಸುರಿದಿದೆ.

ರಿಪ್ಪನ್‌ಪೇಟೆ (ಶಿವಮೊಗ್ಗ ಜಿಲ್ಲೆ): ರಿಪ್ಪನ್‌ಪೇಟೆ ಗ್ರಾಮ ಹಾಗೂ ಹೋಬಳಿ ವ್ಯಾಪ್ತಿಯಲ್ಲಿ ಸೋಮವಾರ ಮಧ್ಯಾಹ್ನ ಗುಡುಗು, ಸಿಡಿಲು ಸಹಿತ ಆಲಿಕಲ್ಲು ಮಳೆ ಸುರಿಯಿತು.

ಬೆಂಗಳೂರಿನ ಕಬ್ಬನ್ ರಸ್ತೆಯಲ್ಲಿ ಸೋಮವಾರ ಸುರಿದ ಭಾರಿ ಮಳೆ ನಡುವೆ ಸಾಗಿದ ವಾಹನ ಸವಾರರು – ಪ್ರಜಾವಾಣಿ ಚಿತ್ರ

ಆಲಿಕಲ್ಲು ಮಳೆ; ಸಿಡಿಲಿಗೆ ವೃದ್ಧೆ ಸಾವು

ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ತಾಲ್ಲೂಕಿನ ಇರಗಂಪಲ್ಲಿ ಸೋಮವಾರ ಸಂಜೆ ಮನೆಯೊಂದಕ್ಕೆ ಸಿಡಿಲು ಬಡಿದು ರಾಜಮ್ಮ(70) ಎಂಬುವರು ತೀವ್ರ ಸುಟ್ಟಗಾಯಗಳಿಂದ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಮನೆ ವರಾಂಡದಲ್ಲಿದ್ದ ವಸ್ತುಗಳನ್ನು ಒಳಗೆ ತರಲು ಹೋದ ರಾಜಮ್ಮ ಅವರಿಗೆ ಸಿಡಿಲು ಬಡಿಯಿತು.

ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರು ಮತ್ತು ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕಿನ ಹಲವೆಡೆ ಸೋಮವಾರ ಮಧ್ಯಾಹ್ನ ಅರ್ಧ ತಾಸು ಆಲಿಕಲ್ಲು ಮಳೆ ಸುರಿದಿದೆ.

ಮಾಗಡಿ ತಾಲ್ಲೂಕಿನ ವೀರೇಗೌಡನದೊಡ್ಡಿ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ಆಲಿಕಲ್ಲುಗಳು ಗುಡ್ಡೆಯಾಗಿ ಬಿದ್ದಿದ್ದವು.

ಹುಬ್ಬಳ್ಳಿ: ಕೆಎಂಸಿ–ಆರ್‌ಐ ಆಸ್ಪತ್ರೆಯಲ್ಲಿ ಮೃತದೇಹದ ಮರಣೋತ್ತರ ಪರೀಕ್ಷೆ

ಕುಟುಂಬಸ್ಥರ ಕಂಬನಿ; ಬಾಲಕಿ ಅಂತ್ಯಕ್ರಿಯೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಬಿಹಾರದ ರಿತೇಶಕುಮಾರ್‌ನಿಂದ(35) ದೌರ್ಜನ್ಯಕ್ಕೆ ಒಳಗಾಗಿ, ಆತನಿಂದ ಕೊಲೆಯಾದ 5 ವರ್ಷದ ಬಾಲಕಿಯ ಅಂತ್ಯಕ್ರಿಯೆಯು ನಗರದ ದೇವಾಂಗಪೇಟೆ ರುದ್ರಭೂಮಿಯಲ್ಲಿ ಸೋಮವಾರ ನೆರವೇರಿತು.

ಇದಕ್ಕೂ ಮುನ್ನ ಕೆಎಂಸಿ-ಆರ್‌ಐ ಆಸ್ಪತ್ರೆಯಲ್ಲಿ ಬಾಲಕಿಯ ಮೃತ ದೇಹವನ್ನು ಮರಣೋತ್ತರ ಪರೀಕ್ಷೆ ನಡೆಸಿ, ಕುಟುಂಬಸ್ಥರಿಗೆ ಹಸ್ತಾಂತರಿಸಲಾಯಿತು. ಮೆರವಣಿಗೆಯಲ್ಲಿ ಮೃತದೇಹವನ್ನು ಬಾಲಕಿಯ ಮನೆಗೆ ಒಯ್ದು ಅಂತಿಮ ವಿಧಿ–ವಿಧಾನ ನಡೆಸಲಾಯಿತು. ಪಾಲಕರು, ಕುಟುಂಬಸ್ಥರು ಮತ್ತು ಜನರು ಕಂಬನಿ ಮಿಡಿದರು.

ಸಚಿವ ಲಾಡ್ ಭೇಟಿ: ಕೆಎಂಸಿ-ಆರ್‌ಐ ಆಸ್ಪತ್ರೆಯ ಶವಾಗಾರಕ್ಕೆ ಭೇಟಿ ನೀಡಿದ ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್ ಅವರು, ಪ್ರಕರಣದ ಕುರಿತು ಜಿಲ್ಲಾಧಿಕಾರಿ ದಿವ್ಯ ಪ್ರಭು ಮತ್ತು ಪೊಲೀಸ್ ಕಮಿಷನರ್ ಎನ್. ಶಶಿಕುಮಾರ್ ಅವರಿಂದ ಮಾಹಿತಿ ಪಡೆದರು. ಆರೋಪಿಗೆ ಗುಂಡು ಹೊಡೆದ ಮತ್ತು ಆತನಿಂದ ಹಲ್ಲೆಗೊಳಗಾದ ಪೊಲೀಸ್ ಸಿಬ್ಬಂದಿ ಆರೋಗ್ಯ ವಿಚಾರಿಸಿದರು. ಕುಟುಂಬದವರಿಗೆ ಸಾಂತ್ವನ ಹೇಳಿದರು.

ಸಿಬ್ಬಂದಿ ಚೇತರಿಕೆ: ಘಟನೆಯಲ್ಲಿ ಆರೋಪಿಯಿಂದ ಹಲ್ಲೆಗೊಳಗಾದ ಪಿಎಸ್‌ಐ ಅನ್ನಪೂರ್ಣ ಆರ್. ಎಂ, ಸಿಬ್ಬಂದಿ ವೀರೇಶ ಮಹಾಜನಶೆಟ್ಟರ್ ಮತ್ತು ಯಶವಂತ ಮೊರಬ ಚೇತರಿಸಿಕೊಳ್ಳುತ್ತಿದ್ದಾರೆ. ರಿತೇಶಕುಮಾರ್ ದೇಹವನ್ನು ವಾರಸುದಾರರು ಇಲ್ಲದ ಕಾರಣ ಮರಣೋತ್ತರ ಪರೀಕ್ಷೆ ಮಾಡಿಲ್ಲ. ಕೆಎಂಸಿ-ಆರ್‌ಐ ಶವಾಗಾರದಲ್ಲಿ ಮೃತದೇಹ ಇಡಲಾಗಿದೆ.

ಹುಬ್ಬಳ್ಳಿಯಲ್ಲಿ ಸೋಮವಾರ ಬಾಲಕಿಯ ಅಂತ್ಯಕ್ರಿಯೆಗೂ ಮುನ್ನ ಮೆರವಣಿಗೆ ನಡೆಯಿತು –ಪ್ರಜಾವಾಣಿ ಚಿತ್ರ

ಸ್ಥಳ ಮಹಜರು ನಡೆಸಿದ ಪೊಲೀಸರು

ಆರೋಪಿ ರಿತೇಶಕುಮಾರ್‌ಗೆ ಗುಂಡು ಹೊಡೆದ ತಾರಿಹಾಳ ಬಳಿಯ ಖಾಲಿ ನಿವೇಶನದ ಸ್ಥಳವನ್ನು ಪೊಲೀಸರು ಸೋಮವಾರ ಮಹಜರು ನಡೆಸಿದರು. ಒಟ್ಟು 21 ವಸ್ತುಗಳನ್ನು ಗುರುತಿಸಿದ್ದಾರೆ. ಗುಂಡಿನ ಖಾಲಿ ಕೇಸ್ (4), ಪೊಲೀಸ್ ಶರ್ಟ್ ಗುಂಡಿ (6), ಟೋಪಿ (3), ನೇಮ್‌ಪ್ಲೇಟ್(2), ಗಡಿಯಾರ, ಪೊಲೀಸ್ ಬ್ಯಾಡ್ಜ್, ರಕ್ತದ ಕಲೆ, ಜೀಪ್ ಮೇಲೆ ಕಲ್ಲು ಎತ್ತಿ ಹಾಕಿದ್ದು, ಹೇರ್‌ಬಂಚ್, ವಾಕಿಟಾಕಿ ಬಿದ್ದಿರುವುದನ್ನು ಗುರುತಿಸಿದ್ದಾರೆ.

ರಿತೇಶಕುಮಾರ್ ಕುರಿತು ಮಾಹಿತಿ ಸಂಗ್ರಹಣೆಗೆ ಪೊಲೀಸರು ಬಿಹಾರಕ್ಕೆ ತೆರಳಿದ್ದಾರೆ. ವಾರಸುದಾರರು ಸಿಕ್ಕರೆ,ಮೃತದೇಹ ನೀಡುತ್ತೇವೆ. ಇಲ್ಲದಿದ್ದರೆ, ಕಾನೂನು ಪ್ರಕಾರ ಮುಂದಿನ ಕ್ರಮ ಕೈಗೊಳ್ಳಲಾಗುವುದು

ಎನ್. ಶಶಿಕುಮಾರ, ಪೊಲೀಸ್ ಕಮಿಷನರ್, ಹುಬ್ಬಳ್ಳಿ–ಧಾರವಾಡ ಮಹಾನಗರ

ಪೋಷಕರು ಮಕ್ಕಳನ್ನು ರಸ್ತೆಯಲ್ಲಿ ಬಿಡುವಾಗ ಎಚ್ಚರ ವಹಿಸಬೇಕು. ಸರ್ಕಾರ ಬಾಲಕಿ ಕುಟುಂಬದವರಿಗೆ ₹10 ಲಕ್ಷ ಪರಿಹಾರ ನೀಡುವುದಾಗಿ ಘೋಷಿಸಿದೆ. ಹೆಚ್ಚಿನ ಪರಿಹಾರಕ್ಕೆ ಮುಖ್ಯಮಂತ್ರಿಯವರನ್ನು ಕೋರುವೆ

ಸಂತೋಷ ಲಾಡ್, ಸಚಿವ

ರಿತೇಶಕುಮಾರ್‌ಗೆ ಗುಂಡು ಹೊಡೆದ ಪಿಎಸ್‌ಐ ಅನ್ನಪೂರ್ಣಗೆ ಅತ್ಯುನ್ನತ ಪದಕ ನೀಡುವಂತೆ ಮುಖ್ಯಮಂತ್ರಿ, ಗೃಹ ಸಚಿವರಿಗೆ ಶಿಫಾರಸು ಮಾಡುವೆ

ಲಕ್ಷ್ಮೀ ಹೆಬ್ಬಾಳಕರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ

'ಅಪರಾಧ ಕೃತ್ಯ: ಕಾರ್ಮಿಕ ಇಲಾಖೆ ಜೊತೆ ಚರ್ಚೆ'

ಬೆಂಗಳೂರು: 'ಹೊರ ರಾಜ್ಯದಿಂದ ಬಂದವರಿಂದ ಹೆಚ್ಚು ಅಪರಾಧ ಪ್ರಕರಣಗಳು ನಡೆಯುತ್ತಿರುವುದನ್ನು ನೋಡುತ್ತಿದ್ದೇವೆ. ಅನೇಕ ಕಡೆ ಕಟ್ಟಡ ಕಾರ್ಮಿಕರಿಂದ ಅಪರಾಧ ಕೃತ್ಯಗಳು ನಡೆದಿವೆ. ಈ ಬಗ್ಗೆ ಕಾರ್ಮಿಕ ಇಲಾಖೆಯ ಅಧಿಕಾರಿಗಳ ಜೊತೆ ಜಂಟಿಯಾಗಿ ಸಭೆ ಮಾಡಿ ಮುಂದಿನ ತೀರ್ಮಾನ ತೆಗೆದುಕೊಳ್ಳಲಾಗುವುದು' ಎಂದು ಗೃಹ ಸಚಿವ ಜಿ. ಪರಮೇಶ್ವರ ತಿಳಿಸಿದರು.

ಹುಬ್ಬಳ್ಳಿಯಲ್ಲಿ ಮಗುವಿನ ಮೇಲೆ ಅತ್ಯಾಚಾರ ಯತ್ನ ಮತ್ತು ಕೊಲೆ ಘಟನೆ ಕುರಿತು ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಹೊರ ರಾಜ್ಯದ ಸಾಕಷ್ಟು ಜನ ಬೆಂಗಳೂರಿಗೆ ಬರುತ್ತಾರೆ. ಹೀಗೆ ಬಂದವರಿಗೆ ಇಲ್ಲಿನ ಸಂಸ್ಕೃತಿ, ಜನರ ಭಾವನೆ ಅರ್ಥ ಆಗುವುದಿಲ್ಲವೊ ಗೊತ್ತಿಲ್ಲ. ಅವರು ಆ ರೀತಿ ವರ್ತಿಸುತ್ತಿದ್ದಾರೆ' ಎಂದರು.

'ಹುಬ್ಬಳ್ಳಿಯಲ್ಲಿ ಬಿಹಾರ ಮೂಲದ ವ್ಯಕ್ತಿ ಐದು ವರ್ಷದ ಮಗುವನ್ನು ಎತ್ತಿಕೊಂಡು ಹೋಗಿ ಕೊಲೆ ಮಾಡಿದ್ದಾನೆ. ಸ್ಥಳ ಪರಿಶೀಲನೆಗೆ ಕರೆದುಕೊಂಡು ಹೋಗುವಾಗ ಪೊಲೀಸರ ಮೇಲೆ ಆರೋಪಿ ದಾಳಿ ಮಾಡಿದ್ದಾನೆ. ಪೊಲೀಸರು ಅವರ ಆತ್ಮರಕ್ಷಣೆ ಮಾಡಿಕೊಳ್ಳಬೇಕಲ್ಲವೇ? ನಾನು ತಕ್ಷಣ ಅಧಿಕಾರಿಗಳ ನೇತೃತ್ವದಲ್ಲಿ ತನಿಖೆ ಮಾಡಲು ಸೂಚಿಸಿದ್ದೇನೆ. ತನಿಖೆಯ ನಂತರ ಸತ್ಯಾಂಶ ಗೊತ್ತಾಗಲಿದೆ' ಎಂದರು.

ಆರ್‌ಟಿಪಿಎಸ್‌ನಲ್ಲಿ ಬೆಂಕಿ ಅವಘಡ



ರಾಯಚೂರಿನ ಆರ್‌ಟಿಪಿಎಸ್‌ನ ನಾಲ್ಕನೇ ಘಟಕದಲ್ಲಿ ಹೊತ್ತಿಕೊಂಡಿದ್ದ ಬೆಂಕಿ

ಒಂದನೇ ಪುಟದಿಂದ...

ಪರಿವರ್ತಕ ಸುಟ್ಟು ಕರಕಲಾಗಿದ್ದು, ಉಳಿದ ಉಪಕರಣಗಳಿಗೂ ಹಾನಿಯಾಗಿದೆ ಎಂದು ತಿಳಿಸಿವೆ.

ಬೆಂಕಿ ಅವಘಡದಿಂದ ಎಷ್ಟು ನಷ್ಟವಾಗಿದೆ ಎನ್ನುವುದು ಸ್ಪಷ್ಟವಾಗಿಲ್ಲ. ಅಧಿಕಾರಿಗಳು ಇನ್ನೂ ಪರಿಶೀಲನೆ ಮಾಡುತ್ತಿದ್ದಾರೆ. ಸದ್ಯಕ್ಕೆ 210 ಮೆ.ವ್ಯಾ ವಿದ್ಯುತ್ ಉತ್ಪಾದಿಸುವ ಘಟಕವನ್ನು ಸ್ಥಗಿತಗೊಳಿಸಲಾಗಿದೆ.

ಆರ್‌ಟಿಪಿಎಸ್‌ನ ಎಂಟು ಘಟಕಗಳ ಪೈಕಿ ಒಂದು ಕಾರ್ಯನಿರ್ವಹಿಸುತ್ತಿಲ್ಲ. ಮೂರು ಘಟಕಗಳಲ್ಲಿ ಉತ್ಪಾದನೆ ಮಾಡುತ್ತಿಲ್ಲ. ಅಲ್ಲಿ ನಿರ್ವಹಣೆ ಕಾರ್ಯ ನಡೆದಿದೆ. ಯರಮರಸ್ ಶಾಖೋತ್ಪನ್ನ ವಿದ್ಯುತ್ ಸ್ಥಾವರದ (ವೈಟಿಪಿಎಸ್) ಎರಡನೇ ಘಟಕವೂ ಉತ್ಪಾದನೆ ನಿಲ್ಲಿಸಿದ್ದು, ಕಲ್ಲಿದ್ದಲು ಆಧರಿತ ವಿದ್ಯುತ್ ಕೇಂದ್ರಗಳ ಉತ್ಪಾದನೆ ಕುಸಿದಿದೆ ಎಂದು ಮೂಲಗಳು ತಿಳಿಸಿವೆ.

ಬೆಂಕಿ ಅವಘಡ ಕುರಿತು ಪ್ರತಿಕ್ರಿಯೆ ಪಡೆಯಲು ಆರ್‌ಟಿಪಿಎಸ್ ವ್ಯವಸ್ಥಾಪಕ ನಿರ್ದೇಶಕರನ್ನು ಮೊಬೈಲ್ ಮೂಲಕ ಸಂಪರ್ಕಿಸಲು ಪ್ರಯತ್ನಿಸಿದರೂ ಅವರು ಸಂಪರ್ಕಕ್ಕೆ ಸಿಗಲಿಲ್ಲ.

ಅರ್ಥಶಾಸ್ತ್ರ: ಮೌಲ್ಯಮಾಪನದಲ್ಲಿ ಲೋಪ

ವಿದ್ಯಾರ್ಥಿನಿಯ 6 ಅಂಕಗಳಿಗೆ ಕತ್ತರಿ

ಪ್ರಜಾವಾಣಿ ವಾರ್ತೆ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನ ಸರ್ಕಾರಿ ಪದವಿ ಪೂರ್ವ ಕಾಲೇಜೊಂದರ ವಾಣಿಜ್ಯ ವಿಭಾಗದ ವಿದ್ಯಾರ್ಥಿನಿಯೊಬ್ಬರು, ಉತ್ತರ ಪತ್ರಿಕೆ ಮೌಲ್ಯಮಾಪಕರು ಎಸಗಿದ ತಪ್ಪಿನಿಂದಾಗಿ ಅರ್ಥಶಾಸ್ತ್ರ ವಿಷಯದಲ್ಲಿ 6 ಅಂಕ ಕಳೆದುಕೊಂಡು, ಶೇ 100ರ ಬದಲು 94 ಅಂಕಗಳನ್ನು ಪಡೆಯುವಂತಾಗಿದೆ.

ಅರ್ಥಶಾಸ್ತ್ರ ವಿಷಯದ 38ನೇ ಪ್ರಶ್ನೆಗೆ ಮೌಲ್ಯಮಾಪಕರು ಸೊನ್ನೆ ಅಂಕ ನೀಡಿರುವುದು ಉತ್ತರ ಪತ್ರಿಕೆಯ ಪ್ರತಿಯನ್ನು ತರಿಸಿ ನೋಡಿದಾಗ ಗೊತ್ತಾಗಿದೆ. ಆದರೆ, ಆ ವಿದ್ಯಾರ್ಥಿನಿ ಉಳಿದೆಲ್ಲ ಪ್ರಶ್ನೆಗಳಂತೆ ಆ ಪ್ರಶ್ನೆಗೂ ಸರಿಯಾದ ಉತ್ತರ ಬರೆದಿದ್ದರು. ಅದಕ್ಕೆ 6 ಅಂಕ ಸಿಕ್ಕಿದ್ದರೆ ಆಕೆಗೆ ಅರ್ಥಶಾಸ್ತ್ರದಲ್ಲಿ ಶೇ 100 ಅಂಕಗಳು ಬರುತ್ತಿದ್ದವು.

ವಿದ್ಯಾರ್ಥಿನಿ 600ರಲ್ಲಿ 577 ಅಂಕ ಪಡೆದು ವಿಶಿಷ್ಟ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಇತಿಹಾಸದಲ್ಲಿ 94, ಅರ್ಥಶಾಸ್ತ್ರದಲ್ಲಿ 94, ಬ್ಯುಸಿನೆಸ್ ಸ್ಟಡೀಸ್‌ನಲ್ಲಿ 100, ಲೆಕ್ಕಶಾಸ್ತ್ರದಲ್ಲಿ 98, ಕನ್ನಡದಲ್ಲಿ 98 ಹಾಗೂ ಇಂಗ್ಲಿಷ್‌ನಲ್ಲಿ 93 ಅಂಕ ಪಡೆದಿದ್ದಾರೆ.

ಉತ್ತರ ಪತ್ರಿಕೆಯ ಪ್ರತಿ ಪಡೆಯಲು ವಿದ್ಯಾರ್ಥಿನಿ ₹530 ಶುಲ್ಕ ಪಾವತಿಸಿದ್ದಾರೆ. ಮರು ಮೌಲ್ಯಮಾಪನಕ್ಕೆ ₹1,670 ಶುಲ್ಕ ಪಾವತಿಸಿ ಅರ್ಜಿ ಸಲ್ಲಿಸಿದ್ದಾರೆ. ಅರ್ಥಶಾಸ್ತ್ರ ವಿಷಯದಲ್ಲಿ ಶೇ 100 ಅಂಕ ಪಡೆಯುವಂತಹ ಪ್ರತಿಭಾನ್ವಿತ ವಿದ್ಯಾರ್ಥಿನಿಯು ಮೌಲ್ಯಮಾಪಕರರು ಎಸಗಿದ ತಪ್ಪನ್ನು ಸರಿಪಡಿಸಿಕೊಳ್ಳಲು ₹2,200 ತೆರಬೇಕಾಗಿದೆ.

'ಅರ್ಥಶಾಸ್ತ್ರದಲ್ಲಿ ಎಲ್ಲಕ್ಕಿಂತ ಹೆಚ್ಚು ಅಂಕ ನಿರೀಕ್ಷೆ ಮಾಡಿದ್ದೆ. ಆದರೆ, 94 ಅಂಕಗಳು ಬಂದಿದ್ದು ನೋಡಿ ನಿರಾಸೆಯಾಗಿತ್ತು. ಉತ್ತರ ಪತ್ರಿಕೆಯ ಪ್ರತಿ ತರಿಸಿಕೊಂಡು ನೋಡಿದಾಗ ನಾನು ಬರೆದ ಎಲ್ಲ ಉತ್ತರಗಳೂ ಸರಿಯಿದ್ದವು. 38ನೇ ಪ್ರಶ್ನೆಗೆ 6 ಅಂಕ ಸಿಗಬೇಕಿತ್ತು. ಆದರೆ ಸೊನ್ನೆ ಅಂಕ ನೀಡಲಾಗಿದೆ. ಏಕೆ ಹೀಗಾಗಿದೆಯೋ ಗೊತ್ತಿಲ್ಲ. ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಿದ್ದೇನೆ. ಅರ್ಥಶಾಸ್ತ್ರದಲ್ಲೂ ಶೇ 100 ಅಂಕ ಸಿಗುವ ವಿಶ್ವಾಸವಿದೆ' ಎಂದು ಹೆಸರು ಬಹಿರಂಗಪಡಿಸಲು ಬಯಸದ ವಿದ್ಯಾರ್ಥಿನಿ 'ಪ್ರಜಾವಾಣಿ'ಗೆ ತಿಳಿಸಿದರು.



ದ್ವಿತೀಯ ಪಿ.ಯು ಅರ್ಥಶಾಸ್ತ್ರ ವಿಷಯದಲ್ಲಿ ಪ್ರಶ್ನೆಯೊಂದಕ್ಕೆ ಸೊನ್ನೆ ಅಂಕ ನೀಡಿರುವುದು

ಸಂಕ್ಷಿಪ್ತ ಸುದ್ದಿ

ರಾಜಣ್ಣ ವಿರುದ್ಧ ದೂರು

ಬೆಂಗಳೂರು: ಸಹಕಾರ ಸಚಿವ ಕೆ.ಎನ್. ರಾಜಣ್ಣ ಅವರ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಸಾಮಾಜಿಕ ಕಾರ್ಯಕರ್ತ ಭೀಮಪ್ಪ ಗುಂಡಪ್ಪ ಗಡಾದ ಅವರು ಇಲ್ಲಿನ ಜೆ.ಸಿ. ನಗರ ಠಾಣೆಗೆ ದೂರು ನೀಡಿದ್ದಾರೆ.

'ರಾಜಣ್ಣ ಅವರು ಗೋಪ್ಯತೆ ಕಾಪಾಡುವುದಾಗಿ ಪ್ರಮಾಣ ವಚನ ಸ್ವೀಕರಿಸಿದ್ದರು. ಆದರೆ, ಸಚಿವರಾಗಿ ಸದನದಲ್ಲಿ ಹನಿಟ್ರ್ಯಾಪ್ ವಿಚಾರ ಪ್ರಸ್ತಾಪ ಮಾಡಿದ್ದಾರೆ. ಆ ಮೂಲಕ ಸಂವಿಧಾನಕ್ಕೆ ಅಪಚಾರ ಎಸಗಿದ್ದಾರೆ' ಎಂದು ಆರೋಪಿಸಿ ದೂರು ನೀಡಿದ್ದಾರೆ.

'ದೂರು ಸ್ವೀಕರಿಸಲಾಗಿದೆ. ಕಾನೂನು ತಜ್ಞರ ಜತೆಗೆ ಚರ್ಚಿಸಿ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು' ಎಂದು ಪೊಲೀಸರು ತಿಳಿಸಿದ್ದಾರೆ.

ದೂರು ನೀಡಿದ ಬಳಿಕ ಮಾತನಾಡಿದ ಭೀಮಪ್ಪ ಅವರು 'ಪ್ರಜಾಪ್ರಭುತ್ವ ದೇಗುಲ ಎಂದು ಕರೆಯಲಾಗುವ ಸ್ಥಳದಲ್ಲಿ ಮಧುಬಲೆ (ಹನಿಟ್ರ್ಯಾಪ್) ವಿಚಾರವನ್ನು ರಾಜಣ್ಣ ಅವರು ಪ್ರಸ್ತಾಪ ಮಾಡಿದ್ದಾರೆ. ಅವರ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ಪೊಲೀಸರಿಗೆ ದೂರು ನೀಡಲಾಗಿದೆ' ಎಂದು ಹೇಳಿದರು.

ಕೂಡಲಸಂಗಮದಲ್ಲಿ 20ರಂದು ಸಭೆ

ಬಾಗಲಕೋಟೆ: 'ಪಂಚಮಸಾಲಿ ಮೀಸಲಾತಿ ಹೋರಾಟದ ರೂಪುರೇಷೆ ಸಿದ್ಧಪಡಿಸಲು ಮತ್ತು ಸಮಾಜದಲ್ಲಿನ ಭಿನ್ನಾಭಿಪ್ರಾಯಗಳಿಗೆ ಪರಿಹಾರ ಕಂಡುಕೊಳ್ಳಲು ಕೂಡಲಸಂಗಮದ ಪಂಚಮಸಾಲಿ ಪೀಠದಲ್ಲಿ ಏಪ್ರಿಲ್ 20ರಂದು ಮಧ್ಯಾಹ್ನ 3ಕ್ಕೆ ಸಮಾಜದ ರಾಜ್ಯಮಟ್ಟದ ಸಭೆ ಕರೆಯಲಾಗಿದೆ. ಸಮಾಜದ ರಾಷ್ಟ್ರ, ರಾಜ್ಯ ಘಟಕಗಳ ಅಧ್ಯಕ್ಷರು, ವಿವಿಧ ಘಟಕಗಳ ಪದಾಧಿಕಾರಿಗಳು, ಸಚಿವರು, ಶಾಸಕರು ಸೇರಿ ಎಲ್ಲರೂ ಭಾಗವಹಿಸಬೇಕು' ಎಂದು ಕೂಡಲಸಂಗಮ ಪಂಚಮಸಾಲಿ ಪೀಠದ ಬಸವಜಯಮೃತ್ಯುಂಜಯ ಸ್ವಾಮೀಜಿ ಹೇಳಿದರು.



ಜಯಬಸವ ಮೃತ್ಯುಂಜಯ ಸ್ವಾಮೀಜಿ

ಸಿಬಿಐ ಅಧಿಕಾರಿ ಸೋಗು ಆರೋಪಿಗೆ ಜಾಮೀನು

ಬೆಂಗಳೂರು: ಸಿಬಿಐ ಅಧಿಕಾರಿಯ ಸೋಗಿನಲ್ಲಿ ವ್ಯಕ್ತಿಯೊಬ್ಬರಿಗೆ ದೂರವಾಣಿ ಕರೆ ಮಾಡಿ ಅವರಿಂದ ₹5.80 ಲಕ್ಷ ಹಣವನ್ನು ಬ್ಯಾಂಕ್ ಖಾತೆಗೆ ವರ್ಗಾಯಿಸಿಕೊಂಡ ಆರೋಪಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಎಂಟು ತಿಂಗಳಿಂದ ಜೈಲಿನಲ್ಲಿದ್ದ ತಮಿಳುನಾಡಿನ ಶಿಕ್ಷಕರೊಬ್ಬರಿಗೆ ಹೈಕೋರ್ಟ್ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ.

ಜಾಮೀನು ಕೋರಿ ತಿರುವಾರೂರ್‌ನ ಕೆ.ಅರಿವೊಳಿ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಸ್. ವಿಶ್ವಜಿತ್ ಶೆಟ್ಟಿ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ.

'ಆರೋಪಿ ಶಾಲಾ ಶಿಕ್ಷಕರಿದ್ದಾರೆ. ಅವರಿಗೆ ಯಾವುದೇ ಕ್ರಿಮಿನಲ್ ಹಿನ್ನೆಲೆ ಇಲ್ಲ. ಈಗಾಗಲೇ ತನಿಖೆ ಪೂರ್ಣಗೊಂಡು ವಿಚಾರಣಾ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಕೆಯಾಗಿರುವ ಕಾರಣ ಅವರನ್ನು ಬಂಧನದಲ್ಲಿ ಮುಂದುವರಿಸುವ ಅಗತ್ಯ ಇಲ್ಲ' ಎಂಬ ಅಭಿಪ್ರಾಯದೊಂದಿಗೆ ನ್ಯಾಯಪೀಠ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ.

ಸುಭಾಷಿತ

ನಾಳೆ ಹೇಗೆ ಎಂಬ ಪ್ರಶ್ನೆಗಿಂತಲೂ ಇಂದು ಹೇಗೆ ಎಂಬ ಪ್ರಶ್ನೆಯು ಬದುಕಿಗೆ ಮಹತ್ತರವಾಗಿ ಕಾಣುತ್ತದೆ.

–ಶಿವರಾಮ ಕಾರಂತ

ಎನ್‌ಕೌಂಟರ್ 'ತ್ವರಿತ ನ್ಯಾಯ' ಅಲ್ಲ ನ್ಯಾಯದಾನ ಇನ್ನಷ್ಟು ಚುರುಕಾಗಲಿ

ಹುಬ್ಬಳ್ಳಿಯಲ್ಲಿ ಐದು ವರ್ಷದ ಬಾಲಕಿಯ ಅಪಹರಣ ಮತ್ತು ಕೊಲೆ ಪ್ರಕರಣದ ಆರೋಪಿ ಎನ್‌ಕೌಂಟರ್‌ನಲ್ಲಿ ಮೃತಪಟ್ಟಿರುವುದು ಸಾರ್ವಜನಿಕರ ಸಂಭ್ರಮಕ್ಕೆ ಕಾರಣವಾಗಿದೆ. ಸಿ.ಸಿ. ಟಿ.ವಿ. ಕ್ಯಾಮೆರಾ ದೃಶ್ಯಾವಳಿ ಹಾಗೂ ಸ್ಥಳೀಯರು ನೀಡಿದ ಮಾಹಿತಿ ಆಧರಿಸಿ ಆರೋಪಿಯನ್ನು ಪೊಲೀಸರು ತಕ್ಷಣ ವಶಕ್ಕೆ ಪಡೆದಿದ್ದರು. ಸ್ಥಳ ಪರಿಶೀಲನೆಗೆ ಕರೆದೊಯ್ದಾಗ, ಹಲ್ಲೆ ನಡೆಸಿ ತಪ್ಪಿಸಿಕೊಳ್ಳಲು ಯತ್ನಿಸಿದ ಆರೋಪಿಯ ಮೇಲೆ ಗುಂಡು ಹಾರಿಸಲಾಗಿದೆ ಎನ್ನುವುದು ಪೊಲೀಸರ ಹೇಳಿಕೆ. ಆರೋಪಿಯ ಮೇಲೆ ಗುಂಡು ಹಾರಿಸಿರುವ ಪಿಎಸ್‌ಐ ಅನ್ನಪೂರ್ಣ ಒಮ್ಮಿಂದೊಮ್ಮೆಗೆ ಜನಮೆಚ್ಚುಗೆಗೆ ಒಳಗಾಗಿದ್ದಾರೆ. ಅಪಹರಣ ಮತ್ತು ಕೊಲೆಗೀಡಾಗಿರುವುದು ಪುಟ್ಟ ಬಾಲಕಿ ಎನ್ನುವ ಸಂಗತಿ ಸಾರ್ವಜನಿಕ ವಲಯದಲ್ಲಿ ಸಹಜವಾಗಿಯೇ ಸಂಕಟ ಹಾಗೂ ಆಕ್ರೋಶವನ್ನು ಉಂಟುಮಾಡಿದೆ. ಪೊಲೀಸರ ಗುಂಡೇಟಿಗೆ ಆರೋಪಿ ಬಲಿಯಾಗಿರುವ ಪ್ರಕರಣವನ್ನು ಘಟಿಸಿದ ಬರ್ಬರ ಅಪರಾಧಕ್ಕೆ ದೊರೆತಿರುವ ತ್ವರಿತ ಶಿಕ್ಷೆಯ ರೂಪದಲ್ಲಿ ವಿಶ್ಲೇಷಿಸಲಾಗುತ್ತಿದೆ. ಮಹಿಳೆಯರ ಮೇಲಿನ ಅತ್ಯಾಚಾರ ಮತ್ತು ಕೊಲೆಯ ಪ್ರಕರಣಗಳು ತಾರ್ಕಿಕ ಅಂತ್ಯ ತಲುಪಲು ತೆಗೆದುಕೊಳ್ಳುವ ದೀರ್ಘಕಾಲ ಹಾಗೂ ಅನೇಕ ಪ್ರಕರಣಗಳಲ್ಲಿ ತಪ್ಪಿತಸ್ಥರು ಖುಲಾಸೆಯಾಗುವ, ಇನ್ನು ಕೆಲವು ಪ್ರಕರಣಗಳಲ್ಲಿ ತಪ್ಪಿತಸ್ಥರು ಪತ್ತೆಯೇ ಆಗದಿರುವ ಉದಾಹರಣೆಗಳು ಸಾರ್ವಜನಿಕರಲ್ಲಿ ಒಂದು ಬಗೆಯ ರೇಜಿಗೆಯನ್ನು ಹುಟ್ಟುಹಾಕಿವೆ. ಈ ರೇಜಿಗೆಯ ಕಾರಣದಿಂದಲೇ ಅತ್ಯಾಚಾರ–ಕೊಲೆಯಂತಹ ಕೃತ್ಯಗಳು ನಡೆದಾಗ ತಪ್ಪಿತಸ್ಥರಿಗೆ ತಕ್ಷಣವೇ ಶಿಕ್ಷೆ ಆಗಬೇಕೆನ್ನುವ ಅಭಿಪ್ರಾಯಗಳು ವ್ಯಕ್ತವಾಗುತ್ತವೆ. ಅಪರಾಧಿಗಳನ್ನು ಸಾರ್ವಜನಿಕರ ತೆರಿಗೆ ಹಣದಲ್ಲಿ ಸಾಕಲಾಗುತ್ತಿದೆ ಎನ್ನುವ ಅಭಿಪ್ರಾಯವೂ ಇದೆ. ಹುಬ್ಬಳ್ಳಿಯ ಪ್ರಕರಣದಲ್ಲೂ ಇಂಥ ಭಾವೋದ್ವೇಗವನ್ನು ಗುರುತಿಸಬಹುದು. ಮನೆಯಂಗಳದಲ್ಲಿ ಆಡುತ್ತಿದ್ದ ಬಾಲಕಿಯನ್ನು ಅಪಹರಿಸಿ ಕೊಂದಿದ್ದಾನೆ ಎನ್ನಲಾದ ಆರೋಪಿಯನ್ನು ಎನ್‌ಕೌಂಟರ್ ಮಾಡುವಂತೆ ಇಲ್ಲವೇ ತಮಗೆ ಒಪ್ಪಿಸುವಂತೆ ಸಾರ್ವಜನಿಕರು ಪೊಲೀಸ್ ಠಾಣೆಯ ಎದುರು ಜಮಾಯಿಸಿ, ಆಗ್ರಹ ಮಂಡಿಸಿದ್ದರು. ಕಾಕತಾಳೀಯ ಎನ್ನುವಂತೆ, ಆರೋಪಿಯು ಪೊಲೀಸರ ಎನ್‌ಕೌಂಟರ್‌ನಿಂದ ಮೃತಪಟ್ಟಿದ್ದು, ಆತನ ಸಾವಿನ ಸುದ್ದಿ ತಿಳಿದ ನಂತರ ಸಂಭ್ರಮವೂ ವ್ಯಕ್ತವಾಗಿದೆ.

ಯಾವುದೇ ಪ್ರಭಾವದಿಂದಲೂ ತಪ್ಪಿತಸ್ಥರು ಶಿಕ್ಷೆಯಿಂದ ತಪ್ಪಿಸಿಕೊಳ್ಳುವುದು ಸಾಧ್ಯವಿಲ್ಲ ಎನ್ನುವ ಪರಿಸ್ಥಿತಿ ನಿರ್ಮಾಣ ಆಗಬೇಕಾಗಿದೆ

ಹೀನ ಕೃತ್ಯ ಎಸಗುವವರಿಗೆ ಕಠಿಣ ಸಂದೇಶ ರವಾನೆಯಾಗಿದೆ ಎನ್ನುವುದು ಎನ್‌ಕೌಂಟರ್ ಸಮರ್ಥಕರ ಅಭಿಪ್ರಾಯ. ಹೋದ ವರ್ಷ ಹುಬ್ಬಳ್ಳಿಯಲ್ಲೇ ನಡೆದಿದ್ದ ನೇಹಾ ಹಿರೇಮಠ ಮತ್ತು ಅಂಜಲಿ ಅಂಬಿಗೇರ ಅವರ ಕೊಲೆಗಳ ಸಂದರ್ಭದಲ್ಲೂ ಆರೋಪಿಗಳನ್ನು ಎನ್‌ಕೌಂಟರ್ ಮಾಡಬೇಕು ಎಂಬ ಆಗ್ರಹ ಕೇಳಿಬಂದಿತ್ತು. ಈಗ ಬಾಲಕಿಯ ಕೊಲೆ ಪ್ರಕರಣದಲ್ಲಿ ಆರೋಪಿ ಎನ್‌ಕೌಂಟರ್‌ಗೆ ಬಲಿಯಾಗಿರುವುದು 'ತ್ವರಿತ ನ್ಯಾಯ'ದ ಮಾದರಿಯಾಗಿ ಕೆಲವರಿಗೆ ಕಾಣಿಸುತ್ತಿದೆ. ಆದರೆ, ಪ್ರಜಾಪ್ರಭುತ್ವದ ಸಾಂವಿಧಾನಿಕ ವ್ಯವಸ್ಥೆಯಲ್ಲಿ ಎನ್‌ಕೌಂಟರ್‌ಗಳು ಸಮರ್ಥನೀಯವಲ್ಲ. ನ್ಯಾಯಾಲಯದ ಮೂಲಕವಷ್ಟೇ ತೀರ್ಮಾನವಾಗಬೇಕಾದ ಅಪರಾಧ ನಿರ್ಣಯ ಮತ್ತು ಶಿಕ್ಷೆಯ ಸ್ವರೂಪವನ್ನು ಪೊಲೀಸರಾಗಲೀ ಸಾರ್ವಜನಿಕರಾಗಲೀ ತೀರ್ಮಾನಿಸುವುದು ಕಾನೂನಿಗೆ ವಿರುದ್ಧ. ಸಾರ್ವಜನಿಕರ ಅಭಿಪ್ರಾಯಗಳು ಅಥವಾ ಭಾವುಕತೆಯ ಆಧಾರದಲ್ಲಿ ಪೊಲೀಸರು ಕಾರ್ಯನಿರ್ವಹಿಸಬಾರದು. 2019ರಲ್ಲಿ ಹೈದರಾಬಾದ್‌ನಲ್ಲಿ ಪಶುವೈದ್ಯೆಯೊಬ್ಬರ ಮೇಲೆ ಅತ್ಯಾಚಾರ ನಡೆಸಿದ್ದ ಪ್ರಕರಣದಲ್ಲಿ ನಾಲ್ವರು ಆರೋಪಿಗಳನ್ನು ಪೊಲೀಸರು ಎನ್‌ಕೌಂಟರ್‌ನಲ್ಲಿ ಕೊಂದಿದ್ದು ದೇಶದ ಗಮನ ಸೆಳೆದಿತ್ತು. ಮಹಾರಾಷ್ಟ್ರದಲ್ಲಿ ಹೋದ ವರ್ಷ ಅತ್ಯಾಚಾರ ಆರೋಪಿಯೊಬ್ಬನ ಮೇಲೆ ನಡೆದ ಎನ್‌ಕೌಂಟರ್ ದೊಡ್ಡ ಸುದ್ದಿಯಾಗಿತ್ತು. ಈ ಎರಡೂ ಪ್ರಕರಣಗಳಲ್ಲಿ ಉದ್ದೇಶಪೂರ್ವಕವಾಗಿ ಎನ್‌ಕೌಂಟರ್ ನಡೆಸಲಾಗಿದೆ ಎಂದು ವರದಿಗಳು ಹೇಳುತ್ತಿದ್ದು, ಪೊಲೀಸರ ಮೇಲೆ ದೋಷಾರೋಪ ಹೊರಿಸಲಾಗಿದೆ. ಹುಬ್ಬಳ್ಳಿಯ ಎನ್‌ಕೌಂಟರ್ ಪ್ರಕರಣವನ್ನೂ ಸದ್ಯಕ್ಕೆ ಅನುಮಾನದಿಂದಲೇ ನೋಡಬೇಕಾಗಿದ್ದು, ತನಿಖೆ ನಡೆದು ಸತ್ಯಾಂಶ ಬೆಳಕಿಗೆ ಬರುವುದು ಅಗತ್ಯ. ಹುಬ್ಬಳ್ಳಿಯಲ್ಲಿ ನಡೆದಿರುವ ಎನ್‌ಕೌಂಟರ್‌ನಲ್ಲಿ ಪೊಲೀಸ್ ಇಲಾಖೆ ಹಾಗೂ ನ್ಯಾಯಾಂಗ ಗಮನಿಸಬೇಕಾದ ಸಂಗತಿಗಳಿವೆ. ಆರೋಪಕ್ಕೆ ಗುರಿಯಾಗಿ, ಪೊಲೀಸರ ಗುಂಡೇಟಿಗೆ ಬಲಿಯಾಗಿರುವ ವ್ಯಕ್ತಿ ಬಿಹಾರ ಮೂಲದವನು. ರಾಜ್ಯಕ್ಕೆ ವಲಸೆ ಬಂದವರು ಭಾಗಿಯಾಗುತ್ತಿರುವ ಅಪರಾಧ ಪ್ರಕರಣಗಳು ಹೆಚ್ಚುತ್ತಿರುವುದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು. ವಲಸಿಗರ ಮೇಲೆ ನಿಗಾ ಇಡಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು. ಎನ್‌ಕೌಂಟರ್ ಸಮರ್ಥನೆಯ ಮನಃಸ್ಥಿತಿಯಿಂದ ಸಾರ್ವಜನಿಕರನ್ನು ಹೊರತರುವಲ್ಲಿ ಕಾನೂನು ವ್ಯವಸ್ಥೆ ಕೂಡ ಚುರುಕಾಗಬೇಕಾಗಿದೆ. ಪ್ರಕರಣಗಳನ್ನು ತ್ವರಿತಗತಿಯಲ್ಲಿ ತಾರ್ಕಿಕ ಅಂತ್ಯ ಮುಟ್ಟಿಸುವ ದಿಸೆಯಲ್ಲಿ ಪೊಲೀಸ್ ಇಲಾಖೆ ಹಾಗೂ ನ್ಯಾಯಾಂಗ ಚುರುಕಾಗಬೇಕಾಗಿದೆ. ಜಾತಿ, ಧರ್ಮ, ಹಣ, ಅಧಿಕಾರ ಸೇರಿದಂತೆ ಯಾವುದೇ ಪ್ರಭಾವದಿಂದಲೂ ತಪ್ಪಿತಸ್ಥರು ಶಿಕ್ಷೆಯಿಂದ ತಪ್ಪಿಸಿಕೊಳ್ಳುವುದು ಸಾಧ್ಯವಿಲ್ಲ ಎನ್ನುವ ಪರಿಸ್ಥಿತಿ ರೂಪುಗೊಳ್ಳಬೇಕಾಗಿದೆ.

ದಿನದ ಟ್ವೀಟ್

ಮಹನೀಯರ ಆದರ್ಶ ಪಾಲನೆಯಾಗಲಿ

ಗಣ್ಯರ ಹೆಸರಿನಲ್ಲಿ ಜಯಂತಿ ಆಚರಿಸುತ್ತಾರೆ, ಆದರೆ ಅವರ ತತ್ವವನ್ನು ಮಾತ್ರ ಪಾಲಿಸುವುದಿಲ್ಲ. ಅಂಬೇಡ್ಕರ್ ಜಯಂತಿ ಆಚರಿಸುತ್ತಾರೆ, ಆದರೆ ಅವರು ಅನುಸರಿಸುತ್ತಿದ್ದ ಶಿಸ್ತು, ಶ್ರದ್ಧೆ, ಸಮಯಪಾಲನೆ, ಓದಿನಲ್ಲಿ ಅವರಿಗಿದ್ದ ಆಸಕ್ತಿ ಯಾರಿಗೂ ಬೇಡ. ಸಂವಿಧಾನದಲ್ಲಿ ಸೂಚಿಸಿರುವ ಹಕ್ಕು ಬೇಕು, ಆದರೆ ಅದರೊಟ್ಟಿಗೆ ಬರುವ ಜವಾಬ್ದಾರಿ ಬೇಡ. ಹೀಗೆ ತಮಗೆ ಅನುಕೂಲವಾಗುವ ಅಂಶಗಳನ್ನು ಮಾತ್ರ ತೆಗೆದುಕೊಳ್ಳುತ್ತಾರೆ.

ರೋಹಿತ್ ಸಿಂಹ, ಎಂಜಿನಿಯರ್

ಕಿಡಿನುಡಿ

ನಮ್ಮದು ಮಹಾತ್ಮ ಗಾಂಧಿ ಪ್ರತಿಪಾದಿಸಿದ ಸಾಮರಸ್ಯದ ಹಿಂದುತ್ವ. ಬಿಜೆಪಿಯವರು ಗೋಡ್ಸೆಯ ತತ್ವವನ್ನು ಮುಂದಿಟ್ಟುಕೊಂಡು ಮಾತನಾಡುತ್ತಾರೆ. ನಾವು ಆ ಹಿಂದುತ್ವ ಪಾಲಿಸುವವರಲ್ಲ.

ಕೆ.ಎನ್.ರಾಜಣ್ಣ, ಸಹಕಾರ ಸಚಿವ

25 ವರ್ಷಗಳ ಹಿಂದೆ

ಶನಿವಾರ, 15-4-2000

• **ಪರಾಮರ್ಶೆ– ಅನಂತ್ ಸಮರ್ಥನೆ ಕುರೂಪ ಯತ್ನ– ಕೃಷ್ಣ ಆಕ್ರೋಶ**

ಬೆಂಗಳೂರು, ಏ. 14– ಸಂವಿಧಾನ ಪರಾಮರ್ಶೆಯ ವಿಚಾರದಲ್ಲಿ ಕೇಂದ್ರದ ಸಂಸ್ಕೃತಿ ಸಚಿವ ಅನಂತ ಕುಮಾರ್ ಮತ್ತು ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರ ನಡುವೆ ಇಂದು ಇಲ್ಲಿ ಒಂದೇ ವೇದಿಕೆಯಲ್ಲಿ ಸಾರ್ವಜನಿಕರ ಎದುರೇ ಗಂಭೀರವಾದ ಭಿನ್ನಾಭಿಪ್ರಾಯ ಬಹಿರಂಗವಾಯಿತು.

ಬಿ.ಆರ್. ಅಂಬೇಡ್ಕರ್ ಭವನದ ಉದ್ಘಾಟನಾ ಸಮಾರಂಭದಲ್ಲಿ, ಅಂಬೇಡ್ಕರ್ ಜಯಂತಿ ದಿನವಾದ ಇಂದು, ಅವರ ಭಾವಚಿತ್ರವನ್ನು ಅನಾವರಣ ಮಾಡಿದ ಅನಂತ ಕುಮಾರ್ ಅವರು ಸಂವಿಧಾನ ಪರಾಮರ್ಶೆಯ ವಿಚಾರವನ್ನು ಪರೋಕ್ಷವಾಗಿ ಸಮರ್ಥಿಸಿಕೊಂಡರು.

ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರು ಈ ವಾದವನ್ನು ಒಪ್ಪದೆ, ಅಂಬೇಡ್ಕರ್ ಅವರು ರಚಿಸಿದ ಸಂವಿಧಾನವನ್ನು ಜೋಪಾನವಾಗಿ ಕಾಪಾಡುವುದು ನಮ್ಮೆಲ್ಲರ ಕರ್ತವ್ಯ. ಅದನ್ನು ಸುಂದರ ಮಾಡುತ್ತೇವೆ ಎನ್ನುತ್ತಾ ಮತ್ತಷ್ಟು ಕುರೂಪ ಮಾಡುವುದಕ್ಕೆ ಯಾರೂ ಕೈ ಹಾಕಬಾರದು ಎಂದು ತಿರುಗುಬಾಣ ಬಿಟ್ಟರು.

• **ಮಹಾಭಾರತದಿಂದ ಕ್ರಿಕೆಟ್‌ವರೆಗೆ ಬಾಜಿ**

ಮುಂಬೈ, ಏ. 14 (ಪಿಟಿಐ)– ಬಾಜಿ ನಿನ್ನೆ ಮೊನ್ನೆಯ ಚಾಳಿಯಲ್ಲ, ಮಹಾಭಾರತದಲ್ಲಿಯೂ ರಾಜರು ಬಾಜಿ ಕಟ್ಟಿಯೇ ಅರಸೊತ್ತಿಗೆಯನ್ನು ಕಳೆದುಕೊಂಡಿದ್ದರು. ಆಗ ಪಗಡೆಯಿದ್ದರೆ ಈಗ ಅದರ ಸ್ಥಾನದಲ್ಲಿ ಕ್ರಿಕೆಟ್ ಇದೆ. ಅಷ್ಟೇ ವ್ಯತ್ಯಾಸ.

ಜೂಜು ಬಹಳ ರೀತಿಯಲ್ಲಿದೆ. ಒಂದು ತಂಡ ಎಷ್ಟು ರನ್ ಗಳಿಸಬಹುದು, ಬೌಲರ್ ಎಷ್ಟು ವಿಕೆಟ್ ಪಡೆಯಬಹುದು, ಉತ್ತಮ ಬ್ಯಾಟ್ಸ್‌ಮನ್, ಉತ್ತಮ ಬೌಲರ್, ಪಂದ್ಯ ಪುರುಷೋತ್ತಮ ಯಾರು... ಹೀಗೆ ಹಲವು ಬಗೆಗಳಿವೆ ಎಂದು ಪೊಲೀಸರು ಹೇಳುತ್ತಾರೆ.

50 ವರ್ಷಗಳ ಹಿಂದೆ

ಮಂಗಳವಾರ, 15-4-1975

• **'ಒಮ್ಮತವಿದ್ದರೆ ನಿಮ್ಮ ವರ್ಗದವರೂ ಮುಖ್ಯಮಂತ್ರಿ ಆಗಲು ಸಾಧ್ಯವಿತ್ತು'**

ಬೆಂಗಳೂರು, ಏ. 14– ರಾಜ್ಯದ ಹರಿಜನ–ಗಿರಿಜನ ಶಾಸಕರಲ್ಲಿ ಒಮ್ಮತವಿಲ್ಲ ಎಂದು ಕಾರ್ಮಿಕ ಖಾತೆ ರಾಜ್ಯ ಸಚಿವ ಕೆ. ಶ್ರೀರಾಮುಲು ಅವರು ಇಂದು ಇಲ್ಲಿ ವಿಷಾದ ವ್ಯಕ್ತಪಡಿಸಿದರು.

ರಾಜ್ಯದಲ್ಲಿರುವ 32 ಹರಿಜನ– ಗಿರಿಜನ ಶಾಸಕರು ಒಟ್ಟಾಗಿ ಒಂದೇ ಅಭಿಪ್ರಾಯ ಉಳ್ಳವರಾಗಿದ್ದಿದ್ದರೆ ಅವರಲ್ಲೊಬ್ಬರು ರಾಜ್ಯದ ಮುಖ್ಯಮಂತ್ರಿಯಾಗುವ ಸಾಧ್ಯತೆ ಇತ್ತೆಂದು ಅವರು ಅಭಿಪ್ರಾಯಪಟ್ಟರು.

ಎಚ್.ಎ.ಎಲ್ ಹಿಂದುಳಿದ ಮತ್ತು ದಲಿತ ಕಲ್ಯಾಣ ಸಮಿತಿ ಆಶ್ರಯದಲ್ಲಿ ಪುರಭವನದಲ್ಲಿ ಆಚರಿಸಲಾದ ಬಿ.ಆರ್. ಅಂಬೇಡ್ಕರ್ ಅವರ 84ನೇ ಜನ್ಮದಿನೋತ್ಸವ ಸಂದರ್ಭದಲ್ಲಿ ಸ್ಮರಣ ಸಂಚಿಕೆಯನ್ನು ಅವರು ಬಿಡುಗಡೆ ಮಾಡಿದರು.

'ಇಷ್ಟು ಮಂದಿ ಶಾಸಕರಲ್ಲಿಯೇ ನಾಲ್ಕು–ಐದು ಗುಂಪುಗಳಾಗಿವೆ' ಎಂದು ವಿಷಾದಿಸಿದ ಸಚಿವರು, 'ನಾನು ಟೀಕೆ ಮಾಡುತ್ತಿದ್ದೇನೆ ಎಂದು ತಪ್ಪಾಗಿ ಭಾವಿಸಬಾರದು. ಮಂತ್ರಿಯಾಗಿದ್ದೇನೆ ಎಂದು ಈ ಮಾತುಗಳನ್ನು ಹೇಳುತ್ತಿಲ್ಲ' ಎಂದರು.

ದೊಡ್ಡ ಉದ್ಯಮಿಗಳ ಪಟ್ಟಿಯಲ್ಲಿ ಕನ್ನಡಿಗರ ಕೊರತೆ ನೀಗಿಸಲು ಸಕಾಲ

ಎ.ಐ ಮತ್ತು ಕನ್ನಡಿಗರ ಉದ್ಯಮಶೀಲತೆ

ವಿಶ್ಲೇಷಣೆ

ವಸಂತ ಶೆಟ್ಟಿ

ಕನ್ನಡಿಗರು ಇತಿಹಾಸದ ಉದ್ದಕ್ಕೂ ಭಾರತವಷ್ಟೇ ಅಲ್ಲದೆ ಹೊರದೇಶಗಳವರೆಗೂ ತಮ್ಮ ಕೀರ್ತಿ ಪತಾಕೆ ಹಾರಿಸಿದ ನಿದರ್ಶನಗಳು ಲೆಕ್ಕವಿಲ್ಲದಷ್ಟಿವೆ. ಹೀಗಿದ್ದೂ ಸ್ವತಂತ್ರ ಭಾರತದ ದೊಡ್ಡ ದೊಡ್ಡ ಉದ್ಯಮಿಗಳ ಪಟ್ಟಿಯಲ್ಲಿ ಕನ್ನಡಿಗರ ಹೆಸರೇಕೆ ಸಾಮಾನ್ಯವಾಗಿ ಕಂಡುಬರುವುದಿಲ್ಲ ಅನ್ನುವ ಪ್ರಶ್ನೆ ಹಲವರನ್ನು ಕಾಡಿರಬಹುದು. ಒಂದು ಕೆಲಸ ಹಿಡಿದು, ಸಂಬಳ ಪಡೆಯುವ ಅನಿಶ್ಚಿತವಲ್ಲದ ಜೀವನವೇ ಗೌರವಯುತವಾದ ದಾರಿ ಅನ್ನುವ ಮಾನಸಿಕತೆ ನಮ್ಮಲ್ಲಿ ಎಲ್ಲೆಡೆ ಯಾಕೆ ಕಾಣುತ್ತದೆ? ಉದ್ಯಮ ಶುರು ಮಾಡಲು ಬೇಕಿರುವ ಅಗಾಧ ಬಂಡವಾಳದ ಕೊರತೆಯೇ ಇದಕ್ಕೆ ಕಾರಣವೇ ಅಥವಾ ಬಹುತೇಕರು ಹೇಳುವಂತೆ ಕನ್ನಡಿಗರ ಡಿಎನ್‌ಎಯಲ್ಲೇ ಉದ್ಯಮಶೀಲತೆ ಇಲ್ಲವೇ? ಇದನ್ನು ಬದಲಿಸುವುದು ಸಾಧ್ಯವಿಲ್ಲವೇ ಎಂಬಂತಹ ಪ್ರಶ್ನೆಗಳನ್ನು, ಕೃತಕ ಬುದ್ಧಿಮತ್ತೆ (ಎ.ಐ) ತಂತ್ರಜ್ಞಾನ ಮುಂದಿರಿಸುತ್ತಿರುವ ಹೊಸ ಸಾಧ್ಯತೆಗಳನ್ನು ಮನಗಂಡು ಮತ್ತೊಮ್ಮೆ ವಿಮರ್ಶಿಸುವ ಅಗತ್ಯವಿದೆ.

ಮೊದಲಿಗೆ, ಭಾರತದ ಉದ್ಯಮಶೀಲತೆಯ ಮುನ್ನೂರು ವರ್ಷಗಳ ಇತಿಹಾಸವನ್ನೊಮ್ಮೆ ಅವಲೋಕಿಸಿದರೆ, ದೇಶದ ಬೇರೆ ಬೇರೆ ಭಾಷಿಕ ಪ್ರದೇಶಗಳಲ್ಲಿನ ಸಮುದಾಯಗಳು ಹೇಗೆ ಮತ್ತು ಯಾವಾಗ ಕೃಷಿಯಿಂದ ಉದ್ಯಮದೆಡೆಗೆ ಚಲಿಸಿದವು ಅನ್ನುವ ಚಿತ್ರಣವನ್ನು ಪತ್ರಕರ್ತ ಹರೀಶ್ ದಾಮೋದರನ್ ಅವರು ಬರೆದಿರುವ 'ಇಂಡಿಯಾಸ್ ನ್ಯೂ ಕ್ಯಾಪಿಟಲಿಸ್ಟ್ಸ್' ಪುಸ್ತಕ ತೆರೆದಿಡುತ್ತದೆ. ಅದರ ಸಾರಾಂಶವನ್ನು ಚುಟುಕಾಗಿ ಹೇಳುವುದಾದರೆ, ಬ್ರಿಟಿಷರ ನೇರ ಆಡಳಿತದಲ್ಲಿದ್ದ ಪ್ರದೇಶಗಳಲ್ಲಿ ಅವರ ಒಡನಾಟ ಮತ್ತು ಅವರು ತಮ್ಮ ಪ್ರೆಸಿಡೆನ್ಸಿಯ ಆದಾಯ ಹೆಚ್ಚಿಸಿಕೊಳ್ಳಲು ಮಾಡಿದ ಮೂಲ ಸೌಕರ್ಯಗಳ ಅಭಿವೃದ್ಧಿಯು ಆ ಪ್ರದೇಶದಲ್ಲಿನ ಕೃಷಿ ಸಮುದಾಯಗಳಲ್ಲಿ ಬಂಡವಾಳ ಒಟ್ಟು ಮಾಡಿಕೊಳ್ಳಲು, ಅದನ್ನೇ ಬಳಸಿ ಉದ್ಯಮದತ್ತ ಚಲಿಸಲು ನೆರವಾದವು.

ಆಂಧ್ರಪ್ರದೇಶದ ಕರಾವಳಿ ಭಾಗದ ಕಮ್ಮ, ಕಾಪು ಸಮುದಾಯ, ತಮಿಳುನಾಡಿನ ಚೆಟ್ಟಿಯಾರ್ ಮತ್ತು ತಮಿಳು ಬ್ರಾಹ್ಮಣ ಸಮುದಾಯ, ಉತ್ತರ– ಪಶ್ಚಿಮ ಭಾರತದಲ್ಲಿ ಮಾರ್ವಾಡಿ, ಜೈನ ಮತ್ತು ಪಾರ್ಸಿ ಸಮುದಾಯದ ಜನ ಉದ್ಯಮಶೀಲತೆಗೆ ತಿರುಗಿದ ವಿವರವಾದ ಕಥನ ಈ ಪುಸ್ತಕದಲ್ಲಿದೆ. ಕನ್ನಡ ಭಾಷಿಕ ಸಮುದಾಯಗಳ ಉದ್ಯಮಶೀಲತೆಯ ಕುರಿತ ವಿವರ ಬರೀ ಒಂದೆರಡು ಪುಟಗಳಿಗೆ ಸೀಮಿತವಾಗಿದೆ. ಇದರ ಅರ್ಥ ಇಷ್ಟೇ: ಬ್ರಿಟಿಷರ ಆಳ್ವಿಕೆಯಲ್ಲಿ ಕನ್ನಡ ನೆಲದ ಯಾವುದೇ ಸಮುದಾಯ ದೊಡ್ಡ ಮಟ್ಟದಲ್ಲಿ ಉದ್ಯಮಶೀಲತೆಯೆಡೆ ಚಲಿಸುವ ಬೆಳವಣಿಗೆ ಆಗಲಿಲ್ಲ.

ಇದಕ್ಕೆ ಕಾರಣಗಳೇನು ಎಂದು ನೋಡಿದರೆ, ಕೆಲವು ವಿಷಯಗಳು ಗಮನಕ್ಕೆ ಬರುತ್ತವೆ. ಮೊದಲಿಗೆ, ಬ್ರಿಟಿಷರ ಅಧೀನದಲ್ಲಿದ್ದ ಮೈಸೂರು ಸಂಸ್ಥಾನಕ್ಕೆ ದೊಡ್ಡ ಮಟ್ಟದ ಯಾವುದೇ ನೀರಾವರಿ ಯೋಜನೆಯನ್ನು ಅಂದುಕೊಂಡ ಮಟ್ಟದಲ್ಲಿ ಕಟ್ಟಿಕೊಳ್ಳಲು ಆಗಲಿಲ್ಲ. ಮೈಸೂರು ಸಂಸ್ಥಾನ ಹಲವಾರು ಉದ್ಯಮಗಳನ್ನು ಕಟ್ಟಿದರೂ ಅವೆಲ್ಲವುಗಳನ್ನು ಮೈಸೂರಿನ ಅರಸೊತ್ತಿಗೆಯಡಿ ಕಟ್ಟಲಾಗಿತ್ತೇ ವಿನಾ ಮೈಸೂರು ಭಾಗದ ಜನಸಮುದಾಯಗಳಿಗೆ ಸೇರಿದವರನ್ನು ಉದ್ಯಮಿಗಳನ್ನಾಗಿಸಿ ಕಟ್ಟಿರಲಿಲ್ಲ. ಅವುಗಳಲ್ಲಿ ಹಲವು ಉದ್ಯಮಗಳು ಸ್ವಾತಂತ್ರ್ಯಾನಂತರ ಕೇಂದ್ರ ಸರ್ಕಾರದ ತೆಕ್ಕೆಗೆ ಜಾರಿದರೆ, ಹಲವು ಮುಚ್ಚಿ ಹೋದವು. ಇನ್ನೊಂದೆಡೆ, ಉತ್ತರ ಕರ್ನಾಟಕದ ಬಹುತೇಕ ಭಾಗ ಪರೋಕ್ಷವಾಗಿ ಮುಂಬೈ ಪ್ರೆಸಿಡೆನ್ಸಿ ವ್ಯಾಪ್ತಿಗೆ ಒಳಪಟ್ಟಿತ್ತು. ಆದರೂ ಹತ್ತಾರು ಮರಾಠ ಸಂಸ್ಥಾನಗಳ ಆಳ್ವಿಕೆಯಿಂದ ನಲುಗಿದ್ದ ಈ ಪ್ರದೇಶ ಮುಂಬೈ ಪಾಲಿಗೆ ಎಂದಿಗೂ ಹತ್ತಿರವಾಗಲೇ ಇಲ್ಲ. ಇದೇ ಕಾರಣಕ್ಕೆ, ಕರ್ನಾಟಕದಲ್ಲಿ ಕೃಷ್ಣಾ ನದಿ ಪಾತ್ರ ಅತ್ಯಂತ ದೊಡ್ಡದಾಗಿದ್ದರೂ ಸ್ವಾತಂತ್ರ್ಯಪೂರ್ವದಲ್ಲಿ ಈ ಪ್ರದೇಶ ದೊಡ್ಡ ಅಣೆಕಟ್ಟುಗಳನ್ನಾಗಲಿ, ಮೂಲ ಸೌಕರ್ಯಗಳನ್ನಾಗಲಿ ಕಾಣಲಿಲ್ಲ. ಇದೇ ಕೃಷ್ಣಾ ನದಿಗೆ 1855ರಲ್ಲೇ ಆಂಧ್ರದಲ್ಲಿ ಬ್ರಿಟಿಷರು ಕಟ್ಟಿದ ಅಣೆಕಟ್ಟು ಅಲ್ಲಿನ ಕರಾವಳಿ ಭಾಗದ ಜನ ಉದ್ಯಮಶೀಲತೆಗೆ ತಿರುಗಲು ಬೇಕಾದ ಬಂಡವಾಳವನ್ನು ದೊಡ್ಡ ಮಟ್ಟದಲ್ಲಿ ಒಟ್ಟುಗೂಡಿಸಿಕೊಟ್ಟಿತ್ತು.

ಇನ್ನೊಂದೆಡೆ, ಹೈದರಾಬಾದ್ ನಿಜಾಮನ ಅಡಿಯಲ್ಲಿದ್ದ ಕನ್ನಡ ಭಾಷಿಕ ಪ್ರದೇಶದಲ್ಲೂ ಸ್ವಾತಂತ್ರ್ಯ ಪೂರ್ವದಲ್ಲಿ ಯಾವುದೇ ಅಭಿವೃದ್ಧಿ ಆಗಲಿಲ್ಲ. ಕರಾವಳಿಯು ಮುಂಬೈ ಮತ್ತು ಮದ್ರಾಸ್ ಪ್ರೆಸಿಡೆನ್ಸಿಯ ಹಿಡಿತದಲ್ಲಿದ್ದ ಕಾರಣಕ್ಕೆ ಬ್ರಿಟಿಷರ ಅಲ್ಪಸ್ವಲ್ಪ ಒಡನಾಟ ಅದಕ್ಕೆ ಸಿಕ್ಕಿತ್ತು. ಹೀಗಾಗಿ, ಕರಾವಳಿ ಭಾಗದ ಜನ ಮಾತ್ರ ಕೊಂಚ ಮಟ್ಟಿಗೆ ಉದ್ಯಮಶೀಲತೆಗೆ ತೆರೆದುಕೊಂಡ ಬೆಳವಣಿಗೆ ಕಾಣುತ್ತದೆ. ಆದರೂ ರಾಷ್ಟ್ರ ಮಟ್ಟದ ದೊಡ್ಡ ಉದ್ಯಮಿಗಳನ್ನು ಹುಟ್ಟುಹಾಕುವುದು ಕರಾವಳಿಗರಿಗೂ ಸಾಧ್ಯವಾಗಲಿಲ್ಲ. ಹೀಗೆ, ಬಂಡವಾಳದ ಚಲನೆಯನ್ನು ನಿಯಂತ್ರಿಸುವ ಯಾವುದೇ ಹಂತದಲ್ಲೂ ಕನ್ನಡಿಗರ ಕೈ ಬಲಗೊಳ್ಳಲಿಲ್ಲ. ಸ್ವಾತಂತ್ರ್ಯಾನಂತರ ಕನ್ನಡಿಗರದ್ದೇ ರಾಜಕೀಯ ಅಧಿಕಾರ ಇದ್ದರೂ ಸ್ಥಳೀಯ ಸಮುದಾಯಗಳನ್ನು ಉದ್ದಿಮೆಯತ್ತ ಕರೆದೊಯ್ಯುವ ಯಾವ ವ್ಯವಸ್ಥಿತ ಕಾರ್ಯಯೋಜನೆಗಳೂ ಜಾರಿಗೆ ಬರಲಿಲ್ಲ.

ಹೀಗಿದ್ದ ಕರ್ನಾಟಕದಲ್ಲಿ ಆರ್ಥಿಕ ಉದಾರೀಕರಣದ ನಂತರ, ಹೆಚ್ಚು ಬಂಡವಾಳ ಬೇಡದ ಜ್ಞಾನಾಧಾರಿತ ಉದ್ದಿಮೆಗಳು ಹುಟ್ಟುವ ಸಂದರ್ಭ ಬಂದಾಗ, ಕೆಲವು ಕನ್ನಡಿಗ ಉದ್ಯಮಿಗಳು ರಾಷ್ಟ್ರಮಟ್ಟದಲ್ಲಿ ಹೆಸರುವಾಸಿಯಾದರು. ಇತ್ತೀಚೆಗೆ ನವೋದ್ಯಮ ವಲಯದಲ್ಲಿ ಜೆರೋಧಾ, ಬೌನ್ಸ್‌ನಂತಹ ಸಂಸ್ಥೆಗಳನ್ನು ಕನ್ನಡಿಗರು ಕಟ್ಟಿದ್ದಾರೆ. ಉದಾರೀಕರಣದ ಜೊತೆ ಜೊತೆಯಲ್ಲೇ ಸೇವಾ ವಲಯದ ವ್ಯಾಪ್ತಿ ಹಿಗ್ಗುತ್ತಿದ್ದಂತೆಯೇ ಸಾರಿಗೆ, ಹೋಟೆಲ್ ಉದ್ಯಮ, ಆರೋಗ್ಯಸೇವೆ (ಇದರಲ್ಲಿ ಕರ್ನಾಟಕದ ಸಿಇಟಿ ವ್ಯವಸ್ಥೆಯ ಕೊಡುಗೆ ದೊಡ್ಡದಿದೆ) ತರಹದ ಕೆಲ ಉದ್ಯಮಗಳಲ್ಲಿ ಕನ್ನಡಿಗರು ತಕ್ಕ ಮಟ್ಟಿಗೆ ಉದ್ದಿಮೆಗಳನ್ನು ಕಟ್ಟುವ ಬೆಳವಣಿಗೆಗಳಾಗಿವೆ. ಆದರೆ ಒಟ್ಟಂದದಲ್ಲಿ ನೋಡಿದರೆ, ಭಾರತದ ಉದ್ಯಮಶೀಲತೆಯ ಚಿತ್ರಣದಲ್ಲಿ ನಮ್ಮ ಪಾಲು ಈಗಲೂ ಬಹಳ ಸಣ್ಣದಿದೆ. ಇದನ್ನು ದೊಡ್ಡ ಮಟ್ಟದಲ್ಲಿ ಬದಲಿಸುವ ದಾರಿಯೇನಾದರೂ ಇದ್ದರೆ ಅದು ಜ್ಞಾನಾಧಾರಿತ ವಲಯದಲ್ಲಿ ಮಾತ್ರ.



ಈಗ ನಾವು ಎ.ಐ ತಂತ್ರಜ್ಞಾನದ ಕಾಲದಲ್ಲಿ ಇದ್ದೇವೆ. ಒಂದೆಡೆ, ಇದರ ಫಲವಾಗಿ ಐಟಿ ಸೇವಾ ವಲಯದಲ್ಲಿ ಸೃಷ್ಟಿಯಾಗುತ್ತಿದ್ದ ದೊಡ್ಡ ಮಟ್ಟದ ಉದ್ಯೋಗಗಳಿಗೆ ಹೊಡೆತ ಬೀಳುವ ಲಕ್ಷಣಗಳು ಗೋಚರಿಸುತ್ತಿವೆ. ಆದರೆ ಇನ್ನೊಂದೆಡೆ, ಜ್ಞಾನ ಮತ್ತು ತಿಳಿವಳಿಕೆಯನ್ನೇ ಸರಕಾಗಿಸುವ ಈ ತಂತ್ರಜ್ಞಾನ, ಜ್ಞಾನಾಧಾರಿತ ಉದ್ದಿಮೆಗಳನ್ನು ಕಟ್ಟಲು ಇದ್ದ ಬಹಳಷ್ಟು ಅಡೆತಡೆಗಳನ್ನು ನಿವಾರಿಸುತ್ತ, ಯಾರು ಬೇಕಿದ್ದರೂ ಜ್ಞಾನಾಧಾರಿತ ಉದ್ಯಮ ಕಟ್ಟಬಹುದು ಅನ್ನುವ ಅವಕಾಶವನ್ನೂ ಒದಗಿಸುತ್ತಿದೆ. ಒಂದು ಸಾಫ್ಟ್‌ವೇರ್ ಉತ್ಪನ್ನವನ್ನು ಅಭಿವೃದ್ಧಿಪಡಿಸಿ ವ್ಯಾಪಾರ ಮಾಡಬೇಕು ಎಂದು ದಾವಣಗೆರೆಯ ಒಬ್ಬ ಹುಡುಗ ಹೊರಟರೆ, ಆತನಿಗೆ ಆ ಉತ್ಪನ್ನದ ಐಡಿಯಾದ ಹಂತದಿಂದ ಹಿಡಿದು ಅದಕ್ಕಾಗಿ ಸಂಸ್ಥೆಯೊಂದನ್ನು ಸ್ಥಾಪಿಸುವ, ಬಂಡವಾಳ ಸಂಗ್ರಹಿಸುವ, ಉತ್ಪನ್ನವನ್ನು ಅಭಿವೃದ್ಧಿಪಡಿಸುವ, ಅದನ್ನು ಮಾರುಕಟ್ಟೆಗೆ ತಂದು ಪ್ರಚುರಪಡಿಸುವ ಪ್ರತಿ ಹಂತದ ತಿಳಿವಳಿಕೆ ಹೊಂದುವುದನ್ನು ಎ.ಐ ಒಬ್ಬ ಆಪ್ತ ಸಹಾಯಕನ ರೂಪದಲ್ಲಿ ಬೆರಳ ತುದಿಯಲ್ಲೇ ಸಾಧ್ಯವಾಗಿಸುತ್ತದೆ.

ಸಾಫ್ಟ್‌ವೇರ್ ತಂತ್ರಜ್ಞಾನದ ಅಭಿವೃದ್ಧಿಗೆ ತಗಲುತ್ತಿದ್ದ ಬಹುದೊಡ್ಡ ವೆಚ್ಚ ಐ.ಟಿ ಉದ್ಯೋಗಿಗಳ ಸಂಬಳವಾಗಿತ್ತು. ಆದರೆ ಈಗ ಎ.ಐ ಬಹುಪಾಲು ತಂತ್ರಜ್ಞಾನ ಅಭಿವೃದ್ಧಿಯನ್ನು ಅತ್ಯಂತ ಕಡಿಮೆ ವೆಚ್ಚದಲ್ಲಿ ಸಾಧ್ಯವಾಗಿಸುವ ಕಾರಣಕ್ಕೆ, ದಾವಣಗೆರೆಯ ಹುಡುಗ ಈಗ ಇಡೀ ಜಗತ್ತಿಗೆ ತನ್ನ ಉತ್ಪನ್ನವನ್ನು ಮಾರಾಟ ಮಾಡುವಂತಹ ತಂತ್ರಜ್ಞಾನದ ಸಾಧ್ಯತೆಯನ್ನು ದಾವಣಗೆರೆಯಲ್ಲಿ ಕೂತೇ ರೂಪಿಸಬಹುದು. ಎ.ಐ ನುಡಿಮಾದರಿಗಳು ಸಹಜವಾದ ನುಡಿಯಲ್ಲಿ ಸೂಚನೆಗಳನ್ನು ಪಡೆದು, ಅತ್ಯಂತ ಕ್ಲಿಷ್ಟವಾದ ತಾಂತ್ರಿಕ ಕೆಲಸಗಳನ್ನು ಚುರುಕಾಗಿ ಮಾಡಿ ಮುಗಿಸುತ್ತವೆ. ಹೀಗಾಗಿ, ತಂತ್ರಜ್ಞಾನದ ಆಳವಾದ ತಿಳಿವಳಿಕೆ ಇಲ್ಲದ, ಸಾಫ್ಟ್‌ವೇರ್ ತಂತ್ರಾಂಶಗಳನ್ನು ಬರೆದ ಅನುಭವ ಇಲ್ಲದವರೂ ಈ ತಂತ್ರಜ್ಞಾನವನ್ನು ಬಳಸಿ ತಮಗೆ ಬೇಕಾದ ಕೆಲಸಗಳನ್ನು ಮಾಡಿಕೊಳ್ಳಬಹುದು. ತಿಳಿವಳಿಕೆಯನ್ನು ಯಾರಿಗೆ ಬೇಕಿದ್ದರೂ ದೊರಕುವಂತೆ ಮಾಡಿರುವ ಈ ತಂತ್ರಜ್ಞಾನವನ್ನು ಸರಿಯಾದ ರೂಪದಲ್ಲಿ ಬಳಸಿಕೊಂಡು ನಮ್ಮ ಮಕ್ಕಳ ನೈಪುಣ್ಯ ಹೆಚ್ಚಿಸಬೇಕು ಮತ್ತು ಅವರು ಉದ್ಯಮಶೀಲ ಜಗತ್ತಿಗೆ ಧುಮುಕಿ ಹೊಸ ಉತ್ಪನ್ನ, ಹೊಸ ಸೇವೆಗಳನ್ನು ಸೃಷ್ಟಿಸಿ ಮುನ್ನುಗ್ಗುವಂತೆ ಮಾಡಬೇಕು.

ಜ್ಞಾನಾಧಾರಿತ ವಲಯಗಳಲ್ಲಿ 'ಕನ್ನಡಿಗ ಉದ್ಯಮಿ' ಅನ್ನುವ ಗುರುತೊಂದನ್ನು ಗಟ್ಟಿಯಾಗಿ ರೂಪಿಸುವ ಅವಕಾಶ ಖಂಡಿತ ನಮ್ಮ ಮುಂದಿದೆ. ಈಗ ಶುರುವಾಗಿರುವ ಸುಂಕ ಸಮರವು ಜಾಗತೀಕರಣದ ಸ್ವರೂಪ ಬದಲಾಗುತ್ತಿರುವುದನ್ನು ಸೂಚಿಸುತ್ತಿದೆ. ಮುಂದಿನ ಹತ್ತು ವರ್ಷಗಳು ಖಂಡಿತವಾಗಿಯೂ ಹಿಂದಿನ ಮೂವತ್ತು ವರ್ಷಗಳಂತೆ ಇರುವುದಿಲ್ಲ. ಈ ಅನಿಶ್ಚಿತವಾದ ಕಾಲಕ್ಕೆ ಬೇಕಿರುವ ಹೊಸ ಚರ್ಚೆ ಶುರು ಮಾಡೋಣವೇ?

ಚುರುಮುರಿ

ಮುಂದುಳಿದವರು

• ಡಿ.ಎಸ್.ಲಿಂಗರಾಜು

'ಜಾತಿ ಜನಗಣತಿ ಕಥೆ ಯಂಗೆ ಸಾ? ಸರಿಲ್ಲ- ಸರಿಯಾಗದೆ ಅಂತ ಆಕ್ರೋಶ, ಆಕ್ಷೇಪ ಸುರುವಾಗ್ಯದಲ್ಲ?' ತುರೇಮಣೆಗೆ ಕೇಳಿದೆ. 'ದಿಟವಾಗಿ ಮೀಸಲಾತಿ ಬೇಕಾಗಿರೋದು ರಾಜಕಾರಣಿಗಳ ಬಲಿತ ವರ್ಗಕ್ಕೆ ಮಾತ್ರ ಅಣ್ತಮ್ಮ. ಪಕ್ಷಾಂತರಿಗಳು, ಕಪಟನಾಟಕ ಸೂತ್ರಧಾರಿಗಳು ಹೆಚ್ಚಾಗಿ ಇಲ್ಲೇ ಇರದು' ಎಂದು ಒಡಪು ಹಾಕಿದರು.

'ರಾಜಕೀಯಕ್ಕೂ ಮೀಸಲಾತಿಗೂ ಏನು ಸಂಬಂಜ?' ಅಂತ ಸಿಡಿದೆ.

'ನೋಡ್ಲಾ, ರಾಜಕೀಯದಲ್ಲಿ 1-2-3 ಅಂತ ಮೂರು ಪ್ರವರ್ಗಗಳವೆ. ಅತ್ಯಂತ ಮುಂದುಳಿದ ಒಂದನೇ ಪ್ರವರ್ಗದೇಲಿ ಹಾಲಿ ಮಂತ್ರಿಗಳು, ಶಾಸಕರು ಇರತರೆ. ಅಸೆಂಬ್ಲಿ, ಲೋಕಸಭೆಯಲ್ಲಿ ಇವರ ಕುಟುಂಬಕ್ಕೆ ಶೇಕಡ ನೂರು ಒಳಮೀಸಲಾತಿ ಕೊಡಲೇಬೇಕು' ಅಂತ ವರ್ಗೀಕರಣ ಮಾಡಿದರು.

'ಎರಡನೇ ಪ್ರವರ್ಗಕ್ಕೆ ಯಾರನ್ನ ಸೇರಿಸ್ತೀರ?'

'ಅಲ್ಲಿ ಅರೆ ಮುಂದುಳಿದ ರಾಜಕಾರಣಿಗಳಿರತರೆ. ಅಡವಾದ ಜಾಗದಲ್ಲಿ ಮಂತ್ರಿಯಾಗಿದ್ದಾಗ ಕೆಲವರು ಎಡವಟ್ಟು ಮಾಡಿಕ್ಯಂದು ರಾಜೀನಾಮೆ ಕೊಟ್ಟಿರತರೆ. ವಿಚಾರಣಾ ಸಮಿತಿಯ ಬಿ-ರಿಪೋರ್ಟ್ ತಂದ್ರೆ ತಿರುಗಾ ಮಂತ್ರಿಯಾಗೋ ಮೀಸಲಾತಿ ಶೇಕಡ 50 ಇರತದೆ' ತುರೇಮಣೆ ಶಾಕ್ ಕೊಟ್ಟರು.

'ಒಂದರಲ್ಲಿರೋರು ಎರಡಕ್ಕೆ, ಎರಡರಲ್ಲಿ ಇರೋರು ಒಂದಕ್ಕೆ ಆಗಾಗ ಹೋಯ್ತಾ ಇರತರೆ' ಅಂತ ಯಂಟಪ್ಪಣ್ಣ ಒಗ್ಗರಣೆ ಹಾಕಿತು.

'ಪ್ರವರ್ಗ- 3ರಲ್ಲಿ ಯಾರಿರತರೋ?'

'ಇಲ್ಲಿ ಶಾಸಕರು- ಮಂತ್ರಿಗಳ ಹುಟ್ಟುಹಬ್ಬಕ್ಕೆ ಬ್ಯಾನರ್ ಕಟ್ಟಿ ಜನ ಕರಕಬರೋ ಸಾಮಾನ್ಯ ಕಾರ್ಯಕರ್ತರು ಇರತರೆ. ಒಂದು, ಎರಡನೇ ವರ್ಗಕ್ಕೆ ಹೋಗೋ ಮೀಸಲಾತಿ ಇವರಿಗಿಲ್ಲ' ತುರೇಮಣೆಯ ಎರಡನೇ ಶಾಕಿಗೆ ಸುಸ್ತಾದೆ.

'ಆದ್ರೆ ಪ್ರವರ್ಗ-3ಎ ಅಂತ ಅಸಂಘಟಿತ ಸಾಮಾನ್ಯ ವರ್ಗ ಅದೆ. ಇವರು ಮೀಸಲಾತಿಗೆ ಕಾಯದೇ ದುಬಾರಿ ಟ್ಯಾಕ್ಸು, ಡೊನೇಶನ್ ಕಟ್ಟಿ ಬದುಕೋರು. ಇವರಿಗೇನು ಸಿಕ್ತದೆ?' ಅಂದುದ್ಕೆ ತುರೇಮಣೆ '1- 2ನೇ ವರ್ಗಕ್ಕೆ 3ಎ ವರ್ಗದೋರು ವೋಟ್ ಬ್ಯಾಂಕ್ ಅಷ್ಟೇ ಕಲಾ. ಎಲ್ಲಾ ಇವರ ಹೆಸರಲ್ಲೇ ನಡಿತದೆ. ಇವರಿಗೆ ಮಾತ್ರ ಏನೂ ದಕ್ಕಕುಲ್ಲ' ಅಂತ ಗಹಗಹಿಸಿ ನಕ್ಕು ನಮ್ಮನ್ನೂ ನಗಿಸಿದರು.

ಸಂಗತ

ಸೈಬರ್ ವಂಚನೆ: ಅರಿವೇ ಅಸ್ತ್ರ

ಸೈಬರ್ ವಂಚಕರು ಹೊಸ ಹೊಸ ವಿಧಾನಗಳನ್ನು ಕಂಡುಕೊಳ್ಳುತ್ತಿರುವುದರಿಂದ, ನಮ್ಮ ಅರಿವಿನ ಪರಿಧಿಯನ್ನು ವಿಸ್ತರಿಸಿಕೊಳ್ಳಬೇಕಾದದ್ದು ಅತಿ ಅಗತ್ಯ

• ಡಾ. ಮುರಳೀಧರ ಕಿರಣಕೆರೆ

ನನ್ನ ಪರಿಚಯದ ಆ ಸೈಬರ್ ಪೊಲೀಸ್ ಅಧಿಕಾರಿ ಆಗಾಗ್ಗೆ ಕರೆ ಮಾಡಿ 'ಯಾವುದಾದರೂ ಸಭೆ ಇದ್ದರೆ ತಿಳಿಸಿ. ಆ ಸಂದರ್ಭದಲ್ಲಿ, ಸೈಬರ್ ವಂಚನೆಗಳ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮ ಏರ್ಪಡಿಸೋಣ' ಎನ್ನುತ್ತಿದ್ದರು. ಡಿಜಿಟಲ್ ವಂಚನೆಗಳ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಬೇಕೆಂಬ ಅವರ ಕಾಳಜಿ ಅಭಿಮಾನ ಮೂಡಿಸುವಂತಿತ್ತು. ಹೀಗಾಗಿ, ಪಶುಸಂಗೋಪನಾ ಇಲಾಖೆಯ ಮಾಸಿಕ ಸಭೆಗೆ ಅವರನ್ನು ಆಮಂತ್ರಿಸಿದ್ದೆವು.

ಆಶ್ಚರ್ಯವೆಂದರೆ, ಇಂತಹ ಅಪರಾಧಗಳು ನಡೆದಾಗ ಎಲ್ಲಿ ದೂರು ಕೊಡಬೇಕೆಂಬುದು ಸಭೆಯಲ್ಲಿದ್ದ ಅನೇಕರಿಗೆ ಗೊತ್ತಿರಲಿಲ್ಲ. ವಂಚಕರನ್ನು ಪತ್ತೆ ಹಚ್ಚಲು ಜಿಲ್ಲಾ ಕೇಂದ್ರಗಳಲ್ಲಿ ಸೈಬರ್ ಪೊಲೀಸ್ ಠಾಣೆಗಳಿರುವ ವಿಚಾರವೂ ತಿಳಿದಿರಲಿಲ್ಲ!

ದಿನನಿತ್ಯ ಈ ಠಾಣೆಗಳಲ್ಲಿ ದಾಖಲಾಗುವ ಸೈಬರ್ ಅಪರಾಧಗಳ ವಿವಿಧ ನಮೂನೆಗಳನ್ನು ಆ ಅಧಿಕಾರಿ ತೆರೆದಿಟ್ಟಾಗ ಎಲ್ಲರೂ ಅಕ್ಷರಶಃ ನಡುಗಿ ಹೋಗಿದ್ದರು. ಮೊಬೈಲ್ ಫೋನ್ ಬಳಸುವ ನಾವ್ಯಾರೂ ಸುರಕ್ಷಿತರಲ್ಲ, ಸದಾ ಅಪಾಯದ ಕೆಂಪು ವಲಯದಲ್ಲಿಯೇ ಇರುತ್ತೇವೆ ಎಂಬುದು ಖಾತರಿಯಾಗಿತ್ತು!

ನನ್ನ ಸಮೀಪದ ಬಂಧುವೊಬ್ಬರ ಮೊಬೈಲ್ ಫೋನ್‌ಗೆ 'ಕರ್ನಾಟಕ ಪೊಲೀಸ್' ಎಂಬ ಹೆಸರಿನಲ್ಲಿ ಸಂದೇಶವೊಂದು ಬಂದಿತ್ತು. ಹೆಲ್ಮೆಟ್ ಧರಿಸದೆ ದ್ವಿಚಕ್ರ ವಾಹನ ಚಲಾಯಿಸಿ ಸಂಚಾರ ನಿಯಮ ಉಲ್ಲಂಘಿಸಿದ್ದಕ್ಕಾಗಿ ₹ 500 ದಂಡ ವಿಧಿಸಲಾಗಿದೆ ಎಂಬ ವಿವರ ಅದರಲ್ಲಿತ್ತು. ಅವರ ದ್ವಿಚಕ್ರ ವಾಹನದ ಸಂಖ್ಯೆ, ಮೊಬೈಲ್ ಫೋನ್ ಸಂಖ್ಯೆ ಎಲ್ಲವೂ ಸರಿಯಿದ್ದವು. ಆದರೆ, ಆ ಸಂದೇಶದಲ್ಲಿ ಉಲ್ಲೇಖಿಸಿದ್ದ ದಿನಾಂಕದಂದು ಅವರು ತಮ್ಮ ಬೈಕನ್ನು ಹೊರಗೆ ತೆಗೆದೇ ಇರಲಿಲ್ಲ!

ಹಿಂದೆ ಈ ರೀತಿಯ ಉಲ್ಲಂಘನೆಗಾಗಿ ಒಂದೆರಡು ಬಾರಿ ಅವರು ದಂಡವನ್ನು ಕಟ್ಟಿದ್ದರು. ಆದರೆ ಈ ಸಲದ್ದು ಮಾತ್ರ ಸುಳ್ಳು ಆಪಾದನೆ ಆಗಿದ್ದುದು ಅವರ ಬೇಸರಕ್ಕೆ ಕಾರಣವಾಗಿತ್ತು. ಹೇಗೂ ಮೊತ್ತ ಸಣ್ಣದು, ದೂರು ಕೊಡುವುದು, ಆಮೇಲೆ ಪೊಲೀಸ್ ಠಾಣೆಗೆ ಅಲೆದಾಡುವುದು ಏಕೆ, ಬಂದಿದ್ದ ಸಂದೇಶದಲ್ಲೇ ಇ-ಚಲನ್ ಕೊಂಡಿ ಕೊಟ್ಟಿದ್ದಾರೆ, ಕಟ್ಟಿ ಮುಗಿಸುವುದೇ ಒಳ್ಳೆಯದು ಎಂಬ ಆಲೋಚನೆಯಲ್ಲಿ ಇದ್ದವರನ್ನು ತಡೆದಿದ್ದೆ. ವಾರದ ಹಿಂದಷ್ಟೇ 'ಸೈಬರ್ ವಂಚನೆ ಅರಿವು' ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರಿಂದ ನನ್ನ ಮನಸ್ಸು ಆ ದಿಸೆಯಲ್ಲೇ ಯೋಚಿಸುತ್ತಿತ್ತು. ಆ ಮೆಸೇಜನ್ನು ಸೈಬರ್ ಅಧಿಕಾರಿಗೆ ಕಳುಹಿಸಿ ಅಭಿಪ್ರಾಯ ಕೇಳಿದಾಗ, ಅದು ನಕಲಿ ಎಂಬುದು ದೃಢಪಟ್ಟಿತ್ತು. ಅಕಸ್ಮಾತ್ ಹಣ ಕಟ್ಟಲು ಆ ಸಂದೇಶದಲ್ಲಿದ್ದ ಕೊಂಡಿಯನ್ನೇನಾದರೂ ಕ್ಲಿಕ್ಕಿಸಿದ್ದಿದ್ದರೆ ಅವರ ಖಾತೆಯ ಮಾಹಿತಿ ಕಳವಾಗಿ ತೊಂದರೆಗೆ ಸಿಲುಕುತ್ತಿದ್ದರು!

ಹೌದು, ಸೈಬರ್ ಅಪರಾಧಗಳ ಸಂಖ್ಯೆ ತೀವ್ರವಾಗಿ ಏರುತ್ತಿದೆ. ಆನ್‌ಲೈನ್ ವಂಚನೆಯ ಬೇರುಗಳು ತುಂಬಾ ಆಳಕ್ಕೆ ಇಳಿದಿರುವುದರಿಂದ, ಕಳೆದುಕೊಂಡದ್ದನ್ನು ಮರಳಿ ಪಡೆಯುವ ಸಂಭವ ಕಡಿಮೆ. ಹಾಗಾಗಿ, ಸೈಬರ್ ವಂಚನೆಗಳ ಕುರಿತು ಅರಿವು ಮೂಡಿಸಿಕೊಳ್ಳುವುದು ಅತಿ ಅಗತ್ಯ. ಪ್ರತಿಯೊಬ್ಬರೂ ಸ್ವರಕ್ಷಣೆಯ ಮಾರ್ಗೋಪಾಯಗಳನ್ನು ಅಳವಡಿಸಿಕೊಳ್ಳಬೇಕು. ಆಧಾರ್ ಕಾರ್ಡ್‌ನ ದುರ್ಬಳಕೆ ತಪ್ಪಿಸಲು, ಆಧಾರ್‌ಗೆ ಸಂಬಂಧಿಸಿದ ಅಧಿಕೃತ ಆ್ಯಪ್ ಆದ 'ಎಂಆಧಾರ್'ನಲ್ಲಿ ಬಯೊಮೆಟ್ರಿಕ್ ಲಾಕ್ ಮಾಡಿಕೊಳ್ಳುವುದು, 'ಸಂಚಾರ್‌ಸಾಥಿ' ತಾಣದಲ್ಲಿ ನಮ್ಮ ಹೆಸರಿನಲ್ಲಿರುವ ಸಿಮ್ ಕಾರ್ಡ್‌ಗಳ ಸಂಖ್ಯೆಯನ್ನು ಪರಿಶೀಲಿಸುವುದು, ಮೊಬೈಲ್ ಫೋನ್‌ನಲ್ಲಿ ನಮಗೆ ಗೊತ್ತೇ ಆಗದಂತೆ ಇನ್‌ಸ್ಟಾಲ್ ಆಗಿರಬಹುದಾದ ಆ್ಯಪ್‌ಗಳನ್ನು ತೆಗೆದುಹಾಕುವುದು, ಅಪರಿಚಿತ ಕೊಂಡಿಗಳನ್ನು ಕ್ಲಿಕ್ಕಿಸದಿರುವುದು, ಒಟಿಪಿ, ಪಾಸ್‌ವರ್ಡ್, ಆಧಾರ್, ಬ್ಯಾಂಕ್ ಖಾತೆಯ ಮಾಹಿತಿ ಹಂಚಿಕೊಳ್ಳದಂತಹ ಕ್ರಮಗಳು ನಮ್ಮನ್ನು ಸುರಕ್ಷಿತವಾಗಿ ಇಡಬಲ್ಲವು.

ರಾಜ್ಯದಲ್ಲಿ ಸೈಬರ್ ವಂಚನೆ, ಆರ್ಥಿಕ ಅಪರಾಧ ಮತ್ತು ಮಾದಕವಸ್ತುಗಳ ನಿಯಂತ್ರಣಕ್ಕಾಗಿ ಜಿಲ್ಲಾ ಕೇಂದ್ರಗಳು ಸೇರಿದಂತೆ ಸುಮಾರು 46 ಸೆನ್ (ಸೈಬರ್, ಎಕನಾಮಿಕ್, ನಾರ್ಕೋಟಿಕ್) ಪೊಲೀಸ್ ಠಾಣೆಗಳಿವೆ. ವಂಚನೆ ನಡೆದಾಗ ಇಲ್ಲಿ ದೂರು ದಾಖಲಿಸಬೇಕು. ಸಹಾಯವಾಣಿ 1930ಕ್ಕೆ ಕರೆ ಮಾಡಿ ಇಲ್ಲವೇ www.cybercrime.gov.in ತಾಣದಲ್ಲಿ ಮಾಹಿತಿ ನೀಡಬಹುದು. ಕೆಲವರು ಮಾನಕ್ಕೆ ಹೆದರಿಯೋ ಕಳೆದುಕೊಂಡದ್ದು ಮತ್ತೆ ಸಿಕ್ಕದು ಎಂಬ ಹತಾಶೆಯಿಂದಲೋ ದೂರು ಕೊಡಲು ಮುಂದಾಗುವುದಿಲ್ಲ. ವಂಚನೆಗೆ ಒಳಗಾದವರು ತಕ್ಷಣ ದೂರು ದಾಖಲಿಸಿದರೆ ಮಾತ್ರ ಕಳೆದುಕೊಂಡದ್ದನ್ನು ಮರಳಿ ಪಡೆಯುವ ಅವಕಾಶ ಹೆಚ್ಚು. ಸೆನ್ ಠಾಣೆಗಳ ನಡುವೆ ಪೂರ್ಣ ಸಮನ್ವಯ ಸಾಧಿಸಿ ಪ್ರಕರಣಗಳನ್ನು ಮತ್ತಷ್ಟು ಪರಿಣಾಮಕಾರಿಯಾಗಿ ಭೇದಿಸಲು ಸಹಾಯವಾಗುವಂತೆ ಸೈಬರ್ ಕಮಾಂಡ್ ಘಟಕದ ಸ್ಥಾಪನೆಗೆ ಸರ್ಕಾರ ಮುಂದಾಗಿರುವುದು ಪ್ರಶಂಸಾರ್ಹ.

ಈ ಡಿಜಿಟಲ್ ಕಾಲಘಟ್ಟದಲ್ಲಿ ಹಣಕಾಸು ಸೇರಿದಂತೆ ನಮ್ಮ ಬಹುತೇಕ ವ್ಯವಹಾರಗಳನ್ನು ಆನ್‌ಲೈನ್ ಮೂಲಕ ನಡೆಸುವುದು ಅನಿವಾರ್ಯ. ದಿನದಿಂದ ದಿನಕ್ಕೆ ವಂಚಕರು ಹೊಸ ಹೊಸ ವಿಧಾನಗಳನ್ನು ಕಂಡುಕೊಳ್ಳುತ್ತಿರುವುದರಿಂದ ನಮ್ಮ ಅರಿವಿನ ಪರಿಧಿಯನ್ನು ವಿಸ್ತರಿಸಿಕೊಳ್ಳಬೇಕಾದದ್ದು ಅತಿ ಅಗತ್ಯ. ಹಾಗಾಗಿ, ಸೈಬರ್ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಲು ಪೊಲೀಸರಿಗೆ ಜನ ಸಹಕರಿಸಬೇಕು. ಶಾಲಾ–ಕಾಲೇಜು, ಸಂಘ–ಸಂಸ್ಥೆಗಳು ನಿಯಮಿತವಾಗಿ ಜನಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಆಗ ಮಾತ್ರ ಇಂತಹ ಪ್ರಕರಣಗಳ ಸಂಖ್ಯೆ ತಗ್ಗಲು ಸಾಧ್ಯ.

ಲೇಖಕ: ಮುಖ್ಯ ಪಶುವೈದ್ಯಾಧಿಕಾರಿ
ಪಶುಆಸ್ಪತ್ರೆ, ತೀರ್ಥಹಳ್ಳಿ

ವಾಚಕರ ವಾಣಿ

ಹುಬ್ಬಳ್ಳಿ ಎನ್‌ಕೌಂಟರ್ ಮೂಡಿಸಿದ ಪ್ರಶ್ನೆ

ಹುಬ್ಬಳ್ಳಿಯಲ್ಲಿ ನಡೆದ ಐದು ವರ್ಷದ ಬಾಲಕಿಯ ಕೊಲೆ ಹಾಗೂ ಅದರ ಬೆನ್ನಲ್ಲೇ ಪೊಲೀಸರಿಂದ ನಡೆದ ಆರೋಪಿಯ ಎನ್‌ಕೌಂಟರ್, ಸಾರ್ವಜನಿಕ ವಲಯದಲ್ಲಿ ಕೆಲವು ಪ್ರಶ್ನೆಗಳನ್ನು ಹುಟ್ಟುಹಾಕಿವೆ. ಒಬ್ಬ ಪ್ರಭಾವಿ ರಾಜಕಾರಣಿ, ಅಧಿಕಾರಿ ಅಥವಾ ಉದ್ಯಮಿಯ ಕುಟುಂಬಕ್ಕೆ ಸೇರಿದ ವ್ಯಕ್ತಿ ಇಂತಹ ಕೃತ್ಯ ಎಸಗಿದ ಆರೋಪ ಎದುರಿಸುತ್ತಿದ್ದರೆ ಆಗಲೂ ಹೀಗೆಯೇ ಎನ್‌ಕೌಂಟರ್ ನಡೆಸಲಾಗುತ್ತಿತ್ತೇ? ಬಾಲಕಿಯ ಮೇಲೆ ಆತ ಅತ್ಯಾಚಾರಕ್ಕೆ ಪ್ರಯತ್ನಿಸಿದ್ದ ಎಂಬ ಆರೋಪಕ್ಕೆ ಸಂಬಂಧಿಸಿದ ವೈದ್ಯಕೀಯ ವರದಿ ಕೈಸೇರುವುದಕ್ಕೆ ಮುನ್ನವೇ ಆತ ಅತ್ಯಾಚಾರಿ ಎಂದು ನಿರ್ಧರಿಸಿದ್ದಾದರೂ ಹೇಗೆ? ಕಾನೂನು ಪ್ರಕ್ರಿಯೆಗೆ ಎಲ್ಲರೂ ತಲೆಬಾಗಬೇಕಾದ ಹೊಣೆಗಾರಿಕೆಯ ಬಗ್ಗೆ ಜಾಗೃತಿ ಮೂಡಿಸುವ ದಿಸೆಯಲ್ಲಿ ಇಂತಹ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಬೇಕಾದುದು ಅತ್ಯಗತ್ಯ.

ಸಚಿನ್ ಹೊಳೆಹದ್ದು, ಶೃಂಗೇರಿ

ನದಿಗಳ ಪಾವಿತ್ರ್ಯ ಕಾಯ್ದುಕೊಳ್ಳೋಣ

ನದಿಗಳನ್ನು ಸಾಕ್ಷಾತ್ ದೇವರ ಸ್ವರೂಪವೆಂದು ನಂಬಿ, ಪರಂಪರಾಗತವಾಗಿ ಅವುಗಳನ್ನು ಪೂಜಿಸುತ್ತಾ ಬಂದಿದ್ದೇವೆ. ನದಿಗಳು ಸಕಲ ಜೀವರಾಶಿಗೂ ಆಧಾರವಾಗಿವೆ. ಹಲವು ನಾಗರಿಕತೆಗಳ ಹುಟ್ಟಿಗೆ ಕಾರಣವಾಗಿವೆ. ಪ್ರಕೃತಿ ಸೌಂದರ್ಯ ಕಾಯ್ದುಕೊಳ್ಳುವಲ್ಲಿ ಅವುಗಳ ಪಾತ್ರ ಅಪಾರ. ಇಂತಹ ನದಿಗಳನ್ನು ಸ್ವಚ್ಛವಾಗಿ ಇಟ್ಟುಕೊಳ್ಳುವುದು ಎಲ್ಲಾ ನಾಗರಿಕರ ಕರ್ತವ್ಯ. ಆದರೆ ಈ ಹೊಣೆಯನ್ನು ಅರಿಯದೆ ನದಿಗಳಿಗೆ ಕೊಳಕು ನೀರು, ಚರಂಡಿ ತ್ಯಾಜ್ಯ ಸೇರಿಸುತ್ತಿದ್ದೇವೆ. ಪ್ಲಾಸ್ಟಿಕ್ ಬಾಟಲಿ, ಕಸವನ್ನು ಎಸೆಯುತ್ತಿದ್ದೇವೆ. ಇದು ಜಲಚರಗಳ ಪ್ರಾಣಕ್ಕೆ ಕುತ್ತು ತರುತ್ತಿರುವುದು ಮಾತ್ರವಲ್ಲ ಪ್ರಕೃತಿಯ ಅಸಮತೋಲನಕ್ಕೂ ಕಾರಣವಾಗುತ್ತಿದೆ. ಈ ಪರಿಸ್ಥಿತಿ ಹೀಗೇ ಮುಂದುವರಿದರೆ ನಮ್ಮೆಲ್ಲರ ಭವಿಷ್ಯಕ್ಕೂ ಮಾರಕವಾಗಲಿರುವುದು ನಿಶ್ಚಿತ.

ಹೀಗಾಗಿ, ನದಿಪಾತ್ರದಲ್ಲಿರುವ ಪವಿತ್ರ ಸ್ಥಳಗಳಿಗೆ ಭೇಟಿ ನೀಡುವವರು ಸ್ನಾನ ಮಾಡಿದ ತರುವಾಯ ತಮ್ಮ ಬಟ್ಟೆಗಳನ್ನು ನದಿಗೆ ಎಸೆಯಬಾರದು. ನದಿ ಪಾತ್ರದಲ್ಲಿ ಮಲ, ಮೂತ್ರ ವಿಸರ್ಜಿಸಬಾರದು. ನದಿಯನ್ನು ಪವಿತ್ರವೆಂದು ತಿಳಿದು ಆ ನೀರನ್ನು ಪ್ರೋಕ್ಷಣೆ ಮಾಡಿಕೊಳ್ಳುವ ಪರಿಪಾಟ ಹಲವರಲ್ಲಿದೆ. ಆದರೆ ಇಂತಹ ಸ್ಥಳಗಳಲ್ಲಿ ಗಲೀಜು ಮಾಡುವುದು ಜನರಲ್ಲಿ ಆರೋಗ್ಯ ಸಮಸ್ಯೆಗಳಿಗೆ ಕಾರಣವಾಗುತ್ತದೆ ಜೊತೆಗೆ ಆ ಸ್ಥಳಗಳ ಪಾವಿತ್ರ್ಯಕ್ಕೂ ಧಕ್ಕೆ ಉಂಟು ಮಾಡುತ್ತದೆ ಎಂಬುದನ್ನು ಮರೆಯಬಾರದು.

ಶೇಖರಯ್ಯ ಟಿ.ಎಚ್.ಎಂ., ಗೆದ್ದಲಗಟ್ಟೆ

ವರ್ತಮಾನಕ್ಕೆ ಮುಖಾಮುಖಿಯಾಗದ ಜಾಣ್ಮೆಯ ನಡೆ

ಅಂಬೇಡ್ಕರ್ ಅವರು ರಚಿಸಿದ ಭಾರತದ ಸಂವಿಧಾನದ ವೈಶಿಷ್ಟ್ಯವನ್ನು ಎ. ಸೂರ್ಯ ಪ್ರಕಾಶ್ ಅವರು ಅಂಬೇಡ್ಕರ್ ಜಯಂತಿಯ ಸಂದರ್ಭದಲ್ಲಿ ಬರೆದಿರುವ ಲೇಖನದಲ್ಲಿ (ಪ್ರ.ವಾ., ಏ. 14) ವಿವರಿಸಿದ್ದಾರೆ. ಆದರೆ ಸಂವಿಧಾನದ ಮಹತ್ವವನ್ನು ತಿಳಿಸಲು ಲೇಖಕರು ಭೂತಕಾಲಕ್ಕೆ ಮುಖ ಮಾಡಿರುವುದು ತುಂಬಾ ಜಾಣ್ಮೆಯ ನಡೆಯಾಗಿದೆ. ವರ್ತಮಾನಕ್ಕೆ ಪ್ರಜ್ಞಾಪೂರ್ವಕವಾಗಿಯೇ ಅವರು ವಿಮುಖರಾಗಿದ್ದಾರೆ. ಪ್ರಸ್ತುತ, ಸಂವಿಧಾನದ ಆಶಯಗಳು ಏನಾಗಿವೆ, ಅವುಗಳಿಗೆ ಧಕ್ಕೆಯಾಗುತ್ತಿರುವುದು ಯಾರಿಂದ ಎಂಬಂತಹ ವಿಷಯಗಳಿಗೆ ಲೇಖಕರು ಮುಖಾಮುಖಿಯಾಗಿಲ್ಲ.

ಸಂವಿಧಾನದ ಆಶಯಗಳನ್ನು ಮುಕ್ಕಾಗಿಸುತ್ತಿರುವ, ಒಕ್ಕೂಟದ ತತ್ವವನ್ನು ನಿರಾಕರಿಸುತ್ತಿರುವ, ಸಂವಿಧಾನದತ್ತವಾದ ಸಂಸ್ಥೆಗಳನ್ನು ದುರ್ಬಲಗೊಳಿಸುತ್ತಿರುವ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ನಿಲುವುಗಳನ್ನು ಅವರು ಅಪ್ಪಿತಪ್ಪಿಯೂ ಪ್ರಸ್ತಾಪಿಸಿಲ್ಲ. ಅತ್ಯಂತ ಅಪಾಯಕಾರಿಯಾದ ಇಂತಹ ಪೂರ್ವಗ್ರಹಪೀಡಿತ ನಿಲುವಿನಿಂದ ಓದುಗರ ಅರಿವನ್ನು ವಿಸ್ತರಿಸಲು ಸಾಧ್ಯವೇ?

ದೊಡ್ಡಿಶೇಖರ, ಆನೇಕಲ್

ಅಂಗನವಾಡಿ ಸಹಾಯಕಿಯ ಮಾದರಿ ಕಾರ್ಯ

ಪಿಯುಸಿ ಫಲಿತಾಂಶದಲ್ಲಿ ಪ್ರತಿವರ್ಷದಂತೆ ಈ ಬಾರಿಯೂ ಹೆಣ್ಣುಮಕ್ಕಳೇ ಮುಂದಿರುವುದು ನಿರೀಕ್ಷಿತ ಸಂಗತಿಯೇ ಆಗಿದೆ. ಕಲಾ, ವಾಣಿಜ್ಯ ಹಾಗೂ ವಿಜ್ಞಾನ ಸೇರಿದಂತೆ ಮೂರೂ ವಿಭಾಗಗಳಲ್ಲಿ ಬಾಲಕಿಯರೇ ಮೊದಲ ಸ್ಥಾನ ಪಡೆದಿರುವುದು ಹೆಮ್ಮೆಯ ವಿಷಯ. ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ದಬ್ಬಗುಂಟೆಯ ಅಂಗನವಾಡಿ ಸಹಾಯಕಿ ಕರಿಯಮ್ಮ ಅವರು ತಮ್ಮ ಮಗನ ಜೊತೆಯಲ್ಲೇ ದ್ವಿತೀಯ ಪಿಯುಸಿ ಪರೀಕ್ಷೆ ಬರೆದು ತೇರ್ಗಡೆ ಆಗಿರುವ ಸುದ್ದಿ ಓದಿ ಬಹಳ ಸಂತೋಷವಾಯಿತು. ಅವರು ಅಭಿನಂದನೆಗೆ ಅರ್ಹರು. ಹೆಣ್ಣು ಮನಸ್ಸು ಮಾಡಿದರೆ ಏನು ಬೇಕಾದರೂ ಸಾಧಿಸಬಹುದು ಎಂಬುದನ್ನು ಅವರು ತೋರಿಸಿಕೊಟ್ಟಿದ್ದಾರೆ. ಈ ಮೂಲಕ ಸಮಸ್ತ ಹೆಣ್ಣು ಮಕ್ಕಳಿಗೂ ಮಾದರಿಯಾಗಿದ್ದಾರೆ.

ಪಿಯುಸಿ ವಿಜ್ಞಾನ ವಿಭಾಗದಲ್ಲಿ ಉತ್ತೀರ್ಣಳಾಗಿದ್ದ ನನ್ನ ಪತ್ನಿ, ನಮ್ಮ ಮದುವೆಯಾದ ಸುಮಾರು 20 ವರ್ಷಗಳ ಬಳಿಕ, ನನ್ನ ತಾಯಿಯ ಆಸೆ ಹಾಗೂ ಸಹಕಾರದಿಂದ ಬಿ.ಎ., ಬಿ.ಇಡಿ. ಮಾಡಿದಳು. ಓದಿಗೆ ವಯಸ್ಸು ಮುಖ್ಯವಲ್ಲ ಎಂಬುದು ಇದರಿಂದ ತಿಳಿಯುತ್ತದೆ.

ಎಸ್.ವಿ.ಗೋಪಾಲ್ ರಾವ್, ಬೆಂಗಳೂರು

ಕಳಪೆ ಪದಾರ್ಥ: ಜನರಿಗೆ ಸಿಗಲಿ ಮಾಹಿತಿ

ರಾಜ್ಯ ಆರೋಗ್ಯ ಇಲಾಖೆಯು ನಾವು ದಿನನಿತ್ಯ ಬಳಸುವ ಆಹಾರ ಪದಾರ್ಥ, ಔಷಧಿಯಂತಹ ಅನೇಕ ಪ್ರಮುಖ ಉತ್ಪನ್ನಗಳ ಗುಣಮಟ್ಟದ ಪರೀಕ್ಷೆ ನಡೆಸುತ್ತಿರುವುದು ಶ್ಲಾಘನೀಯ ಮತ್ತು ಸಕಾಲಿಕ ನಿರ್ಧಾರ. ಹೀಗೆ ನಡೆಸಿದ ಉತ್ಪನ್ನಗಳ ಪರೀಕ್ಷೆಯಲ್ಲಿ ಯಾವುದೇ ಲೋಪದೋಷ ಇರದಂತೆ ನೋಡಿಕೊಳ್ಳಬೇಕು.

ಕಳಪೆ ಉತ್ಪನ್ನಗಳ ತಯಾರಿಕೆಗೆ ನಿರ್ಬಂಧ ಹೇರಿ ಕೂಡಲೇ ಕ್ರಿಮಿನಲ್ ಪ್ರಕರಣ ದಾಖಲಿಸಬೇಕು. ಅಲ್ಲದೆ, ಈ ಕುರಿತ ಸಂಪೂರ್ಣ ಮಾಹಿತಿಯನ್ನು ಸಾರ್ವಜನಿಕರಿಗೆ ತಿಳಿಯಪಡಿಸುವ ಕೆಲಸ ತ್ವರಿತವಾಗಿ ಆಗಬೇಕು. ಆಗಮಾತ್ರ ಇಲಾಖೆ ಮಾಡುತ್ತಿರುವ ಕೆಲಸ ಸಾರ್ಥಕವಾಗುತ್ತದೆ.

ಚನ್ನಬಸವ ಪುತ್ತೂರ್ಕರ, ಉಡುಪಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಅನ್ನ ಚೆಲ್ಲುವ ಮುನ್ನ

ಭಾರತದಲ್ಲಿ ಹಸಿವಿನ ಸಮಸ್ಯೆ ತೀವ್ರವಾಗಿದೆ. ವೈರುಧ್ಯ ಏನೆಂದರೆ, ದೇಶದಲ್ಲಿ ಭಾರಿ ಪ್ರಮಾಣದಲ್ಲಿ ಆಹಾರ ಚೆಲ್ಲಲಾಗುತ್ತಿದೆ. ಜಗತ್ತಿನಲ್ಲೂ ಇದು ದೊಡ್ಡ ಸಮಸ್ಯೆ. ಆಹಾರ ಹೆಚ್ಚು ಪೋಲಾಗುತ್ತಿರುವ ದೇಶಗಳಲ್ಲಿ ಭಾರತವೂ ಒಂದು. ಹಬ್ಬ, ಮದುವೆ, ಜಾತ್ರೆಗಳನ್ನು ಅದ್ದೂರಿಯಾಗಿ ಆಚರಿಸುವುದು ಸೇರಿದಂತೆ ಆಹಾರವು ವ್ಯರ್ಥವಾಗಲು ಅನೇಕ ಕಾರಣಗಳಿವೆ. ಇದು ಹವಾಮಾನದ ಮೇಲೆ ಪರಿಣಾಮ ಬೀರುವುದಲ್ಲದೇ, ಆರ್ಥಿಕ ನಷ್ಟ, ಸಾವು–ನೋವುಗಳನ್ನೂ ಉಂಟುಮಾಡುತ್ತಿದೆ. ಈ ಸಮಸ್ಯೆಗೆ ಭಾರತ ಪರಿಣಾಮಕಾರಿ ಪರಿಹಾರ ಕಂಡುಕೊಳ್ಳಬೇಕಿದೆ

ಪ್ರಜಾವಾಣಿ ವಾರ್ತೆ

ದೇಶದಲ್ಲಿ ಈಗ ಮದುವೆ ಸಮಾರಂಭಗಳ ಸಮಯ. ಹಳ್ಳಿಯಿಂದ ಹಿಡಿದು ದಿಲ್ಲಿಯವರೆಗೆ ಗ್ರಾಮ, ಪಟ್ಟಣ, ನಗರಗಳಲ್ಲಿ ಲಕ್ಷಾಂತರ ಜೋಡಿಗಳು ಸಾಂಸಾರಿಕ ಜೀವನಕ್ಕೆ ಕಾಲಿಡುತ್ತಿವೆ. ವಿವಾಹ ಸಮಾರಂಭಗಳಲ್ಲಿ ಅತಿಥಿಗಳಿಗೆ ಭೂರಿ ಭೋಜನ ವ್ಯವಸ್ಥೆ ಮಾಡುವುದು ವಧು ವರರ ಕುಟುಂಬದವರಿಗೆ ಪ್ರತಿಷ್ಠೆಯ ವಿಚಾರ. ಆದರೆ, ಬಹುತೇಕ ಮದುವೆಗಳಲ್ಲಿ ಸಿದ್ಧಪಡಿಸಿದ ಆಹಾರ ಭಾರಿ ಪ್ರಮಾಣದಲ್ಲಿ ಉಳಿದು, ಅದನ್ನು ಚೆಲ್ಲಲಾಗುತ್ತಿದೆ. ತಿನ್ನುವ ಪದಾರ್ಥಗಳನ್ನು ವ್ಯರ್ಥ ಮಾಡುವುದು ಮದುವೆ ಸಮಾರಂಭಕ್ಕಷ್ಟೇ ಸೀಮಿತವಾಗಿಲ್ಲ. ಹಬ್ಬ, ಜಾತ್ರೆ, ಇನ್ನಿತರ ಸಮಾರಂಭಗಳಲ್ಲೂ ಈ ಪ್ರವೃತ್ತಿ ಇದೆ.

ಆಹಾರವನ್ನು ಕಸದ ಬುಟ್ಟಿಗೆ ಎಸೆಯುವುದು ಭಾರತದ ಸಮಸ್ಯೆ ಮಾತ್ರವಲ್ಲ; ಅದೊಂದು ಜಾಗತಿಕ ಸಮಸ್ಯೆ. ವಿಶ್ವಸಂಸ್ಥೆಯ ಪರಿಸರ ಕಾರ್ಯಕ್ರಮದ ಆಹಾರ ವ್ಯರ್ಥ ಸೂಚ್ಯಂಕ ವರದಿ (ಎಫ್‌ಡಬ್ಲ್ಯುಐಆರ್) 2024ರ ಪ್ರಕಾರ, 2022ರಲ್ಲಿ ಜಾಗತಿಕ ಮಟ್ಟದಲ್ಲಿ 105ಕೋಟಿ ಟನ್ ಆಹಾರ ಪೋಲಾಗಿದೆ. ಇದು ಜಗತ್ತಿನ ಶೇ 20 ಮಂದಿಯ ಆಹಾರಕ್ಕೆ ಸಮನಾಗಿದೆ. ಚೀನಾ, ಅಮೆರಿಕ, ಭಾರತ ಮುಂತಾದ ರಾಷ್ಟ್ರಗಳು ತಿನ್ನುವ ಪದಾರ್ಥಗಳನ್ನು ಹೆಚ್ಚು ಪೋಲು ಮಾಡುತ್ತಿವೆ.

ಭಾರತ ಇಂದು ಜಾಗತಿಕವಾಗಿ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆಯಾಗಿದೆ; ಆಹಾರೋತ್ಪಾದನೆಯಲ್ಲಿಯೂ ಮುಂಚೂಣಿಯಲ್ಲಿದೆ. ಆದರೆ, ಇದೇ ವೇಳೆ ದೇಶದಲ್ಲಿ ಆಹಾರದ ಅಭದ್ರತೆಯೂ ಹೆಚ್ಚಾಗಿದೆ. ತಿನ್ನುವ ಪದಾರ್ಥಗಳನ್ನು ಎಸೆಯುವುದು ಸೇರಿದಂತೆ ಆಹಾರದ ಸರಪಳಿಯಲ್ಲಿ ಉಂಟಾಗುತ್ತಿರುವ ಸಮಸ್ಯೆಗಳೇ ಇದಕ್ಕೆ ಕಾರಣ.

ದೇಶದಲ್ಲಿ ಆಹಾರವು ರೈತನ ಹೊಲದಿಂದ ಗ್ರಾಹಕನ ತಟ್ಟೆಗೆ ತಲುಪುವುದರ ನಡುವೆ ಭಾರಿ ಪ್ರಮಾಣದಲ್ಲಿ ವ್ಯರ್ಥವಾಗುತ್ತಿದೆ. ವಿಶ್ವಸಂಸ್ಥೆಯ ಪ್ರಕಾರ, ದೇಶದಲ್ಲಿ ವಾರ್ಷಿಕವಾಗಿ 7.82 ಕೋಟಿ ಟನ್ ಆಹಾರ ಪ್ರತಿ ವರ್ಷ ಚೆಲ್ಲಲಾಗುತ್ತಿದೆ. ಒಂದು ವೇಳೆ ಇದನ್ನು ಉಳಿಸಿದರೆ, ದೇಶದ ಶೇ 26.5ರಷ್ಟು ಮಂದಿಗೆ ಒಂದು ವರ್ಷದ ಅವಧಿಗೆ ಸಾಕಾಗುತ್ತದೆ.

ಅಮೆರಿಕದಂಥ ದೇಶಗಳಿಗೆ ಹೋಲಿಸಿದರೆ ದೇಶದಲ್ಲಿ ಪ್ರತಿ ವ್ಯಕ್ತಿ ಚೆಲ್ಲುವ ಆಹಾರದ ಪ್ರಮಾಣ ಕಡಿಮೆ ಇದೆ. ಹಾಗಿದ್ದರೂ ಇದು, ದೇಶದ ಆಹಾರ ಭದ್ರತೆ, ಪರಿಸರದ ಮೇಲೆ, ಸಂಪನ್ಮೂಲಗಳ ಮೇಲೆ ಮತ್ತು ದೇಶದ ಆರ್ಥಿಕತೆಯ ಮೇಲೆ ಗಂಭೀರ ಪರಿಣಾಮಗಳನ್ನು ಉಂಟುಮಾಡುತ್ತಿದೆ.

ಪರಿಸರದ ಮೇಲೆ ಪರಿಣಾಮ: ಆಹಾರ ಧಾನ್ಯಗಳ ಉತ್ಪಾದನೆಗೆ ಭಾರಿ ಪ್ರಮಾಣದ ಸಂಪನ್ಮೂಲಗಳ ಅಗತ್ಯವಿದೆ. ಅಗಾಧ ವಿಸ್ತೀರ್ಣದ ಭೂಮಿ, ನೀರು, ಗೊಬ್ಬರ ಬೇಕಾಗುತ್ತವೆ. ಆಹಾರವನ್ನು ಪೋಲು ಮಾಡುವುದು ಎಂದರೆ, ಅದು ಸಂಪನ್ಮೂಲಗಳನ್ನು ವ್ಯರ್ಥ ಮಾಡಿದಂತೆಯೇ. ಆಹಾರ ವ್ಯವಸ್ಥೆಯು ಬೃಹತ್ ಪ್ರಮಾಣದಲ್ಲಿ ಹಸಿರುಮನೆ ಅನಿಲಗಳ ಬಿಡುಗಡೆಗೆ ಕಾರಣವಾಗಿದೆ. ಈ ವಿಚಾರದಲ್ಲಿ ಭಾರತವು ಚೀನಾ ಮತ್ತು ಅಮೆರಿಕದ ನಂತರದ ಸ್ಥಾನದಲ್ಲಿದೆ. ಇದರ ಜತೆಗೆ ಸಂಪನ್ಮೂಲಗಳ ಅತಿಯಾದ ಬಳಕೆ ಮತ್ತು ತ್ಯಾಜ್ಯದ ಅಸಮರ್ಪಕ ವಿಲೇವಾರಿಯಿಂದ ಹವಾಮಾನ ಬದಲಾವಣೆಗೂ ಕಾರಣವಾಗಿದೆ.

ಸಾಮಾಜಿಕ ಸಮಸ್ಯೆ: ಭಾರತದಲ್ಲಿ ಆಹಾರವು ಎಲ್ಲರಿಗೂ ಸಮಾನವಾಗಿ ಲಭ್ಯವಾಗುತ್ತಿಲ್ಲ. ಇದರಿಂದಾಗಿ ಹಸಿದ ಹೊಟ್ಟೆಗಳ ಸಂಖ್ಯೆ ಹೆಚ್ಚಾಗುತ್ತಿದೆ. ಜಾಗತಿಕ ಆಹಾರ ವ್ಯವಸ್ಥೆಗೆ ಇದು ಗಂಭೀರ ಸವಾಲುಗಳನ್ನು ಒಡ್ಡುತ್ತಿದೆ. ಅನೇಕ ಕಲ್ಯಾಣ ಕಾರ್ಯಕ್ರಮಗಳ ಹೊರತಾಗಿಯೂ ಭಾರತವೂ ಸೇರಿದಂತೆ ಜಗತ್ತಿನ ಅನೇಕ ರಾಷ್ಟ್ರಗಳಲ್ಲಿ ಹಸಿವಿನಿಂದ ಇರುವವರ ಪ್ರಮಾಣ ದೊಡ್ಡದಾಗಿದೆ. ಅದಕ್ಕೆ ಆಹಾರ ಮಣ್ಣು ಪಾಲಾಗುತ್ತಿರುವುದೂ ಒಂದು ಕಾರಣ. ರಾಷ್ಟ್ರೀಯ ಆಹಾರ ಭದ್ರತೆಗೂ ಇದು ಹೊಡೆತ ನೀಡುತ್ತಿದೆ. ಈ ವಿಚಾರದಲ್ಲಿ ಭಾರತ ಹೆಚ್ಚಿನ ಜಾಗರೂಕತೆ ವಹಿಸುವುದು ಅಗತ್ಯವಾಗಿದೆ.

> ಈ ಸಮಸ್ಯೆಯನ್ನು ವಿಶ್ವಸಂಸ್ಥೆಯೂ ಗಂಭೀರವಾಗಿ ಪರಿಗಣಿಸಿದೆ. ಸುಸ್ಥಿರ ಅಭಿವೃದ್ಧಿ ಗುರಿಗಳಲ್ಲಿ (ಎಸ್‌ಡಿಜಿ) ಆಹಾರ ಭದ್ರತೆ ಮತ್ತು ಆಹಾರ ವ್ಯರ್ಥವಾಗುವುದನ್ನು ಕಡಿಮೆ ಮಾಡುವುದನ್ನೂ ಒಂದು ಅಂಶವನ್ನಾಗಿ ಸೇರಿಸಿದೆ. ಎಸ್‌ಡಿಜಿ 2ರ ಪ್ರಕಾರ, 2030ರ ವೇಳೆಗೆ ಜಗತ್ತು ಹಸಿವು ಮುಕ್ತವಾಗಬೇಕು. ಮತ್ತು '2030ರ ವೇಳೆಗೆ ಜಾಗತಿಕವಾಗಿ ಮಾರುಕಟ್ಟೆ, ಗ್ರಾಹಕರ ಮಟ್ಟದಲ್ಲಿ ಆಗುವ ಆಹಾರ ನಷ್ಟ ಮತ್ತು ವ್ಯರ್ಥವನ್ನು ಅರ್ಧದಷ್ಟು ಪ್ರಮಾಣದಲ್ಲಿ ಕಡಿಮೆ ಮಾಡಬೇಕು' ಎಂದು ಎಸ್‌ಡಿಜಿ 12.3 ಹೇಳುತ್ತದೆ.



ಆಧಾರ: ವಿಶ್ವಸಂಸ್ಥೆಯ ವರದಿಗಳು, ಡಬ್ಲ್ಯುಆರ್‌ಐ ಇಂಡಿಯಾ, ಮಾಧ್ಯಮಗಳ ವರದಿಗಳು

ಭಾರತದಲ್ಲಿ ಆಹಾರ ವ್ಯರ್ಥ: ಒಂದು ನೋಟ



ಭಾರತದಲ್ಲಿ ಗ್ರಾಮೀಣ ಪ್ರದೇಶಗಳಿಗೆ ಹೋಲಿಸಿದರೆ ನಗರ, ಪಟ್ಟಣ ಪ್ರದೇಶಗಳಲ್ಲಿ ಹೆಚ್ಚು ಆಹಾರವನ್ನು ಚೆಲ್ಲಲಾಗುತ್ತಿದೆ. ಅಂದಾಜಿನ ಪ್ರಕಾರ, ನಗರ ಸ್ಥಳೀಯ ಆಡಳಿತಗಳ ವ್ಯಾಪ್ತಿಯಲ್ಲಿ ಸೃಷ್ಟಿಯಾಗುವ ತ್ಯಾಜ್ಯದಲ್ಲಿ ಆಹಾರ ತ್ಯಾಜ್ಯದ ಪ್ರಮಾಣ ಶೇ 10ರಿಂದ 12ರಷ್ಟು

ಆಹಾರ ಹೇಗೆ ವ್ಯರ್ಥವಾಗುತ್ತಿದೆ?

- ಅಗತ್ಯಕ್ಕಿಂತ ಹೆಚ್ಚು ಆಹಾರ ಪದಾರ್ಥ/ದಿನಸಿ ಖರೀದಿಸುವುದು
- ಮನೆಗಳಲ್ಲಿ ಆಹಾರ ತಯಾರಿ/ಸೇವನೆಯ ವಿಚಾರದಲ್ಲಿ ಸರಿಯಾದ ಲೆಕ್ಕಾಚಾರದ ಕೊರತೆ
- ಸೀಮಿತ ಸಂಗ್ರಹ ವ್ಯವಸ್ಥೆ (ಸಣ್ಣ ಫ್ರಿಜ್‌ಗಳು, ಅಡುಗೆ ಮನೆಯಲ್ಲಿ ಶೀತಲ/ಒಣ ವ್ಯವಸ್ಥೆಯ ಕೊರತೆ)
- ಹಬ್ಬ, ಮದುವೆ, ಜಾತ್ರೆ ಇತ್ಯಾದಿಗಳನ್ನು ಅತ್ಯಂತ ಅದ್ದೂರಿತನದಿಂದ ಮಾಡುವುದು
- ಹೋಟೆಲ್ ಮತ್ತು ಇತರ ಸ್ಥಳಗಳಲ್ಲಿ ಸರಿಯಾದ ಆಹಾರ ಸಂಗ್ರಹಣೆ ವ್ಯವಸ್ಥೆ ಇಲ್ಲದಿರುವುದು

ತಡೆಯುವುದು ಹೇಗೆ?

ಆಹಾರ ಚೆಲ್ಲುವಿಕೆ ತಡೆಗಟ್ಟಲು ಜನರು ವೈಯಕ್ತಿಕ ನೆಲೆಗಟ್ಟಿನಲ್ಲಿ ಕ್ರಮಗಳನ್ನು ಕೈಗೊಳ್ಳಬೇಕು. ಸರ್ಕಾರ, ಸ್ಥಳೀಯ ಆಡಳಿತಗಳು, ಖಾಸಗಿ ಸಂಘ ಸಂಸ್ಥೆಗಳು ಕೂಡ ತಮ್ಮ ನೀತಿ, ನಿಯಮಗಳಲ್ಲಿ ಸುಧಾರಣೆಗಳನ್ನು ತರುವುದರ ಮೂಲಕ ಈ ಸಮಸ್ಯೆಗೆ ಕಡಿವಾಣ ಹಾಕಲು ಯತ್ನಿಸಬೇಕು ಎನ್ನುವುದು ತಜ್ಞರ ಸಲಹೆ. ಅವರ ಪ್ರಕಾರ,

- ವೈಯಕ್ತಿಕವಾಗಿ ಸುಸ್ಥಿರ ಆಹಾರ ಪದ್ಧತಿ ಅಳವಡಿಸಿಕೊಳ್ಳುವುದು. ಹಿತಮಿತವಾದ ಆಹಾರ ಸೇವಿಸುವುದು. ಮನೆಗಳಲ್ಲಿ ಅಗತ್ಯಕ್ಕೆ ತಕ್ಕಷ್ಟೇ ಆಹಾರ ವಸ್ತುಗಳ ಬಳಕೆ, ಅಡುಗೆ ಸಿದ್ಧಪಡಿಸುವುದು. ಸಭೆ ಸಮಾರಂಭಗಳಲ್ಲೂ ಕೂಡ ಎಷ್ಟು ಬೇಕು ಅಷ್ಟೇ ಆಹಾರವನ್ನು ಸೇವಿಸುವುದು
- ಮನೆಗಳಲ್ಲಿ ಆಹಾರಗಳು ಹಾಳಾಗದಂತೆ ಸಂಗ್ರಹ ಮಾಡಲು ಪರಿಣಾಮಕಾರಿ ವ್ಯವಸ್ಥೆಯನ್ನು ರೂಪಿಸುವುದು
- ಅಡುಗೆಗೆ ಬಳಸಿದ ವಸ್ತುಗಳ ಉಳಿಕೆಯನ್ನು ಕಾಂಪೋಸ್ಟ್ ಆಗಿ ಪರಿವರ್ತಿಸುವುದು
- ಮನೆ ಅಥವಾ ಮದುವೆ ಇನ್ನಿತರ ಸಮಾರಂಭಗಳಲ್ಲಿ ಉಳಿದ ಆಹಾರವನ್ನು ಅಗತ್ಯವಿರುವವರಿಗೆ ಹಂಚುವುದು. ಉದಾ: ಬಡವರಿಗೆ, ಆಶ್ರಮಗಳಿಗೆ, ಹಾಸ್ಟೆಲ್‌ಗಳಿಗೆ ಇತ್ಯಾದಿ
- ಮದುವೆ ಸೇರಿದಂತೆ ಇತರ ಸಮಾರಂಭಗಳಲ್ಲಿ ಕಟ್ಟುನಿಟ್ಟಾಗಿ ಆಹಾರ ವ್ಯರ್ಥವಾಗದಂತೆ ನೋಡಿಕೊಳ್ಳುವುದು
- ಉಳಿದ ಆಹಾರವನ್ನು ಡಬ್ಬದಲ್ಲಿ ತುಂಬಿಸಿ ಅತಿಥಿಗಳಿಗೆ ನೀಡಬಹುದು ಅಥವಾ ಸ್ಥಳೀಯ ಅನಾಥಾಶ್ರಮ, ವೃದ್ಧಾಶ್ರಮ ಸೇರಿದಂತೆ ಬಡವರಿಗೆ ವಿತರಿಸಬಹುದು. ಇದಕ್ಕಾಗಿ ಸರ್ಕಾರೇತರ ಸಂಸ್ಥೆಗಳ ನೆರವನ್ನೂ ಪಡೆಯಬಹುದು
- ಆಹಾರ ವ್ಯರ್ಥವಾಗುವುದನ್ನು ತಡೆಯಲು ಸರ್ಕಾರ, ಸ್ಥಳೀಯ ಸಂಸ್ಥೆಗಳು ಕಠಿಣ ನಿಯಮಗಳನ್ನು ರೂಪಿಸುವುದು
- ಉಳಿಕೆ ಆಹಾರ ಪುನರ್‌ಹಂಚಿಕೆ ಮಾಡುವ ಸಂಸ್ಥೆ/ಜಾಲಗಳಿಗೆ ಪ್ರೋತ್ಸಾಹ ನೀಡುವುದು
- ಜನರಲ್ಲಿ ಜಾಗೃತಿ ಮೂಡಿಸುವುದು, ಚಳವಳಿಗಳನ್ನು ರೂಪಿಸುವುದು

ತೆಲಂಗಾಣ: ಎಸ್‌ಸಿ ಒಳಮೀಸಲಾತಿ ಜಾರಿ

ಹೈದರಾಬಾದ್ (ಪಿಟಿಐ): ತೆಲಂಗಾಣದ ಎ.ರೇವಂತ್ ರೆಡ್ಡಿ ನೇತೃತ್ವದ ಕಾಂಗ್ರೆಸ್ ಸರ್ಕಾರವು ಪರಿಶಿಷ್ಟ ಜಾತಿ (ಎಸ್‌ಸಿ) ಒಳಮೀಸಲಾತಿ ಅನುಷ್ಠಾನಕ್ಕೆ ಸಂಬಂಧಿಸಿದ ಆದೇಶವನ್ನು ಸೋಮವಾರ ಹೊರಡಿಸಿದೆ.

'ತೆಲಂಗಾಣವು ಎಸ್‌ಸಿ ಒಳಮೀಸಲಾತಿ ಜಾರಿಗೊಳಿಸಿದ ಮೊದಲ ರಾಜ್ಯ ಎನಿಸಿಕೊಂಡಿದೆ' ಎಂದು ನೀರಾವರಿ ಸಚಿವ ಎನ್.ಉತ್ತಮ್ ಕುಮಾರ್ ರೆಡ್ಡಿ ತಿಳಿಸಿದ್ದಾರೆ.

ಒಳಮೀಸಲಾತಿ ಜಾರಿ ಸಂಬಂಧ ತೆಲಂಗಾಣ ಸರ್ಕಾರವು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಶಮೀಮ್ ಅಖ್ತರ್ ಅವರ ನೇತೃತ್ವದಲ್ಲಿ ಆಯೋಗವನ್ನು ರಚಿಸಿತ್ತು. ತೆಲಂಗಾಣದಲ್ಲಿ ಎಸ್‌ಸಿ ಪಟ್ಟಿಯಲ್ಲಿ 59 ಉಪಜಾತಿಗಳಿದ್ದು, ಜನಸಂಖ್ಯೆ, ಹಿಂದುಳಿದಿರುವಿಕೆ ಆಧಾರದಲ್ಲಿ ಅವನ್ನು ಮೂರು ಗುಂಪುಗಳನ್ನಾಗಿ ಮಾಡಿ ಮೀಸಲಾತಿ ಹಂಚಿಕೆ ಮಾಡಬೇಕು ಎಂದು ಸಮಿತಿ ಶಿಫಾರಸು ಮಾಡಿತ್ತು.

'ತೆಲಂಗಾಣ ಪರಿಶಿಷ್ಟ ಜಾತಿಗಳ (ಮೀಸಲಾತಿ ತರ್ಕಬದ್ಧಗೊಳಿಸುವಿಕೆ) ಕಾಯ್ದೆಗೆ– 2025' ರಾಜ್ಯಪಾಲರು ಏಪ್ರಿಲ್ 8 ರಂದು ಅಂಕಿತ ಹಾಕಿದ್ದಾರೆ. ಏ.14 ರಂದು ಗೆಜೆಟ್ ಅಧಿಸೂಚನೆ ಹೊರಡಿಸಲಾಗಿದೆ' ಎಂದು ಸರ್ಕಾರದ ಆದೇಶ ತಿಳಿಸಿದೆ.

ಎಸ್‌ಸಿ ಒಳಮೀಸಲಾತಿ ಸಂಪುಟ ಉಪಸಮಿತಿಯ ನೇತೃತ್ವ ವಹಿಸಿದ್ದ ಸಚಿವ ರೆಡ್ಡಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ಸರ್ಕಾರಿ ಆದೇಶದ ಮೊದಲ ಪ್ರತಿಯನ್ನು ಮುಖ್ಯಮಂತ್ರಿ ಎ.ರೇವಂತ್ ರೆಡ್ಡಿ ಅವರಿಗೆ ನೀಡಲಾಗಿದೆ' ಎಂದರು.

'ಏ.14ರಿಂದ ತೆಲಂಗಾಣದಲ್ಲಿ ಉದ್ಯೋಗ ಮತ್ತು ಶಿಕ್ಷಣದಲ್ಲಿ ಎಸ್‌ಸಿ ಒಳಮೀಸಲಾತಿಯನ್ನು ಅನುಷ್ಠಾನಕ್ಕೆ ತರಲಾಗಿದೆ. ಅದಕ್ಕೆ ಸಂಬಂಧಿಸಿದ ಸರ್ಕಾರಿ ಆದೇಶವನ್ನು ಹೊರಡಿಸಲಾಗಿದೆ' ಎಂದು ಹೇಳಿದರು.

'ತೆಲಂಗಾಣ ಪರಿಶಿಷ್ಟ ಜಾತಿಗಳ (ಮೀಸಲಾತಿ ತರ್ಕಬದ್ಧಗೊಳಿಸುವಿಕೆ) ಮಸೂದೆ– 2025'ಅನ್ನು ತೆಲಂಗಾಣ ವಿಧಾನಸಭೆಯಲ್ಲಿ ಕಳೆದ ತಿಂಗಳು ಅಂಗೀಕರಿಸಲಾಗಿತ್ತು. ಸುಪ್ರೀಂ ಕೋರ್ಟ್ ಕಳೆದ ವರ್ಷ ಎಸ್‌ಸಿ ಒಳಮೀಸಲಾತಿ ಪರವಾಗಿ ತೀರ್ಪು ನೀಡಿತ್ತು.

ಎಟಿಎಸ್, ಐಸಿಜಿ ಜಂಟಿ ಕಾರ್ಯಾಚರಣೆ

₹1,800 ಕೋಟಿ ಮೌಲ್ಯದ ಮಾದಕ ವಸ್ತು ವಶ

ಅಹಮದಾಬಾದ್ (ಪಿಟಿಐ): ಗುಜರಾತಿನ ಭಯೋತ್ಪಾದಕ ನಿಗ್ರಹ ದಳ (ಎಟಿಎಸ್) ಮತ್ತು ಭಾರತೀಯ ಕರಾವಳಿ ಕಾವಲು ಪಡೆ (ಐಸಿಜಿ) ಅರಬ್ಬಿ ಸಮುದ್ರದಲ್ಲಿ ಜಂಟಿ ಕಾರ್ಯಾಚರಣೆ ನಡೆಸಿ ಸುಮಾರು ₹1,800 ಕೋಟಿ ಮೌಲ್ಯದ 300 ಕೆ.ಜಿ ಮಾದಕ ವಸ್ತುಗಳನ್ನು ವಶಕ್ಕೆ ಪಡೆದಿವೆ.

ಕರಾವಳಿ ಕಾವಲು ಪಡೆಯ ಹಡಗು ಸಮೀಪಿಸುತ್ತಿರುವುದನ್ನು ಗಮನಿಸಿದ ಪಾಕಿಸ್ತಾನದ ಕಳ್ಳಸಾಗಣೆದಾರರು ದೋಣಿಯಲ್ಲಿದ್ದ ಮಾದಕ ವಸ್ತುಗಳನ್ನು ಸಮುದ್ರದಲ್ಲಿ ಎಸೆದು, ಅಂತರರಾಷ್ಟ್ರೀಯ ಸಾಗರ ಗಡಿ ರೇಖೆಯನ್ನು (ಐಎಂಬಿಎಲ್) ದಾಟಿ ಪರಾರಿಯಾಗಿದ್ದಾರೆ ಎಂದು ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ.

ಪಾಕಿಸ್ತಾನದ ಪಾಸ್ನಿ ಬಂದರಿನಿಂದ ರವಾನಿಸಲಾಗಿದ್ದ ಈ ಮಾದಕವಸ್ತುವನ್ನು ಸಮುದ್ರದ ಮಧ್ಯದಲ್ಲೇ ಮತ್ತೊಂದು ದೋಣಿಗೆ ಸ್ಥಳಾಂತರಿಸಿ ತಮಿಳುನಾಡಿಗೆ ಸಾಗಿಸಲು ಉದ್ದೇಶಿಸಲಾಗಿತ್ತು ಎಂದು ತಿಳಿಸಿದ್ದಾರೆ.

ವಶಕ್ಕೆ ಪಡೆಯಲಾಗಿರುವ ಮಾದಕ ವಸ್ತುವು ಮೆಥಾಂಫೆಟಮೈನ್ ಆಗಿರಬಹುದು ಎಂದು ಶಂಕಿಸಲಾಗಿದ್ದು, ಹೆಚ್ಚಿನ ತನಿಖೆಗಾಗಿ ಎಟಿಎಸ್‌ಗೆ ಹಸ್ತಾಂತರಿಸಲಾಗಿದೆ ಎಂದು ಭಾರತೀಯ ಕರಾವಳಿ ಕಾವಲು ಪಡೆ (ಐಸಿಜಿ) ಪ್ರಕಟಣೆಯಲ್ಲಿ ತಿಳಿಸಿದೆ.

ಅರಬ್ಬಿ ಸಮುದ್ರದಲ್ಲಿ ಐಎಂಬಿಎಲ್ ಬಳಿ ಎಟಿಎಸ್ ಮತ್ತು ಐಸಿಜಿ ಏಪ್ರಿಲ್ 12 ಮತ್ತು 13ರ ರಾತ್ರಿ ಜಂಟಿ ಕಾರ್ಯಾಚರಣೆ ನಡೆಸಿದ್ದವು. ವಶಕ್ಕೆ ಪಡೆಯಲಾಗಿರುವ ಮಾದಕ ವಸ್ತುಗಳನ್ನು ಹೆಚ್ಚಿನ ತನಿಖೆಗಾಗಿ ಪೋರಬಂದರ್‌ಗೆ ತರಲಾಗಿದೆ ಎಂದು ಅದು ಹೇಳಿದೆ.

ಇತ್ತೀಚಿನ ವರ್ಷಗಳಲ್ಲಿ ಐಸಿಜಿ ಮತ್ತು ಎಟಿಎಸ್ ಜಂಟಿಯಾಗಿ ಈ ರೀತಿಯ 13 ಯಶಸ್ವಿ ಕಾರ್ಯಾಚರಣೆಗಳನ್ನು ನಡೆಸಿವೆ ಎಂದು ಅದು ತಿಳಿಸಿದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಕಾರಿನಿಂದ ಇಳಿದು ಸಂಸತ್ ಭವನದ ಒಳಗೆ ಹೋಗುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕವಾಗಿ ಹರಿದಾಡುತ್ತಿದೆ. ರಾಹುಲ್ ಗಾಂಧಿ ಅವರು ವಕ್ಫ್ (ತಿದ್ದುಪಡಿ) ಮಸೂದೆಯ ಬಗ್ಗೆ ಚರ್ಚೆ ನಡೆಯುವಾಗ ಲೋಕಸಭೆಯ ಕಲಾಪಕ್ಕೆ ಬೆಳಿಗ್ಗೆಯಿಂದ ಗೈರಾಗಿದ್ದರು; ಆದರೆ, ಮಸೂದೆಯ ವಿರುದ್ಧ ಮತ ಚಲಾಯಿಸುವ ಸಲುವಾಗಿ ರಾತ್ರಿ 10 ಗಂಟೆಗೆ ಸಂಸತ್‌ಗೆ ಬಂದರು ಎಂದು ಪೋಸ್ಟ್ ಅನ್ನು ಹಂಚಿಕೊಳ್ಳುತ್ತಿರುವವರು ಪ್ರತಿಪಾದಿಸುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.

ನಿರ್ದಿಷ್ಟ ಪದವನ್ನು ಹಾಕಿ ಹುಡುಕಾಟ ನಡೆಸಿದಾಗ, ಜಾಲತಾಣಗಳಲ್ಲಿ ಹರಿದಾಡುತ್ತಿರುವ ವಿಡಿಯೊ, ಐಎಎನ್‌ಎಸ್ ವರದಿಗೆ ಸಂಬಂಧಿಸಿದ್ದು ಎನ್ನುವುದು ತಿಳಿಯಿತು. ಸರ್ಕಾರದ ಒಡೆತನದ ಸಂಸದ್ ಟಿವಿಯ ದೃಶ್ಯಾವಳಿ ಪರೀಕ್ಷಿಸಿದಾಗ, ವಕ್ಫ್ ಮಸೂದೆ ಮೇಲೆ ಚರ್ಚೆ ನಡೆಯುವ ಸಂದರ್ಭದಲ್ಲಿ ವಿರೋಧ ಪಕ್ಷಗಳ ಸಾಲಿನಲ್ಲಿ ಇತರೆ ನಾಯಕರ ಜತೆ ರಾಹುಲ್ ಅವರೂ ಕುಳಿತಿರುವುದು ಕಂಡಿತು. ವಕ್ಫ್ ಮಸೂದೆ ಕುರಿತ ಚರ್ಚೆಯ ವೇಳೆ, ಬೆಳಿಗ್ಗೆ ಅವರು ಕಲಾಪದಲ್ಲಿ ಹಾಜರಿದ್ದುದು ಖಚಿತವಾಯಿತು. ರಾಹುಲ್ ಸಂಸತ್‌ಗೆ ಬರುವ ವಿಡಿಯೊ ಹಂಚಿಕೊಂಡು ಕೆಲವರು ಸುಳ್ಳು ಪ್ರತಿಪಾದನೆ ಮಾಡುತ್ತಿದ್ದಾರೆ ಎಂದು ಬೂಮ್ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಗುಂಡಣ್ಣ

ಪುಕ್ಕಟೆ ಯಾವುದನ್ನೂ ತಗೋಬಾರದು

ನುಡಿ ಬೆಳಗು

ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

173

ಖಲೀಲ್ ಗಿಬ್ರಾನ್ ಅಂಥ ಒಬ್ಬರು ಇದ್ದರು. ಅವರಿಗೆ ಯಾರೋ ಒಬ್ಬರು 'ಮನೆಯಲ್ಲಿ ಎಷ್ಟೊಂದು ಜಗಳ ನಡೆಯುತ್ತದೆ. ತಂದೆ ಮಕ್ಕಳ ನಡುವೆ ಸಂಬಂಧ ಸರಿ ಇಲ್ಲ. ಅವರು ಹೇಗೆ ಬದುಕಬೇಕು ಎನ್ನುವುದರ ಬಗ್ಗೆ ಹೇಳಿ' ಎಂದು ಕೇಳಿದರು. ಆಗ ಖಲೀಲ್ ಗಿಬ್ರಾನ್ 'ಬಿಲ್ಲು ಇದೆ. ಬಾಣ ಇದೆ. ಬಿಲ್ಲುಗಾರ ಇದ್ದಾನೆ. ತಂದೆ ಬಿಲ್ಲು ಇದ್ದ ಹಾಗೆ. ಮಗ ಬಾಣ ಇದ್ದ ಹಾಗೆ. ದೇವರು ಬಿಲ್ಲುಗಾರ. ಒಬ್ಬ ಬಿಲ್ಲುಗಾರ ಬಾಣವನ್ನು ಪ್ರೀತಿಸಿದಷ್ಟೇ ಬಿಲ್ಲನ್ನೂ ಪ್ರೀತಿ ಮಾಡುತ್ತಾನೆ. ಆದರೆ ಬಾಣ ಮುಂದೆ ಹೋಗಬೇಕಾದರೆ ಬಿಲ್ಲು ಸ್ವಲ್ಪ ಬಾಗಬೇಕು. ಆದರೆ, ಬಾಣಕ್ಕೆ ಗೊತ್ತಿರಬೇಕು, ನಾನು ಮುಂದೆ ಹೋಗಬೇಕು ಎಂದರೆ ಬಿಲ್ಲು ಬಿಟ್ಟಿರಬಾರದು ಎಂದು' ಅಂದರು. ಮಕ್ಕಳು ಮುಂದೆ ಹೋಗಬೇಕು ಎಂದರೆ ತಂದೆ ತಾಯಿ ಸ್ವಲ್ಪ ಬಾಗಬೇಕು. ಯಾಕೆಂದರೆ ಅವರ ಬಳಿ ಹೊಸ ಹೊಸ ಐಡಿಯಾಗಳಿರುತ್ತವೆ. ಮಕ್ಕಳೂ ತಂದೆಯ ಅನುಭವ ಕೇಳಬೇಕು. ಇದು ಸಂಬಂಧ. ಬರೀ ಬಂಗಾರದಿಂದ ಯಾವ ಸಂಬಂಧವೂ ಗಟ್ಟಿಯಾಗುವುದಿಲ್ಲ. ಬಂಗಾರದಂತಹ ಹೃದಯದಿಂದ ಸಂಬಂಧ ಗಟ್ಟಿಯಾಗುತ್ತದೆ.

ಧರ್ಮಕ್ಕಾಗಿಯೂ ಗುದ್ದಾಟಗಳು ನಡೆಯುತ್ತವೆ. ನಮ್ಮ ಧರ್ಮ ಶ್ರೇಷ್ಠ ಅಂತ ಕೆಲವರು, ಮತ್ತೊಂದಿಷ್ಟು ಮಂದಿ ತಮ್ಮ ಧರ್ಮವೇ ಶ್ರೇಷ್ಠ ಎಂದು ಗುದ್ದಾಡುತ್ತಾರೆ. ಗಾಳಿಗಳು ಅಂತಿಲ್ಲ, ಸೂರ್ಯರು ಅಂತಿಲ್ಲ, ನೀರುಗಳು ಅಂತಿಲ್ಲ. ಭೂಮಿಗಳು ಅಂತಿಲ್ಲ. ಸೂರ್ಯ ಒಂದೆ, ಗಾಳಿ ಒಂದೆ, ಭೂಮಿ ಒಂದೆ, ನೀರೂ ಒಂದೆ. ಆದರೆ ಧರ್ಮಗಳು ಮಾತ್ರ ಯಾಕೆ ಹೆಚ್ಚು? ಈ ಜಗತ್ತಿಗೆ ಬೇಕಾಗಿರುವುದು ಧರ್ಮಗಳು ಅಲ್ಲ. ಮನುಷ್ಯನನ್ನು ಮನುಷ್ಯನಂತೆ ಸ್ವೀಕರಿಸುವ ಮಾನವ ಧರ್ಮ ಒಂದೇ ಸಾಕು. ಮನುಷ್ಯ ಮಾವಿನ ಗಿಡವನ್ನು ಮಾವಿನ ಗಿಡ ಎಂದೇ ನೋಡುತ್ತಾನೆ. ನಿಂಬೆಯ ಗಿಡವನ್ನು ನಿಂಬೆ ಗಿಡ ಎಂದೇ ನೋಡುತ್ತಾನೆ. ಆದರೆ ಮನುಷ್ಯನನ್ನು ಮನುಷ್ಯ ಎಂದೇ ನೋಡುವುದಿಲ್ಲ ಯಾಕೆ? ಮನುಷ್ಯನನ್ನು ಮನುಷ್ಯ ಎಂದು ನೋಡಲಾಗದ ಧರ್ಮ ಎಷ್ಟಿದ್ದರೆ ಏನು ಪ್ರಯೋಜನ?

ಒಬ್ಬಳು ತಾಯಿ ಇದ್ದಳು. ಆಕೆ ಬಡವಿ. ಬೇರೆಯವರ ಮನೆಯಲ್ಲಿ ಮುಸುರೆ ತಿಕ್ಕಿ ಮಗನನ್ನು ಸಾಕುತ್ತಿದ್ದಳು. ಆದರೆ ಅವಳಿಗೆ ತನ್ನ ಮಗನನ್ನು ದೊಡ್ಡ ಮನುಷ್ಯನನ್ನಾಗಿ ಮಾಡುವ ಬಯಕೆ ಇತ್ತು. ಒಂದು ದಿನ ಆ ಊರಿಗೆ ಮಾವಿನ ಹಣ್ಣು ಮಾರುವವರು ಬಂದರು. ಈ ಹುಡುಗನಿಗೆ ರೊಕ್ಕ ಕೊಟ್ಟು ಮಾವಿನ ಹಣ್ಣು ಕೊಳ್ಳುವ ಶಕ್ತಿ ಇರಲಿಲ್ಲ. ಆ ಹುಡುಗ ಹಾಗೆಯೇ ನೋಡುತ್ತಾ ನಿಂತಿದ್ದ. ಆಗ ಮಾವಿನಹಣ್ಣು ಮಾರಾಟ ಮಾಡುವವನು 'ಮಗೂ ನೀನು ಎರಡು ಹಣ್ಣು ತೆಗೆದುಕೊ' ಎಂದ. ಅದಕ್ಕೆ ಹುಡುಗ, 'ಮಾವಿನಹಣ್ಣು ತೆಗೆದುಕೊಳ್ಳಲು ನನ್ನ ಬಳಿ ಹಣ ಇಲ್ಲ' ಎಂದ. 'ನೀನು ನನ್ನ ಮಗ ಇದ್ದ ಹಾಗೆ. ನಾನು ಪುಕ್ಕಟೆ ಕೊಡುತ್ತೇನೆ ತಗೋ' ಎಂದ ಅಂಗಡಿಯವ. ಆಗ ಆ ಹುಡುಗ 'ಇಲ್ಲ ನನ್ನ ತಾಯಿ ನನಗೆ ಒಂದು ನೀತಿ ಕಲಿಸಿದ್ದಾಳೆ. ನೀನು ಜೀವನದಲ್ಲಿ ದೊಡ್ಡವ ಆಗಬೇಕು ಎಂದರೆ ಜೀವನದಲ್ಲಿ ಯಾವುದನ್ನೂ ಪುಕ್ಕಟೆ ತೆಗೆದುಕೊಳ್ಳಬೇಡ ಎಂದು ಹೇಳಿದ್ದಾಳೆ. ಇದನ್ನು ಯಾವಾಗಲೂ ಪಾಲಿಸು ಎಂದಿದ್ದಾಳೆ' ಎಂದ. ಜೀವನಕ್ಕೆ ಇದೊಂದು ಪಾಠ ಸಾಕು. ನಮ್ಮ ಶಾಲೆ ಕಾಲೇಜು, ವಿಶ್ವವಿದ್ಯಾಲಯಗಳಲ್ಲಿ ಇದನ್ನು ಕಲಿಸಬೇಕು. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ಏಪ್ರಿಲ್ 15, 2025

ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ಚೈತ್ರ ಕೃಷ್ಣ ದ್ವಿತೀಯ ಗಂ. 10-56 ನಕ್ಷತ್ರ: ವಿಶಾಖ ಗಂ. 27-11 ಯೋಗ: ಸಿದ್ಧಿ (ಆಸ್ರಿಕ್) ಗಂ. 23-33 ಕರಣ: ಗರ ಗಂ. 10-56, ಮೇಷ ಮಾಸದ 02 ನೇ ದಿನ, ಮಳೆನಕ್ಷತ್ರ: ಅಶ್ವಿನಿ 1.
ರಾಹುಕಾಲ : ಮಧ್ಯಾಹ್ನ 03-00 – 04-30
ಸೂರ್ಯೋದಯ : 06-21 ಸೂರ್ಯಾಸ್ತ : 06-40
ಮುಸ್ಲಿಂ ದಿನಾಂಕ : 16 ಶವ್ವಾಲ್, ದಿನ ವಿಶೇಷ : ವೈಶಾಖಾದಿ (ಬಂಗಾಳ), ಬಹಾಗ್ ಬಿಹು (ಅಸ್ಸಾಂ), ಶಿಲ್ದಂಬಾ (ಮಣಿಪುರ), ಅದೃಷ್ಟ ಸಂಖ್ಯೆ : 8, 11

ಮೇಷ: ಸಹಚರರಲ್ಲಿ, ಸಹೋದ್ಯೋಗಿಗಳಲ್ಲಿ ಮೃದು ಧೋರಣೆ ಸಿಬ್ಬಂದಿ ವರ್ಗಕ್ಕೆ ಸಂತೋಷವೆನಿಸುವುದು. ಹೊಸ ವ್ಯವಹಾರದಲ್ಲಿ ಸ್ನೇಹಿತರ ಸಹಕಾರ ದೊರೆಯಲಿದೆ.

ವೃಷಭ: ನಿಗೂಢ ಸಂಗತಿಗಳನ್ನು ಬಯಲಿಗೆ ತರುವ ಪ್ರಯತ್ನ ನಡೆಯಲಿದೆ. ಕೆಲಸಗಳಿಗೆ ಆತ್ಮಸ್ಥೈರ್ಯ ಅಗತ್ಯ. ಕಾನೂನಿಗೆ ವಿರುದ್ಧವಾದ ಕೆಲಸ ಸಂಭವಿಸಬಹುದು.

ಮಿಥುನ: ಕಠಿಣಶ್ರಮದ ಜತೆಯಲ್ಲಿ ಎಷ್ಟೇ ಪ್ರಯತ್ನವಿದ್ದರೂ ಮೊದಲನೇ ಬಾರಿ ವಿಘ್ನವೇ ಸಂಭವಿಸಲಿದೆ. ನಂತರ ಗುರಿ ಸಾಧಿಸಬೇಕಿದ್ದಲ್ಲಿ ಅನುಭವಸ್ಥರ ಅಥವಾ ಅಕ್ಕಪಕ್ಕದವರೊಂದಿಗೆ ಸಂಪರ್ಕ ಬೆಳೆಸಿಕೊಳ್ಳುವುದು ಉತ್ತಮ.

ಕರ್ಕಾಟಕ: ಹೊಸ ಮನೆಯ ಕೆಲಸಗಳಿಗಾಗಿ ಸರ್ಕಾರಿ ಕಚೇರಿಗಳಿಗೆ ಓಡಾಟ ನಡೆಸಬೇಕಾಗುವುದು. ನೆಚ್ಚಿನ ಕ್ಷೇತ್ರದಲ್ಲಿ ಸ್ಪರ್ಧೆಗಳನ್ನು ಎದುರಿಸುವ ಕಾಲ ಈ ದಿನ. ಆದಾಯ ವೆಚ್ಚಗಳು ಎರಡೂ ಸರಿ ಸಮವಾಗಿರುವುದು.

ಸಿಂಹ: ಕೆಲಸ ಕಾರ್ಯದಲ್ಲಿ ತೋರಿ ಬರುತ್ತಿದ್ದ ಅಡ್ಡಿ ಆತಂಕಗಳು ದೂರಾಗಲಿವೆ. ಸಂಸ್ಥೆಯ ಆಂತರಿಕ ವಿಷಯಗಳಿಗೆ ಗಮನ ಕೊಡದಿರುವುದು ಒಳ್ಳೆಯದು. ಮಗನ ವಿದ್ಯಾಭ್ಯಾಸದ ವಿಚಾರಕ್ಕಾಗಿ ತಾಯಿ ಶಾರದಾಂಬೆಯನ್ನು ಪ್ರಾರ್ಥಿಸಿ.

ಕನ್ಯಾ: ರಿಯಲ್ ಎಸ್ಟೇಟುದಾರರಿಗೆ ಉತ್ತಮ ಧನಲಾಭದಿಂದ ವ್ಯವಹಾರಗಳು ವೃದ್ಧಿಗೊಳ್ಳಲಿವೆ. ಕುಲದೇವರ ದರ್ಶನದಿಂದ ವ್ಯವಹಾರಗಳಲ್ಲಿ ಅಭಿವೃದ್ಧಿ ಸಾಧಿಸಬಲ್ಲಿರಿ. ಶಸ್ತ್ರವೈದ್ಯ ವೃತ್ತಿಯವರಿಗೆ ಸೌಲಭ್ಯಗಳು ಹೆಚ್ಚಲಿವೆ.

ತುಲಾ: ಲಭ್ಯವಿರುವ ಅವಕಾಶಗಳ ಬಗ್ಗೆ ಯೋಚಿಸುವುದು ಉತ್ತಮವೇ ಹೊರತು ಕೈಗೆ ಸಿಗದ ಅಂಶಗಳ ಬಗ್ಗೆ ಯೋಚಿಸುವುದು ಸಮಯವ್ಯರ್ಥಕ್ಕೆ ಕಾರಣವಾಗಲಿದೆ. ನಿಶ್ಚಿತ ಕಾರ್ಯಗಳಿಗೆ ಹಣದ ಹರಿವು ಸರಾಗವಾಗಿರುವುದು.

ವೃಶ್ಚಿಕ: ದೈನಂದಿನ ಬದುಕಿನಲ್ಲಿ ಮತ್ತೊಬ್ಬರನ್ನು ಗೌರವಿಸುವುದರಿಂದ ಗೌರವವು ಕೂಡ ಹೆಚ್ಚುವುದು. ಕಾರ್ಯಗಳ ಒತ್ತಡದ ನಡುವೆಯೂ ಕುಟುಂಬದ ಸಮಸ್ಯೆಯತ್ತ ಗಮನ ನೀಡುವುದನ್ನು ಮರೆಯದಿರಿ.

ಧನು: ವೃತ್ತಿ ತರಬೇತಿ ಹೊಂದಿರುವವರಿಗೆ ಕೆಲಸ ಸಿಗುವ ಸೂಚನೆ ದೊರೆಯಲಿದೆ. ಕ್ರೀಡಾಸಕ್ತರಿಗೆ ಅಥವಾ ಕ್ರೀಡಾಪಟುಗಳಿಗೆ ಶುಭದಾಯಕ ದಿನ. ಧಾರ್ಮಿಕ ವ್ಯಕ್ತಿಗಳನ್ನು ಭೇಟಿ ಮಾಡುವಿರಿ, ಸಂತಸ ಉಂಟಾಗಲಿದೆ.

ಮಕರ: ಪತ್ರಕರ್ತರಿಗೆ ಗಣ್ಯ ವ್ಯಕ್ತಿಗಳ ಭೇಟಿ ಹಾಗೂ ಅವರ ಸಂದರ್ಶನ ನಡೆಸುವ ಅವಕಾಶ ದೊರೆಯಲಿದೆ. ದಿನಕ್ಕಿಂತ ಕಾರ್ಯಭಾರದ ಒತ್ತಡ ಕಡಿಮೆಯಾಗುವುದು. ಚಿತ್ರ ವಿತರಕರಿಗೆ ವರಮಾನದ ಸಾಧ್ಯತೆ ಇದೆ.

ಕುಂಭ: ಶೀತಬಾಧೆಯನ್ನು ಹೋಗಲಾಡಿಸಿಕೊಳ್ಳಲು ಆಯುರ್ವೇದದ ಮೊರೆಹೋಗುವುದು ಉತ್ತಮ. ಮಾನಸಿಕ ಸಮತೋಲನದಿಂದ ಶುಭ ಮತ್ತು ಉತ್ತಮ ಅಭಿವೃದ್ಧಿದಾಯಕವಾಗಲಿದೆ. ಜವಳಿ ವ್ಯಾಪಾರಿಗಳಿಗೆ ಲಾಭ.

ಮೀನ: ಅಪೇಕ್ಷಿಸಿದ ಪ್ರಗತಿ ಸಾಧಿಸುವಿರಿ. ಯಶಸ್ಸಿನ ಹೊಸ ಮಾರ್ಗಗಳು ಅರಿವಾಗುವುದು. ಔಷಧ ಖರೀದಿಗೆ ಯೋಚಿಸಬೇಡಿ, ಹಣಕ್ಕಿಂತ ಆರೋಗ್ಯವೇ ಮುಖ್ಯ ಎಂಬುದನ್ನು ಅರಿತುಕೊಳ್ಳಿ.

ಪದಬಂಧ 6012

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ತೀರಾ ಉದ್ದವಿರುವ ದಡ! (2)
3.ಸುಗಂಧದ್ರವ್ಯವನ್ನು ಬಳಿಯುವಿಕೆ (4)
5.ಮರದ ಬಳಿ ನಡೆದ ಯುದ್ಧ (3)
7.ಆನಂದಾನುಭವಕ್ಕೆ ಉಂಟಾದ ಅಡ್ಡಿ (4)
9.ಗೆಲುವ ಸಲುವಾಗಿಯೇ ಇಷ್ಟು ಸದರ! (3)
10.ಸರಸದ ಮಾತುಕತೆ (3)
11.ಯುದ್ಧಭೂಮಿ ಇಲ್ಲಿದೆ (4)
13.ಕಡಲು ಇಲ್ಲಿ ಕಾಣುತ್ತಿದೆ (3)
15.ಕಾಡಿನ ದೊರೆ (4)
16.ಬಿದಿರಿನಿಂದ ಹೆಣೆದ ಬುಟ್ಟಿ (2)

ಮೇಲಿಂದ ಕೆಳಕ್ಕೆ

2.ರಸದಲ್ಲಿ ವೇಗ! (3)
3.ವರ ನೀಡಿದ ವಿಸ್ತಾರವಾದ ಹೇಳಿಕೆ (3)
4.ಉತ್ತರದವರ ಸಂಬಳ (3)
6.ಕಡೆದ ಮೊಸರು (3)
8.ಗಣಪತಿ ಚಿಕ್ಕದಾಗಿ ಕಾಣುತ್ತಿದ್ದಾನೆ (3)
9.ಸರ ನೀಡಿದವಗೆ ತೋರಿದ ಮನ್ನಣೆ (3)
10.ಒಳ್ಳೆಯ ಮನೆತನ (3)
12.ಗಮನವಿಟ್ಟು ನೋಡಿದ ಆಕಾಶ (3)
13.ನೀರಿನಲ್ಲಿ ಹುಟ್ಟಿದುದು (3)
14.ವಂಧಿ ಮಾಗದರು ಪರಾಕು ಹೇಳಿದ್ದಕ್ಕೇ ಈ ಸೊಕ್ಕು! (3)



6011ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಸದಾಚಾರ 3.ಭ್ರಮರಿ
4.ವಿರಾಡ್ರೂಪ 6.ತತಿ
8.ಗಡಿಬಿಡಿ 9.ಸಮ್ಮೋಹ
10.ತಿರಸ್ಕಾರ 11.ನಭ
14.ಕನ್ನಡಕ 16.ನಗರ
17.ವಿರೇಚಕ

ಮೇಲಿಂದ ಕೆಳಕ್ಕೆ:
1.ಸರಿತ್ಸುತ 2.ರವಿ
3.ಭ್ರಮಣ 5.ಪಗಡಿ
7. ತಿಸರ 8.ಗಹನ
10. ತಿರುಕ 12.ಭಯಾನಕ
13.ಸ್ಥಾವರ 15.ಕವಿ

ಸುಡೊಕು 6397

7		4		5				3
			1		9	6		5
6		5		3			1	
2					4	1		9
	7	1		8				
4			9		2	3		7
	4		3		7		2	1
						7		
1	3			2			6	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6396 ಸುಡೊಕು

8	7	9	6	2	1	3	4	5
3	2	6	5	4	8	9	1	7
1	4	5	9	7	3	2	8	6
2	6	8	1	3	5	4	7	9
9	3	1	7	8	4	5	6	2
4	5	7	2	9	6	1	3	8
6	9	2	3	1	7	8	5	4
7	1	4	8	5	9	6	2	3
5	8	3	4	6	2	7	9	1

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1365 (1370)
ಸೋಯಾ (ರಿಫೈನ್ಡ್)	₹1305 (1315)
ಸೂರ್ಯಕಾಂತಿ (ರಿಫೈನ್ಡ್)	₹1400 (1405)
ಪಾಮೋಲಿನ್	₹1305 (1315)

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹27500
ಎಸಿ	₹16520
ಆರ್‌ಪಿ	₹22000
ಆರ್‌ಸಿ	₹12420

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹450
12 ಕ್ಕೆ	₹60
ಮೈಸೂರು	
100ಕ್ಕೆ	₹450

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹280-560
ದ್ವಿತಳಿ (ಬಿ.ವಿ)	₹333-643

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹192
ಆರ್‌ಎಸ್‌ಎಸ್-5	₹187
ಗುಡ್ ಲಾಟ್	₹179

(ಪ್ರತಿ ಕೆ.ಜಿಗೆ)

ವಿನಿಮಯ ದರ

$ ಡಾಲರ್	86.10
£ ಪೌಂಡ್	113.44
€ ಯುರೊ	97.73
¥ ಯೆನ್ (100ಕ್ಕೆ)	60

‘ಶೇ 38ರಷ್ಟು ಗೋಧಿ ಕೊಯ್ಲು’

ನವದೆಹಲಿ (ಪಿಟಿಐ): ದೇಶದಾದ್ಯಂತ 3.2 ಕೋಟಿ ಹೆಕ್ಟೇರ್‌ನಲ್ಲಿ ಬೆಳೆಯಲಾಗಿರುವ ಗೋಧಿ ಫಸಲಿನಲ್ಲಿ ಶೇ 38ರಷ್ಟು ಕೊಯ್ಲು ಮಾಡಲಾಗಿದೆ ಎಂದು ಕೇಂದ್ರ ಕೃಷಿ ಸಚಿವ ಶಿವರಾಜ್‌ಸಿಂಗ್ ಚೌಹಾಣ್ ತಿಳಿಸಿದ್ದಾರೆ.

ಉತ್ತಮ ಇಳುವರಿ ನಿರೀಕ್ಷೆ ಇದೆ. ರೈತರಿಗೆ ಉತ್ತಮ ಖರೀದಿ ವ್ಯವಸ್ಥೆ ಮಾಡುವಂತೆ ಅಧಿಕಾರಿಗಳಿಗೆ ಸೂಚಿಸಿದ ಸಚಿವರು, ಉತ್ತರ ಪ್ರದೇಶ, ಮಧ್ಯ ಪ್ರದೇಶ, ಪಂಜಾಬ್, ಹರಿಯಾಣ, ರಾಜಸ್ಥಾನ ಮತ್ತು ಬಿಹಾರದಲ್ಲಿ ಕೊಯ್ಲು ಉತ್ತಮವಾಗಿದೆ. 2025–26ರ ಮಾರುಕಟ್ಟೆ ಋತುವಿನಲ್ಲಿ (ಏಪ್ರಿಲ್–ಮಾರ್ಚ್) 3.1 ಕೋಟಿ ಟನ್ ಗೋಧಿ ಖರೀದಿ ಗುರಿಯನ್ನು ನಿಗದಿ ಪಡಿಸಲಾಗಿದೆ ಎಂದು ಹೇಳಿದರು.

ಮುಂಬೈ ಧಾರಣೆ

ಶೇಂಗಾ

14-04-2025

ಜಾವಾ 70/80(ಹೊಸ)	11650-11700
ಜಾವಾ 80/90(ಹೊಸ)	11050-11100
ದಪ್ಪ ಮಧ್ಯಪ್ರದೇಶ(ಹೊಸ)	11000-11100
ದಪ್ಪ ಗುಜರಾತ್(ಹೊಸ)	11900-12000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1375 (1380)
ಒಂದು ವಾರದ ಡೆಲಿವರಿ	1370 (1375)
ಪಾಮ್ ವಾರದ ಡೆಲಿವರಿ	1303 (1308)
ಸೂರ್ಯಕಾಂತಿ ಎಣ್ಣೆ ಕಚ್ಚಾ	1330 (1335)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
₹92,650 (93,400)
ಬೆಳ್ಳಿ ಕೆ.ಜಿ ₹94,900 (94,900)

ಆವರಣದಲ್ಲಿ ಹಿಂದಿನ ವಹಿವಾಟಿನ ದರ

₹11 ಲಕ್ಷ ಕೋಟಿ ಕರಗಿದ ಹೂಡಿಕೆದಾರ ಸಂಪತ್ತು

ನವದೆಹಲಿ (ಪಿಟಿಐ): ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಪ್ರತಿ ಸುಂಕ ನೀತಿ ಘೋಷಣೆಯಿಂದಾಗಿ ಇದುವರೆಗೆ ದೇಶದ ಷೇರು ಸೂಚ್ಯಂಕಗಳು ಶೇ 2ರಷ್ಟು ಕುಸಿದಿದ್ದು, ಹೂಡಿಕೆದಾರರು ಸಂಪತ್ತು ₹11.30 ಲಕ್ಷ ಕೋಟಿಯಷ್ಟು ಕರಗಿದೆ.

ಏಪ್ರಿಲ್ 2ರಿಂದ 11ರ ವರೆಗೆ ಸೆನ್ಸೆಕ್ಸ್ 1,460 ಅಂಶ ಮತ್ತು ನಿಫ್ಟಿ 504 ಅಂಶ ಇಳಿಕೆಯಾಗಿದೆ. ಬಿಎಸ್‌ಇ ನೋಂದಾಯಿತ ಕಂಪನಿಗಳ ಒಟ್ಟು ಮಾರುಕಟ್ಟೆ ಮೌಲ್ಯ ₹401 ಲಕ್ಷ ಕೋಟಿಗೆ ಇಳಿದಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಏಪ್ರಿಲ್ 2ರಂದು ಅಮೆರಿಕ, ಭಾರತದ ಸರಕುಗಳ ರಫ್ತಿನ ಮೇಲೆ ಶೇ 26ರಷ್ಟು ಪ್ರತಿ ಸುಂಕ ವಿಧಿಸುವುದಾಗಿ ಘೋಷಿಸಿತ್ತು. ಆದರೆ, ಏಪ್ರಿಲ್ 9ರಂದು ಪ್ರತಿ ಸುಂಕಕ್ಕೆ 90 ದಿನ ವಿರಾಮ ನೀಡುವುದಾಗಿ ತಿಳಿಸಿತ್ತು.

ಪರಿಸರ ಸ್ನೇಹಿ ಇಂಧನ ಬಳಕೆ ಹೆಚ್ಚಳದಿಂದ ತಗ್ಗಿದ ಬೇಡಿಕೆ ಪ್ರಮಾಣ

ಡೀಸೆಲ್‌ಗೆ ಬೇಡಿಕೆ ಇಳಿಕೆ: ಕೇಂದ್ರ

ನವದೆಹಲಿ (ಪಿಟಿಐ): 2024–25ರ ಆರ್ಥಿಕ ವರ್ಷದಲ್ಲಿ ದೇಶದಲ್ಲಿ ಡೀಸೆಲ್ ಬೇಡಿಕೆಯ ಬೆಳವಣಿಗೆ ಪ್ರಮಾಣ ಇಳಿಕೆಯಾಗಿದೆ ಎಂದು ಕೇಂದ್ರ ಪೆಟ್ರೋಲಿಯಂ ಸಚಿವಾಲಯದ ಪೆಟ್ರೋಲಿಯಂ ಯೋಜನೆ ಮತ್ತು ವಿಶ್ಲೇಷಣಾ ಘಟಕ (ಪಿಪಿಎಸಿ) ಸೋಮವಾರ ತಿಳಿಸಿದೆ.

ದೇಶದ ಆರ್ಥಿಕ ಪ್ರಗತಿಯು ಮಂದಗತಿಯಲ್ಲಿರುವುದು ಮತ್ತು ಪರಿಸರ ಸ್ನೇಹಿ ಇಂಧನ ಬಳಕೆ ಹೆಚ್ಚಳದಿಂದ ಡೀಸೆಲ್ ಬೇಡಿಕೆಯ ಬೆಳವಣಿಗೆ ಪ್ರಮಾಣ ಕೋವಿಡ್ ಸಾಂಕ್ರಾಮಿಕ ನಂತರ ಅತ್ಯಂತ ಕನಿಷ್ಠ ಮಟ್ಟಕ್ಕೆ ಕುಸಿದಿದೆ ಎಂದು ತಿಳಿಸಿದೆ.

2022–23ರ ಆರ್ಥಿಕ ವರ್ಷದಲ್ಲಿ ಡೀಸೆಲ್‌ಗೆ ಬೇಡಿಕೆ ಶೇ 12.1ರಷ್ಟಿತ್ತು. 2023–24ರಲ್ಲಿ ಶೇ 4.3 ರಷ್ಟಿದ್ದರೆ, 2024–25ರ ಆರ್ಥಿಕ ವರ್ಷದಲ್ಲಿ ಬೇಡಿಕೆ ಪ್ರಮಾಣ ಶೇ 2ರಷ್ಟು ಮಾತ್ರ ಇದೆ. ಒಟ್ಟು 9.14 ಕೋಟಿ ಟನ್‌ನಷ್ಟಾಗಿತ್ತು ಎಂದು ತಿಳಿಸಿದೆ.

ದೇಶದ ಇಂಧನ ಬಳಕೆಯಲ್ಲಿ ಡೀಸೆಲ್ ಶೇ 40ರಷ್ಟು ಪಾಲು ಹೊಂದಿದೆ. ಡೀಸೆಲ್ ಬೇಡಿಕೆಯು ಆರ್ಥಿಕ ಚಟುವಟಿಕೆಯನ್ನು ಸೂಚಿಸುತ್ತದೆ.

ಇತ್ತೀಚೆಗೆ ವಿದ್ಯುತ್‌ಚಾಲಿತ ವಾಹನಗಳ (ಇ.ವಿ) ಬಳಕೆ ಹೆಚ್ಚಾಗುತ್ತಿದೆ. ಇದರಿಂದ ಡೀಸೆಲ್ ವಾಹನಗಳಿಗೆ ಬೇಡಿಕೆ ಇಳಿದಿದೆ. ಪರಿಸರ ಸ್ನೇಹಿ ಇಂಧನ ಬಳಕೆಯಿಂದ ಡೀಸೆಲ್ ಬೇಡಿಕೆ ಪ್ರಮಾಣ ಕಡಿಮೆ ಆಗಿದೆ ಎಂದು ತಿಳಿಸಿದೆ.

ದೆಹಲಿ ಮತ್ತು ಮುಂಬೈನಂತಹ ನಗರಗಳಲ್ಲಿ ವಿದ್ಯುತ್‌ಚಾಲಿತ ಬಸ್‌ಗಳು, ಇ-ಆಟೊರಿಕ್ಷಾಗಳು ಹೆಚ್ಚುತ್ತಿವೆ. ಇದು ಸಾರ್ವಜನಿಕ ಸಾರಿಗೆ ವ್ಯವಸ್ಥೆಯಲ್ಲಿ ಡೀಸೆಲ್ ಬಳಕೆ ಕಡಿತ ಮಾಡಿದೆ. ಅಮೆಜಾನ್, ಫ್ಲಿಪ್‌ಕಾರ್ಟ್ ಮತ್ತು ಬಿಗ್‌ಬಾಸ್ಕೆಟ್ ನಂತಹ ಕಂಪನಿಗಳು ವಸ್ತುಗಳ ಸಾಗಣೆಗೆ ವಿದ್ಯುತ್‌ಚಾಲಿತ ವಾಹನಗಳನ್ನು ಬಳಸುತ್ತಿವೆ.

ಕಳೆದ ಆರ್ಥಿಕ ವರ್ಷದಲ್ಲಿ ಪೆಟ್ರೋಲ್ ಬಳಕೆ ಶೇ 7.5ರಷ್ಟು ಹೆಚ್ಚಳವಾಗಿ, 4 ಕೋಟಿ ಟನ್‌ನಷ್ಟಾಗಿದೆ. ಎಲ್‌ಪಿಜಿ ಬೇಡಿಕೆ ಶೇ 5.6ರಷ್ಟು ಏರಿಕೆಯಾಗಿ, 3.13 ಕೋಟಿ ಟನ್ ಆಗಿದೆ. ವಿಮಾನ ಇಂಧನ ಬಳಕೆ ಶೇ 9ರಷ್ಟು ಹೆಚ್ಚಳವಾಗಿದ್ದು, 90 ಲಕ್ಷ ಟನ್ ಆಗಿದೆ ಎಂದು ತಿಳಿಸಿದೆ.

‘ಗ್ರಾಹಕರ ರಕ್ಷಣೆಗೆ ಗ್ಯಾಸ್ ಮೀಟರ್‌ಗೆ ಹೊಸ ನಿಯಮ’

ನವದೆಹಲಿ (ಪಿಟಿಐ): ಗ್ರಾಹಕರಿಗೆ ರಕ್ಷಣೆ ಕಲ್ಪಿಸಲು ಗ್ಯಾಸ್ ಮೀಟರ್‌ಗಳಿಗೆ ಸಂಬಂಧಿಸಿದ ಹೊಸ ಕರಡು ನಿಯಮಗಳನ್ನು ರೂಪಿಸಲಾಗಿದೆ ಎಂದು ಕೇಂದ್ರ ಗ್ರಾಹಕ ವ್ಯವಹಾರ ಸಚಿವಾಲಯವು ಸೋಮವಾರ ತಿಳಿಸಿದೆ.

ಗೃಹಬಳಕೆ, ವಾಣಿಜ್ಯ ಮತ್ತು ಕೈಗಾರಿಕಾ ಉದ್ದೇಶಕ್ಕೆ ಬಳಸುವ ಎಲ್ಲಾ ಗ್ಯಾಸ್ ಮೀಟರ್‌ಗಳನ್ನು ಬಳಸುವ ಮೊದಲು ಪರೀಕ್ಷಿಸುವುದು, ಪರಿಶೀಲಿಸುವುದು ಮತ್ತು ಅನುಮೋದಿಸುವಿಕೆಯನ್ನು ಕಡ್ಡಾಯಗೊಳಿಸುವ ಹೊಸ ನಿಯಮಗಳ ಚೌಕಟ್ಟನ್ನು ರಚಿಸಲಾಗಿದೆ ಎಂದು ತಿಳಿಸಿದೆ.

ಕಾನೂನು ಮಾಪನಶಾಸ್ತ್ರದ ಸಾಮಾನ್ಯ ನಿಯಮಗಳು–2011ರ ಅಡಿ ಅನಿಲ ಮಾಪನದಲ್ಲಿ ನಿಖರತೆ ಮತ್ತು ವಿಶ್ವಾಸಾರ್ಹತೆಯನ್ನು ಖಚಿತಪಡಿಸುವುದು, ಬಿಲ್ಲಿಂಗ್ (ಪಾವತಿ) ವಿವಾದಗಳನ್ನು ತಡೆಗಟ್ಟುವುದು ಮತ್ತು ದೋಷಯುಕ್ತ ಉಪಕರಣಗಳಿಂದ ಗ್ರಾಹಕರನ್ನು ರಕ್ಷಿಸುವ ಗುರಿಯನ್ನು ಹೊಂದಿದೆ.

ಕರಡು ನಿಯಮಗಳು ಬಳಕೆಯಲ್ಲಿರುವ ಮೀಟರ್‌ಗಳ ಮರು ಪರಿಶೀಲನೆಯನ್ನು ಒಳಗೊಂಡಿವೆ. ಅಂತರರಾಷ್ಟ್ರೀಯ ಕಾನೂನು ಮಾಪನಶಾಸ್ತ್ರ ಮಾನದಂಡಗಳಿಗೆ ಅನುಗುಣವಾಗಿ ತಯಾರಕರು ಮತ್ತು ವಿತರಣಾ ಕಂಪನಿಗಳಿಗೆ ಈ ಚೌಕಟ್ಟನ್ನು ಸ್ಥಾಪಿಸಲಾಗುತ್ತದೆ ಎಂದು ತಿಳಿಸಿದೆ.

ಸುದ್ದಿ 2 ನಿಮಿಷ

ಬಡ್ಡಿದರ ಇಳಿಸಿದ ಎಸ್‌ಬಿಐ, ಬಿಒಎಂ

ನವದೆಹಲಿ (ಪಿಟಿಐ): ರೆಪೊ ದರ ಆಧರಿಸಿದ ಸಾಲದ ಮೇಲಿನ ಬಡ್ಡಿದರವನ್ನು ಶೇ 0.25ರಷ್ಟು ಕಡಿತಗೊಳಿಸಲಾಗಿದೆ. ಬಡ್ಡಿದರ ಶೇ 8.25ರಷ್ಟಾಗಿದೆ ಎಂದು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ಸೋಮವಾರ ತಿಳಿಸಿದೆ.

ರೆಪೊ ದರ ಆಧರಿಸಿದ ಎಕ್ಸ್‌ಟರ್ನಲ್ ಬೆಂಚ್‌ಮಾರ್ಕ್ ಲೆಂಡಿಂಗ್ ರೇಟ್ (ಇಬಿಎಲ್‌ಆರ್) ಅನ್ನು ಶೇ 8.65ಕ್ಕೆ ಇಳಿಸಿದೆ. ಠೇವಣಿ ಮೇಲಿನ ಬಡ್ಡಿ ದರವನ್ನು ಶೇ 0.10ರಿಂದ ಶೇ 0.25ರವರೆಗೆ ಕಡಿತ ಮಾಡಿದೆ. ಪರಿಷ್ಕೃತ ದರವು ಮಂಗಳವಾರದಿಂದ (ಏ.15) ಜಾರಿಗೆ ಬರಲಿದೆ ಎಂದು ತಿಳಿಸಿದೆ.

ಬಿಒಎಂ: ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಆಫ್ ಮಹಾರಾಷ್ಟ್ರ (ಬಿಒಎಂ) ರೆಪೊ ಆಧರಿಸಿದ ಸಾಲದ ಮೇಲಿನ ಬಡ್ಡಿದರವನ್ನು ಶೇ 0.25ರಷ್ಟು ಕಡಿತಗೊಳಿಸಿದೆ. ಬಡ್ಡಿದರವನ್ನು ಶೇ 9.05ರಿಂದ ಶೇ 8.80ಕ್ಕೆ ತಗ್ಗಿಸಿದೆ. ಗೃಹ ಸಾಲದ ವಾರ್ಷಿಕ ಬಡ್ಡಿದರ ಶೇ 7.85 ಮತ್ತು ವಾಹನ ಸಾಲ ಶೇ 8.20ರಿಂದ ಆರಂಭವಾಗಲಿದೆ ಎಂದು ಬ್ಯಾಂಕ್ ತಿಳಿಸಿದೆ.

ಎಚ್‌ಡಿಎಫ್‌ಸಿ: ಖಾಸಗಿ ವಲಯದ ಎಚ್‌ಡಿಎಫ್‌ಸಿ ಬ್ಯಾಂಕ್ ಉಳಿತಾಯ ಖಾತೆಗಳ ಮೇಲಿನ ಬಡ್ಡಿ ದರವನ್ನು ಶೇ 0.25ರಷ್ಟು ಇಳಿಕೆ ಮಾಡಿದ್ದು, ಶೇ 2.75ರಷ್ಟಾಗಿದೆ. ಇದು ಏಪ್ರಿಲ್ 12ರಿಂದ ಜಾರಿಗೆ ಬಂದಿದೆ ಎಂದು ಬ್ಯಾಂಕ್ ತಿಳಿಸಿದೆ.

ಕಳೆದ ವಾರ ನಡೆದ ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಹಣಕಾಸು ನೀತಿ ಸಮಿತಿ (ಎಂಪಿಸಿ) ಸಭೆಯು ರೆಪೊ ದರದಲ್ಲಿ ಶೇ 0.25ರಷ್ಟು ಕಡಿತಗೊಳಿಸಿದೆ. ಇದರ ಬೆನ್ನಲ್ಲೇ ಬ್ಯಾಂಕ್‌ಗಳು ಈ ಲಾಭವನ್ನು ಸಾಲಗಾರರಿಗೆ ವರ್ಗಾಯಿಸಲು ಮುಂದಾಗಿವೆ.

‘40 ಸಾವಿರ ಟನ್ ಸೀಗಡಿ ರಫ್ತಿಗೆ ಸಿದ್ಧತೆ’

ನವದೆಹಲಿ (ಪಿಟಿಐ): ಅಮೆರಿಕಕ್ಕೆ 35 ಸಾವಿರ ಟನ್‌ನಿಂದ 40 ಸಾವಿರ ಟನ್‌ನಷ್ಟು ಸೀಗಡಿ ರಫ್ತು ಮಾಡಲು ದೇಶದ ಸಮುದ್ರ ಆಹಾರ ರಫ್ತುಗಾರರು ಸಿದ್ಧತೆ ನಡೆಸಿದ್ದಾರೆ ಎಂದು ಸಮುದ್ರ ಆಹಾರ ರಫ್ತುಗಾರರ ಸಂಘದ ಪ್ರಧಾನ ಕಾರ್ಯದರ್ಶಿ ಕೆ.ಎನ್.ರಾಘವನ್ ಹೇಳಿದ್ದಾರೆ.

ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸರ್ಕಾರವು ಪ್ರತಿ ಸುಂಕ ನೀತಿಗೆ ತಾತ್ಕಾಲಿಕವಾಗಿ ವಿರಾಮ ನೀಡಿದೆ. ಅಮೆರಿಕದಿಂದ ಉತ್ಪನ್ನಗಳಿಗೆ ಉತ್ತಮ ಬೇಡಿಕೆ ಇರುವ ಕಾರಣ ರಫ್ತು ಮಾಡುತ್ತಿದ್ದೇವೆ ಎಂದು ಸೋಮವಾರ ತಿಳಿಸಿದ್ದಾರೆ.

ಸೀಗಡಿ ಹೊಂದಿರುವ 2 ಸಾವಿರ ಕಂಟೇನರ್‌ಗಳು ರಫ್ತಿಗೆ ಸಿದ್ಧವಾಗಿದೆ. ಪ್ರಸ್ತುತ ಭಾರತದ ಸೀಗಡಿಗಳಿಗೆ ಅಮೆರಿಕ ಶೇ 17.7ರಷ್ಟು ಕಸ್ಟಮ್ಸ್ ಸುಂಕ ವಿಧಿಸುತ್ತದೆ.

90 ದಿನಗಳ ಸುಂಕ ವಿರಾಮವು ರಫ್ತುದಾರರಿಗೆ ಹೆಚ್ಚುವರಿ ವೆಚ್ಚವಿಲ್ಲದೆ ಈ ರಫ್ತು ಪೂರೈಸಲು ಅವಕಾಶವನ್ನು ಒದಗಿಸುತ್ತದೆ. ಗಾತ್ರ ಮತ್ತು ಮೌಲ್ಯದಲ್ಲಿ ಅಮೆರಿಕವು, ಭಾರತದ ಅತಿದೊಡ್ಡ ಸೀಗಡಿ ಮಾರುಕಟ್ಟೆಯಾಗಿದೆ. 2023–24ರ ಆರ್ಥಿಕ ವರ್ಷದಲ್ಲಿ ₹23,246 ಕೋಟಿ ಮೌಲ್ಯದ ಸೀಗಡಿಯನ್ನು ಅಮೆರಿಕಕ್ಕೆ ರಫ್ತು ಮಾಡಲಾಗಿತ್ತು ಎಂದು ತಿಳಿಸಿದೆ.

‘ಸುಂಕ ವಿರಾಮ ಮುಕ್ತಾಯಗೊಳ್ಳುವ ಮೊದಲು ಮುಂಬರುವ ವ್ಯಾಪಾರ ಮಾತುಕತೆ ವೇಳೆ ದೇಶದ ಸಮುದ್ರ ಆಹಾರ ರಫ್ತಿಗೆ ಅನುಕೂಲ ಕಲ್ಪಿಸುವತ್ತ ಗಮನಹರಿಸಬೇಕು’ ಎಂದು ರಾಘವನ್ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಪಂಜಾಬ್ ನ್ಯಾಷನಲ್ ಬ್ಯಾಂಕ್‌ಗೆ ₹13,800 ಕೋಟಿ ವಂಚನೆ ಪ್ರಕರಣ

ಹರ್ಷದ್ ಮೆಹ್ತಾ ಹಗರಣಕ್ಕಿಂತ ದೊಡ್ಡದು!

ಮುಂಬೈ: ವಜ್ರದ ವ್ಯಾಪಾರಿಗಳಾದ ಮಾವ-ಅಳಿಯ ಮೆಹುಲ್ ಚೋಕ್ಸಿ ಮತ್ತು ನೀರವ್ ಮೋದಿ ಜೋಡಿಯು ಬಹುದೊಡ್ಡ ಹಗರಣವೊಂದರ ಕಾರಣೀಕರ್ತರು. ಇವರಿಬ್ಬರು ಜೊತೆಯಾಗಿ ಪಂಜಾಬ್ ನ್ಯಾಷನಲ್ ಬ್ಯಾಂಕ್‌ಗೆ (ಪಿಎನ್‌ಬಿ) ವಂಚಿಸಿದ್ದಾರೆ ಎನ್ನಲಾದ ಹಣದ ಮೊತ್ತ ₹13,800 ಕೋಟಿ.

ಇವರಿಬ್ಬರ ವಿರುದ್ಧವೂ ಸಿಬಿಐ ಮತ್ತು ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಪ್ರಕರಣ ದಾಖಲಿಸಿದ್ದಾರೆ. ಹಣದ ಅಕ್ರಮ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಹಾಗೂ ದೇಶಭ್ರಷ್ಟ ಆರ್ಥಿಕ ಅಪರಾಧಿಗಳ ಕಾಯ್ದೆಯ ಅಡಿಯಲ್ಲಿ ಇವರಿಬ್ಬರೂ ಪ್ರಕರಣ ಎದುರಿಸುತ್ತಿದ್ದಾರೆ.

ಕಳೆದ ಏಳು ವರ್ಷಗಳಿಂದ ಇಬ್ಬರೂ ದೇಶದ ತನಿಖಾ ಸಂಸ್ಥೆಗಳ ಕೈಗೆ ಸಿಕ್ಕಿಲ್ಲ. ನೀರವ್ ಮೋದಿ ಲಂಡನ್ ಜೈಲಿನಲ್ಲಿ ಇದ್ದಾನೆ. ಆತನನ್ನು ಭಾರತಕ್ಕೆ ಕರೆತರುವುದಕ್ಕೆ ಸಂಬಂಧಿಸಿದ ಕಾನೂನು ಪ್ರಕ್ರಿಯೆಗಳು ಜಾರಿಯಲ್ಲಿವೆ. ಚೋಕ್ಸಿಯ ಬಂಧನ ಈಗ ಆಗಿದೆ.

ಚೋಕ್ಸಿ ಜನಿಸಿದ್ದು ಮುಂಬೈನಲ್ಲಿ, 1959ರಲ್ಲಿ. ಈತ ಶಿಕ್ಷಣ ಪಡೆದಿದ್ದು ಗುಜರಾತಿನಲ್ಲಿ. ಪ್ರೀತಿ ಎನ್ನುವವರನ್ನು ವಿವಾಹವಾಗಿರುವ ಚೋಕ್ಸಿ ಮೂರು ಮಕ್ಕಳ ತಂದೆ. ಚೋಕ್ಸಿ 2018ರ ಜನವರಿಯಲ್ಲಿ ಮುಂಬೈನ ಛತ್ರಪತಿ ಶಿವಾಜಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಮೂಲಕ ಭಾರತ ತೊರೆದಿದ್ದ. ಈತನ ವಿರುದ್ಧ ಅದೇ ವರ್ಷದ ಜನವರಿ 31ರಂದು ಎಫ್‌ಐಆರ್ ದಾಖಲಾಗಿದೆ.

ವರದಿಗಳ ಪ್ರಕಾರ ಚೋಕ್ಸಿ ತನ್ನ ಪತ್ನಿಯ ಜೊತೆ ಬೆಲ್ಜಿಯಂನ ಆ್ಯಂಟ್‌ವರ್ಪ್ ಎಂಬಲ್ಲಿ ವಾಸವಾಗಿದ್ದ. ಈತನ ಪತ್ನಿ ಬೆಲ್ಜಿಯಂ ಪೌರತ್ವ ಹೊಂದಿದ್ದಾರೆ. ಕಳೆದ 18 ತಿಂಗಳಿಂದ ಅಲ್ಲಿ ವಾಸವಾಗಿರುವ ಈತ ಅಲ್ಲಿ ನೆಲಸಲು ಪರವಾನಗಿ ಪಡೆದ ಕ್ರಮದ ಬಗ್ಗೆ ಅನುಮಾನಗಳು ಇವೆ.

ಭಾರತದ ಷೇರುಪೇಟೆಯ ಮಹಾಗೂಳಿ ಎಂದೇ ಹೆಸರು ಸಂಪಾದಿಸಿದ್ದ ಹರ್ಷದ್ ಮೆಹ್ತಾ 1992ರಲ್ಲಿ ನಡೆಸಿದ ಹಗರಣದ ಮೊತ್ತಕ್ಕೆ ಹೋಲಿಸಿದರೆ ಚೋಕ್ಸಿ ನಡೆಸಿದ ಹಗರಣದ ಮೊತ್ತವು ಸರಿಸುಮಾರು ನಾಲ್ಕು ಪಟ್ಟು ಹೆಚ್ಚು.

ಚೋಕ್ಸಿ ನಡೆಸಿದ ಹಗರಣ ಬಯಲಿಗೆ ಬಂದ ನಂತರದಲ್ಲಿ ಆತನ ಗೀತಾಂಜಲಿ ಗ್ರೂಪ್ ಮತ್ತು ಫೈರ್‌ಸ್ಟೋನ್ ಗ್ರೂಪ್‌ನ ವಹಿವಾಟುಗಳು ಬಹುತೇಕ ಸ್ಥಗಿತಗೊಂಡಿವೆ. ಮಾವ-ಅಳಿಯನ ವೈಯಕ್ತಿಕ ಆಸ್ತಿಗಳನ್ನು ಹರಾಜು ಹಾಕಿ, ನಷ್ಟದ ಒಂದು ಪಾಲನ್ನು ಭರ್ತಿ ಮಾಡಿಕೊಳ್ಳಲಾಗಿದೆ.

ಬೆಲ್ಜಿಯಂನಲ್ಲಿ ಚೋಕ್ಸಿ ಬಂಧನ

ಒಂದನೇ ಪುಟದಿಂದ...

ಈತನ ವಿರುದ್ಧ ಹೊರಡಿಸಿದ್ದ ‘ಇಂಟರ್‌ಪೋಲ್ ರೆಡ್ ನೋಟಿಸ್’ಅನ್ನು ಕೆಲವು ಸಮಯದ ಹಿಂದೆ ಸಮಾಪ್ತಿಗೊಳಿಸಲಾಗಿತ್ತು. ಭಾರತದ ತನಿಖಾ ಸಂಸ್ಥೆಗಳು ಹಸ್ತಾಂತರದ ಮೂಲಕ ಈತನನ್ನು ವಶಕ್ಕೆ ಪಡೆಯಲು ಯತ್ನಿಸುತ್ತಿದ್ದವು ಎಂದು ಮೂಲಗಳು ವಿವರಿಸಿವೆ.

ಮುಂಬೈನ ವಿಶೇಷ ನ್ಯಾಯಾಲಯವು 2018 ಮತ್ತು 2021ರಲ್ಲಿ ಹೊರಡಿಸಿದ್ದ ಕನಿಷ್ಠ ಎರಡು ಬಂಧನ ವಾರಂಟ್‌ಗಳನ್ನು ಭಾರತದ ತನಿಖಾ ಸಂಸ್ಥೆಗಳು ಬೆಲ್ಜಿಯಂನ ತನಿಖಾ ಸಂಸ್ಥೆಗಳ ಜೊತೆ ಹಂಚಿಕೊಂಡಿದ್ದವು. ಬಂಧನ/ವಶದ ನಂತರದಲ್ಲಿ ಕಾನೂನಿನ ಕೆಲವು ಪ್ರಕ್ರಿಯೆಗಳು ನಡೆಯುತ್ತಿವೆ. ಅನಾರೋಗ್ಯದ ಕಾರಣ ನೀಡಿ ಚೋಕ್ಸಿ ಜಾಮೀನು ಅರ್ಜಿ ಸಲ್ಲಿಸಬಹುದು ಎಂದು ಮೂಲಗಳು ಹೇಳಿವೆ.

ಬೆಲ್ಜಿಯಂ ಪೊಲೀಸರು ಚೋಕ್ಸಿಯನ್ನು ಶನಿವಾರ ವಶಕ್ಕೆ ಪಡೆದಿದ್ದಾರೆ ಎಂದು ಚೋಕ್ಸಿ ಪರ ವಕೀಲ ವಿಜಯ್ ಅಗರ್ವಾಲ್ ತಿಳಿಸಿದ್ದಾರೆ. ‘ಈಗ ಚೋಕ್ಸಿ ಜೈಲಿನಲ್ಲಿದ್ದಾರೆ. ಈಗಿನ ಪ್ರಕ್ರಿಯೆ ಜಾಮೀನು ಕೋರುವುದಲ್ಲ, ಬದಲಿಗೆ ಮೇಲ್ಮನವಿ ಸಲ್ಲಿಸುವುದು. ಅದರ ವಿಚಾರಣೆ ಸಂದರ್ಭದಲ್ಲಿ ಚೋಕ್ಸಿ ಅವರನ್ನು ಬಂಧನದಲ್ಲಿ ಇರಿಸಬಾರದು, ಅವರಿಗೆ ತಮ್ಮನ್ನು ಸಮರ್ಥಿಸಿಕೊಳ್ಳಲು ಅವಕಾಶ ಇರಬೇಕು ಎಂಬ ಮನವಿ ಮಾಡಲಾಗುತ್ತದೆ. ಹಸ್ತಾಂತರವನ್ನು ವಿರೋಧಿಸಲಾಗುತ್ತದೆ’ ಎಂದು ಅಗರ್ವಾಲ್ ಅವರು ಸುದ್ದಿಗಾರರಿಗೆ ತಿಳಿಸಿದರು.

‘ಚೋಕ್ಸಿ ಅವರು ಪರಾರಿಯಾಗುವ ಸಾಧ್ಯತೆ ಇಲ್ಲ. ಅವರು ತೀವ್ರ ಅನಾರೋಗ್ಯಕ್ಕೆ ತುತ್ತಾಗಿದ್ದಾರೆ, ಕ್ಯಾನ್ಸರ್‌ಗೆ ಚಿಕಿತ್ಸೆ ಪಡೆಯುತ್ತಿದ್ದಾರೆ’ ಎಂಬುದು ಮೇಲ್ಮನವಿ ಸಲ್ಲಿಸಲು ಆಧಾರ ಎಂದು ಅಗರ್ವಾಲ್ ವಿವರಿಸಿದರು. ‘ಇದು ರಾಜಕೀಯ ಪ್ರೇರಿತ ಪ್ರಕರಣ. ಭಾರತದಲ್ಲಿ ಜೈಲುಗಳ ಪರಿಸ್ಥಿತಿಯು ಚೆನ್ನಾಗಿಲ್ಲ’ ಎಂಬ ವಾದವನ್ನು ಮಂಡಿಸ ಬಹುದು ಎಂದು ಅವರು ಹೇಳಿದರು.

ಚೋಕ್ಸಿ, ಉದ್ಯಮಿ ನೀರವ್ ಮೋದಿ ಮತ್ತು ಅವರ ಕುಟುಂಬದ ಸದಸ್ಯರು, ಬ್ಯಾಂಕ್‌ನ ಸಿಬ್ಬಂದಿಯ ವಿರುದ್ಧ ಸಿಬಿಐ ಮತ್ತು ಇ.ಡಿ 2018ರಲ್ಲಿ ಪ್ರಕರಣ ದಾಖಲಿಸಿಕೊಂಡಿವೆ. ಪಂಜಾಬ್ ನ್ಯಾಷನಲ್ ಬ್ಯಾಂಕ್‌ನ ಬ್ರಾಡಿ ಹೌಸ್ ಶಾಖೆಯಲ್ಲಿ ಈ ವಂಚನೆ ನಡೆದಿದೆ ಎಂದು ಆರೋಪಿಸಲಾಗಿದೆ.

ಬ್ಯಾಂಕ್‌ನ ಕೆಲವು ಅಧಿಕಾರಿಗಳ ಜೊತೆ ಶಾಮೀಲಾಗಿ ಚೋಕ್ಸಿ ಮತ್ತು ಅವನ ಗೀತಾಂಜಲಿ ಜೆಮ್ಸ್ ಕಂಪನಿ ಹಾಗೂ ಇತರರು ಬ್ಯಾಂಕ್‌ನ ಖಾತರಿ ಪತ್ರವನ್ನು (ಎಲ್‌ಒಯು) ಅಕ್ರಮವಾಗಿ ಪಡೆದುಕೊಂಡರು. ಆ ಮೂಲಕ ಅವರು ಪಾವತಿ ಭರವಸೆಯ ಮೊತ್ತವನ್ನು (ಎಫ್‌ಎಲ್‌ಸಿ) ಹೆಚ್ಚಿಸಿಕೊಂಡರು. ಹೀಗೆ ಮಾಡುವಾಗ ಅವರು ಪ್ರಕ್ರಿಯೆಗಳನ್ನು ಸರಿಯಾಗಿ ಪಾಲಿಸಲಿಲ್ಲ. ಇದರಿಂದಾಗಿ ಬ್ಯಾಂಕ್‌ಗೆ ನಷ್ಟ ಆಗಿದೆ ಎಂದು ಆರೋಪಿಸಲಾಗಿದೆ.

ದೇಶಭ್ರಷ್ಟ ಆರ್ಥಿಕ ಅಪರಾಧಿ ಎಂದು ಘೋಷಿತನಾದ ನೀರವ್ ಮೋದಿಯನ್ನು 2019ರಲ್ಲಿ ಲಂಡನ್‌ನಲ್ಲಿ ಬಂಧಿಸಲಾಯಿತು. ಆತ ಈಗ ಅಲ್ಲಿನ ಜೈಲಿನಲ್ಲಿದ್ದಾನೆ.

ಪಿಎನ್‌ಬಿಯ ಬ್ರಾಡಿ ಹೌಸ್ ಶಾಖೆಯ ಕೆಲವು ಅಧಿಕಾರಿಗಳು 165 ಎಲ್‌ಒಯು-ಗಳನ್ನು ಹಾಗೂ 58 ಎಫ್‌ಎಲ್‌ಸಿಗಳನ್ನು 2017ರ ಮಾರ್ಚ್–ಏಪ್ರಿಲ್ ಅವಧಿಯಲ್ಲಿ ಚೋಕ್ಸಿಗೆ ಸೇರಿದ ಕಂಪನಿಗಳಿಗೆ ನೀಡಿದ್ದರು. ಎಫ್‌ಎಲ್‌ಸಿಗೆ ಸಂಬಂಧಿಸಿದ ಪಾವತಿಯಲ್ಲಿ ಸಂಬಂಧಪಟ್ಟವರು ವಿಫಲರಾದರೆ, ಅದು ತಪಾಸಣೆಯ ವೇಳೆ ಗೊತ್ತಾಗದೆ ಇರಲಿ ಎಂಬ ಕಾರಣಕ್ಕೆ ಆ ಬಗ್ಗೆ ಬ್ಯಾಂಕ್‌ನ ಕೇಂದ್ರೀಯ ವ್ಯವಸ್ಥೆಯಲ್ಲಿ ದಾಖಲು ಮಾಡುವ ಕೆಲಸವೂ ಆಗಿರಲಿಲ್ಲ.

ಪಿಎನ್‌ಬಿ ಒದಗಿಸಿದ್ದ ಎಲ್‌ಒಯು ಆಧರಿಸಿ ಎಸ್‌ಬಿಐ (ಮಾರಿಷಸ್), ಅಲಹಾಬಾದ್ ಬ್ಯಾಂಕ್ (ಹಾಂಗ್ ಕಾಂಗ್), ಏಕ್ಸಿಸ್ ಬ್ಯಾಂಕ್ (ಹಾಂಗ್ ಕಾಂಗ್), ಬ್ಯಾಂಕ್ ಆಫ್ ಇಂಡಿಯಾ (ಆ್ಯಂಟ್‌ವರ್ಪ್), ಕೆನರಾ ಬ್ಯಾಂಕ್ (ಮನಾಮಾ), ಎಸ್‌ಬಿಐ (ಫ್ರ್ಯಾಂಕ್‌ಫರ್ಟ್) ಹಣ ನೀಡಿದ್ದವು.

‘ಆರೋಪಿ ಕಂಪನಿಗಳು ಅಕ್ರಮವಾಗಿ ಪಡೆದಿದ್ದ ಎಲ್‌ಒಯು ಮತ್ತು ಎಫ್‌ಎಲ್‌ಸಿ ಆಧರಿಸಿ ಪಡೆದಿದ್ದ ಹಣ ಪಾವತಿಸದೆ ಇದ್ದ ಕಾರಣಕ್ಕೆ, ಪಿಎನ್‌ಬಿಯು ₹6,344 ಕೋಟಿ ಮತ್ತು ಬಡ್ಡಿಯ ಮೊತ್ತವನ್ನು ಈ ಬ್ಯಾಂಕ್‌ಗಳಿಗೆ ಪಾವತಿಸಿತ್ತು’ ಎಂದು ಸಿಬಿಐ ತನ್ನ ಪೂರಕ ದೋಷಾರೋಪ ಪಟ್ಟಿಯಲ್ಲಿ ವಿವರಿಸಿದೆ.

ಎಲ್‌ಒಯು ಅಂದರೆ

ಇದು ಬ್ಯಾಂಕ್‌ಗಳು ತಮ್ಮ ಗ್ರಾಹಕರ ಪರವಾಗಿ ವಿದೇಶಿ ಬ್ಯಾಂಕ್‌ಗೆ ನೀಡುವ ಖಾತರಿ ಪತ್ರ. ವಿದೇಶಿ ಬ್ಯಾಂಕ್‌ಗೆ ಈ ಗ್ರಾಹಕ ಹಣವನ್ನು ಮರಳಿಸದೆ ಇದ್ದರೆ, ಖಾತರಿ ಪತ್ರ ಒದಗಿಸಿದ ಬ್ಯಾಂಕ್ ಆ ಮೊತ್ತ ಭರಿಸಿಕೊಡುತ್ತದೆ.

ವಿಚಾರಣೆಗೆ ರಾಣಾ ಸಹಕಾರ

ನವದೆಹಲಿ (ಪಿಟಿಐ): ಮುಂಬೈ ಮೇಲಿನ ದಾಳಿ ಪ್ರಕರಣದ ಪ್ರಮುಖ ಸೂತ್ರಧಾರ ತಹವ್ವುರ್ ಹುಸೇನ್ ರಾಣಾನನ್ನು ರಾಷ್ಟ್ರೀಯ ತನಿಖಾ ಸಂಸ್ಥೆಯ (ಎನ್‌ಐಎ) ಅಧಿಕಾರಿಗಳು ಪ್ರತಿದಿನ ಎಂಟರಿಂದ ಹತ್ತು ತಾಸುಗಳ ಕಾಲ ವಿಚಾರಣೆಗೆ ಗುರಿಪಡಿಸುತ್ತಿದ್ದಾರೆ.

ಇಡೀ ದಾಳಿಯ ಹಿಂದೆ ಇನ್ನೂ ದೊಡ್ಡದಾದ ಪಿತೂರಿ ಏನಾದರೂ ಇತ್ತೇ ಎಂಬುದನ್ನು ತಿಳಿದುಕೊಳ್ಳುವ ಉದ್ದೇಶವನ್ನು ಅಧಿಕಾರಿಗಳು ಹೊಂದಿದ್ದಾರೆ ಎಂದು ಮೂಲಗಳು ತಿಳಿಸಿವೆ. ರಾಣಾನನ್ನು ಅಧಿಕಾರಿಗಳು ವೈದ್ಯಕೀಯ ತಪಾಸಣೆಗೆ ಒಳಪಡಿಸುತ್ತಿದ್ದಾರೆ, ಆತನಿಗೆ ತನ್ನ ವಕೀಲರನ್ನು ಭೇಟಿ ಮಾಡಲು ಅವಕಾಶ ನೀಡುತ್ತಿದ್ದಾರೆ. ‘ವಿಚಾರಣೆ ಸಂದರ್ಭದಲ್ಲಿ ರಾಣಾ ಸಹಕಾರ ನೀಡುತ್ತಿದ್ದಾನೆ’ ಎಂದು ಮೂಲಗಳು ಹೇಳಿವೆ. ಮುಖ್ಯ ತನಿಖಾ ಅಧಿಕಾರಿ ಜಯಾ ರಾಯ್ ನೇತೃತ್ವದ ತಂಡವು ಆತನ ವಿಚಾರಣೆ ನಡೆಸುತ್ತಿದೆ.

ಇದುವರೆಗೆ ರಾಣಾ ಮೂರು ವಸ್ತುಗಳನ್ನು ಮಾತ್ರ ಕೇಳಿದ್ದಾನೆ. ಪೆನ್ನು, ಕಾಗದದ ಹಾಳೆಗಳು ಮತ್ತು ಕುರಾನ್ ಪ್ರತಿಯನ್ನು ಆತ ಕೇಳಿದ್ದು, ಅವುಗಳನ್ನು ಒದಗಿಸಲಾಗಿದೆ. ನಿರ್ದಿಷ್ಟವಾಗಿ ಇದೇ ಆಹಾರ ಬೇಕು ಎಂದು ಆತ ಕೇಳಿಲ್ಲ, ಯಾವುದೇ ಆರೋಪಿಗೆ ನೀಡುವ ಆಹಾರವನ್ನೇ ಆತನಿಗೂ ನೀಡಲಾಗುತ್ತಿದೆ.

ರಾಣಾನನ್ನು ಎನ್‌ಐಎ ಮುಖ್ಯ ಕಚೇರಿಯಲ್ಲಿ ಅತಿಭದ್ರತೆಯ ಸೆಲ್‌ನಲ್ಲಿ ಇರಿಸಲಾಗಿದೆ.

ರಾಜಧಾನಿಯ ಮೇಲೆ ದಾಳಿಗೆ ಸಂಚು?

ನವದೆಹಲಿ (ಪಿಟಿಐ): ತಹವ್ವುರ್ ಹುಸೇನ್ ರಾಣಾ ಮುಂಬೈ ಮೇಲೆ ನಡೆಸಿದ ದಾಳಿಯ ಮಾದರಿಯಲ್ಲೇ ನವದೆಹಲಿಯ ಮೇಲೆಯೂ ದಾಳಿ ನಡೆಸಲು ಯೋಜಿಸಿದ್ದ.

‘ಪಿತೂರಿಯು ಭಾರತದ ಭೌತಿಕ ಗಡಿಗಳನ್ನು ಮೀರಿ ನಿಲ್ಲುತ್ತದೆ. ಭಾರತದ ರಾಜಧಾನಿ ಸೇರಿದಂತೆ ಹಲವು ಸ್ಥಳಗಳನ್ನು ದಾಳಿಗೆ ಗುರುತಿಸಲಾಗಿತ್ತು’ ಎಂದು ಎನ್‌ಐಎ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಚಂದ್ರಜೀತ್ ಸಿಂಗ್ ಅವರು ಏಪ್ರಿಲ್ 10ರಂದು ನೀಡಿರುವ ಆದೇಶದಲ್ಲಿ ಉಲ್ಲೇಖಿಸಿದ್ದಾರೆ ಎನ್ನಲಾಗಿದೆ.

‘ಸ್ವಾತಂತ್ರ್ಯ ವಿರೋಧಿ ಶಕ್ತಿಗಳಿಂದ ಜಾತ್ಯತೀತ ಸಂಸ್ಕೃತಿ ನಾಶ’

ನವದೆಹಲಿ (ಪಿಟಿಐ): ‘ಸ್ವಾತಂತ್ರ್ಯ ವಿರೋಧಿ ಶಕ್ತಿಗಳು ಅಧಿಕಾರವನ್ನು ಅಕ್ರಮವಾಗಿ ಕಿತ್ತುಕೊಂಡಿದ್ದು, ಜಾತ್ಯತೀತ ಸಂಸ್ಕೃತಿಯನ್ನು ನಾಶಗೊಳಿಸಲು ಸಕ್ರಿಯವಾಗಿ ಯತ್ನಿಸುತ್ತಿವೆ. ಜನರು, ಇಂತಹ ಆಕ್ರಮಣಕಾರರನ್ನು ಕಿತ್ತೊಗೆಯಬೇಕು’ ಎಂದು ಪದಚ್ಯುತ ಪ್ರಧಾನಿ ಶೇಖ್ ಹಸೀನಾ ಕರೆ ನೀಡಿದ್ದಾರೆ.

ಶೇಖ್ ಹಸೀನಾ

ಪಾಕಿಸ್ತಾನದ ನಂಕಾನಾ ಸಾಹಿಬ್ ಗುರುದ್ವಾರದಲ್ಲಿ ಸಿಖ್ ಧರ್ಮೀಯರು ಸೋಮವಾರ ಬೈಸಾಖಿ (ಹೊಸ ವರ್ಷಾಚರಣೆ) ಆಚರಣೆಯಲ್ಲಿ ಪಾಲ್ಗೊಂಡಿದ್ದರು ಎಪಿ/ಪಿಟಿಐ ಚಿತ್ರ

ಪಾಕ್: ಸಿಖ್ಖರಿಂದ ಬೈಸಾಖಿ ಆಚರಣೆ

ಇಸ್ಲಾಮಾಬಾದ್/ಲಾಹೋರ್ (ಪಿಟಿಐ): ಗುರುನಾನಕರ ಜನ್ಮಸ್ಥಳವಾದ ನಂಕಾನಾ ಸಾಹಿಬ್ ಗುರುದ್ವಾರದಲ್ಲಿ ಭಾರತದ ಸಿಖ್ಖರು ಸೇರಿದಂತೆ ಅಪಾರ ಸಂಖ್ಯೆಯ ಸಿಖ್ ಧರ್ಮೀಯರು ಸೋಮವಾರ ಬೈಸಾಖಿ (ಹೊಸ ವರ್ಷಾಚರಣೆ) ಆಚರಿಸಿದರು.

ಸಿಖ್ ಹೊಸ ವರ್ಷದ ಆರಂಭ ಬೈಸಾಖಿ. 1699ರಲ್ಲಿ ಗುರು ಗೋವಿಂದ ಸಿಂಗ್ ನೇತೃತ್ವದಲ್ಲಿ ಖಲ್ಸಾ ಪಂಥದ (ಸಂತ- ಯೋಧರು) ರಚನೆಯನ್ನು ಇದು ಗುರುತಿಸಲಿದೆ.

ಖಲ್ಸಾ ಪಂಥ ಉದಯವಾದ 326ನೇ ವಾರ್ಷಿಕೋತ್ಸವದಲ್ಲಿ 10 ಸಾವಿರಕ್ಕೂ ಹೆಚ್ಚು ವಿದೇಶಿ ಸಿಖ್ಖರು ಭಾಗಿಯಾಗಿದ್ದರು. ಇವರಲ್ಲಿ ಭಾರತದಿಂದ 6,700ಕ್ಕೂ ಹೆಚ್ಚು ಜನ ಆಗಮಿಸಿದ್ದರು. ಕೆನಡಾ, ಅಮೆರಿಕ, ಬ್ರಿಟನ್, ಆಸ್ಟ್ರೇಲಿಯಾ ಮತ್ತು ಇನ್ನಿತರ ದೇಶಗಳಿಂದ ಸಹ ಜನರು ಬಂದಿದ್ದರು ಎಂದು ಪಾಕಿಸ್ತಾನದಲ್ಲಿನ ಅಲ್ಪಸಂಖ್ಯಾತರ ಪವಿತ್ರ ಸ್ಥಳಗಳ ಉಸ್ತುವಾರಿ ವಹಿಸಿಕೊಂಡಿರುವ ‘ಇವಾಕ್ಯೂ ಟ್ರಸ್ಟ್ ಪ್ರಾಪರ್ಟಿ ಬೋರ್ಡ್’ (ಇಟಿಪಿಬಿ) ತಿಳಿಸಿದೆ.

ಬೃಹತ್ ಪ್ರಮಾಣದಲ್ಲಿ ಸಿಖ್ಖರು ಜಮಾಯಿಸಲು ಅನುಕೂಲವಾಗುವಂತೆ ಅಗತ್ಯ ಭದ್ರತಾ ವ್ಯವಸ್ಥೆಗಳನ್ನು ಕೈಗೊಳ್ಳಲಾಗಿದೆ ಎಂದು ಇಟಿಪಿಬಿ ವಕ್ತಾರರು ತಿಳಿಸಿದ್ದಾರೆ.

50 ವರ್ಷದಲ್ಲಿ ಇದೇ ಮೊದಲ ಬಾರಿಗೆ ಪಾಕಿಸ್ತಾನ ಸರ್ಕಾರವು ಭಾರತೀಯ ಸಿಖ್ ಯಾತ್ರಿಕರಿಗೆ ಬೈಸಾಖಿ ಆಚರಣೆಗಾಗಿ 6,700ಕ್ಕೂ ಹೆಚ್ಚು ವೀಸಾಗಳನ್ನು ನೀಡಿದೆ ಎಂದು ಅವರು ಹೇಳಿದರು.

ಅಮೆರಿಕ ಮೇಲೆ ಚೀನಾ ವೀಸಾ ನಿರ್ಬಂಧ

ಬೀಜಿಂಗ್ (ಪಿಟಿಐ): ಚೀನಾದ ಅಧಿಕಾರಿಗಳನ್ನು ಗುರಿಯಾಗಿಸಿಕೊಂಡು ಅಮೆರಿಕವು ವೀಸಾ ನಿರ್ಬಂಧಗಳನ್ನು ಹೇರಿದ ಬೆನ್ನಲ್ಲೇ, ಟಿಬೆಟ್ ವಿಚಾರದಲ್ಲಿ ‘ಆಘಾತಕಾರಿ’ ಬಗೆಯಲ್ಲಿ ನಡೆದುಕೊಂಡ ಅಮೆರಿಕದ ಅಧಿಕಾರಿಗಳನ್ನು ಗುರಿಯಾಗಿಸಿ ಚೀನಾ ಕೂಡ ವೀಸಾ ನಿರ್ಬಂಧ ಜಾರಿಗೊಳಿಸಿದೆ.

ಟಿಬೆಟ್‌ನ ವಿಚಾರವು ಸಂಪೂರ್ಣವಾಗಿ ಚೀನಾದ ಆಂತರಿಕ ಸಂಗತಿ ಎಂದು ಚೀನಾದ ವಿದೇಶಾಂಗ ಸಚಿವಾಲಯದ ವಕ್ತಾರ ಲಿನ್ ಜಿಯಾನ್ ಹೇಳಿದ್ದಾರೆ. ಟಿಬೆಟ್ ಪ್ರದೇಶವನ್ನು ಚೀನಾ ಷಿಜಾಂಗ್ ಎಂದು ಗುರುತಿಸುತ್ತದೆ.

‘ವಿದೇಶಗಳ ಸ್ನೇಹಿತರು ಚೀನಾದ ಷಿಜಾಂಗ್ ಪ್ರದೇಶದಲ್ಲಿ ಪ್ರವಾಸ ಮಾಡುವುದನ್ನು, ಅಲ್ಲಿ ವಹಿವಾಟು ನಡೆಸುವುದನ್ನು ನಾವು ಸ್ವಾಗತಿಸುತ್ತೇವೆ. ಆದರೆ, ಯಾವುದೇ ದೇಶ ಅಥವಾ ವ್ಯಕ್ತಿಯು ಮಾನವ ಹಕ್ಕುಗಳು, ಧರ್ಮ ಮತ್ತು ಸಂಸ್ಕೃತಿಯ ಸೋಗಿನಲ್ಲಿ ಅಲ್ಲಿ ಆಂತರಿಕ ವಿಚಾರಗಳಲ್ಲಿ ಹಸ್ತಕ್ಷೇಪ ನಡೆಸುವುದನ್ನು ನಾವು ವಿರೋಧಿಸುತ್ತೇವೆ’ ಎಂದು ಲಿನ್ ಹೇಳಿದ್ದಾರೆ.

ಮುಸ್ಲಿಂ ಯುವತಿ ಜತೆ ಮಾತು; ಯುವಕನಿಗೆ ಥಳಿತ

ಪ್ರಜಾವಾಣಿ ವಾರ್ತೆ

ಲಖನೌ: ಮುಸ್ಲಿಂ ಸಮುದಾಯದ ಯುವತಿಯೊಂದಿಗೆ ಮಾತನಾಡುತ್ತಿದ್ದ ಹಿಂದೂ ಯುವಕನ ಮೇಲೆ ಗುಂಪೊಂದು ಹಲ್ಲೆ ನಡೆಸಿದ ಪ್ರಕರಣ ಉತ್ತರಪ್ರದೇಶದ ಕೋಮುಸೂಕ್ಷ್ಮ ಜಿಲ್ಲೆಯಾದ ಮುಜಫ್ಫರ್‌ನಗರದಲ್ಲಿ ನಡೆದಿದೆ. ಬಳಿಕ, ಯುವತಿಯ ಹಿಜಾಬ್ ಅನ್ನು ಕಿತ್ತುಹಾಕಲಾಗಿದೆ.

ವರದಿಯ ಪ್ರಕಾರ, ಬಾಲಕಿಯ ತಾಯಿ ಹಾಗೂ ಯುವಕ ಸಚಿನ್ ಅವರು ಖಾಸಗಿ ಬ್ಯಾಂಕಿನಲ್ಲಿ ಕಲೆಕ್ಷನ್ ಏಜೆಂಟ್ ಆಗಿ ಕೆಲಸ ಮಾಡುತ್ತಿದ್ದರು. ಇಬ್ಬರೂ ಕೂಡ ಜನರು ಪಡೆದ ಸಾಲದ ಕಂತು ಪಡೆಯಲು ಜತೆಯಾಗಿ ತೆರಳುತ್ತಿದ್ದರು. ಘಟನೆ ನಡೆದ ದಿನ, ತಾಯಿ ತನ್ನ ಬದಲಾಗಿ ಯುವಕನ ಜೊತೆ ಮಗಳನ್ನು ಕಳುಹಿಸಿದ್ದರು.

ಹಣ ಪಡೆದುಕೊಂಡು ಹಿಂತಿರುಗುತ್ತಿದ್ದ ವೇಳೆ, ಮುಸಲ್ಮಾನರು ಹೆಚ್ಚಿನ ಸಂಖ್ಯೆಯಲ್ಲಿರುವ ಖಾಲಪರ್‌ನ ದರ್ಜಿ ಗಲ್ಲಿಯಲ್ಲಿ ಅಡ್ಡಗಟ್ಟಿದ ಗುಂಪೊಂದು ಇಬ್ಬರನ್ನು ಪ್ರಶ್ನಿಸಿದೆ. ನಂತರ ಯುವಕನ ಮೇಲೆ ಹಲ್ಲೆ ನಡೆಸಿ, ಯುವತಿ ಕೆನ್ನೆಗೂ ಹೊಡೆದಿದ್ದಾರೆ. ಹಲ್ಲೆ ನಡೆಸಿದ್ದನ್ನು ವಿಡಿಯೊ ಮಾಡಿದ್ದಾರೆ.

ಶನಿವಾರವೇ ಈ ಘಟನೆ ನಡೆದಿದ್ದು, ಸಾಮಾಜಿಕ ಜಾಲತಾಣದಲ್ಲಿ ಈ ವಿಡಿಯೊ ಹರಿದಾಡಿತ್ತು. ಇದರ ಆಧಾರದ ಮೇಲೆ ಆರು ಮಂದಿಯನ್ನು ಪೊಲೀಸರು ಬಂಧಿಸಿದ್ದಾರೆ.

ಕೆಲ ತಿಂಗಳ ಹಿಂದೆ ಹಿಂದೂ ಬಾಲಕರ ಜೊತೆ ಓಡಾಡಿದ ಆರೋಪದ ಮೇಲೆ ಇಬ್ಬರು ಮುಸ್ಲಿಂ ಯುವತಿಯರ ಮೇಲೆ ಹಲ್ಲೆ ನಡೆಸಿದ್ದ ಪ್ರಕರಣ ಶಹರಾನ್‌ಪುರದಲ್ಲಿ ನಡೆದಿತ್ತು.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ನಿಧನ

ಶ್ರೀ ಎಂ.ಜಿ. ಮಹೇಶ ಕುಮಾರ್
ಇವರು ದಿನಾಂಕ 14-04-2025 ರಂದು ಸೋಮವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾಗಿ ಅಂತ್ಯಕ್ರಿಯೆಯನ್ನು ದಿನಾಂಕ 15-04-2025 ರಂದು ಮಧ್ಯಾಹ್ನ 2:00 ಗಂಟೆಗೆ ಹೆಬ್ಬಾಳ ಚಿತಾಗಾರದಲ್ಲಿ ನೆರವೇರಿಸಲಾಗುವುದು.
ಇಂತಿ ದುಃಖತಪ್ತರು: ಶ್ರೀಮತಿ ಬಿ.ಸತ್ಯ ಪ್ರೇಮ ಮತ್ತು ಮಕ್ಕಳು ಆಪ್ತರು ಮತ್ತು ಸಂಬಂಧಿಕರು.

ಪ್ರಜಾವಾಣಿ **ಕ್ಲಾಸಿಫೈಡ್ಸ್**
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI,Degree. ಸಂಬಳ 16,000 - 86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳಲ್ಲೂ ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಹುಡಿಗಿಯರು ಬೇಕಾಗಿದ್ದಾರೆ. ಊಟವಸತಿವಿದೆ. 14,000 - 18,000. ಸಂಪರ್ಕಿಸಿ: 8951315839, 7022770052.

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಪ್ರವಾಸ

Travel Agencies

19/5/2025 ರಿಂದ 11 ದಿನಗಳು ನೇಪಾಳ ಪಶುಪತಿನಾಥ ಮುಕ್ತಿನಾಥ್ ಕಾಶಿ ಗಯಾ ಅಯೋಧ್ಯೆ ವಿಮಾನದಲ್ಲಿ 45000/ ಶ್ರೀರಾಮ್ ಟೂರ್ಸ್ 9108933383/ 9606600383

Travel

ಜುಲೈ 3 ರಿಂದ 13 ದಿನಗಳು ಅಮರ್ನಾಥ್, ಶ್ರೀನಗರ, ಅಮೃತಸರ, ವೈಷ್ಣೋಮಾತ, ಕುರುಕ್ಷೇತ್ರ. ಶ್ರೀಗಂಗಾ ಟೂರಿಸ್ಟ್ ಸಂಪರ್ಕಿಸಿ:9480253807, 8105522123.

26.04.2025, 2 ದಿನಗಳು ಮಡಿಕೇರಿ ಪ್ರವಾಸ. 10.05.2025, 3 ದಿನಗಳು ಐದು ಆತ್ಮಲಿಂಗ ಕ್ಷೇತ್ರಗಳು, ಮರವಂತೆಬೀಚ್, ಉಡುಪಿ, ಗೋಕರ್ಣ, ಕಟೀಲು, ಧರ್ಮಸ್ಥಳ ಇತ್ಯಾದಿ. 9481433157

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು!
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಡ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277
Tanveer: +91 9886213331 | Anitha: +91 9900428036

ಹೊಸ ಅಲೆ ಹೊಸ ತಂಡ ಮುಖ್ಯ

ವಂಶಿ, ರಚನಾ ಇಂದರ್

ನಿವೇದಿತಾ ಶಿವರಾಜ್‌ಕುಮಾರ್ ನಿರ್ಮಾಣದ ಚೊಚ್ಚಲ ಸಿನಿಮಾ 'ಫೈರ್‌ಫ್ಲೈ' ಏ.24ರಂದು ತೆರೆ ಕಾಣಲಿದೆ. ಚಿತ್ರದ ಟ್ರೇಲರ್ ಬಿಡುಗಡೆಯಾಗಿದ್ದು, ಹೊಸಬರ ತಂಡಕ್ಕೆ ನಟ ಶಿವರಾಜ್‌ಕುಮಾರ್ ಸಾಥ್ ನೀಡಿದ್ದಾರೆ.

ವಂಶಿ ಆ್ಯಕ್ಷನ್ ಕಟ್ ಹೇಳಿ ನಾಯಕರಾಗಿ ನಟಿಸಿರುವ ಈ ಸಿನಿಮಾದಲ್ಲಿ ರಚನಾ ಇಂದರ್ ನಾಯಕಿಯಾಗಿದ್ದಾರೆ. ಶ್ರೀ ಮುತ್ತು ಸಿನಿ ಸರ್ವೀಸ್ ಆ್ಯಂಡ್ ಪ್ರೊಡಕ್ಷನ್ಸ್‌ನಡಿ ಸಿನಿಮಾ ನಿರ್ಮಾಣವಾಗಿದ್ದು, ಶಿವರಾಜ್‌ಕುಮಾರ್ ಮನೆಯಲ್ಲಿ ಟ್ರೇಲರ್ ಬಿಡುಗಡೆ ಕಾರ್ಯಕ್ರಮ ನಡೆಯಿತು.

ಈ ವೇಳೆ ಮಾತನಾಡಿದ ಶಿವರಾಜ್‌ಕುಮಾರ್, 'ಮಗಳು ಸಿನಿಮಾ ಮಾಡಿರುವುದು ಬಹಳ ಖುಷಿಯ ವಿಚಾರ. ಯುವ ತಂಡವಿದು. ಈ ಚಿತ್ರದ ಕಥೆ ನನ್ನ ಹೃದಯಕ್ಕೆ ತಟ್ಟಿತು. ವಂಶಿ ಒಂದು ಮೌಲ್ಯಯುತ ಸಿನಿಮಾ ಮಾಡಿದ್ದಾರೆ. ಅವರೇ ಹೀರೊ ಆಗಿ ಮಾಡುತ್ತೇನೆ ಎಂದಾಗಿ ಅವರಲ್ಲಿರುವ ವಿಶ್ವಾಸ ನೋಡಿದೆ. ಪಾರ್ವತಮ್ಮ ರಾಜ್‌ಕುಮಾರ್ ದಾರಿಯಲ್ಲಿ ಹೆಜ್ಜೆ ಹಾಕಬೇಕು ಎನ್ನುವುದು ನಿವೇದಿತಾ ಆಸೆ. ನಮಗೂ ಆಕೆಯ ನಿರ್ಧಾರ ಖುಷಿ ತಂದಿತು. ಒಳ್ಳೆಯ ಸಿನಿಮಾದಿಂದ ಹೊಸ ತಂಡ ಸೃಷ್ಟಿಯಾಗುತ್ತದೆ. ಕನ್ನಡದಲ್ಲಿ ಇಂತಹ ಒಂದು ಹೊಸ ಅಲೆ, ತಂಡ ಬರಬೇಕು ಎನ್ನುವುದು ನನ್ನ ಆಸೆ. ನಮ್ಮ ಸಂಸ್ಕೃತಿ, ಭಾಷೆಯನ್ನು ಮುಂದೆ ಕೊಂಡೊಯ್ಯುವುದು ಇವರೇ. ಚಿತ್ರದಲ್ಲಿ ನಾನೂ ಒಂದು ಪಾತ್ರವನ್ನು ಮಾಡಬೇಕು ಎಂದು ಕೇಳಿಕೊಂಡಾಗ ಖುಷಿಯಿಂದ ಒಪ್ಪಿಕೊಂಡೆ. ನನ್ನನ್ನು ಯಂಗ್ ಆಗಿ ಹೆಂಗೆಂಗೋ ತೋರಿಸಿದ್ದಾರೆ' ಎಂದು ಮುಗುಳ್ನಕ್ಕರು.

'ಒಳ್ಳೆಯ ಸಿನಿಮಾ ಮಾಡಿದರೆ ದುಡ್ಡು ತಾನಾಗಿಯೇ ಬರುತ್ತದೆ. ನಿವೇದಿತಾ ಒಳ್ಳೆಯ ವಿಷಯ ಆಯ್ಕೆ ಮಾಡಿಕೊಂಡಿದ್ದಾಳೆ. ಶ್ರೀ ಮುತ್ತು ಸಂಸ್ಥೆ ಮತ್ತಷ್ಟು ಸಿನಿಮಾಗಳನ್ನು ತರಲಿದೆ. ಗೀತಾ ಪಿಕ್ಚರ್ಸ್ 'ಎ ಫಾರ್ ಆನಂದ್' ಹಾಗೂ 'ಶಾಖಾಹಾರಿ' ಸಿನಿಮಾ ನಿರ್ದೇಶಕ ಸಂದೀಪ್ ಸುಂಕದ್ ಅವರ ಪ್ರೊಜೆಕ್ಟ್ ಕೈಗೆತ್ತಿಕೊಂಡಿದೆ' ಎಂದರು.

'ಫೈರ್‌ಫ್ಲೈ' ಒಂದೊಳ್ಳೆಯ ಕೌಟುಂಬಿಕ ಚಿತ್ರ' ಎಂದ ನಿವೇದಿತಾ ಶಿವರಾಜ್‌ಕುಮಾರ್, 'ನನ್ನ ಮೊದಲ ನಿರ್ಮಾಣದ ಚಿತ್ರ ತಾತನ (ರಾಜ್‌ಕುಮಾರ್) ಜನ್ಮದಿನದಂದು ತೆರೆಗೆ ಬರುತ್ತಿರುವುದು ಖುಷಿಯ ವಿಚಾರ. ಒಳ್ಳೆಯ ಕಥೆಗಳಿದ್ದರೆ ನಾನು ಅದನ್ನು ಸಿನಿಮಾ ಅಥವಾ ವೆಬ್ ಸರಣಿ ಮೂಲಕ ಜನರೆದುರಿಗೆ ಇಡಲಿದ್ದೇನೆ' ಎಂದರು.

'ಎಲ್ಲರೂ ಕಮರ್ಷಿಯಲ್ ವಿಷಯದ ಹಿಂದೆ ಬಿದ್ದಿರುವಾಗ ನಿವೇದಿತಾ ಭಿನ್ನವಾದ ಒಂದು ವಿಷಯವನ್ನು ಆಯ್ಕೆ ಮಾಡಿಕೊಂಡು ಸಿನಿಮಾ ನಿರ್ಮಾಣ ಮಾಡುತ್ತಿರುವುದು ಹೆಮ್ಮೆಯ ವಿಷಯ. ಕನ್ನಡ ಚಿತ್ರರಂಗಕ್ಕೆ ಒಳ್ಳೆಯ ಕಥೆಗಳ ಅವಶ್ಯಕತೆ ಬಹಳಷ್ಟಿದೆ' ಎಂದರು ನಟಿ ಸುಧಾರಾಣಿ.

ಗೀತಾ ಶಿವರಾಜ್‌ಕುಮಾರ್ ಮಾತನಾಡಿ, 'ನಿರ್ಮಾಪಕಿಯಿಂದ ಹಿಡಿದು ಹೀರೊ, ಹೀರೊಯಿನ್, ತಂತ್ರಜ್ಞರವರೆಗೆ ಇದೊಂದು ಯುವ ತಂಡ. ಅವರಿಗೆ ಪ್ರೋತ್ಸಾಹ ಬಹಳ ಮುಖ್ಯ' ಎಂದರು.

> ಕನ್ನಡ ಸಿನಿಮಾ ನೋಡಲು ಜನರು ಚಿತ್ರಮಂದಿರಗಳಿಗೆ ಬರುತ್ತಿಲ್ಲ ಎನ್ನುತ್ತಿದ್ದಾರೆ. ನಿರಂತರವಾಗಿ ಒಳ್ಳೆಯ ಸಿನಿಮಾಗಳನ್ನು ನೀಡುತ್ತಿದ್ದರೆ, ಜನರು ಖಂಡಿತವಾಗಿಯೂ ಬರುತ್ತಾರೆ.
> –ನಿವೇದಿತಾ ಶಿವರಾಜ್‌ಕುಮಾರ್, ನಿರ್ಮಾಪಕಿ

> ನಮ್ಮಲ್ಲಿ ಪ್ರತಿಭೆಯುಳ್ಳ ಹೊಸಬರು ಬಹಳಷ್ಟು ಇದ್ದಾರೆ. ಆದರೆ ಅವರಿಗೆ ಅವಕಾಶ ನೀಡುವುದು ಇಂದಿನ ಕಾಲಘಟ್ಟಕ್ಕೆ ಮುಖ್ಯವಾಗಿದೆ. ಜೆನ್‌ಝಿಗೆ ಬಹಳ ಹತ್ತಿರವಾಗುವ ಸಿನಿಮಾ ಫೈರ್‌ಫ್ಲೈ.
> –ವಂಶಿ, ನಟ



ಶಿವರಾಜ್‌ಕುಮಾರ್

ಯಶ್

'ಕೆಜಿಎಫ್–3' ಸಿ ಯು ಸೂನ್

ಜಗತ್ತಿನಾದ್ಯಂತ ಬಾಕ್ಸ್‌ಆಫೀಸ್‌ನಲ್ಲಿ ₹1,400 ಕೋಟಿ ಬಾಚಿದ್ದ ಪ್ರಶಾಂತ್ ನೀಲ್ ನಿರ್ದೇಶನದ, ಯಶ್ ನಟನೆಯ 'ಕೆಜಿಎಫ್ ಚಾಪ್ಟರ್ 2' ರಿಲೀಸ್ ಆಗಿ ಸೋಮವಾರಕ್ಕೆ (ಏ.14) ಮೂರು ವರ್ಷಗಳು ಉರುಳಿವೆ.

ಇದೇ ಸಂದರ್ಭದಲ್ಲಿ 'ಕೆಜಿಎಫ್ ಚಾಪ್ಟರ್ 3' ಸೆಟ್ಟೇರುವ ಮುನ್ಸೂಚನೆಯನ್ನು ಹೊಂಬಾಳೆ ಫಿಲ್ಮ್ಸ್ ನೀಡಿದೆ. ತಮ್ಮ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಎರಡನೇ ಭಾಗದ ತುಣುಕುಗಳಿರುವ ವಿಡಿಯೊವೊಂದನ್ನು ಅಪ್‌ಲೋಡ್ ಮಾಡಿರುವ ಹೊಂಬಾಳೆ ಫಿಲ್ಮ್ಸ್ ಕೊನೆಯಲ್ಲಿ ರಾಕಿ ಭಾಯ್ ಬಾಯಿಯಿಂದಲೇ ಮೂರನೇ ಭಾಗದ ಅಪ್‌ಡೇಟ್ ನೀಡಿದೆ. 'ಕೆಜಿಎಫ್ ಚಾಪ್ಟರ್–3: ಸಿ ಯು ಸೂನ್' ಎಂಬ ಡೈಲಾಗ್ ಮೂಲಕ ಅಭಿಮಾನಿಗಳಲ್ಲಿ ನಿರೀಕ್ಷೆ ಮೂಡಿಸಿದ್ದಾರೆ ಯಶ್. ಅಮೆರಿಕದವರು ಮತ್ತು ಇಂಡೋನೇಷ್ಯದವರು ಏಕೆ ರಾಕಿ ಹಿಂದೆ ಬಿದ್ದಿದ್ರು ಅನ್ನೋ ಕಥೆ ಮೂರನೇ ಚಾಪ್ಟರ್‌ನಲ್ಲಿ ಇರಲಿದೆ ಎನ್ನಲಾಗಿದೆ.

ಸದ್ಯಕ್ಕೆ ಪ್ರಶಾಂತ್ ನೀಲ್ ತೆಲುಗಿನ ಜೂನಿಯರ್ ಎನ್‌ಟಿಆರ್‌ಗೆ ಆ್ಯಕ್ಷನ್ ಕಟ್ ಹೇಳುತ್ತಿದ್ದು, ಈ ಸಿನಿಮಾದ ಚಿತ್ರೀಕರಣ ಪ್ರಗತಿಯಲ್ಲಿದೆ. ಇದಾದ ಬಳಿಕ ಪ್ರಭಾಸ್–ಪ್ರಶಾಂತ್ ನೀಲ್ ಕಾಂಬಿನೇಷನ್‌ನ ಬಹುನಿರೀಕ್ಷಿತ 'ಸಲಾರ್' ಸಿನಿಮಾದ ಎರಡನೇ ಭಾಗದ ಚಿತ್ರೀಕರಣ ನಡೆಯಲಿದೆ. 2026ರಲ್ಲಿ ಇದು ತೆರೆಕಾಣಲಿದೆ ಎಂದು ಈಗಾಗಲೇ ಹೊಂಬಾಳೆ ಫಿಲ್ಮ್ಸ್ ಘೋಷಿಸಿದೆ. ಈ ಪ್ರಾಜೆಕ್ಟ್ಸ್ ಬಳಿಕ 'ಕೆಜಿಎಫ್ ಚಾಪ್ಟರ್ 3' ಸೆಟ್ಟೇರುವ ಸಾಧ್ಯತೆ ಇದೆ.

'ಹಣ ಹೂಡಿಕೆಯಲ್ಲ, ಕಂಟೆಂಟ್ ಪ್ರಮುಖ'

ನಟ ಅಜಯ್ ರಾವ್ ನಿರ್ಮಿಸಿ, ನಟಿಸಿರುವ 'ಯುದ್ಧಕಾಂಡ' ಚಿತ್ರದ ಟ್ರೇಲರ್ ಅನ್ನು ಇತ್ತೀಚೆಗೆ ಶಂಖ ಊದುವ ಮೂಲಕ ನಟ ರವಿಚಂದ್ರನ್ ರಿಲೀಸ್ ಮಾಡಿದರು.

ಪವನ್ ಭಟ್ ನಿರ್ದೇಶನದ ಈ ಸಿನಿಮಾ ಏಪ್ರಿಲ್ 18ರಂದು ಬಿಡುಗಡೆಯಾಗುತ್ತಿದೆ.

ಈ ವೇಳೆ ಮಾತನಾಡಿದ ರವಿಚಂದ್ರನ್, 'ನಟ ಅಜಯ್ ರಾವ್ ಒಳಗೆ ನನ್ನನ್ನು ನಾನು ಕಂಡಿದ್ದೇನೆ. 'ಯುದ್ಧಕಾಂಡ' ಮೂಲಕ ಒಂದು ಭಾವನಾತ್ಮಕ ಸಿನಿಮಾವನ್ನು ತೆರೆ ಮೇಲೆ ತರುತ್ತಿದ್ದಾರೆ. ಅಜಯ್ ರಾವ್ ತಮ್ಮ ಸಂದರ್ಶನಗಳುದ್ದಕ್ಕೂ ಸಾಲ ಮಾಡಿದ್ದೇನೆ ಎನ್ನುತ್ತಲೇ ಇದ್ದಾರೆ. ಇವರ ಈ ಮಾತು ಕೇಳಿ ನನ್ನ ಸಾಲದ ಲೆಕ್ಕಗಳೂ ನೆನಪಾದವು. ಸಾಲ ಮಾಡಲು ತಾಕತ್ತು ಬೇಕು ಎಂದಿದ್ದಾನೆ, ನನಗೆ ಸಾಲ ತೀರಿಸಲು ತಾಕತ್ತು ಬೇಕು. ಸಾಲದಲ್ಲಿ ಬದುಕಿದ್ದೇವೆ, ಹೋರಾಡುತ್ತಲೇ ಇದ್ದೇವೆ' ಎಂದು ನಕ್ಕರು.

'ಇಷ್ಟೊಂದು ಗಂಭೀರವಾಗಿ ಸಿನಿಮಾ ಮಾಡಬೇಕಾ ಎಂದು ಅಜಯ್‌ಗೆ ಕೇಳಿದೆ. ಕೋಟ್ಯಂತರ ರೂಪಾಯಿ ಸಿನಿಮಾ ಮಾಡುವಾಗ ನನ್ನಪ್ಪ ದುಡ್ಡು ಹಾಕುತ್ತಿದ್ದರು. ಆಗ ದುಡ್ಡಿನ ಬೆಲೆ ಗೊತ್ತಿರಲಿಲ್ಲ. ಇವತ್ತಿಗೂ ಗೊತ್ತಿಲ್ಲ. ಹಣವಿಲ್ಲದೇ ಇದ್ದಾಗಲೂ ಸಿನಿಮಾ ಮಾಡುವ ಹುಚ್ಚು ಬಿಡಲಿಲ್ಲ. ಇದ್ದ ದುಡ್ಡಿನಲ್ಲಿ ಸಿನಿಮಾ ಮಾಡಬೇಕು ಎಂದು ಕನಸು ಕಂಡೆ. ಕೋಟ್ಯಂತರ ರೂಪಾಯಿ ಹಣ ಹಾಕುವುದು ಮುಖ್ಯವಲ್ಲ, ಸಿನಿಮಾದಲ್ಲಿನ ಕಂಟೆಂಟ್ ಮುಖ್ಯ' ಎಂದ ರವಿಚಂದ್ರನ್ ವೇದಿಕೆಯಲ್ಲೇ ಸಿನಿಮಾದ ಐದು ಟಿಕೆಟ್‌ಗಳನ್ನು ಹಣ ನೀಡಿ ಖರೀದಿಸಿದರು.


ರವಿಚಂದ್ರನ್

ಕರೀನಾ–ಪೃಥ್ವಿರಾಜ್‌ಗೆ ಮೇಘನಾ ಆ್ಯಕ್ಷನ್ ಕಟ್


ಪೃಥ್ವಿರಾಜ್

ಪೃಥ್ವಿರಾಜ್ ಸುಕುಮಾರನ್ 'ಲೂಸಿಫರ್' ಸೀಕ್ವೆಲ್ 'ಎಲ್–2: ಎಂಪುರಾನ್' ಬಿಡುಗಡೆ ಬೆನ್ನಲ್ಲೇ ಮತ್ತೊಂದು ಪ್ರಾಜೆಕ್ಟ್ ಒಪ್ಪಿಕೊಂಡಿದ್ದಾರೆ. ಬಾಲಿವುಡ್ ನಟಿ ಕರೀನಾ ಕಪೂರ್ ಖಾನ್ ಜೊತೆ ತೆರೆ ಹಂಚಿಕೊಳ್ಳಲು ಸಜ್ಜಾಗಿರುವ ಪೃಥ್ವಿರಾಜ್, 'ತಲ್ವಾರ್', 'ರಾಝಿ' ಖ್ಯಾತಿಯ ಮೇಘನಾ ಗುಲ್ಜಾರ್ ಆ್ಯಕ್ಷನ್ ಕಟ್ ಹೇಳುತ್ತಿರುವ 'ದಾಯ್ರಾ' ಚಿತ್ರದಲ್ಲಿ ನಟಿಸಲಿದ್ದಾರೆ.

ಕ್ರೈಂ ಡ್ರಾಮಾ ಥ್ರಿಲ್ಲರ್ ಜಾನರ್‌ನಲ್ಲಿ ಈ ಸಿನಿಮಾವಿದೆ. 'ಬಾಲಿವುಡ್‌ನಲ್ಲಿ 25 ವರ್ಷಗಳನ್ನು ಪೂರೈಸಿದ ಸಂಭ್ರಮದಲ್ಲಿದ್ದೇನೆ. ಈ ಸಂದರ್ಭದಲ್ಲಿ ಮೇಘನಾ ನಿರ್ದೇಶನದಲ್ಲಿ ಅಭಿನಯಿಸುವ ಅವಕಾಶ ಸಿಕ್ಕಿರುವುದು ನನ್ನ ಕನಸು ನನಸಾದಂತೆ ಆಗಿದೆ. ಪ್ರತಿಭಾನ್ವಿತ ನಟ ಪೃಥ್ವಿರಾಜ್ ಜೊತೆ ತೆರೆ ಹಂಚಿಕೊಳ್ಳುವ ಅವಕಾಶ ದೊರೆತಿರುವುದು ಈ ಪ್ರಾಜೆಕ್ಟ್‌ನ ಹೈಲೈಟ್. ಚಿತ್ರದ ಕಥೆ ಸೆಳೆಯುವಂತಿದ್ದು, ಅದ್ಭುತವಾದ ಸಿನಿಮಾ ಅನುಭವವನ್ನು ನೀಡಲಿದೆ. ಈ ಪಾತ್ರ ನಿಭಾಯಿಸುವುದು ಸವಾಲಿನ ವಿಷಯವಾಗಿದ್ದು, ಅಷ್ಟೇ ಸ್ಫೂರ್ತಿ ನೀಡುವಂತಿದೆ' ಎಂದಿದ್ದಾರೆ ಕರೀನಾ.

ಜಂಗ್ಲೀ ಪಿಕ್ಚರ್ಸ್ ಜೊತೆಗೆ ಮೇಘನಾ ಅವರ ಮೂರನೇ ಪ್ರಾಜೆಕ್ಟ್ ಇದಾಗಿದೆ. ಸಿಮಾ ಅಗರ್‌ವಾಲ್ ಹಾಗೂ ಯಶ್ ಕೇಸ್ವಾನಿ ಬರವಣಿಗೆಯಲ್ಲಿ ಮೇಘನಾಗೆ ಸಾಥ್ ನೀಡಿದ್ದಾರೆ. ಸಿನಿಮಾ ಸದ್ಯ ಪ್ರಿಪ್ರೊಡಕ್ಷನ್ ಹಂತದಲ್ಲಿದೆ.

ಕರೀನಾ ಕಪೂರ್ ಖಾನ್

ಸಂಕ್ಷಿಪ್ತ ಸುದ್ದಿ

ಸಲ್ಮಾನ್‌ಗೆ ಮತ್ತೆ ಜೀವ ಬೆದರಿಕೆ ಸಂದೇಶ

ಸಲ್ಮಾನ್ ಖಾನ್

ಮುಂಬೈ: ಬಾಲಿವುಡ್ ನಟ ಸಲ್ಮಾನ್ ಖಾನ್ ಅವರಿಗೆ ಮತ್ತೆ ಜೀವ ಬೆದರಿಕೆ ಸಂದೇಶ ಬಂದಿದ್ದು, ಈ ಸಂಬಂಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

'ಸಲ್ಮಾನ್ ಖಾನ್ ಅವರ ಕಾರು ಸ್ಫೋಟಿಸುವುದಾಗಿ ಮತ್ತು ಅವರ ಬಾಂದ್ರಾ ಮನೆಗೆ ನುಗ್ಗಿ ಅವರನ್ನು ಥಳಿಸುವುದಾಗಿಯೂ ಮುಂಬೈ ಸಂಚಾರಿ ಪೊಲೀಸರ ವಾಟ್ಸ್‌ಆ್ಯಪ್ ಸಹಾಯವಾಣಿಗೆ ಬೆದರಿಕೆ ಸಂದೇಶ ಭಾನುವಾರ ಬಂದಿದೆ. ಈ ಸಂಬಂಧ ಅಪರಿಚಿತ ವ್ಯಕ್ತಿಯ ವಿರುದ್ಧ ದೂರು ದಾಖಲಿಸಿಕೊಳ್ಳಲಾಗಿದೆ' ಎಂದು ಉಪ ಪೊಲೀಸ್ ಆಯುಕ್ತ ದತ್ತ ಕಾಂಬಳೆ ತಿಳಿಸಿದರು.

ಎಸ್‌ಆರ್‌ಎಚ್ ತಂಡ ಉಳಿದಿದ್ದ ಹೋಟೆಲ್‌ನಲ್ಲಿ ಬೆಂಕಿ

ಹೈದರಾಬಾದ್ (ಪಿಟಿಐ): ಸನ್‌ರೈಸರ್ಸ್ ಹೈದರಾಬಾದ್ (ಎಸ್‌ಆರ್‌ಎಚ್) ಐಪಿಎಲ್ ತಂಡ ಉಳಿದುಕೊಂಡಿದ್ದ ಬಂಜಾರಹಿಲ್ಸ್‌ನ ತಾರಾ ಹೋಟೆಲ್‌ನಲ್ಲಿ ಸೋಮವಾರ ಸಣ್ಣ ಪ್ರಮಾಣದ ಬೆಂಕಿ ಕಾಣಿಸಿಕೊಂಡಿತ್ತು. ಕೂಡಲೇ ಬೆಂಕಿಯನ್ನು ನಂದಿಸಿದ್ದು ಯಾರಿಗೂ ಗಾಯಗಳಾಗಿಲ್ಲ.

'ಹೋಟೆಲ್‌ನ ಮೊದಲ ಮಹಡಿಯಲ್ಲಿರುವ 'ಸ್ಪಾ'ನ ಹಬೆಯ ಕೊಠಡಿಯಲ್ಲಿ ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿ ಕಿಡಿ ಹೊತ್ತಿಕೊಂಡಿತ್ತು. ಕೂಡಲೇ ಅಗ್ನಿಶಾಮಕ ವಾಹನ ಕರೆಸಿ ಬೆಂಕಿಯನ್ನು ನಿಯಂತ್ರಿಸಲಾಯಿತು' ಎಂದು ಬಂಜಾರ ಹಿಲ್ಸ್ ಪೊಲೀಸ್ ಠಾಣೆ ಅಧಿಕಾರಿಗಳು ತಿಳಿಸಿದ್ದಾರೆ.

ವಕ್ಫ್: ಸಿಂಧುತ್ವ ಪ್ರಶ್ನಿಸಿ ಮನ್ಸೂರ್ ಸುಪ್ರೀಂಗೆ

ನವದೆಹಲಿ: ವಕ್ಫ್ ತಿದ್ದುಪಡಿ ಕಾಯ್ದೆ–2025ರ ಸಾಂವಿಧಾನಿಕ ಸಿಂಧುತ್ವ ಪ್ರಶ್ನಿಸಿ ಕರ್ನಾಟಕದ ಕಾಂಗ್ರೆಸ್ ಮುಖಂಡ ಮನ್ಸೂರ್ ಅಲಿ ಖಾನ್ ಅವರು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ.

ಖಾನ್ ಪರವಾಗಿ ಅರ್ಜಿ ಸಲ್ಲಿಸಿರುವ ವಕೀಲರಾದ ಶಿವಾಂಗಿ ಆನಂದ್, 'ವಕ್ಫ್ ತಿದ್ದುಪಡಿ ಮಸೂದೆಗೆ ಸಂಬಂಧಿಸಿದಂತೆ ರಚಿಸಲಾಗಿದ್ದ ಜಂಟಿ ಸಂಸದೀಯ ಸಮಿತಿಯ ಕೆಲ ಸದಸ್ಯರು ಆಕ್ಷೇಪಿಸಿದ್ದ ವಿಚಾರಗಳನ್ನು ಗಣನೆಗೆ ತೆಗೆದುಕೊಳ್ಳದೆ ಮಸೂದೆಯನ್ನು ಅಂಗೀಕರಿಸಲಾಗಿದೆ. ಇದು ಸಂವಿಧಾನ ಬಾಹಿರ' ಎಂದರು.

ಪಶ್ಚಿಮ ಬಂಗಾಳ: ನಿಲ್ಲದ ಹಿಂಸಾಚಾರ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದಲ್ಲಿ ವಕ್ಫ್ (ತಿದ್ದುಪಡಿ) ಕಾಯ್ದೆ ವಿರೋಧಿ ಹೋರಾಟ ಮತ್ತಷ್ಟು ಜಿಲ್ಲೆಗಳಿಗೆ ವಿಸ್ತರಿಸಿದ್ದು, ದಕ್ಷಿಣ 24 ಪರಗಣ ಜಿಲ್ಲೆಯಲ್ಲಿ ಸೋಮವಾರ ನಡೆದ ಪ್ರತಿಭಟನೆ ಹಿಂಸಾಚಾರಕ್ಕೆ ತಿರುಗಿದೆ.

ಇಂಡಿಯನ್ ಸೆಕ್ಯುಲರ್ ಫ್ರಂಟ್ (ಐಎಸ್‌ಎಫ್) ಕಾರ್ಯಕರ್ತರು ಮತ್ತು ಪೊಲೀಸರ ನಡುವೆ ಘರ್ಷಣೆ ಸಂಭವಿಸಿದ್ದು, ಪೊಲೀಸ್ ವಾಹನಗಳಿಗೆ ಬೆಂಕಿ ಹಚ್ಚಲಾಗಿದೆ. ಈ ಘಟನೆಯಲ್ಲಿ ಹಲವರು ಗಾಯಗೊಂಡಿದ್ದಾರೆ.

ಸೆಂಟ್ರಲ್ ಕೋಲ್ಕತ್ತದ ರಾಮಲೀಲಾ ಮೈದಾನದಲ್ಲಿ ಶಾಸಕ ನೌಶಾದ್ ಸಿದ್ಧಕಿ ಆಯೋಜಿಸಿದ್ದ ವಕ್ಫ್ ಕಾಯ್ದೆ ವಿರೋಧಿ ರ್‍ಯಾಲಿಯಲ್ಲಿ ಪಾಲ್ಗೊಳ್ಳಲು ಐಎಸ್‌ಎಫ್ ಬೆಂಬಲಿಗರು ತೆರಳುತ್ತಿದ್ದರು. ಅವರನ್ನು ಭೋಜೆರ್‌ಹಟ್‌ನ ಹೆದ್ದಾರಿಯಲ್ಲಿ ಭಾನ್‌ಗರ್ ಪೊಲೀಸರು ತಡೆದರು.

ಬ್ಯಾರಿಕೇಡ್ ಭೇದಿಸಿ ಮುನ್ನುಗ್ಗಿದ ಕಾರ್ಯಕರ್ತರು ಪೊಲೀಸರ ಜೊತೆ ವಾಗ್ವಾದಕ್ಕೆ ಇಳಿದರು. ಪೊಲೀಸ್ ವಾಹನಗಳಿಗೆ ಬೆಂಕಿ ಹಚ್ಚಿದರು. ಇದರಲ್ಲಿ ಹಲವು ಪೊಲೀಸ್ ಸಿಬ್ಬಂದಿ ಗಾಯಗೊಂಡರು ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

'ಹೋರಾಟಕ್ಕೆ ತಡೆ ಏಕೆ?': 'ವಕ್ಫ್ (ತಿದ್ದುಪಡಿ) ಕಾಯ್ದೆ ತರುವ ಮೂಲಕ ಬಿಜೆಪಿ ಕೋಮು ಗಲಭೆ ಸೃಷ್ಟಿಸುವ ಸಂಚು ರೂಪಿಸುತ್ತಿದೆ. ಕಾಯ್ದೆಯನ್ನು ಜಾರಿ ಮಾಡುವುದಿಲ್ಲ ಎನ್ನುತ್ತಿರುವ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ನಮ್ಮ ಹೋರಾಟ ತಡೆಯುತ್ತಿರುವುದು ಏಕೆ' ಎಂದು ಐಎಸ್‌ಎಫ್ ಶಾಸಕ ನೌಶಾದ್ ಸಿದ್ಧಕಿ ಪ್ರಶ್ನಿಸಿದರು.

ಸಹಜ ಸ್ಥಿತಿಯತ್ತ ಮುರ್ಶಿದಾಬಾದ್: ಹಿಂಸಾಚಾರಪೀಡಿತ ಮುರ್ಶಿದಾಬಾದ್ ನಿಧಾನವಾಗಿ ಸಹಜ ಸ್ಥಿತಿಗೆ ಮರಳುತ್ತಿದೆ.

ವಕ್ಫ್ (ತಿದ್ದುಪಡಿ) ಕಾಯ್ದೆ ವಿರೋಧಿ ಹಿಂಸಾಚಾರಕ್ಕೆ ಶುಕ್ರವಾರದ ನಂತರ ಮುರ್ಶಿದಾಬಾದ್‌ನ ಸೂಟಿ, ಧುಲಿಯಾನ್, ಸಮ್ಸರ್‌ಗಂಜ್ ಮತ್ತು ಜಾಂಗಿಪುರ್‌ನಲ್ಲಿ ಮೂವರು ಮೃತಪಟ್ಟು, ಹಲವರು ಗಾಯಗೊಂಡಿದ್ದರು. ನೂರಾರು ಜನರು ಮನೆ ತೊರೆದಿದ್ದರು.

ಮನೆ ತೊರೆದು ಹೋಗಿದ್ದ ಕುಟುಂಬಗಳು ಹಿಂತಿರುಗುತ್ತಿವೆ ಎಂದು ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕ ಜಾವೆದ್ ಶಮಿಮ್ ಸೋಮವಾರ ತಿಳಿಸಿದ್ದಾರೆ.

'ಘಟನೆ ಸಂಬಂಧ 210 ಮಂದಿಯನ್ನು ಬಂಧಿಸಲಾಗಿದೆ. ಮಾಲ್ಡಾ ಮತ್ತು ಮುರ್ಶಿದಾಬಾದ್ ಜಿಲ್ಲಾಡಳಿತಗಳು ಇಲ್ಲಿನ ನಾಗರಿಕರ ಸುರಕ್ಷಿತ ವಾಪಸಾತಿಗೆ ಪ್ರಯತ್ನಿಸುತ್ತಿವೆ. 19 ಕುಟುಂಬಗಳು ವಾಪಸಾಗಿವೆ' ಎಂದು ಎಡಿಜಿಪಿ ಶಮಿಮ್ ತಿಳಿಸಿದ್ದಾರೆ.

ಪಶ್ಚಿಮಬಂಗಾಳದ ದಕ್ಷಿಣ 24 ಪರಗಣ ಜಿಲ್ಲೆಯಲ್ಲಿ ವಕ್ಫ್ (ತಿದ್ದುಪಡಿ) ಕಾಯ್ದೆ ವಿರೋಧಿ ರ್‍ಯಾಲಿ ತಡೆದ ಪೊಲೀಸರ ವಾಹನಗಳ ಮೇಲೆ ಐಎಸ್‌ಎಫ್ ಕಾರ್ಯಕರ್ತರು ದಾಳಿ ಮಾಡಿ ಜಖಂಗೊಳಿಸಿದರು ಪಿಟಿಐ ಚಿತ್ರ

ಈ ಸಾಧನೆಗೈದ 4ನೇ ದೇಶವೆಂಬ ಹೆಗ್ಗಳಿಕೆ–ಡಿಆರ್‌ಡಿಒ ಸಂಶೋಧನೆ

ಲೇಸರ್ ಆಧರಿತ ಶಸ್ತ್ರಾಸ್ತ್ರ ಅಭಿವೃದ್ಧಿ

ನವದೆಹಲಿ (ಪಿಟಿಐ): ರಕ್ಷಣಾ ಹಾಗೂ ಅಭಿವೃದ್ಧಿ ಸಂಸ್ಥೆಯು (ಡಿಆರ್‌ಡಿಒ) ಅಭಿವೃದ್ಧಿಪಡಿಸಿದ ಲೇಸರ್ ಆಧರಿತ ಶಸ್ತ್ರಾಸ್ತ್ರ ವ್ಯವಸ್ಥೆ ಪರೀಕ್ಷೆ ಯಶಸ್ವಿಯಾಗಿದೆ.

ಭಾನುವಾರ ಆಂಧ್ರಪ್ರದೇಶದ ಕರ್ನೂಲ್‌ನಲ್ಲಿ ಭಾನುವಾರ ಈ ಪರೀಕ್ಷೆ ನಡೆಯಿತು. ಆ ಮೂಲಕ ಮಾನವರಹಿತ ಡ್ರೋನ್ (ಯುಎವಿ), ವಿಮಾನಗಳನ್ನು ಹೊಡೆದುರುಳಿಸುವ ಅತ್ಯಾಧುನಿಕ ಶಸ್ತ್ರಾಸ್ತ್ರ ಹೊಂದಿದ ಗೌರವಕ್ಕೆ ಭಾರತ ಪಾತ್ರವಾಗಿದೆ.

ಭವಿಷ್ಯದಲ್ಲಿ ಎದುರಾಗುವ ಭದ್ರತಾ ಸವಾಲುಗಳನ್ನು ಎದುರಿಸುವ ನಿಟ್ಟಿನಲ್ಲಿ ಲೇಸರ್ ಆಧಾರಿತ ಶಸ್ತ್ರಾಸ್ತ್ರವನ್ನು ಅಭಿವೃದ್ಧಿಪಡಿಸಿದೆ. ಅಮೆರಿಕ, ಚೀನಾ ಹಾಗೂ ರಷ್ಯಾ ಮಾತ್ರ ಇಂತಹ ವ್ಯವಸ್ಥೆ ಹೊಂದಿದೆ.

'ಕರ್ನೂಲ್‌ನಲ್ಲಿರುವ ಹೈ ಎನರ್ಜಿ ಸಿಸ್ಟಂ ಆ್ಯಂಡ್ ಸೈನ್ಸಸ್ ಸೆಂಟರ್ (ಚೆಸ್–ಡಿಆರ್‌ಡಿಒ) ವಾಹನಕ್ಕೆ ಅಳವಡಿಸಿದ ಲೇಸರ್ ಆಧರಿತ ಎಂಕೆ–2ಎ ಶಸ್ತ್ರಾಸ್ತ್ರವನ್ನು ಯಶಸ್ವಿಯಾಗಿ ಪರೀಕ್ಷಿಸಿತು' ಎಂದು ಡಿಆರ್‌ಡಿಒ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದೆ.

'ಕಣ್ಗಾವಲು ಸೆನ್ಸರ್‌ನ ಮೂಲಕ ಮಾನವರಹಿತ ವಿಮಾನ, ಡ್ರೋನ್‌ಗಳನ್ನು ಗುರುತಿಸಿ ಯಶಸ್ವಿಯಾಗಿ ಹೊಡೆದುರುಳಿಸಿತು. ಆ ಮೂಲಕ ಹೆಚ್ಚಿನ ಸಾಮರ್ಥ್ಯ ಹೊಂದಿದ ಲೇಸರ್ ಶಸ್ತ್ರಾಸ್ತ್ರಗಳ ವ್ಯವಸ್ಥೆ ಹೊಂದಿದ ರಾಷ್ಟ್ರಗಳ ಪಟ್ಟಿಗೆ ಸೇರ್ಪಡೆಯಾಯಿತು' ಎಂದು ತಿಳಿಸಿದೆ.

ವಿಶೇಷತೆ: 30 ಕಿಲೋ ವಾಟ್ ಲೇಸರ್ ಶಕ್ತಿ ಬಳಸಿಕೊಂಡು, ಈ ಆಯುಧ ಕೆಲಸ ಮಾಡುತ್ತದೆ. ಐದು ಕಿ.ಮೀ ವ್ಯಾಪ್ತಿ ಹೊಂದಿದ್ದು, ಇಷ್ಟು ದೂರದಲ್ಲಿ ಹಾರಾಟ ನಡೆಸುವ ಹೆಲಿಕಾಪ್ಟರ್, ಯುಎವಿ, ಡ್ರೋನ್‌ಗಳನ್ನು ನಿಖರವಾಗಿ ಗುರುತಿಸಿ ಹೊಡೆದುರುಳಿಸಲಿದೆ. ಇದನ್ನು ವಾಹನಗಳು ಮಾತ್ರವಲ್ಲದೇ, ಹಡಗುಗಳ ಮೇಲೂ ನಿಯೋಜಿಸಿ, ಶತ್ರುಗಳ ಯುಎವಿ ಮೇಲೂ ದಾಳಿ ನಡೆಸಬಹುದು. ಭಾರತೀಯ ವಾಯುಸೇನೆಯು ತಮ್ಮ ವಿಮಾನಗಳಲ್ಲಿ ಇಂತಹ ಸೌಲಭ್ಯಗಳನ್ನು ಅಳವಡಿಸಲು ಈಗಾಗಲೇ ಕಾರ್ಯೋನ್ಮುಖವಾಗಿದೆ.

ಆಂಧ್ರ ಪ್ರದೇಶದ ಕರ್ನೂಲ್‌ನಲ್ಲಿ ರಕ್ಷಣಾ ಹಾಗೂ ಅಭಿವೃದ್ಧಿ ಸಂಸ್ಥೆಯು (ಡಿಆರ್‌ಡಿಒ) ಅಭಿವೃದ್ಧಿಪಡಿಸಿದ ಲೇಸರ್ ಆಧರಿತ ಶಸ್ತ್ರಾಸ್ತ್ರ ವ್ಯವಸ್ಥೆ ಪರೀಕ್ಷೆ ನಡೆಸಿತು ಪಿಟಿಐ ಚಿತ್ರ

ಜಾರ್ಜಿಯಾದ ಲೆವನ್‌ಗೆ ಬ್ಲಿಟ್ಜ್ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಾರ್ಜಿಯಾದ ಗ್ರ್ಯಾಂಡ್‌ಮಾಸ್ಟರ್ ಲೆವನ್ ಪೆಂಟ್ಸುಲಾಯಿಯ ಅವರು 'ನಮ್ಮ ಬೆಂಗಳೂರು ಇಂಟರ್‌ನ್ಯಾಷನಲ್ ಗ್ರ್ಯಾಂಡ್ ಮಾಸ್ಟರ್ಸ್ ಓಪನ್ ಫಿಡೆ ರೇಟೆಡ್ ಬ್ಲಿಟ್ಜ್ ಚೆಸ್ ಟೂರ್ನಿ'ಯಲ್ಲಿ ಪ್ರಶಸ್ತಿ ಗೆದ್ದುಕೊಂಡರು. ಟ್ರೋಫಿ ಜೊತೆಗೆ ₹50,000 ನಗದು ಬಹುಮಾನ ಅವರ ಪಾಲಾಯಿತು.

ಫಿಡೆ ರೇಟೆಡ್ ಓಪನ್ ಚೆಸ್ ಟೂರ್ನಿಯ ವಿಶ್ರಾಂತಿ ದಿನವಾದ ಸೋಮವಾರ ಈ ಟೂರ್ನಿ ನಡೆಯಿತು.

ಕೋರಮಂಗಲ ಒಳಾಂಗಣ ಕ್ರೀಡಾಂಗಣದಲ್ಲಿ ಪೆಂಟ್ಸುಲಾಯಿಯ 11 ಸುತ್ತುಗಳಿಂದ 9.5 ಪಾಯಿಂಟ್ಸ್ ಸಂಗ್ರಹಿಸಿದರು. ಜಾರ್ಜಿಯಾದ ಇನ್ನೊಬ್ಬ ಜಿಎಂ ಸನಿಕ್‌ಡ್ಜೆ ತೊರ್ನಿಕೆ ಮತ್ತು ಗ್ರ್ಯಾಂಡ್‌ಮಾಸ್ಟರ್ ಪ್ರಣವ್ ಆನಂದ್ (ಬೆಂಗಳೂರು) ಅವರೂ ತಲಾ 9.5 ಪಾಯಿಂಟ್ಸ್ ಕಲೆಹಾಕಿದರೂ ಪ್ರೊಗ್ರೆಸಿವ್ ಅಂಕಗಳ ಆಧಾರದಲ್ಲಿ ಕ್ರಮವಾಗಿ ಎರಡು (₹40,000 ಬಹುಮಾನ) ಮತ್ತು ಮೂರನೇ ಸ್ಥಾನ (₹30,000 ಬಹುಮಾನ) ಪಡೆದರು.

506 ಆಟಗಾರರು ಕಣದಲ್ಲಿದ್ದರು. ಪಶ್ಚಿಮ ಬಂಗಾಳದ ಅರಣ್ಯಕ್ ಘೋಷ್ (9), ಅರ್ಮೇನಿಯಾದ ಪೆಟ್ರೋಸಿಯಾನ್ ಮಾನ್ಯುಯೆಲ್ (9), ಕರ್ನಾಟಕ ವಿಯಾನಿ ಅಂಟಾನಿಯೊ ಡಿಕುನ್ಹ (9), ಮಧ್ಯಪ್ರದೇಶದ ಅನುಜ್ ಶ್ರೀವತ್ರಿ (9), ಕೇರಳದ ಗೌತಮ್ ಕೃಷ್ಣ (9), ಐಸಿಎಫ್‌ನ ಆರ್.ಆರ್.ಲಕ್ಷ್ಮಣ್ (8.5) ಮತ್ತು ಕರ್ನಾಟಕದ ಅಪೂರ್ವ ಕಾಂಬ್ಳೆ (8.5) ಅವರು ನಾಲ್ಕರಿಂದ ಹತ್ತರವರೆಗಿನ ಸ್ಥಾನಗಳನ್ನು ಪಡೆದರು.

ಕೊನೆಯ ಸುತ್ತಿನ ಮೊದಲ ಬೋರ್ಡ್‌ನಲ್ಲಿ ತೊರ್ನಿಕೆ ಮತ್ತು ಪ್ರಣವ್ ಆನಂದ್ ನಡುವಣ ಪಂದ್ಯ ಡ್ರಾ ಆಯಿತು. ಲೆವನ್ ಅವರು ಎರಡನೇ ಬೋರ್ಡ್‌ನಲ್ಲಿ ಭಾರತದ ಜಿಎಂ ಪಾ.ಇನಿಯನ್ (8.5) ಅವರನ್ನು ಸೋಲಿಸಿದರು.

ಪೆಟ್ರೋಸಿಯಾನ್ ಅವರು ಮೂರನೇ ಬೋರ್ಡ್‌ನಲ್ಲಿ ಫಿಡೆ ಮಾಸ್ಟರ್ ರಿತ್ವಿಕ್ ಕೃಷ್ಣನ್ (8.5) ಅವರನ್ನು ಮಣಿಸಿದರು.

ಬ್ಲಿಟ್ಜ್ ಚೆಸ್ ಟೂರ್ನಿಯ ಪದಕ ವಿಜೇತರು. ಬೆಂಗಳೂರಿನ ಪ್ರಣವ್ ಆನಂದ್ (ಕಂಚು), ಜಾರ್ಜಿಯಾದ ಲೆವನ್ ಪೆಂಟ್ಸುಲಾಯಿಯ (ಚಿನ್ನ) ಮತ್ತು ಸನಿಕ್‌ಡ್ಜೆ ತೊರ್ನಿಕೆ (ಬೆಳ್ಳಿ)

ಸ್ಪೇನ್‌ಗೆ ಪ್ರಣವ್ ಆನಂದ್

ಬೆಂಗಳೂರು ಓಪನ್ ಇಂಟರ್‌ನ್ಯಾಷನಲ್ ಫಿಡೆ ರೇಟೆಡ್ ಓಪನ್ ಚೆಸ್ ಟೂರ್ನಿಯ ಮೊದಲ ಆರು ಸುತ್ತುಗಳ ನಂತರ ಮುನ್ನಡೆಯಲ್ಲಿದ್ದ ಪ್ರಣವ್ ಆನಂದ್ ಅವರು ಟೂರ್ನಿಯಿಂದ ಹಿಂದೆ ಸರಿದಿದ್ದರು. ಸೋಮವಾರ ಬ್ಲಿಟ್ಜ್ ಟೂರ್ನಿಯಲ್ಲಿ ಆಡಿದ್ದ ಅವರು ರಾತ್ರಿ ಸ್ಪೇನ್‌ಗೆ ತೆರಳಿದರು. ಅಲ್ಲಿ 16ರಂದು ಆರಂಭವಾಗುವ ಅಲೆಕಾಂಟೆ ಓಪನ್ ಮತ್ತು ನಂತರ ನಡೆಯುವ ಮೆನೋರ್ಕಾ ಓಪನ್ ಟೂರ್ನಿಯಲ್ಲಿ ಅವರು ಆಡಲಿದ್ದಾರೆ ಎಂದು ಅವರ ತಂದೆ ಆನಂದ್ ಅನಂತನಾರಾಯಣನ್ ತಿಳಿಸಿದರು.

ರೇಸ್: ಗ್ಯಾಡ್ಸನ್‌ಗೆ ಹೇಮಂತ್ ಆಘಾತ

ಪುಣೆ (ಪಿಟಿಐ): 15 ಬಾರಿಯ ರಾಷ್ಟ್ರೀಯ ಮೋಟಾರ್ ಸೈಕಲ್ ಡ್ರ್ಯಾಗ್ ರೇಸಿಂಗ್ ಚಾಂಪಿಯನ್, ಮಂತ್ರ ರೇಸಿಂಗ್‌ನ ಹೇಮಂತ್ ಮುದ್ದಪ್ಪ ಅವರು ಇಲ್ಲಿಗೆ ಸಮೀಪದ ಆ್ಯಂಬಿ ವ್ಯಾಲಿ ಸ್ಟ್ರಿಪ್‌ನಲ್ಲಿ ನಡೆದ 'ದಿ ವ್ಯಾಲಿ ರನ್ 2025' ರೇಸ್‌ನಲ್ಲಿ 13 ಬಾರಿಯ ವಿಶ್ವ ಚಾಂಪಿಯನ್ ಅಮೆರಿಕದ ರಿಕಿ ಗ್ಯಾಡ್ಸನ್ ಅವರಿಗೆ ಆಘಾತ ನೀಡಿ ಚಾಂಪಿಯನ್ ಆದರು.


ಹೇಮಂತ್ ಮುದ್ದಪ್ಪ

ಬೆಂಗಳೂರಿನ ಅನುಭವಿ ರೇಸರ್ ಹೇಮಂತ್ ಅವರು ಭಾನುವಾರ ತಡರಾತ್ರಿ ನಡೆದ ಸೂಪರ್‌ಬೈಕ್ ವಿಭಾಗದ ಸ್ಪರ್ಧೆಯಲ್ಲಿ ಬಿಎಂಡಬ್ಲ್ಯು ಎಸ್1000 ಆರ್‌ಆರ್ ಬೈಕ್‌ನಲ್ಲಿ 9.477 ಸೆಕೆಂಡ್‌ಗಳಲ್ಲಿ ಗುರಿ ತಲುಪಿದರು. ಡ್ರ್ಯಾಗ್ ರೇಸಿಂಗ್ ತಾರೆ ರಿಕಿ ಅವರು ಜೆನ್ 3 ಹಯಾಬುಸಾ ಬೈಕ್‌ನಲ್ಲಿ (9.756 ಸೆ) ನಂತರದ ಸ್ಥಾನ ಪಡೆದರು. ಒಂದು ಸಾವಿರಕ್ಕೂ ಅಧಿಕ ರೇಸರ್‌ಗಳು ಭಾಗವಹಿಸಿದ್ದರು.

'ರೇಸ್‌ನ ದಂತಕಥೆ ರಿಕಿ ಗ್ಯಾಡ್ಸನ್ ಅವರಿಂದ ನಾವು ಕಲಿಯುವುದು ಸಾಕಷ್ಟಿದೆ. ಸ್ಪರ್ಧೆಯಲ್ಲಿ ಅವರನ್ನು ಸೋಲಿಸಿರುವುದು ನನಗೆ ಮತ್ತು ನನ್ನ ತಂಡ ಮಂತ್ರ ರೇಸಿಂಗ್‌ಗೆ ಸ್ಮರಣೀಯ ಕ್ಷಣ' ಎಂದು 35 ವರ್ಷ ವಯಸ್ಸಿನ ಹೇಮಂತ್ ಮುದ್ದಪ್ಪ ಪ್ರತಿಕ್ರಿಯಿಸಿದ್ದಾರೆ.

ಆರ್ಚರಿ ವಿಶ್ವಕಪ್: ಭಾರತಕ್ಕೆ 4 ಪದಕ

ಆಬರ್ನ್‌ಡೇಲ್ (ಅಮೆರಿಕ) (ಪಿಟಿಐ): ಭಾರತದ ಬಿಲ್ಗಾರರು ಇಲ್ಲಿ ನಡೆದ ಆರ್ಚರಿ ವಿಶ್ವಕಪ್ ಸ್ಟೇಜ್ 1ರಲ್ಲಿ ನಾಲ್ಕು ಪದಕಗಳೊಂದಿಗೆ ಅಭಿಯಾನವನ್ನು ಮುಗಿಸಿದರು.

ಸ್ಪರ್ಧೆಯ ಕೊನೆಯ ದಿನವಾದ ಭಾನುವಾರ ಭಾರತ ಪುರುಷರ ರಿಕರ್ವ್ ತಂಡವು ಬೆಳ್ಳಿ ಪದಕ ಗೆದ್ದರೆ, ಉದಯೋನ್ಮುಖ ಬಿಲ್ಗಾರ ಧೀರಜ್ ಬೊಮ್ಮದೇವರ ಅವರು ವೈಯಕ್ತಿಕ ರಿಕರ್ವ್ ವಿಭಾಗದಲ್ಲಿ ಕಂಚಿನ ಪದಕಕ್ಕೆ ಕೊರಳೊಡ್ಡಿದರು.

ತರುಣದೀಪ್ ರೈ, ಧೀರಜ್ ಮತ್ತು ಅತನು ದಾಸ್ ಅವರನ್ನು ಒಳಗೊಂಡ ತಂಡವು ಫೈನಲ್ ಹಣಾಹಣಿಯಲ್ಲಿ 1–5ರಿಂದ ಚೀನಾದ ತಂಡಕ್ಕೆ ಮಣಿದು ಬೆಳ್ಳಿ ಪದಕ ಜಯಿಸಿತು.

ಕಂಚಿನ ಪದಕದ ಸ್ಪರ್ಧೆಯಲ್ಲಿ ಆರಂಭಿಕ ಹಿನ್ನಡೆಯಿಂದ (2–4) ಚೇತರಿಸಿಕೊಂಡ 23 ವರ್ಷ ವಯಸ್ಸಿನ ಧೀರಜ್ 6–4ರಿಂದ ಸ್ಪೇನ್‌ನ ಆಂಡ್ರೆಸ್ ಟೆಮಿನೊ ಮೆಡಿಯೆಲ್ ಅವರನ್ನು ಸೋಲಿಸಿದರು.

ಬೆಳ್ಳಿ ಪದಕ ಗೆದ್ದ ಭಾರತದ ಪುರುಷರ ರಿಕರ್ವ್ ತಂಡದ ತರುಣದೀಪ್ ರೈ, ಧೀರಜ್ ಬೊಮ್ಮದೇವರ ಮತ್ತು ಅತನು ದಾಸ್

ಭಾರತದ ಅಭಿಷೇಕ್ ವರ್ಮಾ ಕೂದಲೆಳೆಯ ಅಂತರದಲ್ಲಿ ಪದಕ ಗೆಲ್ಲುವ ಅವಕಾಶದಿಂದ ವಂಚಿತರಾದರು. ಪುರುಷರ ಕಾಂಪೌಂಡ್ ವೈಯಕ್ತಿಕ ವಿಭಾಗದಲ್ಲಿ ನಾಲ್ಕನೇ ಸ್ಥಾನ ಪಡೆದರು.

ಇದಕ್ಕೂ ಮುನ್ನ ಜ್ಯೋತಿ ಸುರೇಖಾ ವೆಣ್ಣಂ ಮತ್ತು ರಿಷಭ್ ಯಾದವ್ ಅವರನ್ನೊಳಗೊಂಡ ಭಾರತದ ಕಾಂಪೌಂಡ್ ಮಿಶ್ರ ಆರ್ಚರಿ ತಂಡ ಚಿನ್ನದ ಸಾಧನೆ ಮಾಡಿತ್ತು. ಪುರುಷರ ಕಾಂಪೌಂಡ್ ತಂಡವು ಕಂಚಿನ ಪದಕ ಗೆದ್ದಿತ್ತು.

ಕಬಡ್ಡಿ: ರೈಸಿಂಗ್ ಬುಲ್ಸ್‌ಗೆ ಪ್ರಶಸ್ತಿ

ಮಡಿಕೇರಿ: ಬೆಂಗಳೂರು ರೈಸಿಂಗ್ ಬುಲ್ಸ್ ತಂಡದವರು ಇಲ್ಲಿನ ಜಿಎಂಪಿ ಶಾಲಾ ಮೈದಾನದಲ್ಲಿ ಸೋಮವಾರ ನಡೆದ ಒಕ್ಕಲಿಗರ ಕಪ್ ಕಬಡ್ಡಿ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದರು.

ಸೋಮವಾರಪೇಟೆ ಒಕ್ಕಲಿಗರ ಯುವ ವೇದಿಕೆ, ರಾಜ್ಯ ಮತ್ತು ಜಿಲ್ಲಾ ಅಮೆಚೂರ್ ಕಬಡ್ಡಿ ಅಸೋಸಿಯೇಷನ್ ಆಯೋಜಿಸಿದ್ದ ರಾಷ್ಟ್ರಮಟ್ಟದ 'ಎ' ಗ್ರೇಡ್ ಹೊನಲು– ಬೆಳಕಿನ ಟೂರ್ನಿಯ ಫೈನಲ್‌ನಲ್ಲಿ ಬೆಂಗಳೂರು ತಂಡವು 28–26 ಕಾಸರಗೋಡಿನ ಜೆ.ಕೆ. ಅಕಾಡೆಮಿ ತಂಡವನ್ನು ಮಣಿಸಿ ಟ್ರೋಫಿಯೊಂದಿಗೆ ₹2 ಲಕ್ಷ ನಗದು ಬಹುಮಾನ ಪಡೆಯಿತು.

ರನ್ನರ್ ಅಪ್ ತಂಡಕ್ಕೆ ₹1 ಲಕ್ಷ ನಗದು ಬಹುಮಾನ ನೀಡಲಾಯಿತು. ಬ್ಯಾಂಕ್ ಆಫ್ ಬರೋಡ ತೃತೀಯ ಮತ್ತು ಬಿಪಿಸಿಎಲ್ ತಂಡ 4ನೇ ಸ್ಥಾನ ಪಡೆದು ತಲಾ ₹50 ಸಾವಿರ ನಗದು ಪಡೆದುಕೊಂಡವು.

ಸೀನಿಯರ್ ಮಹಿಳಾ ಹಾಕಿ ತಂಡದಲ್ಲಿ 5 ಹೊಸಮುಖ

ನವದೆಹಲಿ (ಪಿಟಿಐ): ಇದೇ ತಿಂಗಳ 26 ರಿಂದ ಮೇ 4ರವರೆಗೆ ಆಸ್ಟ್ರೇಲಿಯಾ ಪ್ರವಾಸ ಕೈಗೊಳ್ಳಲಿರುವ ಭಾರತ ಸೀನಿಯರ್ ಮಹಿಳಾ ಹಾಕಿ ತಂಡದಲ್ಲಿ ಐದು ಮಂದಿ ಹೊಸಬರಿಗೆ ಅವಕಾಶ ನೀಡಲಾಗಿದೆ.

ಈ ಪ್ರವಾಸದಲ್ಲಿ ಭಾರತ ತಂಡ ಐದು ಪಂದ್ಯಗಳನ್ನು ಆಡಲಿದೆ. ಪ್ರವಾಸಕ್ಕೆ ತೆರಳುವ 26 ಆಟಗಾರ್ತಿಯರ ತಂಡವನ್ನು ಹಾಕಿ ಇಂಡಿಯಾ ಸೋಮವಾರ ಪ್ರಕಟಿಸಿದೆ. ಮೊದಲ ಎರಡು ಪಂದ್ಯಗಳಲ್ಲಿ ಭಾರತದ ವನಿತೆಯರು ಆಸ್ಟ್ರೇಲಿಯಾ 'ಎ' ತಂಡವನ್ನು ಎದುರಿಸಲಿದ್ದಾರೆ. ನಂತರ ಮೂರು ಪಂದ್ಯಗಳಲ್ಲಿ ಸೀನಿಯರ್ ತಂಡವನ್ನು ಎದುರಿಸಲಿದೆ. ಎಲ್ಲ ಪಂದ್ಯಗಳು ಪರ್ತ್ ಹಾಕಿ ಕ್ರೀಡಾಂಗಣದಲ್ಲಿ ನಡೆಯಲಿವೆ.

ಜೂನ್‌ನಲ್ಲಿ ನಡೆಯಲಿರುವ ಮುಂದಿನ ಸಾಲಿನ ಎಫ್‌ಐಎಚ್ ಪ್ರೊ ಲೀಗ್‌ನ ಯುರೋಪಿಯನ್ ಲೆಗ್‌ಗೆ ಸಿದ್ಧತೆ ನಡೆಸುವ ದೃಷ್ಟಿಯಿಂದ ಈ ಪ್ರವಾಸ ತಂಡಕ್ಕೆ ಮಹತ್ವದ್ದಾಗಿದೆ.

ಜ್ಯೋತಿ ಸಿಂಗ್, ಸುಜಾತಾ ಕುಜೂರ್, ಅಜ್ಮಿನಾ ಕುಜೂರ್, ಪೂಜಾ ಯಾದವ್ ಮತ್ತು ಮಹಿಮಾ ಟೆಟೆ ಅವರು ತಂಡಕ್ಕೆ ಪದಾರ್ಪಣೆ ಮಾಡುತ್ತಿದ್ದಾರೆ. ಸಲೀಮಾ ಟೆಟೆ ತಂಡದ ನಾಯಕಿಯಾಗಿ ಮುಂದುವರಿದಿದ್ದಾರೆ.

ನವನೀತ್ ಕೌರ್ ಉಪನಾಯಕಿಯಾಗಿದ್ದಾರೆ. ತಂಡ ಅನುಭವಿಗಳ ಮತ್ತು ಹೊಸ ಪ್ರತಿಭೆಗಳ ಸಮ್ಮಿಶ್ರಣವಾಗಿದೆ.

ಇಂಡಿಯನ್ ಪ್ರೀಮಿಯರ್ ಲೀಗ್ 2025

5 ಸೋಲುಗಳ ನಂತರ ಗೆಲುವಿನ ಹಳಿಗೆ ಸಿಎಸ್‌ಕೆ • ಕೊನೆಗೂ ಲಯಕ್ಕೆ ಮರಳಿದ ಪಂತ್

ಧೋನಿ, ದುಬೆ ಮಿಂಚು; ಚೆನ್ನೈಗೆ ಜಯ

ಶಿವಂ ದುಬೆ ಮತ್ತು ಮಹೇಂದ್ರಸಿಂಗ್ ಧೋನಿ — ಪಿಟಿಐ ಚಿತ್ರ

ಲಖನೌ (ಪಿಟಿಐ): ನಾಯಕ ಮಹೇಂದ್ರ ಸಿಂಗ್ ಧೋನಿ ಅವರು ದೀರ್ಘ ಕಾಲದ ನಂತರ ಫಿನಿಷರ್ ಪಾತ್ರವನ್ನು ಪರಿಪೂರ್ಣವಾಗಿ ನಿರ್ವಹಿಸಿದರು. ಶಿವಂ ದುಬೆ (43, 37ಎ) ಜೊತೆ ಮುರಿಯದ ಆರನೇ ವಿಕೆಟ್‌ಗೆ ಉಪಯುಕ್ತ ಜೊತೆಯಾಟವಾಡಿ ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು ಗೆಲುವಿನ ಹಳಿಗೆ ಮರಳಿಸಿದರು.

ಆತಿಥೇಯ ಲಖನೌ ಸೂಪರ್ ಜೈಂಟ್ಸ್ ತಂಡದ ವಿರುದ್ಧ ಸೋಮವಾರ ನಡೆದ ಈ ಐಪಿಎಲ್ ಪಂದ್ಯವನ್ನು ಚೆನ್ನೈ ಸೂಪರ್ ಕಿಂಗ್ಸ್ ಐದು ವಿಕೆಟ್‌ಗಳಿಂದ ಗೆದ್ದುಕೊಂಡಿತು. ಈ ಬಾರಿಯ ಲೀಗ್‌ನಲ್ಲಿ ನಾಯಕ ರಿಷಭ್ ಪಂತ್ (63, 49ಎ, 4x4, 6x4) ಗಳಿಸಿದ ಮೊದಲ ಅರ್ಧ ಶತಕದ ನೆರವಿನಿಂದ ಲಖನೌ ತಂಡ 7 ವಿಕೆಟ್‌ಗೆ 166 ರನ್‌ಗಳ ಗೌರವಾರ್ಹ ಮೊತ್ತ ಗಳಿಸಿತ್ತು. ಇದಕ್ಕೆ ಉತ್ತರವಾಗಿ ಧೋನಿ ಬಳಗ 3 ಎಸೆತಗಳಿರುವಂತೆ 5 ವಿಕೆಟ್‌ಗೆ 168 ರನ್ ಹೊಡೆಯಿತು.

ಆವೇಶ್ ಖಾನ್ ಮಾಡಿದ ಕೊನೆಯ ಓವರಿನ ಮೂರನೇ ಎಸೆತವನ್ನು ದುಬೆ ಅವರು ಕವರ್ಸ್ ಬೌಂಡರಿಗೆ ಅಟ್ಟಿ ಗೆಲುವನ್ನು ಪೂರೈಸಿದರು. ಕೀಪಿಂಗ್‌ನಲ್ಲೂ ಮಿಂಚಿದ್ದ ಧೋನಿ 11 ಎಸೆತಗಳಲ್ಲಿ ಅಜೇಯ 26 ರನ್ (4x4, 6x1) ಬಾರಿಸಿದರು. ದುಬೆ ಜೊತೆ ಮುರಿಯದ ಆರನೇ ವಿಕೆಟ್‌ಗೆ ಹರಿದುಬಂದ 57 ರನ್‌ಗಳು ತಂಡವನ್ನು ದಡ ಸೇರಿಸಿದವು.

ಸ್ಪಿನ್ನರ್‌ಗಳಾದ ರವಿ ಬಿಷ್ಣೋಯಿ (3–0–18–2) ಮತ್ತು ದಿಗ್ವೇಶ್ ರಾಠಿ (4–0–23–1) ಅವರು ಒಂದು ಹಂತದಲ್ಲಿ ಚೆನ್ನೈ ತಂಡವನ್ನು 15 ಓವರುಗಳ ಬಳಿಕ 5 ವಿಕೆಟ್‌ಗೆ 111 ರನ್‌ಗಳಿಗೆ ನಿಯಂತ್ರಿಸಿದ್ದರು. ಆದರೆ ದುಬೆ ಜೊತೆಗೂಡಿದ ಧೋನಿ ಈ ಬಾರಿ ನಿರಾಸೆಗೊಳಿಸಲಿಲ್ಲ.

ಪಂತ್ ಅರ್ಧಶತಕ: ಇದಕ್ಕೆ ಮೊದಲು, ಪಂತ್ ಹಾಲಿ ಐಪಿಎಲ್‌ನಲ್ಲಿ ಲಯ ಕಂಡುಕೊಂಡು ಅರ್ಧ ಶತಕ ದಾಖಲಿಸಿದರು. ಟಾಸ್ ಗೆದ್ದು ಬೌಲಿಂಗ್ ಮಾಡಲು ತೀರ್ಮಾನಿಸಿದ ನಂತರ ಚೆನ್ನೈ ತಂಡಕ್ಕೆ 'ಕನಸಿನ ಆರಂಭ' ದೊರೆಯಿತು. ಎಡಗೈ ವೇಗಿ ಖಲೀಲ್ ಅಹ್ಮದ್ (38ಕ್ಕೆ1) ಮೊದಲ ಓವರಿನಲ್ಲೇ ಮರ್ಕರಂ (6) ಅವರ ವಿಕೆಟ್ ಪಡೆದರು. ನೂರನೇ ಪಂದ್ಯ ಆಡುತ್ತಿರುವ ರಾಹುಲ್ ತ್ರಿಪಾಠಿ ಹಿಂದಕ್ಕೆ ಓಡುತ್ತಲೇ ಮಿಡ್‌ಆಫ್‌ನಲ್ಲಿ ಅಮೋಘ ರೀತಿಯಲ್ಲಿ ಪಡೆದ ಕ್ಯಾಚ್ ಇದಕ್ಕೆ ಕಾರಣವಾಯಿತು.

ಎರಡು ಓವರುಗಳ ಬಳಿಕ ವೇಗಿ ಅನ್ಶುಲ್ ಕಾಂಬೋಜ್ ಅವರು ಅಮೋಘ ಲಯದಲ್ಲಿರುವ ನಿಕೋಲಸ್ ಪೂರನ್ (8, 9ಎ) ಅವರನ್ನು ಎಲ್‌ಬಿಡಬ್ಲ್ಯು ಬಲೆಗೆ ಕೆಡವಿದರು. ಕಳೆದ ಪಂದ್ಯ ತಪ್ಪಿಸಿಕೊಂಡಿದ್ದ ಮಿಚೆಲ್ ಮಾರ್ಷ್ ಮತ್ತು ಪಂತ್ ಮೂರನೇ ವಿಕೆಟ್‌ಗೆ 50 ರನ್ ಸೇರಿಸಿ ಕುಸಿತ ತಪ್ಪಿಸಿದರು.

ಮಾರ್ಷ್ ವಿಕೆಟ್ ಕಳೆದುಕೊಂಡ ನಂತರ ಆಡಲಿಳಿದ ಆಯುಷ್ ಬಡೋನಿ (22) ರನ್ ವೇಗ ಹೆಚ್ಚಿಸುವ ಭರದಲ್ಲಿ ಧೋನಿ ಅವರಿಂದ ಮಿಂಚಿನ ಸ್ಟಂಪಿಂಗ್‌ಗೆ ಒಳಗಾದರು. ಇದು ಅವರ 46ನೇ ಸ್ಟಂಪಿಂಗ್. 155 ಕ್ಯಾಚುಗಳನ್ನು ಪಡೆದಿದ್ದ ಅವರು ಐಪಿಎಲ್‌ನಲ್ಲಿ 200 ಕ್ಯಾಚ್/ಸ್ಟಂಪಿಂಗ್ ಮೈಲಿಗಲ್ಲು ತಲುಪಿದ ಮೊದಲ ವಿಕೆಟ್ ಕೀಪರ್ ಎನಿಸಿದರು.

ಪಂತ್ ಅವರು ಎದುರಾಳಿ ಸ್ಪಿನ್ನರ್ ನೂರ್ ಅಹ್ಮದ್ (4–0–13–0) ಎದುರು ಪರದಾಡಿದರೂ, ಪಥಿರಾಣ ಮತ್ತು ಇತರ ವೇಗಿಗಳನ್ನು ವಿಶ್ವಾಸದಿಂದ ಎದುರಿಸಿದರು.

ಸಂಕ್ಷಿಪ್ತ ಸ್ಕೋರು: ಲಖನೌ ಸೂಪರ್ ಜೈಂಟ್ಸ್: 20 ಓವರುಗಳಲ್ಲಿ 7ಕ್ಕೆ 166 (ಮಿಚೆಲ್ ಮಾರ್ಷ್ 30, ರಿಷಭ್ ಪಂತ್ 63, ಆಯುಷ್ ಬಡೋನಿ 22, ಅಬ್ದುಲ್ ಸಮದ್ 20; ಖಲೀಲ್ ಅಹ್ಮದ್ 38ಕ್ಕೆ1, ರವೀಂದ್ರ ಜಡೇಜ 24ಕ್ಕೆ2, ಮಥೀಶ ಪಥಿರಾಣ 45ಕ್ಕೆ2); **ಚೆನ್ನೈ ಸೂಪರ್ ಕಿಂಗ್ಸ್:** 19.3 ಓವರುಗಳಲ್ಲಿ 5 ಕ್ಕೆ 168 (ಶೇಖ್ ರಷೀದ್ 27, ರಚಿನ್ ರವೀಂದ್ರ 37, ಶಿವಂ ದುಬೆ ಔಟಾಗದೇ 43, ಎಂ.ಎಸ್. ಧೋನಿ ಔಟಾಗದೇ 26; ದಿಗ್ವೇಶ್ ರಾಠಿ 23ಕ್ಕೆ1, ಆವೇಶ್ ಖಾನ್ 32ಕ್ಕೆ1, ರವಿ ಬಿಷ್ಣೋಯಿ 18ಕ್ಕೆ2, ಏಡನ್ ಮರ್ಕರಂ 25ಕ್ಕೆ1); **ಪಂದ್ಯದ ಆಟಗಾರ:** ಮಹೇಂದ್ರ ಸಿಂಗ್ ಧೋನಿ.

ಪಂಜಾಬ್‌ಗೆ ಇಂದು ಕೆಕೆಆರ್ ಸವಾಲು

ಮುಲ್ಲನಪುರ (ಪಿಟಿಐ): ವಾರಾಂತ್ಯ ನಡೆದ ಪಂದ್ಯದಲ್ಲಿ ಅಭಿಷೇಕ್ ಶರ್ಮಾ ಸುಂಟರಗಾಳಿಯ ಇನಿಂಗ್ಸ್‌ಗೆ ಸುಸ್ತು ಹೊಡೆದಿರುವ ಪಂಜಾಬ್ ಕಿಂಗ್ಸ್ ತಂಡ, ಇದೀಗ ಮಂಗಳವಾರ ನಡೆಯಲಿರುವ ಪಂದ್ಯದಲ್ಲಿ ಕೋಲ್ಕತ್ತ ನೈಟ್ ರೈಡರ್ಸ್ ಸವಾಲನ್ನು ಎದುರಿಸಬೇಕಾಗಿದೆ.

ಹೈದರಾಬಾದಿನಲ್ಲಿ ನಡೆದ ಹೈ ಸ್ಕೋರಿಂಗ್ ಪಂದ್ಯದಲ್ಲಿ ಅಭಿಷೇಕ್ ಕೇವಲ 55 ಎಸೆತಗಳಲ್ಲಿ 141 ರನ್ ಸಿಡಿಸಿದ್ದರು. 245ರಷ್ಟು ದೊಡ್ಡ ಮೊತ್ತ ಪೇರಿಸಿದ ಬಳಿಕವೂ ತಂಡವೊಂದು ಸೋಲುವ ಸಾಧ್ಯತೆ ಕಡಿಮೆ. ಆದರೆ, ಉಪ್ಪಳದ ಸಪಾಟು ಪಿಚ್‌ನಲ್ಲಿ ಬೌಲರ್‌ಗಳದ್ದೇನೂ ನಡೆಯಲಿಲ್ಲ. ಇದೇ ಪಂದ್ಯದಲ್ಲಿ ಪಂಜಾಬ್ ತಂಡದ ನಾಯಕ ಶ್ರೇಯಸ್ ಅಯ್ಯರ್ ಬರೇ 36 ಎಸೆತಗಳಲ್ಲಿ 82 ರನ್ ಸೂರೆ ಮಾಡಿದ್ದರು.

ಮುಲ್ಲನಪುರದ ಪಿಚ್ ಸಹ ಬ್ಯಾಟರ್‌ಗಳಿಗೆ ನೆರವಾಗುವಂತಿದೆ. ಈ ಹಿಂದೆ ಇಲ್ಲಿ ನಡೆದ ಎರಡು ಪಂದ್ಯಗಳಲ್ಲಿ ಮೊದಲು ಆಡಿದ ತಂಡಗಳು 200ಕ್ಕಿಂತ ಹೆಚ್ಚಿನ ಮೊತ್ತ ಗಳಿಸುವಲ್ಲಿ ಯಶಸ್ವಿ ಆಗಿದ್ದವು.

ಸದ್ಯ ಪಂಜಾಬ್ ಬೌಲರ್‌ಗಳ ವಿಶ್ವಾಸ ಕದಡಿದೆ. ಪ್ರಮುಖ ಸ್ಪಿನ್ನರ್‌ಗಳಾದ ಯಜುವೇಂದ್ರ ಚಾಹಲ್ ಮತ್ತು ಗ್ಲೆನ್ಸ್ ಮ್ಯಾಕ್ಸ್‌ವೆಲ್ ಅವರಿಬ್ಬರು ಮಾಡಿದ ಒಟ್ಟು ಏಳು ಓವರುಗಳಲ್ಲಿ 96 ರನ್‌ಗಳು ಹರಿದುಬಂದಿದ್ದವು. ಚಾಹಲ್ ಈ ಬಾರಿಯ 5 ಪಂದ್ಯಗಳಲ್ಲಿ ಓವರಿಗೆ ಸರಾಸರಿ 11ರಂತೆ ರನ್ ಕೊಟ್ಟಿದ್ದಾರೆ.

ಇನ್ನೊಂದು ರೀತಿ ಇದು ತಂಡದ ಉಭಯಸಂಕಟಕ್ಕೂ ಕಾರಣವಾಗಿದೆ. ಇಲ್ಲಿ ಮೊದಲು ಆಡಲು ಕಳಿಸಲ್ಪಟ್ಟರೆ 220ರ ಆಸುಪಾಸಿನ ಮೊತ್ತ ಗಳಿಸಿದರೂ ಅದು ಸುರಕ್ಷಿತವೆನಿಸದು. ಸುನಿಲ್ ನಾರಾಯಣ್, ವೆಂಕಟೇಶ್ ಅಯ್ಯರ್ ಅಂಥ ಬೀಸಾಟವಾಡುವ ಆಟಗಾರರು ಕೆಕೆಆರ್ ತಂಡದಲ್ಲಿದ್ದಾರೆ.

ಇಲ್ಲಿ ಚೆಂಡಿಗೆ ಪುಟಿತ, ತಿರುವು ನೀಡುವ ಪಿಚ್ ಸಿದ್ಧಪಡಿಸಿದರೆ ಅದೂ ತಿರುಗುಬಾಣವಾಗುವ ಸಾಧ್ಯತೆಯಿದೆ. ಕೆಕೆಆರ್ ತಂಡದಲ್ಲಿ ಇದರ ಲಾಭ ಪಡೆಯಲು ವರುಣ್ ಚಕ್ರವರ್ತಿ, ಸುನಿಲ್ ನಾರಾಯಣ ಅಂಥ ಬೌಲರ್‌ಗಳಿದ್ದಾರೆ. ಎರಡೂ ರೀತಿಯ ಪಿಚ್‌ಗಳಿಗೆ ಒಗ್ಗಿಕೊಳ್ಳುವ ಆಟಗಾರರಿದ್ದಾರೆ. ಚೆನ್ನೈನಲ್ಲಿ ಸಿಎಸ್‌ಕೆ ಮೇಲೆ ಗೆದ್ದ ನಂತರ ಕೋಲ್ಕತ್ತ ತಂಡದ ವಿಶ್ವಾಸವೂ ವೃದ್ಧಿಸಿದೆ.

ಪಂಜಾಬ್ ಪರ ಮೂರು ಅರ್ಧ ಶತಕ ಗಳಿಸಿರುವ ಶ್ರೇಯಸ್ ಅಯ್ಯರ್ (250) ಉತ್ತಮ ಲಯದಲ್ಲಿದ್ದಾರೆ. ಪ್ರಿಯಾಂಶ್ ಆರ್ಯ (194) ಈ ಋತುವಿನ ಶೋಧ ಎನಿಸಿದ್ದಾರೆ. ನೇಹಲ್ ವಧೇರಾ (141), ಪ್ರಭ ಸಿಮ್ರನ್ ಸಿಂಗ್ (133) ಕೂಡ ಬಿರುಸಿನ ಆಟವಾಡುವವರು. ಆದರೆ ಗ್ಲೆನ್ ಮ್ಯಾಕ್ಸ್‌ವೆಲ್ (34) ಮತ್ತು ಮಾರ್ಕಸ್ ಸ್ಟೊಯಿನಿಸ್ (59) ಇನ್ನೂ ಲಯ ಕಂಡುಕೊಂಡಿಲ್ಲ.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊ ಹಾಟ್‌ಸ್ಟಾರ್

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಜಯ	ಸೋಲು	ಅಂಕ	ಎನ್‌ಆರ್‌ಆರ್
ಗುಜರಾತ್ ಟೈಟನ್ಸ್	6	4	2	8	1.081
ಡೆಲ್ಲಿ ಕ್ಯಾಪಿಟಲ್ಸ್	5	4	1	8	0.889
ರಾಯಲ್ ಚಾಲೆಂಜರ್ಸ್ ಬೆಂಗಳೂರು	6	4	2	8	0.672
ಲಖನೌ ಸೂಪರ್ ಜೈಂಟ್ಸ್	7	4	3	8	0.086
ಕೋಲ್ಕತ್ತ ನೈಟ್ ರೈಡರ್ಸ್	6	3	3	6	0.803
ಪಂಜಾಬ್ ಕಿಂಗ್ಸ್	5	3	2	6	0.065
ಮುಂಬೈ ಇಂಡಿಯನ್ಸ್	6	2	4	4	0.104
ರಾಜಸ್ಥಾನ ರಾಯಲ್ಸ್	6	2	4	4	-0.838
ಸನ್‌ರೈಸರ್ಸ್ ಹೈದರಾಬಾದ್	6	2	4	4	-1.245
ಚೆನ್ನೈ ಸೂಪರ್ ಕಿಂಗ್ಸ್	7	2	5	4	-1.276

ಆರೇಂಜ್ ಕ್ಯಾಪ್: ನಿಕೋಲಸ್ ಪೂರನ್ (ಎಲ್‌ಎಸ್‌ಜಿ) 357 ರನ್

ಪರ್ಪಲ್ ಕ್ಯಾಪ್: ನೂರ್ ಅಹಮ್ಮದ್ (ಸಿಎಸ್‌ಕೆ) 12 ವಿಕೆಟ್

ಅವಕಾಶಕ್ಕೆ ಕಾದಿದ್ದೆ: ಕರುಣ್

ಕರುಣ್ ನಾಯರ್

ನವದೆಹಲಿ (ಪಿಟಿಐ): ಕರುಣ್ ನಾಯರ್ ಎರಡು ವರ್ಷಗಳಿಂದ ಐಪಿಎಲ್‌ನಲ್ಲಿ ಅವಕಾಶ ಪಡೆದಿರಲಿಲ್ಲ. 'ಡಿಯರ್ ಕ್ರಿಕೆಟ್ ಗಿವ್ ಮಿ ಒನ್ ಮೋರ್ ಛಾನ್ಸ್' ಎಂದು ಅವರು 2022ರ ಡಿಸೆಂಬರ್‌ನಲ್ಲಿ ಟ್ವೀಟ್ ಮಾಡಿದ್ದರು ಕೂಡ. ಈ ಬಾರಿ ಅವರು ತಮಗೆ ದೊರೆತ ಮೊದಲ ಅವಕಾಶವನ್ನು ಎರಡೂ ಕೈಗಳಲ್ಲಿ ಬಾಚಿಕೊಂಡಿದ್ದಾರೆ.

ಮುಂಬೈ ಇಂಡಿಯನ್ಸ್ ವಿರುದ್ಧ ಅಮೋಘ ಆಟವಾಡಿ 40 ಎಸೆತಗಳಲ್ಲಿ 89 ರನ್‌ಗಳ ಮಿಂಚಿನ ಇನಿಂಗ್ಸ್ ಆಡಿದ್ದಾರೆ. ಅಂತಿಮವಾಗಿ ಅವರ ಸೊಗಸಾದ ಇನಿಂಗ್ಸ್ ಹೊರತಾಗಿಯೂ ಡೆಲ್ಲಿ ಕ್ಯಾಪಿಟಲ್ಸ್ ಪಂದ್ಯ ಗೆಲ್ಲಲಾಗಲಿಲ್ಲ. 206 ರನ್‌ಗಳ ಗುರಿ ಬೆಂಬತ್ತಿದ ಅಕ್ಷರ್ ಪಟೇಲ್ ಬಳಗ 193 ರನ್‌ಗಳಿಗೆ ಆಲೌಟ್ ಆಯಿತು.

ಬೂಮ್ರಾ ಅವರಿಗೆ ಒಂದೇ ಓವರಿನಲ್ಲಿ ಎರಡು ಸಿಕ್ಸರ್ ಬಾರಿಸಿದವರು ತೀರಾ ಕಡಿಮೆ. ಆದರೆ ಕರುಣ್ ಅಂಥ ಪರಾಕ್ರಮ ತೋರಿದರು. ಅವರು ಆಡಿದ ರೀತಿ, ಮಾಡಿಕೊಂಡಿದ್ದ ಸಿದ್ಧತೆ, ತೋರಿದ ವಿಶ್ವಾಸ ಮೆಚ್ಚುಗೆ ಗಳಿಸಿತು. ಹಾಲಿ ವಿದರ್ಭ ತಂಡದಲ್ಲಿರುವ ಕರ್ನಾಟಕ ತಂಡದ ಮಾಜಿ ನಾಯಕ ಕರುಣ್, ಒಂದೇ ಋತುವಿನಲ್ಲಿ ವಿವಿಧ ಮಾದರಿಗಳಲ್ಲಿ 1870 ರನ್ ಕಲೆ ಹಾಕಿದ್ದರು.

'ಪ್ರಾಮಾಣಿಕವಾಗಿ ಹೇಳುವುದಾದರೆ ಉತ್ತಮವಾಗಿ ಆಡುವ ವಿಶ್ವಾಸ ನನ್ನಲ್ಲಿತ್ತು. ನಾನು ಈ ಮೊದಲೇ ಐಪಿಎಲ್ ಆಡಿದ್ದರಿಂದ ಅಲ್ಲಿನ ಪರಿಸ್ಥಿತಿ ನನಗೆ ಹೊಸದಾಗಿರಲಿಲ್ಲ' ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

'ಕಣಕ್ಕಿಳಿದು ಕೆಲವು ಎಸೆತಗಳನ್ನು ಎದುರಿಸಿ ಪಂದ್ಯದ ವೇಗಕ್ಕೆ, ಅಲ್ಲಿನ ವಾತಾವರಣಕ್ಕೆ ಹೊಂದಿಕೊಳ್ಳುವುದಷ್ಟೇ ಮುಖ್ಯವಾಗಿತ್ತು' ಎಂದು ನಾಯರ್ ಹೇಳಿದರು. ಕೊನೆಯ ಬಾರಿ ಐಪಿಎಲ್‌ನಲ್ಲಿದ್ದಾಗ ಅವರು ರಾಜಸ್ಥಾನ ತಂಡಕ್ಕೆ ಆಡಿದ್ದರು. ಪವರ್ ಪ್ಲೇಯಲ್ಲಿ ಕರುಣ್ ಸಾಂಪ್ರದಾಯಕ ಹೊಡೆತ ಆಡಿದರು. ನಂತರ ಸುಧಾರಣೆ ತಂದು ಕೊಂಡರು.

'ನಾನು ಮನಸ್ಸಿನಲ್ಲೇ ಹೇಳಿಕೊಂಡೆ. ಸಮಯ ತೆಗೆದುಕೊ. ಸಹಜ ಹೊಡೆತಗಳಿಗೆ ಹೋಗು. ನಂತರ ಹೊಡೆತಗಳಲ್ಲಿ ಸುಧಾರಣೆ ತಂದುಕೊ' ಎಂದು. ಅದೃಷ್ಟವಶಾತ್ ಎಲ್ಲವೂ ಅಂದುಕೊಡ ರೀತಿ ಆಯಿತು. ಚೆನ್ನಾಗಿ ಆಡಿದ್ದರಿಂದ ಸಂಸತವಾಗಿದೆ. ತಂಡ ಗೆದ್ದರೆ ಇನ್ನೂ ಸಂತಸವಾಗುತಿತ್ತು' ಎಂದರು.

ಅವರು ತಂಡದ ಮೊದಲ ನಾಲ್ಕು ಪಂದ್ಯಗಳಲ್ಲಿ ಆಡಿರಲಿಲ್ಲ. ಇಲ್ಲಿ ಇಂಪ್ಯಾಕ್ಟ್ ಪ್ಲೇಯರ್ ಆಗಿ ಕಣಕ್ಕಿಳಿದಿದ್ದರು.

ಅಕ್ಷರ್ ಪಟೇಲ್‌ಗೆ ₹12 ಲಕ್ಷ ದಂಡ

ನವದೆಹಲಿ (ಪಿಟಿಐ): ನಿಗದಿತ ಅವಧಿಯೊಳಗೆ ಓವರ್‌ಗಳನ್ನು ಮುಗಿಸುವಲ್ಲಿ ವಿಫಲರಾದ ಡೆಲ್ಲಿ ಕ್ಯಾಪಿಟಲ್ಸ್ ತಂಡದ ನಾಯಕ ಅಕ್ಷರ್ ಪಟೇಲ್ ಅವರಿಗೆ ₹12 ಲಕ್ಷ ದಂಡ ವಿಧಿಸಲಾಗಿದೆ.

ಭಾನುವಾರ ಇಲ್ಲಿನ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ನಡೆದ ಐಪಿಎಲ್ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ತಂಡವು 12 ರನ್‌ಗಳಿಂದ ಡೆಲ್ಲಿ ಕ್ಯಾಪಿಟಲ್ಸ್ ತಂಡವನ್ನು ಮಣಿಸಿತು.

ಫೀಲ್ಡ್ ಅಂಪೈರ್‌ರಿಂದ ಬ್ಯಾಟ್ ಪರಿಶೀಲನೆ

ನವದೆಹಲಿ (ಪಿಟಿಐ): ಆಟಗಾರರು ಬ್ಯಾಟ್‌ನ ಗಾತ್ರ ಬದಲಿಸಿ ನ್ಯಾಯಸಮ್ಮತವಲ್ಲದ ರೀತಿಯಲ್ಲಿ ಅನುಕೂಲ ಪಡೆಯುವುದನ್ನು ತಪ್ಪಿಸಲು, ಆನ್‌ಫೀಲ್ಡ್ ಅಂಪೈರ್‌ಗಳು ಸಂಪ್ರದಾಯ ಮುರಿದು ಹಾಲಿ ಐಪಿಎಲ್‌ನಲ್ಲಿ ಆಟಗಾರರ ಬ್ಯಾಟ್‌ಗಳನ್ನು ತಮಗೆ ಬೇಕೆನಿಸಿದಾಗ ಪರಿಶೀಲನೆ ಮಾಡಲು ಆರಂಭಿಸಿದ್ದಾರೆ.

ಇಲ್ಲಿನ ಅರುಣ್ ಜೇಟ್ಲಿ ಸ್ಟೇಡಿಯಂನಲ್ಲಿ ಶನಿವಾರ ನಡೆದ ಐಪಿಎಲ್‌ನ 29ನೇ ಪಂದ್ಯದ ವೇಳೆ ಫೀಲ್ಡ್ ಅಂಪೈರ್ ಅವರು ಮುಂಬೈ ಇಂಡಿಯನ್ಸ್ ತಂಡದ ನಾಯಕ ಹಾರ್ದಿಕ್ ಪಾಂಡ್ಯ ಅವರ ಬ್ಯಾಟ್ ಅನ್ನು ಪರಿಶೀಲಿಸಿದ್ದು ಕಂಡುಬಂತು.

ಐಪಿಎಲ್‌ನ 18ನೇ ಆವೃತ್ತಿಯಲ್ಲಿ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿಯು (ಬಿಸಿಸಿಐ) ಹಲವು ಹೊಸ ನಿಯಮಗಳನ್ನು ಜಾರಿಗೊಳಿಸಿದೆ. ಅದರಲ್ಲಿ ಬ್ಯಾಟ್ ಪರಿಶೀಲನೆ ಕೂಡ ಒಂದಾಗಿದೆ. ಫೀಲ್ಡ್ ಅಂಪೈರ್‌ಗೆ ಬ್ಯಾಟ್‌ನ ಬಗ್ಗೆ ಸಂದೇಹ ಬಂದರೆ ಮೈದಾನದಲ್ಲೇ ಪರಿಶೀಲಿಸಲು ಅವಕಾಶ ನೀಡಲಾಗಿದೆ. ಈ ಹಿಂದೆ ಇಂಥ ಸಂದೇಹ ಬಂದರೆ ಸಾರ್ವಜನಿಕವಾಗಿ ಅದನ್ನು ಪರಿಶೀಲನೆ ನಡೆಸದೇ ಡ್ರೆಸಿಂಗ್ ರೂಮ್‌ನಲ್ಲಿ ಬ್ಯಾಟ್‌ನ ಗಾತ್ರದ ಪರೀಕ್ಷಿಸಲಾಗುತ್ತಿತ್ತು.

ರಾಜಸ್ಥಾನ ರಾಯಲ್ಸ್ ಮತ್ತು ರಾಯಲ್ ಚಾಲೆಂಜರ್ಸ್ ಬೆಂಗಳೂರು ನಡುವಿನ ಪಂದ್ಯದಲ್ಲೂ ಆರ್‌ಸಿಬಿಯ ಫಿಲ್ ಸಾಲ್ಟ್ ಮತ್ತು ರಾಯಲ್ಸ್‌ನ ಶಿಮ್ರಾನ್ ಹೆಟ್ಮೆಯರ್ ಅವರ ಬ್ಯಾಟ್‌ಗಳನ್ನೂ ಫೀಲ್ಡ್ ಅಂಪೈರ್‌ಗಳು ಪರಿಶೀಲಿಸಿದ್ದರು. ಭಾನುವಾರದ ಪಂದ್ಯದ ವೇಳೆ ಪರಿಶೀಲನೆ ಮಾಡಲಾದ ಎಲ್ಲಾ ಬ್ಯಾಟರ್‌ಗಳು ನಿಗದಿ ಪಡಿಸಿದ ಮಿತಿಯಲ್ಲಿದ್ದವು. ಹೀಗಾಗಿ, ಬ್ಯಾಟರ್‌ಗಳಿಗೆ ಅದೇ ಬ್ಯಾಟ್ ಬಳಸಲು ಅವಕಾಶ ನೀಡಲಾಗಿತ್ತು.

ಮಿತಿ ಎಷ್ಟು: ಐಪಿಎಲ್‌ನ ಪಂದ್ಯಗಳಿಗೆ ಬ್ಯಾಟ್‌ನ ಆಯಾಮಗಳಿಗೆ ಮಿತಿ ನಿಗದಿಪಡಿಸಿದೆ. ಅದರಂತೆ ಬ್ಯಾಟ್‌ನ ಅಗಲ 4.25 ಇಂಚುಗಳು ಅಥವಾ 10.8 ಸೆಂಟಿ ಮೀಟರ್, ಆಳ 2.64 ಇಂಚು (6.7 ಸೆಂ.ಮೀ), ಅಂಚು 1.56 ಇಂಚು (4.0 ಸೆಂ.ಮೀ) ಮೀರಿರಬಾರದು. ಬ್ಯಾಟ್‌ನ ಉದ್ದ ಹ್ಯಾಂಡಲ್‌ನ ಮೇಲ್ಭಾಗದಿಂದ ಬೇಸ್‌ನವರೆಗೆ 38 ಇಂಚು (96.4 ಸೆಂ.ಮೀ)ಗಿಂತ ಹೆಚ್ಚಿರಬಾರದು. ಇದನ್ನು ಫೀಲ್ಡ್ ಅಂಪೈರ್‌ಗಳು ಗೇಜ್ ಬಳಸಿ ಪರಿಶೀಲನೆ ಮಾಡುತ್ತಾರೆ.

ಐಸಿಸಿ ಕ್ರಿಕೆಟ್ ಸಮಿತಿ ಮುಖ್ಯಸ್ಥರಾಗಿ ಸೌರವ್ ಗಂಗೂಲಿ ಮರುನೇಮಕ

ದುಬೈ (ಪಿಟಿಐ): ಭಾರತ ತಂಡದ ಮಾಜಿ ನಾಯಕ ಸೌರವ್ ಗಂಗೂಲಿ ಅವರು ಐಸಿಸಿ ಪುರುಷರ ಕ್ರಿಕೆಟ್ ಸಮಿತಿ ಮುಖ್ಯಸ್ಥರಾಗಿ ಮರುನೇಮಕಗೊಂಡಿದ್ದಾರೆ. ರಾಷ್ಟ್ರೀಯ ತಂಡದಲ್ಲಿ ಅವರ ಸಹ ಆಟಗಾರನಾಗಿದ್ದ ವಿವಿಎಸ್ ಲಕ್ಷ್ಮಣ್ ಅವರು ಸಮಿತಿಯಲ್ಲಿ ಮತ್ತೆ ಸ್ಥಾನ ಪಡೆದಿದ್ದಾರೆ.

2000ರಿಂದ 2005ರವರೆಗೆ ಭಾರತ ತಂಡವನ್ನು ಮುನ್ನಡೆಸಿದ್ದ ಗಂಗೂಲಿ 2021ರಲ್ಲಿ ಸ್ಪಿನ್ ದಿಗ್ಗಜ ಅನಿಲ್ ಕುಂಬ್ಳೆ ಅವರಿಂದ ತೆರವಾದ ಸಮಿತಿ ಅಧ್ಯಕ್ಷ ಸ್ಥಾನಕ್ಕೆ ಮೊದಲ ಬಾರಿಗೆ ನೇಮಕಗೊಂಡಿದ್ದರು. ಆರು ಸದಸ್ಯರ ಸಮಿತಿಯಲ್ಲಿ ಅಫ್ಗನ್ ಮಾಜಿ ಆಟಗಾರ ಹಮೀದ್ ಹಸನ್, ವೆಸ್ಟ್‌ಇಂಡೀಸ್‌ನ ದಿಗ್ಗಜ ಡೆಸ್ಮಂಡ್ ಹೇನ್ಸ್, ದಕ್ಷಿಣ ಆಫ್ರಿಕಾದ ತಂಡದ ನಾಯಕ ತೆಂಬಾ ಬವುಮಾ ಮತ್ತು ಮಾಜಿ ಕ್ರಿಕೆಟಿಗ ಜೊನಾಥನ್ ಟ್ರಾಟ್

ಸನ್‌ರೈಸರ್ಸ್ ತಂಡಕ್ಕೆ ಕನ್ನಡಿಗ ಸ್ಮರಣ್, ಚೆನ್ನೈ ಸೂಪರ್ ಕಿಂಗ್ಸ್‌ಗೆ ಆಯುಷ್

ಸ್ಮರಣ್ ರವಿಚಂದ್ರನ್

ನವದೆಹಲಿ (ಪಿಟಿಐ): ಗಾಯಾಳಾಗಿ ತಂಡದಿಂದ ಹೊರಬಿದ್ದಿರುವ ನಾಯಕ ಋತುರಾಜ್ ಗಾಯಕವಾಡ ಬದಲಿಗೆ ಚೆನ್ನೈ ಸೂಪರ್ ಕಿಂಗ್ಸ್ ಫ್ರಾಂಚೈಸಿಯು ಬ್ಯಾಟರ್ ಆಯುಷ್ ಮ್ಹಾತ್ರೆ ಅವರನ್ನು ಹಾಲಿ ಐಪಿಎಲ್‌ನಲ್ಲಿ ತಂಡಕ್ಕೆ ಸೇರ್ಪಡೆ ಮಾಡಿಕೊಂಡಿದೆ.

ಇದೇ ವೇಳೆ ಸನ್‌ರೈಸರ್ಸ್ ಹೈದರಾಬಾದ್ ತನ್ನ ತಂಡದಲ್ಲಿ ಗಾಯಾಳು, ಆಸ್ಟ್ರೇಲಿಯಾದ ಸ್ಪಿನ್ನರ್ ಆ್ಯಡಂ ಜಂಪಾ ಬದಲಿಗೆ ಕರ್ನಾಟಕದ ಎಡಗೈ ಬ್ಯಾಟರ್ ಸ್ಮರಣ್ ರವಿಚಂದ್ರನ್ ಅವರನ್ನು ಸೇರ್ಪಡೆ ಮಾಡಿದೆ ಎಂದು ಆಯೋಜಕರು ಸೋಮವಾರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದೇಶಿ ಕ್ರಿಕೆಟ್‌ನಲ್ಲಿ ಮುಂಬೈಗೆ ಆಡುವ ಮ್ಹಾತ್ರೆ 9 ಪ್ರಥಮ ದರ್ಜೆ ಮತ್ತು ಏಳು ಲಿಸ್ಟ್ ಎ ಪಂದ್ಯಗಳಲ್ಲಿ 962 ರನ್ ಗಳಿಸಿದ್ದು, ₹30 ಲಕ್ಷ ಮೂಲಬೆಲೆಗೆ ಚೆನ್ನೈ ಪಾಲಾಗಿದ್ದಾರೆ.

ಸ್ಮರಣ್ ಏಳು ಪ್ರಥಮ ದರ್ಜೆ, 10 ಲಿಸ್ಟ್ ಎ, 6 ಟಿ20 ಪಂದ್ಯಗಳಿಂದ 1,100 ರನ್ ಕಲೆಹಾಕಿದ್ದಾರೆ. ಅವರೂ ₹30ಲಕ್ಷ ಮೂಲಬೆಲೆ ಪಡೆದಿದ್ದಾರೆ.

ಐಪಿಎಲ್‌ನಿಂದ ಫರ್ಗ್ಯುಸನ್ ಹೊರಕ್ಕೆ

ಮುಲ್ಲನಪುರ (ಪಿಟಿಐ): ಗಾಯಾಳಾಗಿರುವ ಪಂಜಾಬ್ ಕಿಂಗ್ಸ್ ತಂಡದ ವೇಗದ ಬೌಲರ್, ನ್ಯೂಜಿಲೆಂಡ್‌ನ ಲಾಕಿ ಫರ್ಗ್ಯುಸನ್ ಅವರು ಐಪಿಎಲ್‌ನ ಪ್ರಸಕ್ತ ಆವೃತ್ತಿಯಿಂದ ಹೊರಬಿದ್ದಿದ್ದಾರೆ.

ಕಳೆದ ವಾರ ಸನ್‌ರೈಸರ್ಸ್ ವಿರುದ್ಧದ ಪಂದ್ಯದ ವೇಳೆ ಎರಡು ಎಸೆತ ಬೌಲಿಂಗ್ ಮಾಡಿದ ನಂತರ ಫರ್ಗ್ಯುಸನ್ ಅವರ ಎಡಗಾಲಿನಲ್ಲಿ ನೋವು ಕಾಣಿಸಿಕೊಂಡಿದ್ದು, ಮೈದಾನದಿಂದ ಹೊರನಡೆದಿದ್ದರು.

'ಫರ್ಗ್ಯುಸನ್ ಅವರು ಈ ಬಾರಿ ತಂಡಕ್ಕೆ ಮರಳುವ ಸಾಧ್ಯತೆ ಕಡಿಮೆ' ಎಂದು ಕಿಂಗ್ಸ್ ತಂಡದ ಬೌಲಿಂಗ್ ಕೋಚ್ ಜೇಮ್ಸ್ ಹೋಪ್ಸ್ ಹೇಳಿದ್ದಾರೆ.

ಐಎಸ್‌ಎಸ್‌ಎಫ್ ವಿಶ್ವಕಪ್: ಲಯದ ವಿಶ್ವಾಸದಲ್ಲಿ ಭಾರತ

ಲಿಮಾ (ಪೆರು): ಭಾರತ ತಂಡದ ಶೂಟಿಂಗ್ ಸ್ಪರ್ಧಿಗಳು, ಮಂಗಳವಾರ ಇಲ್ಲಿ ಆರಂಭವಾಗುವ ಐಎಸ್‌ಎಸ್‌ಎಫ್ ವಿಶ್ವಕಪ್‌ನಲ್ಲಿ ಸ್ಫೂರ್ತಿಯುತ ಪ್ರದರ್ಶನವನ್ನು ಮುಂದುವರಿಸುವ ವಿಶ್ವಾಸದಲ್ಲಿದ್ದಾರೆ.

ಕಳೆದ ವಾರ ಬ್ಯೂನೊ ಏರ್ಸ್‌ನಲ್ಲಿ ನಡೆದ ವರ್ಷದ ಮೊದಲ ರೈಫಲ್, ಪಿಸ್ತೂಲ್ ಮತ್ತು ಶಾಟ್‌ಗನ್ ವಿಶ್ವಕಪ್‌ನಲ್ಲಿ ಭಾರತದ ಸ್ಪರ್ಧಿಗಳು ಉತ್ತಮ ಪ್ರದರ್ಶನ ನೀಡಿ ಪದಕ ಪಟ್ಟಿಯಲ್ಲಿ ಎರಡನೇ ಸ್ಥಾನ ಪಡೆದಿದ್ದರು.

ಮಹಿಳೆಯರ ಏರ್ ಪಿಸ್ತೂಲ್ ವಿಭಾಗದಲ್ಲಿ ಮನು ಭಾಕರ್, ಸುರುಚಿ ಮತ್ತು ಸೈನಿಯಮ್ ಸ್ಪರ್ಧಿಸಲಿದ್ದಾರೆ. ಲಾಸ್ ಪಾಮಾಸ್ ಶೂಟಿಂಗ್ ರೇಂಜ್‌ನಲ್ಲಿ ನಡೆಯುವ ಏರ್ ಪಿಸ್ತೂಲ್ ವಿಭಾಗದ ಸ್ಪರ್ಧೆಯಲ್ಲಿ ಸೌರಭ್ ಚೌಧರಿ, ವರುಣ್ ತೋಮರ್ ಮತ್ತು ರವೀಂದರ್ ಅವರು ವಿಶ್ವಕಪ್ ಎರಡನೇ ಚಿನ್ನ ಪಡೆಯಲು ಉತ್ಸುಕರಾಗಿದ್ದಾರೆ.

*ಕೊಡುಗೆ 30 ಏಪ್ರಿಲ್ 2025 ವರೆಗೆ ಮಾತ್ರ ಲಭ್ಯವಿದೆ. ಅದರಲ್ಲಿ ₹45 000 ವರೆಗೆ ವಿನಿಮಯ/ಸ್ಕ್ರೇಪೇಜ್ ಲಾಭಗಳು ಸೇರಿವೆ.
Hy - CNG Duo Hyundai EXTER ಮತ್ತು Grand i10 NIOSನಲ್ಲಿ ಲಭ್ಯವಿದೆ. ಸ್ಥಳವಕಾಶ ಇದೆ. ಮೈಲೇಜ್ ಇದೆ. #CSD ಮತ್ತು KPKB ಗ್ರಾಹಕರಿಗೆ ಹೆಚ್ಚುವರಿ ಲಾಭಗಳು.

HYUNDAI

Hyundai Cl!cktoBuy — Scan here

3 YEAR Unlimited** Kilometer Warranty — Up to 7 years extended warranty^

3 YEAR Road Side Assistance(RSA)***

UP TO 5 YEAR Shield of Trust Service Packages~

Hy - CNG Duo

For Information Contact: Toll Free:1800114645 Bangalore: Advaith Hyundai, Residency Road, Ph: 9606076451 Marathahalli, Outer Ring Road, Ph: 9606076452 Vasanthnagar, Ph: 9606076453 Bannerghatta Road, Ph: 9606076454 Koramangala, Ph: 9606076455 Avalahalli, Ph: 9606076456, Sarjapura Ph: 9606076458 Bilekahalli, Ph: 9606076457, Trident Hyundai, Sankey Road, Ph: 7353762526, K R Puram, Ph: 9844266873, Hosur Road, Ph: 9743786716, Indiranagar, Ph: 9743107927, Yelahanka, Ph: 7353750677, Yeshwanthpur, Ph: 9844701452, Blue Hyundai, Mysore Road, Ph: 9591100001, Rajajinagar, Ph: 9591200001, Magadi Road, Ph: 9513200033, New Bel Road, Ph: 9513000800, Basavanagudi, Ph: 9591211118, Lakshmi Hyundai, Hebbal Ph: 9900037900, Kalyan Nagar, Ph: 8494913303, HBR Layout, Ph: 8884441111, Whitefield, Ph: 8884497700, Devanahalli, Ph: 8884499037, Pavan Hyundai, Kanakpura Road, Ph: 7337882522, Electronic City, Ph: 7337882522, Dhruvdesh Hyundai, Ph: 9205770577 Mangalore: Kanchana Hyundai, Ph: 9900144113, Advaith Hyundai, Ph: 7760962815 Udupi: Kanchana Hyundai, Ph: 9972440758 Mysore: Advaith Hyundai, Belavadi, Ph: 9620257012 JLB Road, Ph: 9606938831, KPR Hyundai, Mysore Ph: 9606470291 Hassan: Advaith Hyundai, Ph: 9606938828 Shimoga: Rahul Hyundai, Ph: 6364465441 Hubli: Bellad Hyundai, Ph: 9900035084, Raam Hyundai, Ph: 8495072555, Kanakpura: Pavan Hyundai, Ph: 7892718572 Belgaum: Nagshanti Hyundai, Ph: 9844890456, 9844890459 Bijapur: Narayan Hyundai, Ph: 9742272157, 9742272153 Davanagere: K J Hyundai, Ph: 7022001201 Gulbarga: Shah Hyundai, Ph: 9108049250 Tumkur: Pavan Hyundai, Ph: 7337882522 Bellari: Anika Hyundai, Ph: 8884484020 Ramanagara: Advaith Hyundai, Ph: 9900095504 Kolar: Advaith Hyundai, Ph: 9620229885, Chintamani: Ph: 8147994737 Mandya: Advaith Hyundai, Ph: 9740060075 Coorg: Advaith Hyundai, Madikeri, Ph: 9538971151 Gonikoppal, Ph: 9945774088 …

my Hyundai app — Hyundai Promise Certified Pre-Owned Car — Scan to chat with us or give a missed call at 9555295868

INNOCEAN-021/25 KAN